ಮೇ 1992

ತುಷಾರ

ರೂ. 5/-



ಯಂಡಮೂರಿ
ವೀರೇಂದ್ರನಾಥ್
ವಿಶೇಷ ಕಾದಂಬರಿ

ತುಷಾರಕ್ಕಾಗಿಯೇ
ಬರೆದುಕೊಟ್ಟದ್ದು.



ಹೊಸ ಧಾರಾವಾಹಿ ಪ್ರಾರಂಭ

ವ್ಯೂಹ

• 'ಚಿರಂಜೀವಿ'



ನನ್ನೂರು ನನ್ನ ಜನ
ಬಿಜಾಪುರ ಜಿಲ್ಲೆ


ಬೆವರು ನಿಮ್ಮದು.
ಕಾಣಿಕೆ ನಮ್ಮದು
Second Nature
TALCUM POWDER
ಸೆಕಂಡ್ ನೇಚರ್ ಟಾಲ್ಕ್. ಯಶಸ್ಸಿನ ಸಾಟಿ ಇಲ್ಲದ ಸುಗಂ

ಸಾಹಿತ್ಯ ಸಂಚಾರ...

ಬರೆಹಗಾರನಾಗಬಯಸುವವನು ಎಂದಿಗೂ ಪತ್ರಿಕೋದ್ಯಮಿಯಾಗಬಾರದು ಎನ್ನುವ ಅಭಿಪ್ರಾಯವೊಂದಿದೆ. ಅಂತಹ ಅಭಿಪ್ರಾಯವನ್ನು ವ್ಯಕ್ತಪಡಿಸುವವರು, ತಮ್ಮ ಮಾತಿಗೆ ಸಮರ್ಥನೆಯಾಗಿ, ಪತ್ರಿಕಾಲಯಗಳಲ್ಲಿ ಗೋರಿಕಂಡ ಉದಯೋನ್ಮುಖ ಬರೆಹಗಾರರ ಸಾಹಿತ್ಯಶಕ್ತಿಯ ಕಡೆಗೆ ಬೊಟ್ಟುಮಾಡುತ್ತಾರೆ.

ಇದು ಸಾರ್ವತ್ರಿಕ ಸತ್ಯ ಎಂದು ಒಪ್ಪಲು ನಾನು ಸಿದ್ಧನಿಲ್ಲ, ಕೆಲವೆಡೆ ಪತ್ರಿಕಾ ವ್ಯವಸಾಯ. ದುಡಿಮೆಯ ಸ್ಥಿತಿಗತಿಗಳ ಫಲವಾಗಿ, ಸಾಹಿತ್ಯ ಚಟುವಟಿಕೆಗೆ ಕುಠಾರಪ್ರಾಯವಾಗಬಹುದು—ನಿಜ. ಆದರೆ, ಪ್ರಬಲವಾದ ಅಂತಃಸತ್ವವುಳ್ಳ ಬರೆಹಗಾರನನ್ನು ಯಾವ ಪ್ರತಿಕೂಲ ಪರಿಸ್ಥಿತಿಯೂ ಸದಾಕಾಲ ಅದುಮಿ ಹಿಡಿಯಲಾರದು. ಅಂಥವರಿಗೆ ಪತ್ರಿಕಾ ವ್ಯವಸಾಯದ ಅನುಭವದಿಂದ, ನಷ್ಟದ ಬದಲು ಲಾಭವಾಗುತ್ತದೆ. ಮಿತವಾದ ಪದಗಳ ಬಳಕೆ, ನೇರವಾಗಿದ್ದರೂ ಸೂಚ್ಯವಾಗಿ ಮನಮುಟ್ಟುವಂತೆ ಹೇಳುವ ಪ್ರವೃತ್ತಿ, ವಾಚಕಲೋಕದೊಡನೆ ನಿತ್ಯದ ಸಂಪರ್ಕದಿಂದ ಸದಾ ಪ್ರಜ್ವಲಿಸುವ ಸಾಮಾಜಿಕ ಪ್ರಜ್ಞೆ—ಇವು ಆತನಿಗೆ ಸಿದ್ಧಿಸುತ್ತವೆ. ಹಾಗೆಯೇ ಆತನ ಸಂಪರ್ಕದಿಂದ ಪತ್ರಿಕೆಗಳ ಭಾಷೆಯೂ ಸುಧಾರಿಸುತ್ತದೆ.

ಆದರೆ, ಎಲ್ಲಾ ಬರೆಹಗಾರರೂ ಒಳ್ಳೆಯ ಪತ್ರಿಕೋದ್ಯೋಗಿಗಳಾಗಲಾರರು; ಎಲ್ಲಾ ಪತ್ರಿಕೋದ್ಯೋಗಿಗಳೂ ಒಳ್ಳೆಯ ಬರೆಹಗಾರರಾಗಲಾರರು. ಇದು ಸ್ಪಷ್ಟವಾಗಿದೆ.

ತೋರಿಕೆಗೆ ಬೇರೆಬೇರೆಯಾಗಿ ಈ ಎರಡು ಕ್ಷೇತ್ರಗಳು ಕಂಡರೂ ಸಾಮ್ಯವಿರುವ ಅಂಶಗಳೂ ಸಾಕಷ್ಟಿವೆ. ಸಾಹಿತ್ಯಕ್ಕೆ ಆಗುವ ಒಳ್ಳಿತಿನ ದೃಷ್ಟಿಯಿಂದ ಹೇಳುವುದಾದರೆ, ಬರೆಹಗಾರರೆಲ್ಲ ಸ್ವಲ್ಪಮಟ್ಟಿಗಾದರೂ ಪತ್ರಿಕೋದ್ಯಮದ ಅನುಭವವನ್ನು ಪಡೆಯುವುದು ಅಗತ್ಯ.

'ಬರಹಾನ್ನ'ದ ನನ್ನ ಬದುಕಿನಲ್ಲಿ ಆ ರೀತಿಯ ಅನುಭವ ಧಾರಾಳವಾಗಿ ನನಗೆ ದೊರೆತಿದೆ. ತೋರಿಕೆಯ ಬಾಹ್ಯ ಪರಿಣಾಮ—ಅನಂತರದ ಕೆಲವರ್ಷಗಳಲ್ಲಿ ಪತ್ರಿಕೆಗಳಲ್ಲಿ ನಾನು ನಿರಂತರವಾಗಿ ಬರೆದಿರುವ ಲೇಖನಗಳು. ಅಂತಹ ಲೇಖನಗಳಲ್ಲಿ ಹಲಕೆಲವು, ದಿನದ ಆವಶ್ಯಕತೆಯನ್ನೂ ದಾಟಿ ಸಂಕಲನಯೋಗ್ಯವಾಗಿ ನನಗೆ ಕಂಡಿವೆ. ಈ ರೀತಿಯ ಬರೆಹಗಳಲ್ಲಿ ಬರೆಯುವವನ ವೈಯಕ್ತಿಕ ಅಭಿಪ್ರಾಯಕ್ಕೆ ಪ್ರಾಧಾನ್ಯವಿದ್ದೇ ಇದೆ.

— ನಿರಂಜನ

(1957ರಲ್ಲಿ ಪ್ರಕಟವಾದ 'ಕಾಲಕ್ಷೇಪ' ಕೃತಿಯ ಮುನ್ನುಡಿಯಲ್ಲಿ)

ಸಂಪಾದಕ
ಟಿ. ಸತೀಶ್ ಯು. ಪೈ

ಮುದ್ರಣ
ಟಿ. ಸತೀಶ್ ಯು. ಪೈ
ಉದಯವಾಣಿ ಪ್ರೆಸ್
ನಿರ್ವಹಣೆ: ಪಿ. ಭಾಸ್ಕರ್ ರಾವ್

ಪ್ರಕಾಶನ
ಮಣಿಪಾಲ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಲಿ.,
ಉದಯವಾಣಿ ಬಿಲ್ಡಿಂಗ್, ಮಣಿಪಾಲ—576 119

ಸಹಾಯಕ ಸಂಪಾದಕ
'ಚಿರಂಜೀವಿ'

ಬೆಂಗಳೂರು ಕಚೇರಿ ವಿಳಾಸ:
ತುಷಾರ
ಎನ್. 201, ನಾರ್ಥ್ ಬ್ಲಾಕ್, ಫ್ರಂಟ್ ವಿಂಗ್
ಮಣಿಪಾಲ ಸೆಂಟರ್,
47, ಡಿಕನ್‌ಸನ್ ರಸ್ತೆ, ಬೆಂಗಳೂರು—560 042

ಫೋನ್: 586658 ಮತ್ತು 588467


ತುಷಾರ, ಪ್ರೆಸ್ ಕಾರ್ನರ್, ಮಣಿಪಾಲ—576 119

ತುಷಾರ ಸಿಂಚನ


ಮೇ, 1992

ಸಂಪುಟ: 20

ಸಂಚಿಕೆ: 2



ನಿರಂಜನ ನಮನ



ನನ್ನೂರು ನನ್ನ ಜನ

ಬಿಜಾಪುರ ಜಿಲ್ಲೆ

—ಮುಖಚಿತ್ರ ಕಲೆ—
ಬೆಂಕಿಕೋಳಿ—ಟಿ.ಕೆ. ರಾವ್
ವ್ಯೂಹ—ಸ್ಟುಡಿಯೋ ಸ್ನೇಹಾ

ಕಲೆ: ಟಿ.ಕೆ. ರಾವ್, ಸ್ಟುಡಿಯೋ ಸ್ನೇಹಾ, ಶ್ಯಾಮ್, ಮೋನಪ್ಪ, ಸಾವಿತ್ರಿ

ವಿನ್ಯಾಸ: ನಾಗರಾಜ್



ನಿಮ್ಮ ಅನಿಸಿಕೆಗಳು

ನನ್ನೂರು ನನ್ನ ಜನ:

● 'ಊರು ನನ್ನದಲ್ಲ, ಜನರೂ ನನ್ನವರಲ್ಲ' ಎಂದು ಡಾ। ಶಿವರಾಮ ಕಾರಂತ ಅವರು ತುಂಬಾ ಅರ್ಥಗರ್ಭಿತವಾಗಿ ಬದುಕು—ಬದಲಾವಣೆ ಬಗ್ಗೆ ಬರೆದಿದ್ದಾರೆ.

— ವಿಶ್ವನಾಥ ರಾಮಕೃಷ್ಣ ಘಟ್ಟಿ, ನೋಣಗಾರ (ಉ.ಕ.)

● 'ಆಗ ಅರೆ ಹೊಟ್ಟೆ ಇದ್ದರೂ ತೃಪ್ತಿ ಇತ್ತು. ಈಗ ಅಗತ್ಯಗಳು ಹೆಚ್ಚಾಗಿ ತೃಪ್ತಿ ಎನ್ನುವುದು ಕೈಗೆಟುಕದ ಚಂದ್ರನಂತಾಗಿದೆ'—ಎಂದು ಒಂದೇ ಮಾತಿನಲ್ಲಿ ಹೇಳಿರುವ ಕಾರಂತರ ಮನೋಭಾವ ನನಗೆ ಸರಿಯೆನಿಸಿ ಮೆಚ್ಚುಗೆಯಾಯ್ತು.

— ಶೇಖರ ಸಾಲ್ಯಾನ್ ಇಂದಿರಾನಗರ, ಹಳೆಯಂಗಡಿ (ದ.ಕ.)

● ಕಯ್ಯಾರ ಕಿಞ್ಞಣ್ಣ ರೈ ಅವರ ಕಾಸರಗೋಡು ಲೇಖನ ಓದಿ, ಕಮರಿ ಹೋದ ನನ್ನ ಬಹುದಿನಗಳ ಕನಸಿನ ಬಳ್ಳಿಗೆ ಅಮೃತಸಿಂಚನವಾದಂತಾಯ್ತು.

— ಮಹಾಬಲ ಆಳ್ವ ಮಡಿಮೊಗಲ್, ವಯಾ: ಮಂಜೇಶ್ವರ

● ಈಚೆಗೆ ಕಾಸರಗೋಡಿನ ಪೆರ್ಲ, 'ಪೈಸಾರಿ'ಗೆ ಹೋಗಿದ್ದೆ. ನಾವಿನ್ನೂ ಹತ್ತು-ಹನ್ನೆರಡನೆ ಶತಮಾನದಲ್ಲಿದ್ದೀವೇನೊ ಅನ್ನಿಸಿತು. ಅಲ್ಲಿ ಯಾವ ಹಳ್ಳಿಗೂ ವಿದ್ಯುತ್ ಸಂಪರ್ಕವಿಲ್ಲ. ಬ್ಯಾಟರಿಯಿಲ್ಲದೆ ಬದುಕಿಲ್ಲ. ಖಂಡಿತ, ಅಲ್ಲಿನ ನಮ್ಮ ಬಾಂಧವರ ದೃಢಸಂಕಲ್ಪದ ಕಾಯುವಿಕೆಗೆ ನಾವೆಲ್ಲ ಇನ್ನಾದರೂ ಚಾಲನೆ ಕೊಡೋಣವೇ?

— ನಾಗೇಶ ಸೂರಗೊಂಡ, ಬೆಂಗಳೂರು

● ಬೈದಬೆಟ್ಟಿನಲ್ಲಿ 35 ಜನ ನಾರಾಯಣರಿದ್ದರೆ, ನಿಮ್ಮ ಗಿನ್ನಿಸ್ ದಾಖಲೆ ಮುರಿಯುವ 75ಕ್ಕೂ ಹೆಚ್ಚು ನಾರಾಯಣರು ಶಿರೂರಿನಲ್ಲಿದ್ದೇವೆ (ದ.ಕ.ದ ಉತ್ತರದ ತುತ್ತತುದಿಯ ಊರು)

— ಎಸ್. ನಾರಾಯಣ, ಮೇಲ್ಪಂಕ್ತಿ, ಶಿರೂರು

● ಕರ್ನಾಟಕದಲ್ಲಿಯೇ ಅತಿ ಹೆಚ್ಚು ಅಕ್ಷರಸ್ಥರನ್ನು ಹೊಂದಿರುವ ಕಡಲ ತಡಿಯ ಜಿಲ್ಲೆಯ (ಚಿತ್ರ-ಲೇಖನ) ಪರಿಚಯ ಚೆನ್ನಾಗಿ ಆಯಿತು.

— ಆರ್. ಡಿ. ರವೀಂದ್ರ, ಬಾಳೆಹೊನ್ನೂರು

● ವರ್ಗಾವಣೆಗೆಂದೇ ಹುಟ್ಟಿದ ಶಿಕ್ಷಕ ವೃತ್ತಿಯಲ್ಲಿ ಹತ್ತಾರು ಊರುಗಳ ನೀರನ್ನು ಕುಡಿದಿದ್ದೇನೆ. ಆದರೆ, ಮಂಗಳೂರಿನ ನೀರು, ಗಾಳಿ, ಪ್ರಕೃತಿಯೇ ವಿಶಿಷ್ಟ. ಹುಟ್ಟೂರಿನಿಂದ ದೂರವಿದ್ದರೂ ನೆನಪನ್ನು ಹಸಿರಾಗಿಸಿದ್ದಕ್ಕೆ ಕೃತಜ್ಞತೆಗಳು.

— ಆರ್. ಕೆ. ವಾಣಿ, ಸಿದ್ದಾಪುರ

● 'ಕರ್ನಾಟಕದ ಘಾರ್ಬೈನ್' ಎಂದು ಕರೆಸಿಕೊಳ್ಳುವ ದ.ಕ. ಜಿಲ್ಲೆ ವಿವಿಧ ಸಾಧನೆಗಳತ್ತ ಅಭಿವೃದ್ಧಿ ನೋಟ ಕಾಣಿಸುತ್ತಿರುವುದು, ಬ್ಯಾಂಕಿಂಗ್ ಮತ್ತಿತರ ಉದ್ಯಮಗಳಲ್ಲಿ ದೊಡ್ಡ ಸಾಧನೆ ಮಾಡಿರುವುದು ಸಂತೋಷದ ವಿಷಯ. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರು ನಡೆಸುತ್ತಿರುವ 'ಗ್ರಾಮೀಣಾಭಿವೃದ್ಧಿ ಸ್ವಯಂ ಉದ್ಯೋಗ ಯೋಜನೆ' ಬಹಳ ಪ್ರಗತಿಯ ಹಂತದಲ್ಲಿದೆ.

— ಕಾದ್ರೊಳ್ಳಿ ಚೇತನಕುಮಾರ್, ಪಾಳಾ (ಉ.ಕ.)

● ದ.ಕ. ಜಿಲ್ಲೆಯ ಸೊಬಗು, ಜನಜೀವನ, ಸ್ಥಳ ಪರಿಚಯ ಯುಗಾದಿ ವಿಶೇಷಾಂಕಕ್ಕೊಂದು ವಿಶೇಷ ಮೆರುಗು ತಂದಿದೆ.

— ಲಕ್ಷ್ಮೀಕಾಂತ್ ಕೊಂಪಲ್, ಲಿಂಗಸುಗೂರು

● ಈ ಜಿಲ್ಲೆಯ ಬಾಂಧವರೊಂದಿಗೆ ಒಡನಾಟ, ಅವರ ಸಹಕಾರ ಮನೋಭಾವ, ಅಲ್ಲಿನ ಹಚ್ಚನೆ ನೆಲ, ಕೆಂಪು ಗಡಸು ಮಣ್ಣಿನಂತೆ ಮನಸ್ಸಿಗೆ ಮುದಕೊಡುವಂಥದ್ದು.

— ನಾಮಸೂರ (ಹೊಸಳ್ಳಿ), ಹಾವೇರಿ

● 'ನನ್ನೂರು—ನನ್ನ ಜನ' ಲೇಖನಮಾಲೆ ನಮಗೆ ಗೊತ್ತಿಲ್ಲದ ಅನೇಕ ಸಂಗತಿಗಳನ್ನು ತಿಳಿಸುತ್ತಿದೆ.

— ಸರೋಜ ಕೃಷ್ಣಮೂರ್ತಿ, ಬೆಂಗಳೂರು

● ಮಂಗಳೂರಿನ ಭಾಷೆ, ಸಂಸ್ಕೃತಿಯ ಕುರಿತಾದ ಭುವನೇಶ್ವರಿ ಹೆಗಡೆ ಅವರ ಲೇಖನ ಸೊಗಸಾಗಿತ್ತು. ಅವರ ಸ್ವಾರಸ್ಯ ನೋಟ ನಮ್ಮನ್ನೆಲ್ಲ ಚೆನ್ನಾಗಿ ನಗಿಸಿತು.

— ಪ್ರವೀಣ ಹೆಗಡೆ, ಬೆಂಗಳೂರು

● ಭುವನೇಶ್ವರಿ ಹೆಗಡೆ ಲೇಖನದೊಂದಿಗೆ ಪ್ರಕಟವಾದ ಹರಿಣಿ ಅವರ ಎರಡು ವ್ಯಂಗ್ಯಚಿತ್ರಗಳನ್ನು ನೋಡಿ ನಕ್ಕು ನಕ್ಕು ಸಾಕಾಯ್ತು ಮಾರಾಯ್ರೇ.

— ಸುಜನಾ ಶಾಂತಿಪಳ್ಳ, ಕುಂಬಳೆ

● 'ದುಬ್ಯಾದಾರೇ, ಬಲೇ, ಬಲೇ ಭಾರೀ ಅಗ್ಗ' ಮತ್ತು ಚಿತ್ರ ನೋಡಿ ನಾನು ನೆಹರೂ ಮೈದಾನದ ಪಕ್ಕದಲ್ಲೇ ಇದ್ದೇನೆಯೇ ಎಂಬಂತಾಯ್ತು.

— ಕೆ. ಹರಿಪ್ರಸಾದ ಉಪಾಧ್ಯಾಯ, ಹೊಸಮಠ (ಕುಟ್ರುಪ್ಪಾಡಿ)

● ಪಡುವಣ ಕಡಲ ಮಂಗಳೂರು ಹಲವು ಭಾಷೆಗಳ ತವರೂರು. ತುಳುವಿನಲ್ಲಿ ಇದು ಕುಡ್ಲ. ಕೊಂಕಣಿಯಲ್ಲಿ ಕೊಡಿಯಾಲ್. ಇಂಗ್ಲಿಷ್‌ನಲ್ಲಿ ಮೆಂಗೆಲೋರ್–ಆದರೆ, ಶುದ್ಧ ಕನ್ನಡದಲ್ಲಿ ಮಂಗಳೂರು.

— ಮುರಳೀಧರ ನಾಡಾ, ಕುಂದಾಪುರ

ಕಥೆಗಳು:

● ಪಕ್ರುದ್ದೀನ್ ಇರುವೈಲ್ ಕಥೆ 'ತಾಯಿ' ಓದಿ ರವಿಯ ಹಾಗೆ ನಾನೇ ಭಾವುಕನಾಗಿ ಹೋದೆ.

— ನಾರಾಯಣ ವೀ ಚವ್ವಣ್ಣವರ, ಕಟಗೇರಿ

● ರವಿಯನ್ನು ತನ್ನ ಮಗನಾಗಿ, ರೇಣುಕಳನ್ನು ಸೊಸೆಯಾಗಿ ಆ ತಾಯಿ ಸ್ವೀಕರಿಸಿದ್ದು ನೋಡಿ ಆನಂದವಾಯಿತು.

— ಹಿರಿಯೂರು ನಿತ್ಯಾನಂದಸ್ವಾಮಿ, ಬೆಂಗಳೂರು

● 'ರೋಗಿ' (ಕೆ. ಟಿ. ಗಟ್ಟಿ) ಕಥೆ ಮೈನವಿರೇಳಿಸುವಂತಿತ್ತು.

— ಎಸ್. ಅಶೋಕ್, ಹಾವೇರಿ

● 'ಏರು' (ಭಾಗೀರಥಿ ಹೆಗಡೆ) ಪಕ್ವ ಭಾಷೆ, ಅಪರೂಪ ವಸ್ತು, ಮನಮುಟ್ಟುವಂತಿತ್ತು.

— ಎಂ. ಜಿ. ನಾಯ್ಕ, ಬೊಗರಿಬೈಲ,
ಕುಮಟಾ (ಉ.ಕ.)

● ಡಾ। ಕುವೆಂಪು ಅವರ 'ಧನ್ವಂತರಿಯ ಚಿಕಿತ್ಸೆ' ಸಮತಾವಾದದ ಆಶಯವನ್ನು ಹೊಂದಿದ್ದು, ರೈತನ ಮೇಲೆ ಸರಕಾರಗಳು ಹೇರಿರುವ ಭಾರದ ಬಗ್ಗೆ ಪರಿಣಾಮಕಾರಿಯಾಗಿ ಚಿತ್ರಿಸಿ, ಬಿಡುಗಡೆಗೆ ಕ್ರಾಂತಿಯ ಸೂಚನೆ ಇದೆ. ಆದರೆ, ರೈತರ ಸ್ಥಿತಿ ಇಂದಾದರೂ ಸುಧಾರಿಸಿದೆಯೇ?

— ಸಾಹಿತ್ಯಾನಂದ, ಬೆಂಗಳೂರು

● ಅಂದಿನ–ಇಂದಿನ ರೈತನ ವಾಸ್ತವ ಸ್ಥಿತಿಯ ಮೂಲಕ ಒಂದು ನಾಡಿನ ಸರ್ವಕಾಲಿಕ ಸ್ಥಿತಿಯನ್ನು ವಿಶ್ಲೇಷಣೆ ಮಾಡಿರುವುದು ಹೃದಯಸ್ಪರ್ಶಿಯಾಗಿ ಮೂಡಿ ಬಂದಿದೆ.

— ರೇಣುಕಾನಂದ ಜೆ. ಸ್ಥಾನೀಕರ್,
ಯನಡು, ತುಮಕೂರು ಜಿಲ್ಲೆ

● ಈಗಲೂ ರೈತನ ಮೇಲೆ ನಡೆಯುವ ದೌರ್ಜನ್ಯದಿಂದ ಅವನ ಸ್ಥಿತಿಗೆ ಕನ್ನಡಿ ಹಿಡಿದಂತಿದೆ.

— ಕೃಷ್ಣಾ ಚಕ್ರಸಾಲಿ, ಕುಂದೂರು

ಹಾಸ್ಯ ಲೇಖನಗಳು:

● ಟಿ. ಸುನಂದಮ್ಮ ಅವರ 'ಕಲಿತವರು ಯಾರು?' ಹಾಸ್ಯಭರಿತವಾಗಿತ್ತು. ಕೊನೆಗೆ ಕಲಿತವರ್‍ಯಾರೆಂದು ತಿಳಿದು ನಗು ಬಂತು.

— ಭೀಮೇಶ್ ಎನ್., ಪೆರಮಾಚನಹಳ್ಳಿ

● 'ಕಂಡಕ್ಟರ್ ಕರಿಯಪ್ಪ ಜೂನಿಯರ್' ಕಂತು ಹಾಸ್ಯಮಯವಾಗಿದ್ದರೂ ಇಂದಿನ ಬಸ್ ಅನಾನುಕೂಲತೆಗಳ ಬಗ್ಗೆ ಭೂತಕನ್ನಡಿ ಹಿಡಿದಂತಾಗಿದೆ.

— ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
(ರಾಯಚೂರು ಜಿಲ್ಲೆ)

● ಜೂನಿಯರ್ ನಕ್ಕು-ನಗಿಸಿ ನಮ್ಮ ಹೊಟ್ಟೆಹುಣ್ಣಾಗಿಸುತ್ತಿದ್ದಾನೆ. ದಯವಿಟ್ಟು ಮಾತ್ರೆಗಳನ್ನಾದರೂ ಕಳಿಸಿಕೊಡಿ ಮಾರಾಯ್ರೇ.

— ಮಲ್ಲಿಕಾರ್ಜುನ ಪ. ಶೆಲ್ಲಿಕೇರಿ, ಕೋಲ್ಹಾಪುರ

ಕಾದಂಬರಿ:

● 'ನಾನೂ ಮಂಗಳೂರೂ' ಮತ್ತು 'ಔಂಸ್ರದ ಅಂತ್ರಾಯ್ನ' ಹಾಸ್ಯದ ಹೊನಲು ಹರಿಸಿದರೆ ಯಜ್ಞಾವತಿ ಕೇಶವ ಕಂಗೆನ್ ಅವರ 'ರಂಗನ ಅವತಾರ' ಕಾದಂಬರಿಯ ಆಯ್ಕೆ 'ತುಷಾರ'ದ ಹೈಲೆಟ್.

— ಜೈಶಂಕರ್, ಬೆಳ್ತಂಗಡಿ

● ಜನಮರುಳೋ ಜಾತ್ರೆ ಮರುಳೋ–ಗಾದೆಯಂತೆ ಕಾದಂಬರಿಯಲ್ಲಿ ಸಂಪ್ರದಾಯಸ್ಥ ಜನ ಮೋಸ ಹೋಗುವ ಬಗೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ.

— ಈ. ಎನ್. ತಿಪ್ಪೇಸ್ವಾಮಿ,
ಹಿರೇ–ಕೋಗಲೂರು



ಪ್ರತಿ ದಿನ ಮೇ... ದಿನಾಚರಣೆ ಆಚರಿಸ್ತವೆ–ಇವು.

ಉಳಿದಂತೆ:

● ವೇಣುಗೋಪಾಲ ಕಾಸರಗೋಡು ಕವನ 'ಪರಿಸರದ ಕವಿತೆ', ಸುಂದರ ಪರಿಸರದ ಆಹ್ಲಾದತೆಯೆಲ್ಲ ಮಾಯವಾಗಿ ಕೃತಕತೆಯ ಕೊಳಕು ಸೇರಿಕೊಂಡು ನಿಸರ್ಗದ ನಿರ್ಮಲತೆ ನಾಶವಾಗಿರುವುದನ್ನು ಧ್ವನಿಸುತ್ತದೆ.

— ಪ್ರೊ। ಕಲಿವೀರ ಕಳ್ಳಿಮನಿ, ಕಮ್ಮತ್ತಹಳ್ಳಿ

ಒಂದು ಮನವಿ:

● ಮುತ್ಕಾ ಎಂಬ ಹೆಸರಿನ ಮಹಾರಾಷ್ಟ್ರ ದೇಶಸ್ಥ ಬ್ರಾಹ್ಮಣರ ವಂಶದ ಬಗ್ಗೆ ವಿವರಗಳು ಯಾರಿಗಾದರೂ ತಿಳಿದಿದ್ದರೆ, ಮುತ್ಕಾ ಮನೆತನದವರು ವಿವರ ತಿಳಿದವರು ಇದ್ದರೆ, ದಯವಿಟ್ಟು ನನಗೆ ವಿವರ ತಿಳಿಸಲು ಪ್ರಾರ್ಥಿಸುತ್ತೇನೆ. ಭೇಟಿಯ ಅಗತ್ಯವಿದ್ದರೆ ನಾನೇ ಬಂದು ಕಾಣುತ್ತೇನೆ.

ನನ್ನ ವಿಳಾಸ: ಟಿ. 127, ನಾಲ್ಕನೇ ಬ್ಲಾಕ್,
ಜಯನಗರ,
ಬೆಂಗಳೂರು — 560 041.

— ಎಂ. ಕೆ. ಗೋಪೀನಾಥ್ (ಲೇಖಕ)

● ಬಿ. ಆರ್. ಲಕ್ಷ್ಮಣರಾವ್ ರಚಿತ 'ಮೂರು ಮುಖಗಳು' ಕವನಗಳು ಸೊಗಸಾಗಿ ಮೂಡಿ ಬಂದಿವೆ.

— ಎ. ವಿ. ನಾಗರಾಜ, ಪುರಪ್ಪೆಮನೆ (ಶಿವಮೊಗ್ಗ ಜಿಲ್ಲೆ)

● ಯುಗಾದಿ ವಿಶೇಷಾಂಕ ಸಾಹಿತ್ಯ ಸಮೃದ್ಧ. ದ.ಕ. ಜಿಲ್ಲೆ ಬಗ್ಗೆ ಪ್ರಬುದ್ಧ ಲೇಖಕರೇ ಬರೆದಿರುವುದು ಗಾಂಭೀರ್ಯದಿಂದ ಕೂಡಿದೆ. ಟಿ. ಪಿ. ಅಶೋಕ ಪುಸ್ತಕ ಸಮೀಕ್ಷೆ ಉಪಯುಕ್ತ, ಮೌಲಿಕ, ಸಮಯೋಚಿತ.

— ಕೆ. ಗುರುಪ್ರಸಾದ್ ಪ್ರಭು, ಮಂಗಳೂರು

● ಟಿ. ಪಿ. ಅಶೋಕ ಅವರ '1991ರ ಉತ್ತಮ ಕನ್ನಡ ಕೃತಿಗಳು' ಸಮೀಕ್ಷೆ ಆ ವರ್ಷ ಪ್ರಕಟಣೆಗಳ ಬಗ್ಗೆ, ಒಂದುನೂರು ಅತ್ಯುತ್ತಮ ಕೃತಿಗಳ ಬಗ್ಗೆ ಸೊಗಸಾಗಿ ಕಾಣಿಸಿದೆ.

— ಪ್ರಮೋದ್ ತುರ್ವಿಹಾಳ್

● ಉತ್ತಮ ವಿವರಣೆ—ವಿಮರ್ಶೆ: 1991ರ ಸಾಹಿತ್ಯ ಬೆಳವಣಿಗೆ ಕಂಡಂತಾಯಿತು.

— ಲಿಂಗಪ್ಪ ಎನ್. ಉಪ್ಪಿನಂಗಡಿ

● 'ಎಂತಸಾ ಹೆದರಿಕೆ ಇಲ್ಲದ' ಮಂಗಳೂರಿನ ಹಾಗೂ ಮಂಗಳೂರಿಗರ ವೈಶಿಷ್ಟ್ಯ ವರ್ಣನೆ ಇರುವ ಭುವನೇಶ್ವರಿ ಹೆಗಡೆಯವರ ನಗೆ ಲೇಖನ ಅನುಪಮ. ಮಂಗಳೂರಿನ ಬಸ್ಸು, ಬೆವರಾದಿ ಬವಣೆಗಳಿಗೆ ಅವರು ಒಗ್ಗಿ ಕೊಂಡದ್ದರ ವರ್ಣನೆಯ ನವಿರು ಹಾಸ್ಯ ಧಾಟಿಯಿಂದ ರಂಜನೀಯವೆನಿಸಿತು. 'ಶ್ರೀದೇವಿ' ಕೊರತೆಯನ್ನು 'ಶಾಲಿನಿ' ಸಮರ್ಥ ವಾಗಿ ತುಂಬುತ್ತಿದ್ದಾಳೆ.

— ಸುಶೀಲಾ ಆರ್. ರಾವ್, ಮಂಗಳೂರು

● ಸಮೃದ್ಧ ಸಂಚಿಕೆ 'ತುಷಾರ' ಎಂದೆಂದಿಗೂ ಹೀಗೇ ಇರಬೇಕೆಂದು ಅತ್ಯಾಸೆ ನನ್ನದು.

— ಬಸವರಾಜ ತೋಟದ್, ಶಾಖಾಪುರ

● ಕನ್ನಡ ಕೃತಿಗಳ ಪಟ್ಟಿ ದಂಗುಬಡಿಸಿತು. 'ಇಂಥ ಯಾಂತ್ರಿಕ—ಕಷ್ಟಮಯ—ದುಬಾರಿ' ಬದುಕಿನ ನಡುವೆಯೂ ಸೃಜನಶೀಲ ಲೇಖಕ ಜೀವಂತವಾಗಿ ರಲು ಪ್ರಯತ್ನಿಸುತ್ತಿರುವುದು ಅನನ್ಯವೇ ಸರಿ.

— ವಾಸುದೇವ ನಾಡಿಗ್, ಶಿವಮೊಗ್ಗ

● ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ನೋಟದ ಬಗ್ಗೆ ಪ್ರಕಟವಾದ ಲೇಖನವನ್ನು (ಈಶ್ವರ ದೈತೋಟ) ನೋಡಿ ನನಗೆ ಬಹಳ ಸಂತೋಷ ವಾಯಿತು. ವಿವಿಧ ವಿಭಾಗಗಳಲ್ಲಿ ಜಿಲ್ಲೆಯ ಪ್ರಗತಿಯನ್ನು ಲೇಖನ ಚೆನ್ನಾಗಿ ಕಾಣಿಸಿದೆ. ಮತ್ತೆ, ಜಿಲ್ಲೆಯ ಟೆಲಿಕಾಂ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ಕಾಣಿಸಿದ್ದು ನೋಡಿ ಧನ್ಯವಾದ ತಿಳಿಸುತ್ತಿದ್ದೇನೆ.

— ಕೆ. ರಾಮು, ಜನರಲ್ ಮೆನೇಜರ್,
ಟೆಲಿಕಾಂ ಜಿಲ್ಲೆ, ಮಂಗಳೂರು

ಬೆಂಗಳೂರು ಕಚೇರಿ
ಹೊಸ ಟೆಲಿಫೋನ್ ನಂ.
586658 ಮತ್ತು 588467

ಭವಿಷ್ಯ

● ಮೂಲ: ಶ್ರೀಮತಿ ನೀಲಿಮಾದತ್ತ
ಅನುವಾದ: ಡಾ। ನಾ. ಮೊಗಸಾಲೆ

ಅಸ್ಪಷ್ಟವಾದ ಆತಂಕದಿಂದ
ಕೆಲವೊಮ್ಮೆ ಅವರನ್ನು ನಾನು ಸಂದರ್ಶಿಸುವೆ!

ಬತ್ತಿದ ನದಿಯ ದಡದಲ್ಲಿ
ಕಂತುವ ಸೂರ್ಯನ ಕೆಂಪು ಪ್ರಭೆಯಲ್ಲಿ
ಮುಳುಗಿ ಮಲಗಿರುತ್ತಾರೆ ಅವರು!

ಅವರು ಇನ್ನೂ ಅಲಂಕರಿಸಿಕೊಂಡಿದ್ದಾರೆ
ಅಮೂಲ್ಯ ರೇಷ್ಮೆಯ ಉಡುಗೆಗಳಿಂದ
ಮತ್ತು ಮುತ್ತು ರತ್ನಗಳಿಂದ ಆಭರಣಗಳಿಂದ
ಅದು ಅವರ ಹಿಮಶೀತ ಮೃತ್ಯುವನ್ನು
ಶವವಸ್ತ್ರದಿಂದ ಜಾಗರೂಕವಾಗಿ ಮುಚ್ಚಿದಂತೆ

ವಿಶಾಲವಾದ ನದಿದಂಡೆಯ ಮರಳಲ್ಲಿ
ಭಯಾನಕವಾದ ನಿಟ್ಟುಸಿರ ಪ್ರತಿಧ್ವನಿ ಸತತವಾಗಿ

ಮೌನವಾಗಿ ಹಿಂದಿರುಗಿದೆ ಹಿಂದೆ
ನನ್ನ ಪ್ರೀತಿಯ ಮೊಮ್ಮಕ್ಕಳಿದ್ದಲ್ಲಿಗೆ
ಎತ್ತಿಕೊಳ್ಳುವೆ ಅವರಲ್ಲಿ ಅತೀ ಚಿಕ್ಕದನ್ನು
ಮೆತ್ತಗಿನ ನನ್ನ ಹಸ್ತಗಳಲ್ಲಿ
ಇನ್ನೊಂದು ವಿಶಾಲ ಆಕಾಶಕ್ಕೆ ದೃಷ್ಟಿನೆಟ್ಟು.



(26-1-1992ರಂದು ಮಂಗಳೂರು ಆಕಾಶವಾಣಿಯವರು ಏರ್ಪಡಿಸಿದ ರಾಷ್ಟ್ರೀಯ ಕವಿಗೋಷ್ಠಿಯಲ್ಲಿ ಅಸ್ಸಾಮೀ ಭಾಷೆಯಿಂದ ಅನುವಾದಿಸಿ ಪ್ರಸ್ತುತಪಡಿಸಿದ ಕವಿತೆ. ಕೃಪೆ: ಆಕಾಶವಾಣಿ, ಮಂಗಳೂರು.)



ಸಮುದ್ರ

● ಶ್ರೀನಾಥ ರಾಯಸಂ

ಮುಂಗಾರು ಮೋಡಗಳು ಕಪ್ಪಗೆ ದಟ್ಟೈಸಿದ್ದವು. ಇಂದುಮತಿ ಬಾಲ್ಕನಿಯಲ್ಲಿ ನಿಂತು ಆಕಾಶವನ್ನು ದಿಟ್ಟಿಸಿದಳು. ಕೆಳಗೆ ಭೂಮಿ 'ಆ' ಎಂದು ಬಾಯ್ತೆರೆದು ಬರಬಹುದಾದ ಮಳೆಗೆ ಕಾಯುತ್ತಿರುವುದೇನೋ ಎಂಬಂತೆ ಹುಡಿಹುಡಿಯಾಗಿತ್ತು. 'ಈ ಭೂಮಿಗಿಂತ ತಾನು ಹೇಗೆ



ಭಿನ್ನ?' ಎಂಬ ಪ್ರಶ್ನೆ ಅವಳ ಮನಸ್ಸಿನಲ್ಲಿ ಸುಳಿಯಿತು. ಮುಂದಿನ ಜುಲೈಗೆ ತನಗೆ ಇಪ್ಪತ್ತೊಂಬತ್ತು ವರ್ಷ ತುಂಬುತ್ತದೆ. ಭವಿಷ್ಯದ ಅನಿರ್ದಿಷ್ಟ ದಿನಗಳ ಬಗ್ಗೆ ಕನಸು ಕಾಣುತ್ತಲೇ ತನ್ನ ಯೌವ್ವನದ ದಿನಗಳನ್ನು ಕಳೆದದ್ದಾಯಿತು. ಅಪ್ಪ ಇರುವವರೆಗೆ ಒಂದು ಭರವಸೆಯಿತ್ತು... ಈಗ ಅಪ್ಪನ ಸಾವಿನ ನಂತರ ಮನೆ ಮನಸ್ಸು ಎಲ್ಲಾ ಶೂನ್ಯವೆನಿಸುತ್ತದೆ... ಅಮ್ಮ ಹೆಣ್ಣು ಹೆಂಗಸು ಏನು ತಾನೇ ಮಾಡಿಯಾಳು? ತಿಂಗಳಿಗೊಮ್ಮೆ ತಪ್ಪದೇ ತನ್ನ ಅಣ್ಣಂದಿರಿಗೆ ನನ್ನಿಂದಲೇ ಪತ್ರ ಬರೆಸಿ ಒಂದು ವರ ಹುಡುಕಿ ಎಂದು ವಿನಂತಿಸಿಕೊಳ್ಳುತ್ತಾಳೆ. ಅಮ್ಮ ಹೇಳಿದಂತೆಲ್ಲಾ ತಾನು ಬರೆಯುತ್ತಾ ಹೋದಾಗ ಪತ್ರ ಬರೆಯುವುದರ ಅಸಂಗತತೆ ಸ್ಫುಟವಾಗುತ್ತದೆ. ಅಮ್ಮನ ಅಣ್ಣಂದಿರೆಲ್ಲಾ ಉತ್ತಮ ಸ್ಥಾನದಲ್ಲಿ ಇರುವವರೇ... ಆದರೇನು ಬಂತು? 'ನಾನು– ನನ್ನ ಹೆಂಡತಿ– ನನ್ನ ಮಕ್ಕಳು' ಎಂಬ ಅಪ್ಯಾಯಮಾನ ಗೋಲದಲ್ಲಿ ತಮ್ಮನ್ನು ತಾವು ಬಂಧಿಸಿಕೊಂಡಿದ್ದಾರೆ. ಅಮ್ಮನ ಪತ್ರಕ್ಕೆ ಒಂದು ಸೌಜನ್ಯದ ಉತ್ತರವೂ ಅವರಿಂದ ಬಂದದ್ದಿಲ್ಲ...

ಇಂದುಮತಿ ಮನಸ್ಸಿನಲ್ಲಿ ಅಂದುಕೊಂಡಳು— ಪ್ರತಿಯೊಬ್ಬರೂ ಕಾಯುವುದು ಒಂದು ಸಾರ್ಥಕ ಬದುಕಿಗಾಗಿ, ಹಾತೊರೆಯುವುದು ಒಂದು ಹೊಸ ದಿಗಂತಕ್ಕಾಗಿ. 'ಹ್ಞ' ಎಂಬ ಸುಸ್ಕಾರ ಅವಳ ಬಾಯಿಯಿಂದ ಹೊರಟಿತು... ಸಾರ್ಥಕ ಬದುಕು, ಹೊಸ ದಿಗಂತ ಎಂಬ ಈ ಎರಡು ಅಮೂರ್ತ ಸಂಗತಿಗಳು ತನ್ನ ಬದುಕಿಗೆ ದೊರಕದೇ ಹೋಗಬಹುದೇನೋ? ಆದರೆ ಜೀವವಿರುವ ವರೆಗೂ ಈ ಬದುಕಿನಿಂದ ಓಡಿ ಹೋಗಲು ಸಾಧ್ಯವಿಲ್ಲ. ಕಷ್ಟ-ನಿಷ್ಠುರಗಳನ್ನು ಹೊಟ್ಟೆಯಲ್ಲಿ ಹಾಕ್ಕೊಂಡು ಸುಮ್ಮನಿದ್ದುಬಿಡುವುದು ಕೆಲವರ ಜಾಯಮಾನವಾಗಿರಬಹುದು... ಆದರೆ ತಾನು? ವಸಂತಗಳನ್ನು ಗೆಲ್ಲುತ್ತಿರುವೆನೋ ಅಥವಾ ತುಳಿಯುತ್ತಿರುವೆನೋ ಯಾವುದೂ ತೋಚುವು ದಿಲ್ಲ. ಕನ್ನಡಿ ನೋಡಿಕೊಂಡಾಗ ಅನಿಸುತ್ತದೆ— 'ನನ್ನ ಕಣ್ಣ ಕನಸುಗಳೆಲ್ಲಾ ಜಾರಿ ಹೋಗಿ ಬಿಟ್ಟಿವೆಯೇನೋ' ಅಂತ.

"ಇಂದುಮತಿ ಒಳಗೆ ಬಾ... ಮಳೆಯಲ್ಲಿ ನಿಲ್ಲಬೇಡ"— ಅಮ್ಮ ಒಳಗಿನಿಂದ ಕರೆದಳು.

ಎಳೆಎಳೆಯಾಗಿ ಮಳೆ ಸುರಿಯತೊಡಗಿತು. ಇಂದುಮತಿ ಅಮ್ಮನಿದ್ದ ರೂಮಿನ ಕಡೆ ತಿರುಗಿ ನೋಡಿದಳು. ಶಾಂತಿಯ ನೆನಪು ಬಂದಿತು. ಸ್ನೇಹದ ಪರಿಪೂರ್ಣತೆಯನ್ನು ಶಾಂತಿ ತನಗೆ ದೊರಕಿಸಿಕೊಟ್ಟಿದ್ದಳು. ಒಂದು ವಾರದ ಹಿಂದೆ ಶಾಂತಿ ಮದ್ರಾಸಿನಿಂದ ಬಂದಿದ್ದಳು. ಆಗ ಅವಳು ಹೇಳಿದ ಸಮುದ್ರದ ವರ್ಣನೆ ಇಂದುಮತಿ ಯನ್ನು ಕಲ್ಪನೆಯ ಲೋಕಕ್ಕೆ ಎಳೆದೊಯ್ದಿತ್ತು. ತಾನು ಎಂದು ಸಮುದ್ರ ನೋಡಿಯೇನು... ಅದರ ರೌದ್ರ ಸೌಂದರ್ಯ ಸಂಗೀತ ಸವಿದೇನು ಎಂದು ಅವಳ ಮನಸ್ಸು ಹಾತೊರೆದಿತ್ತು. ಶಾಂತಿ ಹೊರಟು ಹೋದ ಮೇಲೆ ಅವಳ ಮಾತುಗಳು ಇಂದುಮತಿಯ ಕಿವಿಯಲ್ಲಿ ಜೇನ್ನೊಣಗಳಂತೆ ಗುಂಯಿಗುಡುತ್ತಿದ್ದವು. ಅಂದೆಲ್ಲಾ ಅವಳಿಗೆ ಅದರದೇ ಭ್ರಮೆ... ರಾತ್ರಿ ಕನಸು... ಎದೆಯೇರಿ ಬರುವ ಸಮುದ್ರದ ಕಪ್ಪು ತೆರೆಗಳು... ಕಿವಿ ತುಂಬುವ ತೆರೆಗಳ ಮೊರೆತ... ಕಣ್ಣಕೋನ ಗಳನ್ನು ವಿಸ್ತರಿಸುವ ಅದರ ಉದ್ದಗಲಗಳು... ನೋಡು ನೋಡುತ್ತಾ ಸಮುದ್ರ ಪುರುಷಾಕೃತಿ ಯನ್ನು ಪಡೆಯಿತು. ಆಹಾ! ಎಂಥ ಸುಂದರನಿವ! ಯಾವ ಊರಿನವ! ಇಂಥ ಪುರುಷನ ಅನ್ವೇಷಣೆ

ಅವಳಿಗೆ ಕನಸು... ಎದೆಯೇರಿ ಬರುವ ಸಮುದ್ರದ ತೆರೆಗಳು, ಕಿವಿ ತುಂಬುವ ಮೊರೆತ, ಕಣ್ಣ ತುದಿಗಳನ್ನು ತುಂಬಿಕೊಂಡ ಉದ್ದಗಲಗಳು— ಇವೆಲ್ಲ ಒಂದು ಪುರುಷಾಕೃತಿ ಪಡೆದು ಅವಳು ನನಸಿಗಾಗಿ ಕಾದಳು.

ಯಲ್ಲಿದ್ದೇನೆ ನಾನು!—ಇಂದುಮತಿಯಿಂದ ಉದ್ಗಾರ ಹೊರಟಿತು. ಅವನು ಹತ್ತಿರ ಬಂದು ಅವಳ ಕೈ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ನೋಡಿದ... ಏನೇನೋ ಹೇಳಿದ... ಅವನ ಯಾವ ಮಾತುಗಳೂ ದಿನಬಳಕೆಯ ಮಾತುಗಳಂತಿರಲಿಲ್ಲ... ಅವನ ಮಾತುಗಳು ತುಂಬ ಹಸಿಯಾಗಿದ್ದವು... ಅವನು ಮಾತ ನಾಡುತ್ತಿದ್ದಾಗ ಅವನ ಕಣ್ಣುಗಳಲ್ಲಿ ಕನಸು ಗಳಿದ್ದವು... ಪ್ರೀತಿಯ ಕಾರ್ಯ ವಿಧಿಗಳಲ್ಲಿ ಅವನು ತೊಡಗಿದಾಗ ಇಂದುಮತಿ ಅವನಿಗೆ ಹೇಳಿದಳು—"ನಾನು ಉತ್ಕಟವಾಗಿ ಬಯಸು ವುದು ಸಮುದ್ರದಷ್ಟು ಪೌರುಷದ ನಿನ್ನಂಥ ಗಂಡಸನ್ನು".

ಥಟ್ಟನೆ ಎಚ್ಚರವಾಗಿತ್ತು.

ಇಂದುಮತಿಯ ಮೈಮನಸ್ಸನ್ನು ಆ ಕನಸಿನ ಅನುಭವವೇ ತುಂಬಿಕೊಂಡಿತು. ಎಂಥ ಸುಂದರ ಅನುಭವ!... ಅದೊಂದು ಕನಸು... ಅದು ವಾಸ್ತವವಾಗಿದ್ದರೇ?—ಅಂಥ ಒಂದು ಅನುಭವ ಕ್ಕಾಗಿ ಚಡಪಡಿಸಿದಳು. ಹಿತವಾದದ್ದನ್ನು ಮತ್ತೆ ಮತ್ತೆ ಚಪ್ಪರಿಸುತ್ತಿತ್ತು ಮನಸ್ಸು... ಕನಸು ಕಾಡುತ್ತಿತ್ತು.

ಅಮ್ಮ ಬಾಲ್ಕನಿಗೆ ಬಂದಾಗ ಇಂದುಮತಿ ಚಡಪಡಿಸಿದಳು. ಅವಳಿಗೆ ಏಕಾಂತ ಬೇಕಾಗಿತ್ತು. ಶಾಂತಿ ಹೇಳಿದ ಸಮುದ್ರದ ವರ್ಣನೆ, ತಾನು ಕಂಡ ಕನಸು ಎರಡೂ ಸಮ್ಮಿಳನಗೊಂಡು ಬೇರೆಯದೇ ಒಂದು ಚಿತ್ರ ಅವಳ ಮನಸ್ಸಿನಲ್ಲಿ ರೂಪುಗೊಂಡಿತ್ತು. ಅದೇ ಕನಸು ಮತ್ತೆ ಮತ್ತೆ ಬಿದ್ದರೆ ಸ್ವೀಕರಿಸುವ ಉಮೇದು ಅವಳ

ಮನಸ್ಸಿಗಿತ್ತು...

"ಅದೇನೇ ಹಾಗೆ ಬಾಲ್ಕನಿಯಲ್ಲಿ ನಿಂತು ಹೋಗಿ ಬರುವವರನ್ನು ನೋಡ್ತಾ ಇರ್ತೀಯ... ಮದುವೆಯಾಗಬೇಕಾಗಿರೋ ಹುಡುಗಿ... ಸರಿ ಕಾಣಲ್ಲ" ಎಂದು ಅಸಹನೆ ತೋರಿದರು. ಮದುವೆಗೆ ನಿಂತ ಹೆಣ್ಣುಮಕ್ಕಳು, ಸಾಲದ ಹೊರೆ ಅದರಂಥ ಬಾಧೆ ಬೇರೆ ಇಲ್ಲ ಎಂಬ ಅರ್ಥ ಅವರ ದನಿಯಲ್ಲಿತ್ತು.

ಮಳೆಯ ವಾಸನೆ ಇಂದುಮತಿಯ ಮೂಗಡರಿತು. ಮತ್ತೆ ಮತ್ತೆ ಶ್ವಾಸ ಎಳೆದು ಆಸ್ವಾದಿಸಿದಳು. ಅಮ್ಮನ ಕಡೆ ತಿರುಗಿ "ಮಳೆ ಜೋರಾಗ ಬಹುದು ಅಮ್ಮ" ಎಂದಳು. ಅವಳ ಮಾತು ಕೇಳುತ್ತಾ ಕೂಡುವ ವ್ಯವಧಾನ ಅಮ್ಮನಿಗಿರಲಿಲ್ಲ. "ಇರಲಿ ಕೆಳಕ್ಕೆ ಬಾ" ಎಂದು ಅಕ್ಕಸದಿಂದ ನುಡಿದು ಮೆಟ್ಟಿಲುಗಳನ್ನು ಇಳಿದು ಹೋದರು.

ಅಮ್ಮ ಕೆಳಗಿಳಿದು ಹೋದ ಮೇಲೆ ಪುನಃ ಏಕಾಂತದ ತೆಕ್ಕೆಯ ಹಿತ ಇಂದುಮತಿಗೆ ದೊರಕಿತು. ತನ್ನಲ್ಲಿಯೇ ಯೋಚಿಸಿದಳು—ದಿನಗಳ ಕಳೆದಂತೆ ಅನಿಸುತ್ತಿದೆ... ನಾನೇನು ಭವಿಷ್ಯದೊಳಗೆ ಕಾಲಿಡುತ್ತಿರುವೆನೋ ಅಥವಾ ವರ್ತಮಾನದೊಡನೆ ಗುದ್ದಾಡುತ್ತಿರುವೆನೋ? ಈ ಗೊಂದಲಕ್ಕೆ ಯಾವ ಹೆಸರಿಟ್ಟು ಕರೆಯಲಿ? 'ಬದುಕು' ಎಂದು ಕರೆದರೆ ಅದರ ಸಮಷ್ಟಿತನ ಕಳೆದು ಹೋಗುತ್ತದೆ. 'ವ್ಯಕ್ತಿಗತ'ವೆಂದು ಸಮಾಧಾನ ಪಟ್ಟುಕೊಂಡರೆ ನನ್ನ ಬದುಕಿನ ಈ ದುಸ್ಥಿತಿಗೆ ಕಾರಣರಾದವರನ್ನು ಕ್ಷಮಿಸಲೇ ಅಥವಾ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಶಿಕ್ಷೆ ಕೊಡಲೇ? ಯಾವುದೂ ತೋಚುವುದಿಲ್ಲ. ಯಾವ ಮಾನಸಿಕ ಸಿದ್ಧತೆಯಿಲ್ಲದೇ ಬಂದುದನ್ನು ಬಂದ ಹಾಗೆ ಸ್ವೀಕರಿಸುವ ದಾರ್ಷ್ಟ್ಯ ಕೂಡ ನನಗಿಲ್ಲ... ಇಂದುಮತಿ ಹಪಹಪಿಸಿದಳು.

ಏಕಾಂತ ಈಗ ಅವಳಿಗೆ ತೀರ ಆಪ್ತವಾಗಿತ್ತು.

ಒಂದು ತಿಂಗಳ ಹಿಂದೆ ಬಂದು ತನ್ನನ್ನು ನೋಡಿ ಹೋದ ವರ ಮಹಾಶಯನನ್ನು ನೆನೆಸಿಕೊಂಡಳು. ಅವನ ಮೊದಲ ಹೆಂಡತಿ ಸತ್ತಿದ್ದಳು, ಒಂದು ಮಗುವಿತ್ತು... ಅವನ ವಯಸ್ಸು ಸುಮಾರು ನಲವತ್ತರ ಮೇಲಿದ್ದೀತು... ಬಾಯಿಯಲ್ಲಿ ಮುಂದಿನ ಹಲ್ಲುಗಳು ಬಿದ್ದು ಹೋಗಿದ್ದರಿಂದ ಅವನ ಮಾತುಗಳು ಜಪಾನಿ ಭಾಷೆಯ ಥರ 'ಬುಶ್ ಬುಶ್' ಎಂದು ಹೊರಡುತ್ತಿದ್ದವು. ಅವನನ್ನು ನೋಡಿದೊಡನೇ 'ಇಶ್ಶೀ' ಅಂದಿತು ಮನಸ್ಸು... ಲೌಕಿಕವೂ ಬೇಕು, ಪಾರಮಾರ್ಥಿಕವೂ ಬೇಕು ಅನ್ನುವಂಥ ವಯಸ್ಸು ಆತನದು... ಕೆಲವು ನಿರ್ದಿಷ್ಟ ಅಭಿಪ್ರಾಯಗಳನ್ನು ಇಟ್ಟುಕೊಂಡು ಅವನ್ನೇ ಸಮರ್ಥಿಸಿಕೊಳ್ಳುವ ಅವನ ಮಾತಿನ ಧಾಟಿ ಹೇಸಿಗೆ ತಂದಿತು. ತಾನು ಬಯಸುವ ಗಂಡು ಗಾಳಿಯಂತೆ ಉಬ್ಬಬೇಕು... ಮಂಜಿನಂತೆ ಕರಗಬೇಕು ಎಂಬ ಕಲ್ಪನೆ ಇಂದುಮತಿ ಇಟ್ಟುಕೊಂಡಿದ್ದಳು. ಆದರೆ ಈ ಮನುಷ್ಯ ಅವಳ ಕಲ್ಪನೆಯಿಂದ ಅತಿದೂರ ನಿಂತು ಕೋಡಂಗಿಯಂತೆ ತೋರಿದ. "ಹುಡುಗಿಯನ್ನು ಒಪ್ಪಿದ್ದೇವೆ" ಎಂದು ಅವನ ತಾಯಿ ಮತ್ತು ಅಕ್ಕ ಹೇಳಿದಾಗ ಅಮ್ಮ ಗೆಲುವಾದಳು. ಕಣ್ತುಂಬ ನೀರು ತಂದುಕೊಂಡು 'ಆ ಮನುಷ್ಯ'ನ ತಾಯಿಯ ಕೈಹಿಡಿದು ಕೃತಜ್ಞತೆ ತೋರಿದಳು. "ಊರಿಗೆ ಹೋಗಿ ಎಲ್ಲಾ ವಿವರವಾಗಿ ತಿಳಿಸ್ತೀವಿ" ಎಂದು ಅವರು ಹೇಳಿದಾಗ ಇಂದುಮತಿ ಕುಸಿದಳು.

ದಿನಗಳು, ವಾರಗಳು ಕಳೆದಂತೆ ಇಂದುಮತಿಯ ಆತಂಕ ಬೆಟ್ಟವಾಗತೊಡಗಿತು. ಅವರಿಂದ ಪತ್ರ ಬರಬಹುದೆಂದು ಅಮ್ಮ ಕಾಯುತ್ತಲೇ ಇದ್ದಳು... ಆದರೆ ಅವರಿಂದ ಪತ್ರ ಬರಲೇ ಇಲ್ಲ... ಮುಂದಾಗುವ ಪರಿಣಾಮಗಳಿಗೆ, ಸಾಧ್ಯತೆಗಳಿಗೆ ಒಡ್ಡು ಹಾಕಿದಂತಾಯಿತು.

ಅಂದೇ ಇಂದುಮತಿ ಶಾಂತಿಗೊಂದು ಪತ್ರ ಬರೆದಳು—"ಶಾಂತಿ, ನೀನು ಇಲ್ಲಿಗೆ ಬಂದಿದ್ದಾಗ ಸಮುದ್ರದ ಕುರಿತು ಹೇಳಿದ್ದೆಯಲ್ಲ... ಅಂದೇ ನನ್ನ ಕನಸಿನಲ್ಲಿ ಸಮುದ್ರದಂಥ ಮನುಷ್ಯನೊಬ್ಬ ಬಂದಿದ್ದ... ಅಂಥ ಪೌರುಷದ, ವ್ಯಕ್ತಿತ್ವದ ಮನುಷ್ಯನ ಹೆಂಡತಿ ನಾನಾಗಬೇಕು... ಅದು ನನ್ನ ಬಯಕೆ... ಈಡೇರುವುದೋ ಇಲ್ಲವೋ ಗೊತ್ತಿಲ್ಲ... ಹೋದ ವಾರ ಒಬ್ಬ ವರ ಮಹಾಶಯ ಬಂದು ನನ್ನನ್ನು ನೋಡಿ ಹೋದ... ಥೇಟ್ ಸಿಂಗಳೀಕನೇ ಸರಿ... ಅಮ್ಮನಿಗೆ ಗೊತ್ತಿಲ್ಲ... ನಾನೇ ಅವರಿಗೆ ಪತ್ರ ಬರೆದು ನನ್ನ ಅಭಿಪ್ರಾಯ ತಿಳಿಸಿಬಿಟ್ಟೆ. ನಾನು ತಪ್ಪು ಮಾಡಲಿಲ್ಲ ತಾನೇ? ನಿನ್ನ ಅನಿಸಿಕೆ ತಿಳಿಸು."

ಒಂದು ವಾರದ ನಂತರ ಶಾಂತಿಯಿಂದ ಪತ್ರ ಬಂದಿತು... "ಇಂದು, ನೀನು ಮಾಡಿದ್ದು ತಪ್ಪು ಅಂತ ನನ್ನ ಅಭಿಪ್ರಾಯ... ಗಂಡಸರಲ್ಲಿ



ಕೂಲ್ ಡ್ರಿಂಕ್ಸ್ ತಗೊಂಡ್ರೆ ಹಲ್ಲುನೋವು ಬರುತ್ತೆ ಅಂದಿರಬೇಕು ಡಾಕ್ಟರ್...

ಗಂಡಸುತನವನ್ನು ನಿರೀಕ್ಷಿಸಬೇಕೇ ಹೊರತು ಸೌಂದರ್ಯವನ್ನಲ್ಲ... ಬದುಕಿನಲ್ಲಿ ನಮಗೆ ಬೇಕಾದುದನ್ನು ಪಡೆಯಲು ಬೇಕಾದಷ್ಟು ಒಳದಾರಿಗಳಿವೆ... ನೀನು ಆತನನ್ನು ಒಪ್ಪಿ ಮದುವೆಯಾಗಿದ್ದರೆ ಸಮುದ್ರದಂಥ ಪುರುಷ ನನ್ನೇ ನೀನು ಬೇರೊಂದು ರೀತಿಯಲ್ಲಿ ದೊರಕಿಸಿ ಕೊಳ್ಳುವ ಸಾಧ್ಯತೆಗಳಿದ್ದವು. ಹಾಗೆ ನೋಡಿದರೆ ಸಮುದ್ರದಂಥ ಮನುಷ್ಯ ಸಿಕ್ಕುವುದು ಸಾಧ್ಯವೇ ಇಲ್ಲ... ಸಮುದ್ರದ ಒಂದೊಂದು ಅಂಶವನ್ನು ಈ ಗಂಡಸರು ಪಡೆದಿರುತ್ತಾರೆ... ನಾನು ಹೀಗೆ ಬರೆದೆನೆಂದು ಬೇಸರಗೊಳ್ಳಬೇಡ... ನಿನಗೆ ಸಮುದ್ರದಂಥ ಪೌರುಷವುಳ್ಳ ಮನುಷ್ಯನೇ ಗಂಡನಾಗಿ ಸಿಗಲಿ ಎಂದು ಹಾರೈಸುತ್ತೇನೆ–ಶಾಂತಿ."

ಇಂದುಮತಿಯ ಮನಸ್ಸು ವಿವಶಗೊಂಡಿತು. ಅಮ್ಮನ ದೃಷ್ಟಿಯಲ್ಲಿ, ಶಾಂತಿಯ ದೃಷ್ಟಿಯಲ್ಲಿ ತಾನು ಅವರಿಗೆ ಪತ್ರ ಬರೆದು ಸಂಬಂಧ ನಿರಾಕರಿಸಿದ್ದು ತಪ್ಪು... ಆದರೆ ನನ್ನ ಸ್ಥಾನದಲ್ಲಿ ನಿಂತು ಯೋಚಿಸಿದರೆ ಅದರಲ್ಲಿ ತಪ್ಪೇನಿದೆ? ಪ್ರತಿಯೊಬ್ಬರೂ ಕೆಲವು ನಿರೀಕ್ಷೆಗಳನ್ನು ಇಟ್ಟು ಕೊಂಡು ಬದುಕುತ್ತಾರೆ... ನನ್ನ ವಯಸ್ಸಿನ ತಾರುಣ್ಯವನ್ನು ಅವನ ಆ ದೇಹದಲ್ಲಿ ಪಡೆಯಲಾರೆ... ಇದು ಸತ್ಯ... ದೇಹದ ಸಾಧ್ಯತೆಗಳ ಮಿತಿ ತನ್ನನ್ನು ತಡೆಯಿತು–ಇಂದುಮತಿ ಸಮರ್ಥಿಸಿಕೊಂಡಳು.

ಇಂದುಮತಿಯ ಮನಸ್ಸು ಹಲವು ದಿಕ್ಕಿನಲ್ಲಿ ಹರಿದು ಹ್ರಾಸವಾಯಿತು. ತನ್ನ ಒಡಲೊಳಗಿನ ಅನಿಸಿಕೆಗಳನ್ನು ಒಂದು ಹಾಳೆಯಲ್ಲಿ ಬರೆದು ಶಾಂತಿಗೆ ಪೋಸ್ಟ್ ಮಾಡಿದಳು. ಅವಳಿಂದ ಉತ್ತರ ಬಂದೀತೆಂದು ನಿರೀಕ್ಷಿಸಿದಳು. ಉದ್ದಕ್ಕೂ ಹರಿದು ಬಂದ ಮೌನ ಅವಳನ್ನು ದಿಕ್ಕೆಡಿಸಿತು.

* * *

ಮನಸ್ಸು ಸಂವೇದನೆಗಳ ಹಾದಿಯಲ್ಲಿಯೇ ಹೆಜ್ಜೆ ಹಾಕುತ್ತಾ ಗುರಿ ಮುಟ್ಟುವ ಪ್ರಯತ್ನ ತುಂಬ ಹಿಂಸೆ ಕೊಡುವಂಥದು. ಇಂದುಮತಿಯ ಕಿವಿಯಲ್ಲಿ ಅದೇ ಏರೇರಿ ಬರುವ ಸಮುದ್ರದ ತೆರೆಗಳ ಮೊರೆತ... ಕಣ್ಮುಂದೆ ಸಮುದ್ರದಂಥ ಮನುಷ್ಯ... ಮನಸ್ಸು ಅವನನ್ನು ಮತ್ತೆ ಮತ್ತೆ ಕಲ್ಪಿಸಿಕೊಂಡು ಮೂಸುತ್ತಿತ್ತು. ಈ ದೇಹದ ರಂಧ್ರ ರಂಧ್ರಗಳಲ್ಲಿ ಪ್ರಕೃತಿ ಎಷ್ಟು ಹಾಸು ಹೊಕ್ಕಾಗಿದೆ?–ಅಚ್ಚರಿಗೊಂಡು ತನ್ನ ನಗ್ನತೆಯನ್ನು ಕನ್ನಡಿಯಲ್ಲಿ ನೋಡಿಕೊಂಡು ಸಂಭ್ರಮಿಸುತ್ತಿದ್ದಳು. ಆಗೆಲ್ಲಾ ಒಂದು ವಿಚಾರ ಅವಳ ಮನಸ್ಸಿನಲ್ಲಿ ಬರುತ್ತಿತ್ತು–ಮನುಷ್ಯ ಎಷ್ಟು ಬಟ್ಟೆ ತೊಟ್ಟರೇನು ದೇಹದ ನಗ್ನತೆಯನ್ನು ಬಿಟ್ಟು ಕೊಡಲು ಸಾಧ್ಯವೇ? ಹುಟ್ಟು, ಮರುಹುಟ್ಟು, ರೂಪ, ಯೌವ್ವನ, ಪ್ರೇಮ, ಕಾಮ, ಸಾವು ಈ ಎಲ್ಲಾ ಸತ್ಯಗಳು ಈ ನಗ್ನ ದೇಹದೊಡನೆ ಹುಟ್ಟಿ ಅದರೊಡನೇ ಸಾಯುತ್ತವೆ.

ಇಂದುಮತಿಯ ಕಲ್ಪನೆಗೆ ಹತ್ತಿರವಾಗುವಂಥ ಮನುಷ್ಯ ಅವಳ ಕಣ್ಣಿಗೆ ಬಿದ್ದಿದ್ದ. ಪ್ರತಿದಿನ ಅವಳು ಬಾಲ್ಕನಿಯಲ್ಲಿ ನಿಂತು ರಸ್ತೆಯಲ್ಲಿ ಹೋಗಿ ಬರುವವರನ್ನು ನೋಡುತ್ತಿದ್ದಾಗ ಹತ್ತು ಗಂಟೆಯ ಹೊತ್ತಿಗೆ ಅವನು ಬರುತ್ತಿದ್ದ. ಸ್ಪ್ರಿಂಗ್ ಕುದುರೆಯಂತೆ ಜಂಪ್ ಮಾಡುತ್ತಾ ಅವನು ನಡೆಯುವ ರೀತಿ ಅವಳಿಗೆ ಚೋದ್ಯವೆನಿಸಿತು. ದಿನಗಳು ಕಳೆದಂತೆ ಅವನನ್ನು ಸೂಕ್ಷ್ಮವಾಗಿ ಅವಲೋಕಿಸತೊಡಗಿದಳು... ಪ್ರತಿದಿನ ಅವನಲ್ಲಿ ಎಂಥದೋ ಹೊಸಬಣ್ಣ, ಹೊಸರೂಪ... ಅರ್ಥವಾಗದ ಸಂದಿಗ್ಧತೆ ಅವಳನ್ನು ಕಾಡಿತು... ಅವಳ ಮನೆಯ ಮುಂದೆ ಹಾದುಹೋಗುವಾಗ ಪ್ರತಿದಿನ ತಪ್ಪದೇ ಬಾಲ್ಕನಿಯಲ್ಲಿ ನಿಂತಿರುತ್ತಿದ್ದ

ಅವಳ ಕಡೆ ನೋಡುತ್ತಿದ್ದ... ಮುಗುಳ್ನಗುತ್ತಿದ್ದ. ದಿನಗಳು ಕಳೆದಂತೆ ಇಂದುಮತಿಗೆ ಅವನ ಮುಗುಳ್ನಗೆ ಹಿತವೆನಿಸತೊಡಗಿತು. ಒಬ್ಬಳೇ ಇರುವಾಗ ಅವನ ನೆನಪು ಜೇನುನೊಣದಂತೆ 'ಸುಂಯ್' ಎಂದು ಹಾರಿಬರುತ್ತಿತ್ತು... ಕಚ್ಚಿ ಹಿಂಸಿಸುತ್ತಿತ್ತು. ಆಗೆಲ್ಲಾ ಅವಳ ಮೈ ಹಗುರಾಗಿ ಬೆವರೊಡೆಯುತ್ತಿತ್ತು.

'ನನ್ನ ಮೊದಲ ಮತ್ತು ಕೊನೆಯ ನಿಲ್ದಾಣ ಅವನೇ' ಎಂಬ ಸ್ಥಿರ ಅಭಿಪ್ರಾಯ ಅವಳಲ್ಲಿ ಮೂಡಿತು. ಪ್ರತಿದಿನ ಅವನು ತನ್ನ ಮನೆಯ ಮುಂದೆ ನಡೆದು ಹೋಗುವಾಗ ಅವನನ್ನು ಹಿಡಿದು ನಿಲ್ಲಿಸಿ ಕಿವಿ ತುಂಬ ಅವನ ಮಾತುಗಳನ್ನು ತುಂಬಿಕೊಳ್ಳಬೇಕು... ಎದೆ ಖಾಲಿ ಮಾಡಿಕೊಳ್ಳುವಷ್ಟು ಅವನೊಡನೆ ಮಾತನಾಡಬೇಕು ಎಂಬ ಉತ್ಕಟತೆ ಕಾಡತೊಡಗಿತು. ಶಾಂತಿಗೆ ಪತ್ರ ಬರೆದಳು... "ನಾನು ಬಯಸುವಂಥ ಸಮುದ್ರದಂಥ ಮನುಷ್ಯನನ್ನು ಕಂಡಿದ್ದೇನೆ..."

"ಗೋ ಅಹೆಡ್" ಶಾಂತಿ ಪತ್ರ ಬರೆದಳು.

ಶಾಂತಿಯ ಪತ್ರದಿಂದ ಇಂದುಮತಿಗೆ ಕುಮ್ಮಕ್ಕು ಸಿಕ್ಕಿದಂತಾಯಿತು. ಪ್ರತಿದಿನ ಬಾಲ್ಕನಿಯಲ್ಲಿ ನಿಲ್ಲುತ್ತಿದ್ದವಳು ಇಂದು ಮನೆ ಬಾಗಿಲಲ್ಲಿ ನಿಂತಳು. ಹತ್ತುಗಂಟೆಯಾಯಿತು... ಅದೇ ಮನುಷ್ಯ... ಇವಳ ಕಡೆಗೇ ನೋಡುತ್ತಾ ಬರುತ್ತಿದ್ದ. 'ಅವನು ಇನ್ನೇನು ನಡೆದು ಹೋಗಿಬಿಡುತ್ತಾನೆ... ಪುನಃ ಅವನನ್ನು ಕಾಣುವುದು ನಾಳೇನೇ' ಎಂಬ ಆತಂಕ ಅವಳನ್ನು ಕಾಡಿತು. ಆದರೆ ಅವಳ ನಿರೀಕ್ಷೆ ಸುಳ್ಳಾಯಿತು. ಅವನು ನೇರವಾಗಿ ಅವಳ ಬಳಿ ಬಂದು "ನೀವು ಇಂದುಮತಿ ಅಲ್ಲವೇ?" ಎಂದು ಪ್ರಶ್ನಿಸಿದ.

ಇಂದುಮತಿಯ ಮೈ ಬೆಚ್ಚಗಾಯಿತು. ಕಿವಿಗಳು ಚುರುಚುರು ಉರಿದವು. "ಹೌದು" ಎಂದು ತಲೆ ಹಾಕಿದಳು.

"ನನ್ನ ಗುರುತು ಸಿಗಲಿಲ್ಲವೇ?"—ಅವನ ಪ್ರಶ್ನೆ ಅವಳನ್ನು ಅಚ್ಚರಿಗೊಳಿಸಿತು. ನೇರವಾಗಿ ಅವನೆಡೆಗೆ ನೋಡಿದಳು.

ಅವನೇ ತನ್ನ ಮಾತು ಮುಂದುವರೆಸಿದ... "ಬಹುಶಃ ನೀವು ಮರೆತಿರಬಹುದು... ನಾನು ಪ್ರಭಾಕರ... ಇಲ್ಲಿ ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೇನೆ... ನೀವು ಹಂಪೆಗೆ ಬಂದಾಗ ಹೊಳೆಯಲ್ಲಿ ಜಾರಿಬಿದ್ದಿರಿ... ಆಗ ನಿಮ್ಮನ್ನು ದಂಡೆಗೆ ಕರೆತಂದವನು ನಾನೇ... ನಿಮ್ಮ ವಿಳಾಸ ಆಗ ಕೊಟ್ಟಿದ್ದಿರಿ... ನೀವು ಬಾಲ್ಕನಿಯಲ್ಲಿ ನಿಂತಿದ್ದಾಗ ಹೇಗೆ ಕರೆದು ಮಾತನಾಡಿಸುವುದು ಎಂದು ಇಷ್ಟು ದಿನ ಸುಮ್ಮನಿದ್ದೆ... ಇಂದು ನೀವೇ ಸಿಕ್ಕಿರಿ" ಎಂದು ನಕ್ಕ.

"ಓಹ್!" ಎಂದು ಇಂದುಮತಿ ಉದ್ಗರಿಸಿದಳು.

"ಒಳಕ್ಕೆ ಬನ್ನಿ" ಎಂದು ಕರೆದಳು.

ಅವನು ಮನೆಯೊಳಕ್ಕೆ ಕಾಲಿಡುತ್ತಾ ಮನೆಯನ್ನೆಲ್ಲಾ ಅವಲೋಕಿಸಿದ. ಇಂದುಮತಿಯ ತಾಯಿ ಬಂದಾಗ ಅವರ ಕಾಲು ಮುಟ್ಟಿ ನಮಸ್ಕರಿಸಿದ. ತನ್ನ ಪರಿಚಯ ಹೇಳಿಕೊಂಡು ನೆನಪು ಮಾಡಿಕೊಟ್ಟ. ಮನೆಯಲ್ಲಿ ಸಂಭ್ರಮದ ವಾತಾವರಣ ಸೃಷ್ಟಿಸಿ ಹೊರಟುಹೋದ.

ಅಂದೆಲ್ಲಾ ಇಂದುಮತಿ ತುಂಬ ಖುಶಿಯಾಗಿದ್ದಳು.

ರಾತ್ರಿ ಕುಳಿತು ಶಾಂತಿಗೆ ಪತ್ರ ಬರೆದಳು— "ಶಾಂತಿ, ಸಮುದ್ರದಂಥ ಮನುಷ್ಯನ ಕುರಿತು ನಾನು ನಿನಗೆ ಬರೆದಿದ್ದೆನಲ್ಲವೇ? ಇಂದು ಅವನನ್ನು ಮಾತನಾಡಿಸಿದೆ... ಅವನು ಹೇಗೆ ಕಂಡ ಗೊತ್ತೇ? ಓಹ್!

ಅವನ ಮೀಸೆಯ ಕುಡಿಗಳಲ್ಲಿ
ಮಂದಹಾಸ ಮಿನುಗುತ್ತಿತ್ತು
ತೋಳುಗಳಲ್ಲಿ
ಖಂಡ ಉಕ್ಕುತ್ತಿತ್ತು
ಕಣ್ಣ ಬಾಗಿಲಲ್ಲೇ
ಆಸೆ ಕುದಿಯುತ್ತಿತ್ತು...
ನಿರ್ಜೀವ ಪದಗಳಲಿ
ನಾ ಹಿಡಿಯಲಾರೆ
ಅವನ ದೇಹ ಭಾವ ಆಸೆ
ನಾ ಹೊಡೆದ ಕವಣೆ ಕಲ್ಲು
ಅವನ ಕಣ್ಣ ತಾಕಿತು
ಹೃದಯ ಚುಚ್ಚಿತು
ದೇಹ ಕಂಪಿಸಿತು
ಘನಿಸಿದ ಮೋಡ ಚದುರಿ ಹೋದಂತೆ
ಅವನು ಹೊರಟು ಹೋದ!"

ಪ್ರಭಾಕರನ ನೋಟ, ನಗು, ಪ್ರತಿಸ್ಪಂದನೆ ಇಂದುಮತಿಯ ದಿನಗಳನ್ನು ತುಂಬಿದವು. ಮೀಸೆ



ಕಡಿಯುತ್ತಾ, ಕೈ ತಿರುವುತ್ತಾ ಅವನು ಮಾತನಾಡುವ ರೀತಿಯೇ ಆಕರ್ಷಕವಾಗಿತ್ತು. ಅವನು ಅವರ ಮನೆ ಬಳಿ ಬಂದಾಗ ತಪ್ಪದೇ ಮನೆಯೊಳಕ್ಕೆ ಬಂದು ತಾಯಿ ಮಗಳನ್ನು ಮಾತನಾಡಿಸಿ ಹೋಗುತ್ತಿದ್ದ. ಸೂಜಿಯಲ್ಲಿ ದಾರ ಪೋಣಿಸಿದಂತೆ ಇಂದುಮತಿಯ ಮನಸ್ಸನ್ನು ಗೆದ್ದುಬಿಟ್ಟಿದ್ದ. ಇಂದುಮತಿಗೆ ಎಷ್ಟು ಯೋಚಿಸಿದರೂ ಪ್ರೀತಿಯ ಲೆಕ್ಕಾಚಾರ ಗರ್ವದ ನೆಲೆಯಲ್ಲಿಯೇ ನಿಂತು ಬಿಡುತ್ತದೆ ಅನಿಸಿತು. ಮುಂದಕ್ಕೆ ಒಂದು ಹೆಜ್ಜೆ ಇಟ್ಟರೂ ಲೆಕ್ಕ ತಪ್ಪುತ್ತದೆಯೆಂಬ ಭಯ, ತನ್ನ ನಿಲುವೇ ಸರಿ ಎಂಬ 'ಅಹಂ'... ರಾತ್ರಿಯೆಲ್ಲಾ ಕನಸುಗಳನ್ನು ಪೋಣಿಸುತ್ತಾ ದಣಿದಳು.

"ಪ್ರೇಮಸ್ಪರ್ಶದಿಂದ ಪ್ರತಿಯೊಬ್ಬನೂ ಕವಿಯಾಗುತ್ತಾನೆ..." ಶಾಂತಿಗೆ ಪತ್ರ ಬರೆದಳು... "ನಾನು ನಾನೇ ಎಂದು ನನಗೆ ಈಗ ಸ್ಪಷ್ಟವಾಗಿದೆ... ಅವನು ಹೊರಟು ಹೋದ ಮೇಲೂ ಅವನ ನಗು 'ಇಡೀಯಾಗಿ' ನನ್ನ ಬಳಿಯೇ ಇದ್ದು ಕಚಗುಳಿಯಿಡುತ್ತಿರುತ್ತದೆ... ಅವನು ಇನ್ನೂ ಯಾಕೆ ಬರಲಿಲ್ಲ ಎಂದು ಕಾಯುತ್ತೇನೆ... ಬಂದ ಮೇಲೆ 'ಹೋಗಬೇಡ' ಎಂದು ಬೇಡಿಕೊಳ್ಳುತ್ತೇನೆ... ಅವನು ಹೋದ ಮೇಲೆ ಅವನು ಇದ್ದಾಗ ನಡೆದ ಸಂಗತಿಗಳನ್ನೆಲ್ಲಾ ಅಂಗೈಯಲ್ಲಿಟ್ಟುಕೊಂಡು ಮುತ್ತಿಡುತ್ತಾ ಸಂಭ್ರಮದಿಂದ ಸವಿಯುತ್ತೇನೆ... ಶಾಂತಿ ನಾನು ಪ್ರೇಮಿಯಾಗಿ ಬಿಟ್ಟಿದ್ದೇನೆ... ಪ್ರೇಮಿಯಾಗಿರುವುದರ ಅನನ್ಯತೆ ನನಗೆ ಗೊತ್ತಿಲ್ಲ... ನಾನು ನದಿಯ ಮೇಲಿನ ಗಾಳಿಯಂತಾಗಿ ಬಿಟ್ಟಿದ್ದೇನೆ."

ಒಂದು ವಾರದ ನಂತರ ಶಾಂತಿಯಿಂದ ಪತ್ರ ಬಂದಿತು–"ಇಂದು, ನಮ್ಮ ಸುತ್ತ ಭಾವನಾ ವಲಯಗಳನ್ನು ಸೃಷ್ಟಿಸಿಕೊಂಡು ಆದರ್ಶ ಸಂಬಂಧಗಳಿಗಾಗಿ ಹಂಬಲಿಸುತ್ತೇವೆ... ಆದರೆ ಇತರರ ವರ್ತನೆಗಳು ತುಂಬಾ ಅನ್ಯಾಯವೆನಿಸುವಷ್ಟರ ಮಟ್ಟಿಗೆ ಸ್ವಾರ್ಥಮಯವಾಗಿರುತ್ತವೆ... ನೀನು ಆ ಮನುಷ್ಯನೊಡನೆ ಎಚ್ಚರಿಕೆಯಿಂದ ನಡೆದುಕೊಳ್ಳುವುದು ಒಳ್ಳೆಯದು..."

* * *

ಪ್ರಭಾಕರ ಬಂದು ಹೋದನಂತರ ಮಳೆ ಸುಯ್ಯತೊಡಗಿತು. ಕಿಟಕಿಯ ಗಾಜಿನ ಮೇಲೆ ಮಳೆಹನಿಗಳು ಪಟಪಟ ಬಡಿದಾಗ ಇಂದುಮತಿ ಉದ್ರೇಕಗೊಳ್ಳತೊಡಗಿದಳು. ಬಾಲ್ಕನಿಯಲ್ಲಿ ನಿಂತು ತಲೆಯಿಂದ ಪಾದದವರೆಗೆ ತೊಯ್ಯಿಸಿಕೊಂಡಳು. ಮನಸ್ಸು ಎತ್ತೆತ್ತಲೋ ಹರಿದು ಪುನಃ ಸಾಂಧ್ರವಾಗುತ್ತಿತ್ತು.

"ಸಮುದ್ರದಂಥ ಮನುಷ್ಯನನ್ನು ನಾನಿಂದು ಕಂಡೆ... ಅನುಭವಿಸಿದೆ ಶಾಂತಿ" ಎಂದು ಅವಳ ಮನಸ್ಸು ಕೂಗಿ ಹೇಳಿತು. ಬಿಳಿಮೋಡ ತುಂಬಿದ ಆಕಾಶ ಅವಳನ್ನು ಕೊನೆಯಿಲ್ಲದ ಸಂತಸದಲ್ಲಿ ಮುಳುಗಿಸಿತು.

ಶಾಂತಿಗೆ ಪತ್ರ ಬರೆದಳು–"ಶಾಂತಿ, ನನ್ನ ಕಲ್ಪನೆಯ, ಸಮುದ್ರದಂಥ ಮನುಷ್ಯನೊಡನೆ ಇಂದು ನನ್ನ ಮಿಲನವಾಯಿತು.

ಲಗ್ಗೆಯ ಮೊದಲ ಹೆಜ್ಜೆಯಲ್ಲೇ
ಅವನ ಉಸಿರ ಬಿಸಿ ತಾಗಿತು
ದೇಹ ಕಾದ ಕಬ್ಬಿಣವಾಯಿತು
ಬಿಲ್ಲಂತೆ ಬಾಗಿತು
ಮಂಜಿನಂತೆ ಕರಗಿತು
ಅವನ ದೇಹದ ಅಂಗುಲಂಗುಲದಲ್ಲಿ
ನನ್ನ ಕದ್ದು ಮಾರಿದೆ
ಅಬ್ಬಾ! ಅದೆಷ್ಟು ಮಳೆ
ಅದೆಂಥ ಮಳೆ!

ಕೊಚ್ಚಿ ಹೋದವು
ಕೈಕಾಲು ಮುಖ ಉಸಿರು
ಈಗ ಉಳಿದಿರುವುದು ಕೇವಲ
ಕೆನೆಗಟ್ಟಿದ ಸುಖ.
ಸುಖಗೀತ!

ನನ್ನಲ್ಲೀಗ ಬರೀ ಗೆಲುವಿನ ಭಾವಗಳೇ ತುಂಬಿವೆ. ಅವನು ಕೊಟ್ಟ ಅನುಭವವನ್ನು ಈ ನನ್ನ ದೇಹದಲ್ಲಿ ಹಿಡಿದಿಟ್ಟುಕೊಂಡಿದ್ದೇನೆ... ನನ್ನನ್ನು ಪೂರ್ತಿಯಾಗಿ ರೂಪಾಂತರಿಸಿಬಿಟ್ಟಿದ್ದಾನೆ ಪ್ರಭಾಕರ... ಅವನ ಇಡೀ ವ್ಯಕ್ತಿತ್ವವೇ ನನ್ನೊಳಗೆ ಸೇರಿಹೋಗಿ ಬಿಟ್ಟಿದೆಯೇನೋ ಅನಿಸುತ್ತಿದೆ..."

* * *

ಎರಡು ತಿಂಗಳ ನಂತರ ಇಂದುಮತಿ ಶಾಂತಿಗೆ ಮತ್ತೊಂದು ಪತ್ರ ಬರೆದಳು--"ಶಾಂತಿ, ಬಹಳ ಹಿಂದೆ ನಿನ್ನ ಒಂದು ಪತ್ರದಲ್ಲಿ ನೀನು ಬರೆದಿದ್ದಿ ನನ್ನನ್ನು ಒಪ್ಪಿದ್ದ ವರನನ್ನು ತಿರಸ್ಕರಿಸಿದ್ದು ತಪ್ಪು ಎಂದು. ಆ ವರನ ಕಡೆಯಿಂದ ಮತ್ತೆ ಒತ್ತಾಯದ ಪತ್ರ ಬಂದಿದ್ದರಿಂದ ನಾನು ವಾಸ್ತವಕ್ಕೆ ಬಗ್ಗಲೇಬೇಕಾಯಿತು... ಅಮ್ಮನಿಗೂ ಈ ಸಂಬಂಧ ಇಷ್ಟವಾಗಿದೆ... ನಾನೀಗ ಅದೇ ವರನನ್ನು ಮದುವೆಯಾಗಲಿದ್ದೇನೆ–ಕಲ್ಪನೆ ಮತ್ತು ವಾಸ್ತವದ ವ್ಯತ್ಯಾಸ ನನಗೀಗ ಮನವರಿಕೆಯಾಗಿದೆ. ನಿಂಗೆ ಆಶ್ಚರ್ಯವಾಗುತ್ತಲ್ಲವೇ? ಆದರೆ ಇದು ನಿಜ. ಮದುವೆ ನಿಶ್ಚಯ ಕಾರ್ಯ ಮುಗಿದಿದೆ... ಮುಂದಿನ ತಿಂಗಳೇ ಮದುವೆ. ನೀನು ನಿನ್ನ ಪತಿಯೊಡನೆ ತಪ್ಪದೇ ಮದುವೆಗೆ ಬರಬೇಕು.

ಇನ್ನೊಂದು ವಿಷಯ–ನನ್ನೊಳಗೆ ಸಮುದ್ರ ಉಕ್ಕುತ್ತಿದೆ... ನಾನು ಸಮುದ್ರವಾಗಿಬಿಟ್ಟಿದ್ದೇನೆ..." ●

ನನ್ನೂರು ನನ್ನ ಜನ

ಮೊಸರಿನ ಕಣಜ–ಕೋಲ್ಹಾರ


ಧಗಧಗಿಸುವ ಉರಿಬಿಸಿಲು, ಎಲ್ಲೆಡೆಯೂ ಒಣಭೂಮಿಯಿಂದ ಕೂಡಿದ ಬಿಜಾಪುರ ಜಿಲ್ಲೆಯಲ್ಲೇನಿದೆಯೆಂದು ಮೂಗು ಮುರಿಯಬೇಡಿ. ನಿಮ್ಮ ಬಿಸಿಲಿನ ತಾಪವನ್ನು ಹೋಗಲಾಡಿಸಲು ನಿಮಗಾಗಿ ಕಾಯ್ದಿದೆ. ಕೋಲ್ಹಾರದ ಹೈನದ ಪದಾರ್ಥಗಳು, ಒಂದು ಕೋಲ್ಹಾರವು ಹೊನ್ನದ ಕಣಜವಾದರೆ ನಮ್ಮ ಕೋಲ್ಹಾರವು ಹೈನದ ಪದಾರ್ಥಗಳ ಕಣಜ. ಈ ಕೋಲ್ಹಾರವು ಬಾಗಲಕೋಟೆ ಮತ್ತು ಬಿಜಾಪುರ ಹೆದ್ದಾರಿ ಮೇಲಿನ ಕಿರಿಯ ಗ್ರಾಮ. ಇಲ್ಲಿಯ ವೈಶಿಷ್ಟ್ಯವೆಂದರೆ ಕೆನೆ ಮೊಸರು.

ಮೊಸರಿನ ಸವಿಗಾಗಿಯೇ ಎಲ್ಲ ಬಸ್‌ಗಳನ್ನು, ವಾಹನಗಳನ್ನು ನಿಲ್ಲಿಸಿ ಚಾಲಕರು, ಪ್ರಯಾಣಿಕರು ದಣಿದ ತಮ್ಮ ದೇಹಕ್ಕೆ ಪ್ರಯಾಸದ ಪ್ರವಾಸದ ಆಯಾಸದ ಪರಿಹಾರಕ್ಕಾಗಿ ಇದನ್ನು ಸವಿದು ಹೊಸ ಆಯಾಮ ಪಡೆಯುತ್ತಾರೆ.

ಸಾಮಾನ್ಯವಾಗಿ ಹೆಂಗಳೆಯರು ರಾತ್ರಿ ವೇಳೆ ವಿವಿಧ ಗಾತ್ರದ ಮಡಿಕೆಗಳಲ್ಲಿ ಹೆಪ್ಪು ಹಾಕಿ ಮುಂಜಾನೆ ನಿಮಗಾಗಿ ಮಾರಲು ಸಿದ್ಧರಾಗುತ್ತಾರೆ. ಇದು ಕೋಲ್ಹಾರದ ಯಾವದೆ ಸ್ಥಳದಲ್ಲೂ ಲಭ್ಯ. ಜನಸಾಮಾನ್ಯನಿಗೂ ಎಟುಕುವಂತೆ ರೂ. 3ರಿಂದ 10ರ ವರೆಗೂ ಇದರ ಬೆಲೆ. ನೀವು ಬಯಸಿದರೆ ಮಡಿಕೆ ಸಹಿತ ಮೊಸರನ್ನ ಚೀಲಗಿಳಿಸಬಹುದು. ಅದರ ರುಚಿಯನ್ನು ಒಮ್ಮೆ ಸವಿದರೆ ಎರಡು ಮೂರು ಮಡಿಕೆಗಳನ್ನು ನಿಮ್ಮ ಕುಟುಂಬಕ್ಕಾಗಿ ನಿಮ್ಮ ಕೈಚೀಲಗಿಳಿಸುವದು ಗ್ಯಾರಂಟಿ. ಹುಳಿಯಂತೂ ಆ ಮೊಸರಿನಿಂದ ಆಕಾಶದಷ್ಟು ದೂರ. ಮೊಸರಿನ ಜೊತೆಗೆ 'ಸುಧಾಮ'ನ ಅವಲಕ್ಕಿಯನ್ನು ತಿಂದರಂತೂ ನಿಮ್ಮ ಹೊಟ್ಟೆಯು ತಂಪು, ಆರೋಗ್ಯಕ್ಕೂ ಒಳ್ಳೆಯದು. ನೀವು ಯಾವುದೆ ಕಾಲದಲ್ಲೂ ಬಂದರೂ ಇದನ್ನು ಪಡೆಯಬಹುದು. ಗ್ರಾಮದ ಪಕ್ಕದಲ್ಲಿ ನದಿ ಹರಿಯುವದರಿಂದ ನೀರಾವರಿಯ ಫಲವಾಗಿ ಸತತ ಹಸಿರಿನ ಕಾರಣದಿಂದ ಸದಾ ಲಭ್ಯ. "ಜೋಗದ ಗುಂಡಿ ನೋಡದೆ ನಿಮ್ಮ ಜೀವನ ಸಾರ್ಥಕವಾಗಬಹುದೇನೋ ನಾ ಕಾಣೆ. ಆದರೆ, ಕೋಲ್ಹಾರದ ಮೊಸರನ್ನು ಸವಿಯದೆ ನಿಮ್ಮ ಜೀವನ ಸಾರ್ಥಕವಾಗದು". ಬಿಜಾಪುರಕ್ಕೆ ಬಂದರೆ ಕೋಲ್ಹಾರಕ್ಕೆ ಬರುವಿರಿ ತಾನೇ? ನಿಮ್ಮ ಆಗಮನಕ್ಕೆ ನಮ್ಮ ಹೃದಯಪೂರ್ವಕ ಸ್ವಾಗತವಿದೆ.

● **ಮಲ್ಲಿಕಾರ್ಜುನ ಪ. ಶೆಲ್ಲಿಕೇರಿ**

ನಾನು ಕಂಡಂತೆ--



● ವ್ಯಾಸರಾಯ ಬಲ್ಲಾಳ

ನಮ್ಮ ಕನಸುಗಳೆಲ್ಲ ಕಣ್ಮರೆಯಾಗುತ್ತಿವೆಯೇ ಎಂಬ ಸಂದೇಹ ಬರುವಂತಹ ಇಂದಿನ ಸಾಮಾಜಿಕ ಸಂದರ್ಭದಲ್ಲಿ ನಾವು ನಿರಂಜನರನ್ನು ಕಳೆದುಕೊಂಡಿದ್ದೇವೆ. ಒಂದು ಪ್ರಭಾವಶಾಲಿ ವ್ಯಕ್ತಿತ್ವ, ಅದಮ್ಯ ಜೀವನೋತ್ಸಾಹದ ಚಿಲುಮೆಯಾಗಿ, ಇತರರ ಕನಸುಗಳನ್ನೂ ರೂಪಿಸಲು ಕಾರಣವಾಗಬಹುದು ಎನ್ನುವುದಕ್ಕೆ ನಿರಂಜನ ನಿದರ್ಶನರಾಗಿದ್ದರು. ಅವರ ಮುಖ ಪರಿಚಯವಾಗುವುದಕ್ಕೂ ಮೊದಲೇ ನಾನು ಅವರನ್ನು ತುಂಬ ಎತ್ತರದಲ್ಲಿ ಗುರುತಿಸಿದ್ದೆ. 'ರಾಷ್ಟ್ರಬಂಧು'ವಿನಲ್ಲಿ ಬರೆಯುತ್ತಿದ್ದ ಕುಳಕುಂದ ಶಿವರಾಯರು. 1943ರ ಮುಂಬಯಿಯ ಪ್ರಗತಿಶೀಲ ಲೇಖಕರ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಹೋಗಿದ್ದ ಶಿವರಾಯರು, ಆಗಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಿತರೆನಿಸಿದ್ದ ಶಿವರಾಯರು, ನನಗಿಂತಲೂ ವಯಸ್ಸಿನಲ್ಲಿ ತುಸು ಕಿರಿಯರು ಎಂದು ನನಗೆ ತಿಳಿದದ್ದು ತುಂಬ ತಡವಾಗಿ. ನನ್ನ ಕತೆಗಾರಿಕೆಯ ಮೊದಲ ಪ್ರಯತ್ನಗಳಿಗೆ ಪ್ರಕಾಶಕರನ್ನು ಅರಸುತ್ತಿದ್ದ ನನ್ನನ್ನು ಅವರು ಪರಿಚಯ ಮಾಡಿಕೊಂಡ ರೀತಿಯೇ ಅವರ ವ್ಯಕ್ತಿತ್ವಕ್ಕೂ, ಅಂತಃಕರಣಕ್ಕೂ ಕನ್ನಡಿ ಹಿಡಿಯುವಂಥದು.

1947ರಲ್ಲಿ—ನಮ್ಮ ಸ್ವಾತಂತ್ರ್ಯ ನಮಗೆ ದೊರಕಿದ ವರ್ಷ—ನಾನೂ ಅಸಮಾನತೆ, ಶೋಷಣೆಗಳ ಕತ್ತಲೆ ಕಳೆದು, ಸಮಾನತೆ ಸಮೃದ್ಧಿಗಳ ಯುಗ ಬರುವುದೆಂಬ ಕನಸು ಕಾಣುತ್ತಿದ್ದ ತರುಣ. ದೂರದ ಮುಂಬಯಿಯಲ್ಲಿ ದುಡಿಯಲೆಂದು ಬಂದಿದ್ದ ನನಗೆ ಕರ್ನಾಟಕದ ಯಾವ ಲೇಖಕರ ಸಂಪರ್ಕವೂ ಆಗ ಇದ್ದಿರ

ಚಿತ್ರ: ಬಿ. ಎನ್. ರಾಜಶೇಖರ್



ಲಿಲ್ಲ. ಮುಂಬಯಿಯಿಂದ ಆ ಸಂದರ್ಭದಲ್ಲಿ ಪ್ರಕಟವಾಗತೊಡಗಿದ್ದ ಒಂದು ರಾಜಕೀಯ ಸಾಪ್ತಾಹಿಕದ ಸಂಪಾದಕ ಬಳಗದಲ್ಲಿ ನಾನಿದ್ದೆ. ಆಗ ತೀರ ಅಪರಿಚಿತನಾಗಿದ್ದ ನನಗೆ ಪತ್ರಿಕೆಯ ವಿಳಾಸಕ್ಕೆ ಬಂದ ಕುಳುಕುಂದ ಶಿವರಾಯರ ಮೊದಲನೆಯ ಪತ್ರದ ಕೆಲವು ಸಾಲುಗಳು ಈ ರೀತಿ: "ಮುಖತಃ ಮಾತನಾಡಿದ ಪರಿಚಯ ವಿಲ್ಲದಿದ್ದರೂ ಯಾವುದೋ ಅವ್ಯಕ್ತ ಸಂಬಂಧ ಈ ಕಾಗದ ಬರೆಸುತ್ತಾ ಇದೆ. ಅದಕ್ಕೆ ಕಾರಣ 'ಛಾಯಾ' ದಲ್ಲಿ ಕಳೆದ ತಿಂಗಳು ಬಂದ ನಿಮ್ಮ ಒಂದು ಕತೆ; 'ನುಡಿ' ಯಲ್ಲಿ ('ನುಡಿ' ನಾವು ನಡೆಸುತ್ತಿದ್ದ ಪತ್ರಿಕೆಯ ಹೆಸರು) ಎರಡು ವಾರದ ಹಿಂದೆ ಬಂದಿರುವ bits. ಕನ್ನಡದಲ್ಲಿ ಇಂಥಾದ್ದ ನ್ನೋದದೆ ಬಹಳ ದಿನಗಳಾಗಿದ್ದವು... ಈ ಹಾದಿಯಲ್ಲಿ ಮುಂದೆ ಸಾಗಿ; ಕೈಲಾದುದನ್ನು ಮಾಡಿ. ಕೈ ಮೀರಿ ಮಾಡಿ". ಈ ಅವ್ಯಕ್ತ ಸಂಬಂಧ, ಆ ಕ್ಷಣದಿಂದಲೇ ನಮ್ಮಿಬ್ಬರ ಆತ್ಮೀಯ ಸಂಬಂಧವನ್ನು ಬೆಸೆಯತೊಡಗಿತ್ತು ಎಂದು ತಿಳಿಯಲು ನನಗೆ ಹೆಚ್ಚು ಅವಕಾಶ ಬೇಕಾಗಿರಲಿಲ್ಲ.

ನಿರಂಜನ—ಚೊಕ್ಕಟವಾದುದನ್ನೆ, ಸಾಮರಸ್ಯ, ಸಹೃದಯತೆಗಳನ್ನೆ, ಆರೋಗ್ಯಕರವಾದ ಜೀವನ ಪ್ರೀತಿಯನ್ನೆ, ಮಾನವೀಯವೆನಿಸುವ ಮೌಲ್ಯ ಗಳನ್ನ, ಶೋಷಣೆ, ಅಸಮಾನತೆಗಳಿರದ, ಪರಿಪೂರ್ಣವೆನಿಸಬಹುದಾದ ಸಾಮಾಜಿಕ ವ್ಯವಸ್ಥೆಯನ್ನೆ ನೆಚ್ಚಿಕೊಂಡಿದುದರಿಂದಲೇ, ಕುಳಕುಂದ ಶಿವರಾಯರು ನಿರಂಜನ ಎಂಬ ಹೆಸರನ್ನು ಇರಿಸಿಕೊಂಡರೇ ಎಂಬ ಸಂದೇಹ ನನಗೆ—ಕನಸು ಕಾಣುತ್ತಿದ್ದುದು ತನ್ನ ಅಂತರಂಗದ ತುಡಿತಗಳನ್ನೆ. ಅವರಿಗೆ ಸಾಹಿತ್ಯವಾಗಲೀ. ಪತ್ರಿಕೋದ್ಯಮವಾಗಲೀ ಬದುಕನ್ನು ಗ್ರಹಿಸುವ ಮಾಧ್ಯಮಗಳಾಗಿದ್ದವು. ಆದರೆ ಬದುಕು ಸಾಹಿತ್ಯ ಕ್ಕಿಂತಲೂ ದೊಡ್ಡದೆಂಬ ನಂಬಿಕೆಯಿತ್ತು. ನಾನಿನ್ನೂ ಎಳೆಯ ಕತೆಗಾರನಾಗಿದ್ದಾಗ, ತೀರ ಅಪರಿಚಿತ ನಾಗಿದ್ದ ನನ್ನನ್ನು ಪ್ರೋತ್ಸಾಹಿಸಬೇಕು ಎಂಬ ಆಸೆ ಅವರಲ್ಲಿ ಕುದುರಿದ್ದುದೇ ಈ ಕಾರಣಕ್ಕಾಗಿ. ಅವರಿಗೆ ಸಾಹಿತ್ಯ ಎಂದೂ ತನ್ನ ಅಭಿವ್ಯಕ್ತಿಯ ಮಾಧ್ಯಮವಷ್ಟೇ ಆಗಿ ಕಂಡಿರಲಿಲ್ಲ. ಅದು ಬದುಕಿನ ಸಮಗ್ರತೆಯನ್ನು ಗ್ರಹಿಸುವ, ತನ್ನ ಸೌಂದರ್ಯದ ಕಲ್ಪನೆಯ ಕನಸುಗಳು ಸಾಕಾರ

ನಿರಂಜನರಿಗೆ ಆತ್ಮೀಯರು ತುಂಬ—ಅವರು ಕಿರಿಯರಾಗಿದ್ದಾಗಿನಿಂದಲೂ ಕಂಡವರು, ಅವರೊಂದಿಗೆ ಬೇಕಾದಷ್ಟು ಒಡನಾಡಿದವರು, ಮಾತನಾಡಿದವರು, ಅಪರೂಪ ಕ್ಷಣಗಳನ್ನು ಕಂಡವರು ಅನೇಕರಿದ್ದಾರೆ.

ನಿರಂಜನ ಅವರನ್ನು ಹತ್ತಿರದಿಂದ ಬಲ್ಲ ಇಂಥ ಇಬ್ಬರು ಹಿರಿಯ ಲೇಖಕರಾದ ವ್ಯಾಸರಾಯ ಬಲ್ಲಾಳ ಮತ್ತು ಶೇಷನಾರಾಯಣ ಅವರು ತಾವು ಕಂಡ ನಿರಂಜನ ಅವರನ್ನು ನೆನಪು ಮಾಡಿಕೊಂಡಿದ್ದಾರೆ.

ವಾಗುವ ಸಾಧ್ಯತೆಗಳನ್ನು ತೋರಿಸಿಕೊಡುವ, ಸಾಧನವಾಗಿತ್ತು. ಸಾಹಿತ್ಯದ ದಂತಗೋಪುರ ದಲ್ಲಿ ಕುಳಿತು ಜೀವನ ವಿಮರ್ಶೆಗೆ ತೊಡಗುವ ಲೇಖಕ ನಿರಂಜನನಾಗಿರಲಿಲ್ಲ. ಬದುಕನ್ನು ಗ್ರಹಿಸಬೇಕಾದ ರೀತಿಯ ಕುರಿತ ಅವರ ಕಳಕಳಿಯೇ ಪ್ರಗತಿಶೀಲ ಚಳವಳಿಯಲ್ಲೂ, ಮುಂದೆ 'ಪ್ರಗತಿ ಪಂಥ'ವನ್ನು ಕಟ್ಟುವ ಕೆಲಸದಲ್ಲೂ ಅವರು ತನ್ನನ್ನು ತೊಡಗಿಸಿಕೊಳ್ಳಲು ಕಾರಣ.

'ಸಾಧನಾ' ಅವರಿಗೆ ತುಂಬ ಪ್ರಿಯವಾಗಿದ್ದ ಹೆಸರು. ಸಾಧನೆ ಅವರ ವ್ಯಕ್ತಿತ್ವದ ಒಂದು ಪ್ರಭಾವಶಾಲಿ ಮುಖ ಕೂಡ. ಮುಂದೆ ಮಡದಿ ಯಾದ ಅನುಪಮಾ ಅವರನ್ನು ಉದ್ದೇಶಿಸಿಯೇ ಅವರು ಬರೆದು ಪ್ರಕಟಿಸಿದ್ದ ಪತ್ರ ಸಂಚಯ 'ಸಾಧನ ಸಂಚಯ'. ಕಮ್ಯೂನಿಷ್ಟ್ ಪಕ್ಷದ ಮುಖಪತ್ರದ ಸಂಪಾದಕರಾಗಿ, ಕಮ್ಯೂನಿಷ್ಟ್ ಚಟುವಟಿಕೆಗಳಿಗಾಗಿ, ಬರೆವಣಿಗೆಗಾಗಿ, ಸರಕಾರದ ವಕ್ರದೃಷ್ಟಿಗೆ ಗುರಿಯಾಗಿದ್ದ ಅವರು ಭೂಗತ ರಾಗಿದ್ದು 1951 ಜನವರಿಯಲ್ಲಿ ಮುಂಬಯಿ

ಯಲ್ಲಿ ಜರಗಿದ್ದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದರು. ಆಗಲೇ ನನಗೆ ಅವರ ಮುಖ ಪರಿಚಯವಾದದ್ದು. ಅವರ ಒಡನಾಟ, ಆತ್ಮೀಯತೆಗಳ ಸಂತೋಷವನ್ನು ನಾನು ಪಡೆಯತೊಡಗಿದ್ದು ಆಗಲೇ. ಮುಂದೆ 40/42 ವರ್ಷ ಕಾಲ ನಿರಂಜನರ ಸ್ನೇಹದ, ಪ್ರೀತಿಯ ಅಂತಃಕರಣದ ಲಾಭ ನನಗೆ ದೊರಕಿ, ನಾನು ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿರಬಹುದಾದ ಯಶಸ್ಸಿಗಿಂತಲೂ ಹೆಚ್ಚಿನ ಮಹತ್ವದ ಸಂಪಾದನೆ ನಿರಂಜನ ದಂಪತಿಗಳ ಪ್ರೀತಿ ಎಂದು ಯಾವ ಸಂಕೋಚವನ್ನೂ ಇರಿಸಿಕೊಳ್ಳದೆ ಹೇಳುವ ಮನಸ್ಸಾಗುತ್ತಿದೆ. ಒಬ್ಬ ಮಹತ್ವದ ಸೃಜನಶೀಲ ಲೇಖಕ ಇನ್ನೊಬ್ಬ ಸೋದರ ಲೇಖಕನನ್ನು ಕಾಣುವ ರೀತಿ ಇಷ್ಟು ಆತ್ಮೀಯವಿರಲು ಸಾಧ್ಯವೇ ಎನ್ನುವ ರೀತಿಯಲ್ಲಿ ಅವರು ನನ್ನನ್ನೂ ನನ್ನ ಬರೆವಣಿಗೆಯನ್ನೂ ನೆಚ್ಚಿಕೊಂಡುದನ್ನು ನೆನೆಸಿಕೊಳ್ಳುವಾಗಲೆಲ್ಲ ನನ್ನ ಕಣ್ಣಲ್ಲಿ ಪಸೆ ಮೂಡುವುದಿದೆ.

ನನ್ನ ಮೊದಲ ಎರಡು ಕಾದಂಬರಿಗಳನ್ನು ನಾನು ಬರೆದು ಮುಗಿಸಿದಾಗ, ನಿರಂಜನ ಒಂದೂ ಕಾದಂಬರಿಯನ್ನು ಬರೆದಿರಲಿಲ್ಲ. ಆದರೆ ಅವರು ನನ್ನ ಎರಡನೆಯ ಕಾದಂಬರಿ 'ಹೇಮಂತಗಾನ'ದ ಹಸ್ತಪ್ರತಿಯನ್ನು ಓದಿ ಪಟ್ಟ ಸಂತೋಷ, ನಾನು ಮೊದಲ ಬಾರಿಗೆ ಬೆಂಗಳೂರಿಗೆ ಹೋದಾಗ, ನನ್ನನ್ನು ಬೆಂಗಳೂರಿನ ಲೇಖಕ



ಕುಳುಕುಂದ ಶಿವರಾಯ

ಬಳಗಕ್ಕೆ ಪರಿಚಯಿಸಲು ಪಟ್ಟ ಆತುರ, ಇವೆಲ್ಲ ನನ್ನ ಮನಸಿನಲ್ಲಿ ಸ್ಥಾಯಿ ರೂಪ ಪಡೆದ ಸ್ಮೃತಿಗಳು. ಮುಂದೆ ಪ್ರಸಿದ್ಧ ಕಾದಂಬರಿಕಾರರೂ ಆಗಿ, 'ರಂಗಮ್ಮನ ವಠಾರ', 'ಚಿರಸ್ಮರಣೆ', 'ಮೃತ್ಯುಂಜಯ'ಗಳಂತಹ ಅತ್ಯಂತ ಮೌಲಿಕ ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟ ನಿರಂಜನ ಯಾವ ರೀತಿಯ ಅಹಂಕಾರ, ಸ್ವಪ್ರತಿಷ್ಠೆಗಳ ಸೋಂಕೂ ಇರದೆ, ತನ್ನ ಪ್ರಾಮಾಣಿಕವಾದ ಪ್ರೀತಿಯಿಂದ ಸೋದರ ಲೇಖಕರನ್ನು ನೋಡಿಕೊಂಡಂತಹ ಉದಾಹರಣೆಗಳು ಬೇರೆ ಸಿಗುವುದೇ ಎಂಬ ಸಂದೇಹ ನನಗಿದೆ.

ಅತ್ಯಂತ ತೀಕ್ಷ್ಣ ಬುದ್ಧಿಮತ್ತೆಯಿದ್ದೂ ಮಗುವಿನಂತಹ ಮುಗ್ಧ ಮನಸ್ಸನ್ನು ಉಳಿಸಿಕೊಳ್ಳುವುದು ತುಂಬ ಕಷ್ಟದ ಕೆಲಸ. ನಿರಂಜನರಲ್ಲಿ ನಾನು ಮಗುವಿನಂತಹ ಮುಗ್ಧತೆಯನ್ನೂ ಕಂಡಿದ್ದೇನೆ. ಯಾವ ರೀತಿಯ ಅಕಾಡೆಮಿಕ್ ಅಧ್ಯಯನದ ಸೌಲಭ್ಯಗಳೂ ಇರದೆ, ನಿರಂಜನ 'ಅಕಾಡೆಮಿಕ್' ವ್ಯವಸ್ಥೆಯಲ್ಲೂ ಕಷ್ಟವೆನಿಸಬಹುದಾದುದನ್ನು ತಾನು ಮಾಡಿ ತೋರಿಸಿದ್ದಾರೆ. ಇಂಥ ಸಾಹಸ ಬೇರೆಲ್ಲಿ ಗುರುತಿಸಲು ಸಾಧ್ಯ ಎಂದು ಯೋಚಿಸುವಾಗ ನನಗೆ ನೆನಪಾಗುವುದು ಕಾರಂತರು ಮಾತ್ರ. ನಿರಂಜನ ಕಿರಿಯರ ವಿಶ್ವಕೋಶ 'ಜ್ಞಾನಗಂಗೋತ್ರಿ'ಯ ಸಂಪಾದನೆಯ ಕೆಲಸದಲ್ಲಿದ್ದಾಗ ನಾನು ಅವರನ್ನು ಒಮ್ಮೆ ಕಂಡಿದ್ದೆ. ಎಲ್ಲ ಬೆರಗಾಗಬಹುದಾದಂತಹ ಶಿಸ್ತಿನ ವ್ಯವಸ್ಥೆಯಿಂದ, ತನ್ನ ಅನಾರೋಗ್ಯವನ್ನೂ ಕಡೆಗಣಿಸಿಯೂ ನಿಗಧಿತ ಅವಧಿಗಿಂತ ಮೊದಲೇ ಈ ಕೆಲಸವನ್ನು ನಿರ್ವಹಿಸಿಕೊಟ್ಟ ಕೀರ್ತಿ ಅವರದು. ಅದಕ್ಕೂ ಹೆಚ್ಚು ಮಹತ್ವದ ಕೆಲಸ 25 ಸಂಪುಟಗಳ ವಿಶ್ವ ಕಥಾ ಕೋಶದ್ದು. ವಿಶ್ವದ ಹಲವು ಪ್ರಮುಖ ರಾಷ್ಟ್ರಗಳ ಕಥಾ ಸಾಹಿತ್ಯವನ್ನು ಪರಿಶೀಲಿಸಿ; ಪ್ರಾತಿನಿಧಿಕ ಕತೆಗಳ ಆಯ್ಕೆ ಮಾಡಿ, ಅನುವಾದಿಸಿಕೊಂಡು, ಆಯಾ ದೇಶಗಳ ಸಾಹಿತ್ಯ ಸಂಸ್ಕೃತಿಗಳ ಪರಿಚಯ ರೂಪದ ಪ್ರಸ್ತಾವನೆ ಬರೆದು ಕನ್ನಡ ಕಥಾ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಸೇವೆ, ಅವರು ಪಕ್ಷವಾತದಿಂದ ಬಳಲುತ್ತಿದ್ದು ಮನೆಯಲ್ಲಿ ಇದ್ದಾಗ ಎಂಬುದನ್ನು ನೆನೆಸಿಕೊಂಡಾಗ ಅವರ ಸಂಕಲ್ಪಶಕ್ತಿ, ಅಧ್ಯಯನಶೀಲತೆ, ಕಾರ್ಯಕ್ಷಮತೆ, ಬರೆವಣಿಗೆಯ ಶಿಸ್ತು ಇವೆಲ್ಲವುಗಳ ಪರಿಚಯವಾಗುತ್ತದೆ. ಈ

ಕೋಶದ ಒಂದು ಕಂತಿನ ಬಿಡುಗಡೆ ಸಮಾರಂಭಕ್ಕೆ ನನ್ನನ್ನೂ ಕರೆಸಿ ನನ್ನ ಕುರಿತ ಆತ್ಮೀಯತೆಯನ್ನು ಅವರು ತೋರಿಸಿದುದಿದೆ.

ನಾನಿರುವುದು ಮುಂಬಯಿಯಲ್ಲಾದರೂ, ನಿರಂಜನ ದೂರದ ಬೆಂಗಳೂರಿನಲ್ಲಿದ್ದಾರೆ ಎಂದು ಯಾವ ಕಾಲಕ್ಕೂ ನನಗೆ ಅನಿಸಿರಲಿಲ್ಲ. ಅವರ ಪತ್ರಗಳನ್ನು ಕಂಡಾಗಲಿಲ್ಲ ಅವರೊಡನೆ ಮಾತನಾಡಿದಂಥ ಸಂತೋಷ ಕಳೆದ ವರ್ಷದ ತನಕ ನನಗಿತ್ತು. ಅವರ ಆರೋಗ್ಯ ಕ್ಷೀಣಿಸಿದಂತೆಲ್ಲ, ಅವರ ಪತ್ರಗಳೂ ಕ್ಷೀಣಿಸಿ, ಪೋಸ್ಟ್ ಕಾರ್ಡುಗಳಿಗೆ ಸೀಮಿತವಾದರೂ ಅವರು ಬರೆಯುತ್ತಲೇ ಇದ್ದರು. ಬೆಂಗಳೂರಲ್ಲಿ ಅವರ ಮನೆ 'ಕಥೆ'ಗೆ ಹೋದಾಗಲೆಲ್ಲ, ಆ ಸುಂದರ ವರ್ಚಸ್ವೀ ಮುಖದ ಹೊಳೆಯುವ ಕಣ್ಣುಗಳಲ್ಲಿ ಮಿಂಚುತ್ತಿದ್ದ ಜೀವನೋತ್ಸಾಹ ಅವರ ಅನಾರೋಗ್ಯವನ್ನೂ ಮರೆಸುವಷ್ಟು ಪ್ರಖರವಾಗಿ ಕಾಣುತ್ತಿತ್ತು. ಅವರು ಬರೆದ ಒಂದು ಅತ್ಯಂತ ಮೌಲಿಕ ಕಾದಂಬರಿ 'ಮೃತ್ಯುಂಜಯ'. ಮಾನವೀಯ ಕನಸುಗಳಿಗಾಗಿ ಮೃತ್ಯುವನ್ನೂ ಜಯಿಸಿಯೇನು ಎಂಬ ಛಲ ಅವರಲ್ಲಿತ್ತು ಎಂದೇ ಅವರು ಹೋರಾಟಗಾರರಾಗಿಯೇ ಕೊನೆಯ ತನಕವೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಷ್ಟೇ ಅಲ್ಲ ಕನ್ನಡದ ಜಾನಪದ ಜೀವನದಲ್ಲೂ ತನ್ನ ಹೆಜ್ಜೆ ಗುರುತುಗಳನ್ನು ನಿಚ್ಚಳವಾಗಿ ಮೂಡಿಸಿ ಮರೆಯಾದ ನಿರಂಜನರೆಂದೇ ನಾನು ತಿಳಿದಿದ್ದೇನೆ. ಶೋಷಣೆಯ ವಿರುದ್ಧ ಹೋರಾಡಿದ ಒಂದು ಸಣ್ಣ ವರದಿಯನ್ನು ಆಧರಿಸಿ ಅವರು 'ಮೃತ್ಯುಂಜಯ'ದಂತಹ ಬೃಹತ್ ಕಾದಂಬರಿಯನ್ನು ಬರೆಯಲು ಸಾಧ್ಯವಾದುದರಲ್ಲಿ ಅವರ ಸಾಹಿತ್ಯಕ ಪ್ರತಿಭೆಯನ್ನೂ ಕಲ್ಪನಾ ಶಕ್ತಿಯನ್ನೂ ಮಾತ್ರ ನಾವು ಕಾಣುವುದಲ್ಲ. ಬದುಕನ್ನು ಅವರ ಮಾನವೀಯ ನೆಲೆಗಳಲ್ಲಿ ಗ್ರಹಿಸಲು ಮಾಡಬೇಕಾದ ಹೋರಾಟದ ಕುರಿತ ಪ್ರಚಂಡ ಆತ್ಮವಿಶ್ವಾಸವನ್ನೂ ಕಾಣುತ್ತೇವೆ. ಇಂತಹ ಆತ್ಮವಿಶ್ವಾಸದ ಬಲದಿಂದಾಗಿಯೇ ಅವರು ನನ್ನ ಅನಾರೋಗ್ಯದ ಸ್ಥಿತಿಯಲ್ಲೂ ತಾನು ಬರೆಯಬೇಕಾಗಿದ್ದ ಮುಂದಿನ ಬೃಹತ್ ಕಾದಂಬರಿಯ ಕನಸು ಕಾಣುತ್ತಿದ್ದುದನ್ನು ನಾನು ಬಲ್ಲೆ. ಭಾರತದಲ್ಲಿ ಮಾನವನ ಹೆಜ್ಜೆ ಮೂಡಿದಂದಿನಿಂದ ಆತ ನಡೆದು ಬಂದ ಆತನ ಹೋರಾಟದ ದಾರಿಯನ್ನು ಗುರುತಿಸುವ 'ಪ್ರಾಗ್ಭಾರತ ಕಥಾ' ಬರೆಯಬೇಕೆಂದು ಯೋಚಿಸಿಕೊಂಡಿದ್ದ ನಿರಂಜನರೊಡನೆ ಈ ವಿಷಯದ ಕುರಿತ ಮಾತು ಬೆಳೆಸುವುದು ನನಗೆ ತುಂಬ ಸಂತೋಷ ಕೊಡುತ್ತಿತ್ತು. ಬರೆಯಬೇಕಾಗಿದ್ದ ಈ ಕಾದಂಬರಿಗೆ ಮುಂದೆ ಅವರು 'ಹೆಜ್ಜೆ' ಎಂದು ಹೆಸರು ಬದಲಿಸಿಕೊಂಡು ಟಿಪ್ಪಣಿ ಮಾಡಿಕೊಳ್ಳುತ್ತಿದ್ದುದ್ದೂ ನಾನು ಬಲ್ಲೆ. ಮೃತ್ಯುವಿನೊಡನೆ ತಾನೂ ಮಾಡುತ್ತಿದ್ದ ಹೋರಾಟದಲ್ಲಿ ಸೋಲನ್ನು 'ಹೆಜ್ಜೆ' ಮುಗಿಯುವ ತನಕವಾದರೂ ದೂರ ವಿಡುತ್ತೇನೆ ಎಂದು ಅವರು ನಂಬಿದ್ದರು. ಕೆಡುತ್ತಿದ್ದ ತನ್ನ ದೇಹ ಸ್ಥಿತಿಯಿಂದಾಗಿ ಇದು ಸಾಧ್ಯವಾಗುತ್ತಿಲ್ಲವೇನೋ ಎಂಬ ನೋವು ಅವರನ್ನು ಎಷ್ಟು ಕಾಡಿರಬೇಡ ಎಂದು ಯೋಚಿಸುವಾಗ ಬೇಸರವಾಗುತ್ತದೆ. ನಾನು ಪ್ರತಿ ಪತ್ರದಲ್ಲೂ ಕಾದಂಬರಿಯ ಪ್ರಗತಿಯ ಬಗ್ಗೆ ವಿಚಾರಿಸುತ್ತಿದ್ದುದು ಕೊನೆ ಕೊನೆಗೆ ಕಿರಿಕಿರಿಯೆನಿಸಿತ್ತೋ ಏನೋ, ಒಂದು ಪತ್ರದಲ್ಲಿ 'ಕಾದಂಬರಿಯ ಪ್ರಸ್ತಾಪ ಬರೆದಾಗ ನಾನೇ ಮಾಡುತ್ತೇನೆ' ಎಂದು ಬರೆದಿದ್ದರು.

ನಿರಂಜನರ ಒಂದು ಕೃತಿ 'ಬುದ್ಧಿಭಾವ, ಬದುಕು'. ತನ್ನ ಬದುಕನ್ನು ರೂಪಿಸಿಕೊಳ್ಳುವಾಗ ಬುದ್ಧಿಭಾವಗಳ ಸಮತೋಲನ ಸಾಧಿಸಿಕೊಂಡ ಧೀಮಂತ ಚೇತನ ಅವರದಾಗಿತ್ತು. ವಯಸ್ಸಿನಲ್ಲಿ ತುಸು ಕಿರಿಯರಾಗಿದ್ದರೂ, ಹಿರಿಯ ಸೋದರನಂತೆ ಅವರು ನನ್ನ ಬರವಣಿಗೆಯನ್ನು ತನ್ನ ಬರವಣಿಗೆಯೆಂಬಂಥ ಪ್ರೀತಿಯಿಂದ ನೋಡಿಕೊಂಡುದನ್ನು



ನಿರಂಜನ

ಕೊನೆಯ ಗಿರಾಕಿ
ನಿರಂಜನ ಅವರ ನೆನಪು

ಈ ಶತಮಾನದಲ್ಲಿ ಕನ್ನಡ ಕಥೆಗಳ ಹಲವು ಸಂಕಲನಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು ನನ್ನ ಕಥೆಗಳನ್ನು ಒಳಗೊಂಡಿವೆ. ಸಂಗ್ರಹಗಳಲ್ಲಿ ಮತ್ತೆ ಮತ್ತೆ ಸ್ಥಾನ ಪಡೆದ ಕಥಾಕೃತಿ 'ಕೊನೆಯ ಗಿರಾಕಿ' ಬೇರೆ ಭಾಷೆಗಳಲ್ಲೂ ಬೆಳಕು ಕಂಡಿರುವುದು ಅದರ ಹೆಗ್ಗಳಿಕೆ.

ನನ್ನ ಭೂಗತ ಜೀವನದ ಮೂರು ವರ್ಷಗಳಲ್ಲಿ ಕೊನೆಯದು ೧೯೪೦. ನಾನು ವಾಸವಾಗಿದ್ದ ಪುಟ್ಟ ಮನೆಯಿಂದ ರಾತ್ರಿ [illegible] ಟಾಟಾ ವಿಜ್ಞಾನ ಮಂದಿರದತ್ತ ಸೈಕಲು ತುಳಿಯುತ್ತಿದ್ದೆ. ಅದರ ಕೈಯಿಂದ ತೂಗಾಡುತ್ತಿತ್ತು ಒಂದು ಬಟ್ಟೆ ಚೀಲ. ಆ ಚೀಲದಲ್ಲಿರುತ್ತಿತ್ತು ಕ್ರಾಂತಿ ಸಾಹಿತ್ಯ. ವಿಜ್ಞಾನ ಮಂದಿರವನ್ನು ಸಮೀಪಿಸುತ್ತಿದ್ದಂತೆ ಒಂದು ವೃತ್ತ ಸಿಗುತ್ತಿತ್ತು — ಕಲ್ಲಿನಿಂದ ಕಟ್ಟಿದ್ದು. ಸೈಕಲನ್ನು ಅದಕ್ಕೆ ಒರಗಿಸಿ, ಮಿತ್ರರು ಬರುವ ದಾರಿ ನೋಡುತ್ತಿದ್ದೆ. ಅವರು ಬಾಲಕಟ್ಟೆಯಿಂದ ಸೈಕಲನ್ನೇರಿ ವೃತ್ತಕ್ಕೆ ಬರುತ್ತಿದ್ದರು. ನನ್ನ ಕೈಚೀಲವನ್ನು ಅವರ ಕೈಗೆ ಒಪ್ಪಿಸುತ್ತಿದ್ದೆ. ಕೆಲ ನಿಮಿಷಗಳ ಮಾತುಕತೆ. ಬಳಿಕ ಬೀಳ್ಕೊಡುಗೆ.

ಅವರಿಗಾಗಿ ಕಾಯುತ್ತಿದ್ದಾಗ ಒಬ್ಬಳು ಯುವತಿ ಅತ್ತ ಆಗಮಿಸುತ್ತಿದ್ದಳು. ನಮಗಿಂತ ತುಸು ದೂರದಲ್ಲಿ ಅವಳ ನಡಿಗೆ. ಬಡವಿ. ಬೇರೆಯಲ್ಲ. ನಾಲ್ಕು ಸಲ ಅವಳನ್ನು ನಾನು ಕಂಡಿರಬೇಕು.

ಕೆಲವು ರಾತ್ರಿಗಳ ಬಳಿಕ ಆ ವೃತ್ತದತ್ತ ನಾನು ಹೋಗಲಿಲ್ಲ. ಮಿತ್ರರು ಅಲ್ಲಿಗೆ ಬರಲಿಲ್ಲ. ವೃತ್ತದಲ್ಲಿ ಕಡಲೆಕಾಯಿ ಮಾರುವ ಒಬ್ಬ ಇರುತ್ತಿದ್ದ. ಅವನಿಂದ ಆಕೆ ಒಂದು ಪೊಟ್ಟಣ ಕಾಯಿ ಕೊಳ್ಳುತ್ತಿದ್ದಳು. ಮಾತಿಲ್ಲದೆ ವ್ಯವಹಾರ ಅಷ್ಟು ಮುಗಿ.

ಭೂಗತ ಬದುಕಿಗೆ ವಿದಾಯ ಹೇಳಿದ ಬಳಿಕ ನಾನು ಬರೆಹಗಾರನಾದೆ. ಐದು ರೂಪಾಯಿ ಸಿಗುತ್ತಿತ್ತು ಒಂದು ಕಥೆಗೆ.

ಆ ವಿಕ್ಷಿಪ್ತ ಹೆಣ್ಣು ಯಾರಿರಬಹುದು! ಕತೆಗಾರನ ಕಲ್ಪನೆಯಲ್ಲಿ ಅವಳು ರೂಪ ತಳೆದಳು. ಕಥೆ ಬರೆದೆ — ಅದು 'ಕೊನೆಯ ಗಿರಾಕಿ'.


ಈಗಲೂ ನೆನಪಿನ ಕಣ್ಣಿನೆದುರು ಆಗಾಗ್ಗೆ ಮೂಡುತ್ತವೆ: ಆ ವೃತ್ತ, ಮತ್ತು ಆಕೆ.

ನಿರಂಜನ


ನೆನೆಸಿಕೊಳ್ಳುವಾಗ, ಅವರು ಬರೆದ ನೂರಾರು ಪತ್ರಗಳಲ್ಲಿ ವ್ಯಕ್ತವಾಗುತ್ತಿದ್ದ ಪ್ರೀತಿಯನ್ನು ನೆನೆಸಿಕೊಳ್ಳುವಾಗ, ಇಂಥ ಪ್ರೀತಿಯನ್ನು ನಾನು ಇನ್ನೆಲ್ಲಿ ಕಾಣಲು ಸಾಧ್ಯ ಎನ್ನುವ ನೋವು ನನ್ನನ್ನು ಕಾಡುತ್ತಿದೆ. ನನ್ನ ಕಾದಂಬರಿ 'ಬಂಡಾಯ' ಪ್ರಕಟವಾದಾಗ ಅದನ್ನು ಓದಿ ಅವರು ಬರೆದ ಪತ್ರ ಅವರ ಸಂತೋಷವನ್ನು ಕನ್ನಡಿಸುವಂತಿತ್ತು. ಅದಕ್ಕೂ ಹೆಚ್ಚು, ಆ ಕೂಡಲೇ ನನ್ನ ಎಲ್ಲ ಬರೆವಣಿಗೆಯ ಕುರಿತ ಚರ್ಚೆ ಬೆಂಗಳೂರಲ್ಲಿ ನಡೆಯಬೇಕು ಎಂದು ನಿರ್ಧರಿಸಿ, ಅವರ ಸ್ಫೂರ್ತಿ, ಸಲಹೆಗಳಂತೆ ಸೋದರಿಯರಾದ ಅನುಪಮಾ, ವಿಜಯಾ, ಬಂಧು ಶ್ರೀನಿವಾಸ ರಾಜು ಮೊದಲಾದವರೆಲ್ಲ ಜತೆ ಸೇರಿ ನಡೆಸಿದ ವಿಚಾರ ಗೋಷ್ಠಿಗಳು, ಸನ್ಮಾನ ಕಾರ್ಯಕ್ರಮ ನಾನು ಚಿರಕಾಲ ನೆನಪಿಡಬೇಕಾದಂಥವು. ಬೆಂಗಳೂರಲ್ಲಿ ನನಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ದೊರಕಿದಾಗ, ಆ ಸಂತೋಷ ತನ್ನದೂ ಎಂದು ತನ್ನ ಅನಾರೋಗ್ಯ ವನ್ನೂ ಕಡೆಗಣಿಸಿ ಸಮಾರಂಭಕ್ಕೆ ಬಂದಿದ್ದ ನಿರಂಜನರನ್ನು ನಾನು ಮರೆಯಲು ಸಾಧ್ಯವೆ. ಬೆಂಗಳೂರಲ್ಲಿ ನಡೆದ ವಿಚಾರ ಸಂಕಿರಣದಲ್ಲೂ ತನ್ನ ಅನಾರೋಗ್ಯವನ್ನೂ ಕಡೆಗಣಿಸಿ ಬಂದು ಭಾಗವಹಿಸಿದ್ದ ನಿರಂಜನ ಮಾತನಾಡುತ್ತಿದ್ದಾಗ ಎರಡು ಬಾರಿ ಗದ್ಗದಿತರಾಗಿ 'ಇದೇನು ಇವೊತ್ತು ಇಷ್ಟು ಭಾವುಕರಾಗಿದ್ದೀರಿ?' ಎಂದು ಪತ್ನಿ ಅನುಪಮಾ ಕೇಳುತ್ತಿದ್ದಂತೆ ಕಣ್ಣೀರಿಳಿಸಿದ ನಿರಂಜನರ ಸ್ನೇಹದಲ್ಲಿ ನಾನು ಕಂಡಂಥ ಆರ್ದ್ರ ಅಂತಃಕರಣದ ನಿಷ್ಕಲ್ಮಷ ಪ್ರೀತಿಯನ್ನು, ಇನ್ನು ಎಲ್ಲಿ ಕಂಡೇನು?

'ನಿರಂಜನ–ಅನುಪಮಾ' ಕನ್ನಡದ ಅಪರೂಪದ ಸಾಹಿತ್ಯಿಕ ಜೋಡಿ. ಇಬ್ಬರೂ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ನಿಚ್ಚಳವಾಗಿ ಮೂಡಿಸಿ ಮರೆಯಾದರು. ಇಬ್ಬರೂ ಹೋರಾಟದ ಬದುಕಿನಲ್ಲಿ ತಮ್ಮ ವ್ಯಕ್ತಿತ್ವದ ವಿಶಿಷ್ಟ ಆಯಾಮುಗಳನ್ನು ಪ್ರದರ್ಶಿಸಿ ದವರು. ಅವರ ಪ್ರೇಮ ವಿವಾಹದ ಸಂದರ್ಭ ದಲ್ಲಿ ಅವರು ಮುಂಬಯಿಗೆ ಬಂದು ಮೂರು ನಾಲ್ಕು ದಿನ ಆಗ ನಾವಿದ್ದ ಪುಟ್ಟ ಮನೆಯಲ್ಲಿ ನನ್ನ ಅತಿಥಿಗಳಾಗಿ ಉಳಿದಿದ್ದ ಸಂದರ್ಭದಿಂದ ನನ್ನ ಸಾಹಿತ್ಯಕ ಹಾಗೂ ಕೌಟುಂಬಿಕ ಜೀವನ ಗಳಲ್ಲಿ ಸಮರಸರಾಗಿ ಬೆರೆತಿದ್ದ ಈ ದಂಪತಿಗಳು ಕಣ್ಮರೆಯಾಗಿ ನಾನು ಕಳೆದುಕೊಂಡಿರುವುದು ಅವರನ್ನಷ್ಟೇ ಅಲ್ಲ, ನನ್ನ ಕನಸುಗಳಿಗೂ ರೆಕ್ಕೆ ಮೂಡಿಸಲು ಶಕ್ತರಾಗಿದ್ದ ಸೋದರ ಸೋದರಿ ಯರನ್ನು ಎಂದೇ ಭಾಸವಾಗುತ್ತಿದೆ.

ಮಗುವಿನ ಮುಗ್ಧತೆ, ತಾರುಣ್ಯದ ಹೋರಾಟದ ಹುಮ್ಮಸ್ಸು, ಬುದ್ಧಿಯ ಬೆನ್ನು ಹಿಡಿದು ಹೋಗುವ ಶ್ರದ್ಧೆ, ವಿಜ್ಞಾನಿಯ ಸತ್ಯ ಶೋಧನೆಯ ಕುತೂಹಲ, ಪರಿಪೂರ್ಣನೆನಿಸುವ ಮಾನವನ ಹಾಗೂ ಶೋಷಣೆ ಅಸಮಾನತೆಗಳಿಂದ ಸಾಮಾಜಿಕ ವ್ಯವಸ್ಥೆಯ ಕನಸು ಕಾಣುತ್ತ, ತನ್ನ ಅಂತಃಕರಣ ದಲ್ಲಿ ಹುದುಗಿರುವ ಜೀವನ ಪ್ರೀತಿಯಿಂದಾಗಿ ಏನನ್ನೂ ಗೆದ್ದೇನು, ಏನನ್ನೂ ಮಾಡಿಯೇನು, ಮೃತ್ಯುವನ್ನೂ ಜಯಿಸಿಯೇನು ಎನ್ನುವ ಆತ್ಮ ವಿಶ್ವಾಸ ಇವೆಲ್ಲವನ್ನು ಒಂದೇ ವ್ಯಕ್ತಿಯಲ್ಲಿ ಕಾಣುವುದು ಸಾಧ್ಯವೇ ಎಂದು ನಾನು ಯೋಚಿಸು ವಾಗಲೆಲ್ಲ ನನಗೆ ನಿರಂಜನ ನೆನಪಾಗುತ್ತಾರೆ. 'ಕಥೆ'ಯ ನಿರಂಜನ ಕಣ್ಮರೆಯಾಗಿದ್ದಾರೆ. ಆದರೆ ನಾನು ಕಂಡ, ನನ್ನ ನೆನಪಿನಲ್ಲಿ ನಿಂತಿರುವ ನಿರಂಜನ ಮರೆಯಾಗುವುದುಂಟೆ! ●



ಚಿತ್ರ: ಅಶ್ವತ್ಥನಾರಾಯಣ



ಚಿತ್ರ: ಕೆ. ಜಿ. ಬಿಡದೋಣಿ

ಸುರುಳಿ

● ಶೇಷನಾರಾಯಣ

"ಸೈಕಲಿನಲ್ಲಿ ಹೋಗಿದ್ದು ಬಂದುಬಿಡೋಣ ವೇನ್ರೀ!" ಎಂದರು ನಿರಂಜನ.

ವಿಶ್ವೇಶ್ವರಪುರದ ಒಂದು ಮಹಡಿಯ ಮೇಲೆ 'ಚಿತ್ರಗುಪ್ತ' ಕಾರ್ಯಾಲಯ. "ಸರಿ" ಎಂದೆ. ಮಹಡಿಯಿಂದ ಕೆಳಗಿಳಿದು ಒಂದು ಸೈಕಲ್ ಷಾಪಿನಲ್ಲಿ ಸೈಕಲ್ ತೆಗೆದುಕೊಂಡದ್ದಾಯ್ತು. ಆಗ ಸಂಜೆ ಐದು-ಐದೂವರೆ.

ಚಾಮರಾಜಪೇಟೆಯ ಒಬ್ಬರು ಸ್ನೇಹಿತರ ಮನೆಯಲ್ಲಿ ಏನೋ ಕೆಲಸ.

ಆದರೆ ನಾನು ಒಬ್ಬನೇ ಕುಳಿತು ಸೈಕಲ್ ಪೆಡಲನ್ನು ತುಳಿಯಲು ಸಮರ್ಥನೇ ಹೊರತು, ಡಬಲ್ ರೈಡಿಂಗ್ ಮಾಡುವಷ್ಟು ಪರಿಣತಿ ಇಲ್ಲದವ.

ನಿರಂಜನ ನನ್ನ ಬೆನ್ನಹಿಂದೆ ಕುಳಿತರು. ನಾನು ಪೆಡಲ್ ತುಳಿದೆ. ಆದರೆ ಬ್ಯಾಲನ್ಸ್ ತಪ್ಪಿತು. ಹ್ಯಾಂಡಲ್ ಹಾಗೆ ಹೀಗೆ ಹೊಯ್ದಾಡಿತು.

ನಿರಂಜನ ನಗುತ್ತ ಕೆಳಗೆ ಧುಮುಕಿ "ಆಗೋದಿಲ್ವೇನ್ರೀ, ನೀವು ಕುಳಿತುಕೊಳ್ಳಿ. ನಾನು ತುಳೀತೀನಿ" ಎಂದರು.

ಆದರೆ ಅವರಿಗೂ ಅದೇ ಕಥೆ.

ಇಷ್ಟರ ವರೆಗೆ ನಾವು ಸೈಕಲ್ ಷಾಪಿನಿಂದ ಹಾಗೆ ಹೀಗೆ ಮಾಡಿ ಮಕ್ಕಳ ಕೂಟದ ವರೆಗೆ ಬಂದು ಬಿಟ್ಟಿದ್ದೆವು. ಬಳಿಕ ಇನ್ನುಮುಂದೆ ಸಾಧ್ಯವಿಲ್ಲ ಎಂದು ಅದನ್ನು ತಳ್ಳಿಕೊಂಡೇ ಸಾಗಿದೆವು. ಬರುವಾಗ ಸೈಕಲ್ ಹತ್ತುವ ಗೋಜಿಗೇ ಹೋಗದೆ, ಮಾತಾಡುತ್ತ ನಮ್ಮ ಜಾಗ ಬಂದು ಸೇರಿಕೊಂಡೆವು.

* * *

ಮಧ್ಯಾಹ್ನ, ಎಲ್ಲೋ ಹೋಗಿದ್ದವನು ನಾನು ಊಟ ಮುಗಿಸಿ ಹಿಂದಿರುಗಿದ್ದೆ. ನನ್ನ ಸಹೋದ್ಯೋಗಿ ವೆಂಕಟರಾಜ ಪಾನಸೆ. "ನೀವು ಊಟ ಮುಗಿಸಿ ಬಂದೀರೇನ್ರಿ. ಹಂಗಾದ್ರೆ ನಾನು ಹೋಗಿದ್ದು ಬರ್ತೀನಿ" ಎಂದರು. "ಹೋಗಿದ್ದು ಬನ್ನಿ" ಎಂದೆ. ಅವರು ಹೊರಡಬೇಕು ಎನ್ನುವಾಗ ನಿರಂಜನ ಒಳಗೆ ಬಂದರು.

ನಿರಂಜನ ಬರುತ್ತಲೇ ಪಾನಸೆ "ಊಟಕ್ಕೆ ಹೊಂಟೀನಿ..." ಎನ್ನುತ್ತ, "ನೀವು?" ಎಂದರು.

"ನನಗೆ ಆಗಿದೆ. ನೀವು ಹೋಗಿದ್ದು ಬನ್ನಿ" ಎಂದರು ನಿರಂಜನ.

ಕಾರ್ಯಾಲಯದಲ್ಲಿ ನಾವಿಬ್ಬರೇ.

ನಿರಂಜನ ಈಗ ಭದ್ರವಾಗಿ ಅಂಟಿಸಿದ್ದ ಒಂದು ಕವರನ್ನೂ ನನಗೆ ನೀಡಿ "ನಾಳೆ ಅವರು ಕತೆ ತೆಗೆದುಕೊಂಡು ಬರ್ತಾರೆ. ಈ ಕವರ್ ಅವರಿಗೆ ಕೊಟ್ಟುಬಿಡಿ" ಎಂದರು.

ನನಗೆ ಅರ್ಥವಾಯಿತು. ಮೆಲ್ಲಗೆ ನಗುತ್ತ ಕವರ್ ತೆಗೆದು ಡ್ರಾವರ್‌ನಲ್ಲಿ ಹಾಕಿದೆ.

ನಿರಂಜನ ಈಗ ಮೇಲೆದ್ದರು. "ಕೆಳಗೆ ಹೋಗಿ ಏನಾದರೂ ಕುಡಿಯೋಣವೆ? ಒಳ್ಳೆ ಬಿಸಿಲು" ಎಂದೆ.

"ಇಲ್ಲ, ಬೇಡಿ. ಎಲ್ಲೋ ಹೋಗಬೇಕಾಗಿದೆ. ಹುಷಾರು, ಕವರ್ ಎಲ್ಲಾದರೂ ಹಾಕಿಬಿಟ್ಟೀರಿ" ಎನ್ನುತ್ತ ಮಹಡಿಯಿಂದ ಕೆಳಗಿಳಿದು ಅವರು ಹೊರಟು ಹೋದರು.

ಆ ರಾತ್ರಿಯ ಬಸ್ಸಿನಲ್ಲಿ ನಿರಂಜನ ಭದ್ರಾವತಿಗೆ ಪಯಣ. ಮರುದಿನ ಅಲ್ಲಿ ಏನೋ ಒಂದು ಸಮಾರಂಭ; ಭಾಷಣ.

ಮಾರನೆಯ ದಿನ ಬೆಳಗಿನ ಹತ್ತುಗಂಟೆ. ಪಾನಸೆ ಯಾವುದೋ ಕತೆಯನ್ನು ತಿದ್ದುತ್ತ ಕುಳಿತಿದ್ದರು. ನಾನು ಯಾವ ಯಾವ ಏಜಂಟರು ಬಾಕಿ ಉಳಿಸಿಕೊಂಡಿದ್ದಾರೆ ಎಂದು ಲೆಡ್ಜರ್ ತೆಗೆದು ಗುರುತು ಹಾಕಿಕೊಳ್ಳುತ್ತ ಇದ್ದೆ.

ಆಗ 'ಅವರು' ಬಂದರು. ನಾನು "ಕುಳಿತುಕೊಳ್ಳಿ" ಎಂದೆ. ನನ್ನ ಮೇಜದ ಒಂದು ಬದಿಯಲ್ಲಿ ಮೆಲ್ಲನೆ 'ಅವರು' ಕುಳಿತವರೇ, ತಮ್ಮ ಕತೆಯನ್ನು ನನ್ನ ಮೇಜಿನ ಮೇಲಿಟ್ಟರು. ನಾನು ಎದ್ದು ಅದನ್ನು ಎತ್ತಿ ಪಾನಸೆಯವರ ಮೇಜಿಗೆ ವರ್ಗಾಯಿಸಿ ಬಿಟ್ಟೆ. ಕತೆಗಳನ್ನು ಪರಿಶೀಲಿಸುವುದು, ಆಯ್ಕೆ ಮಾಡುವುದು, ಪಾನಸೆಯವರ ಕೆಲಸ.

ಬಳಿಕ ನಾನು ಡ್ರಾವರ್ ತೆಗೆದು ಕೆಳಭಾಗ ಬಚ್ಚಿಟ್ಟಿದ್ದ ಕವರನ್ನು ಹೊರತೆಗೆದು "ನೀವು ಬರ್ತೀರ ಅಂತ ನಿರಂಜನ ಹೇಳಿದರು. ಈ ಕವರ್ ನಿಮಗೆ ಕೊಡೋದಕ್ಕೆ ಹೇಳಿದ್ದಾರೆ" ಎಂದು ಹೇಳಿ ಅವರಿಗೆ ಕೊಟ್ಟೆ.

ಅವರ ಮುಖ ಸ್ವಲ್ಪ ರಂಗಾದ ಹಾಗಾಯಿತು. "ಸರಿ" ಎನ್ನುತ್ತ ಕವರನ್ನು ತೆಗೆದುಕೊಂಡು ಹೊರಟುಹೋದರು.

'ಅವರು' ಹೌದು—ಅವರು, ಅನುಪಮಾ, ಆಗ ತೆಳ್ಳನೆಯ ಯುವತಿ.

ಒಂದೆರಡು ಸಲ ಹೀಗೆ ನಾನು, ಇವರ ಮದುವೆಗೆ ಮೊದಲು, ಇವರಿಬ್ಬರಿಗೂ ರಾಯಭಾರಿಯೂ ಆಗಿದ್ದೆ.

* * *

ನನ್ನನ್ನು ಬೀಳ್ಕೊಡಲು ನಿರಂಜನ ಬಸ್‌ಸ್ಟಾಂಡಿಗೆ ಬಂದರು. ನನ್ನ ಮದುವೆಯ ಸಲುವಾಗಿ ನಾನು ಊರಿಗೆ ಹೊರಟಿದ್ದೆ. ಶಿವಮೊಗ್ಗೆಯಲ್ಲಿ ನನ್ನ ಮದುವೆ.

ನಿರಂಜನ ಈಗ ತುಂಬಾ ಖಿನ್ನರಾಗಿದ್ದರು. "ಒಂದು ಹತ್ತು ರೂಪಾಯಿ ಕೊಡಲೂ ಈಗ ನನ್ನಿಂದ ಆಗುತ್ತಿಲ್ಲ" ಎಂದರು ದುಗುಡದಿಂದ. ಆಗ ಅವರು ಕಾಸುಕಾಸಿಗೂ ಹೋರಾಡಿಕೊಂಡು ಇದ್ದರು.

"ಪರವಾಯಿಲ್ಲ, ಬಿಡಿ. ನಿಮ್ಮ ಅಭಿಮಾನ ಒಂದೇ ಸಾಕು" ಎಂದೆ.

ಹತ್ತು ರೂಪಾಯಿ ಆಗಿನ ಕಾಲದಲ್ಲಿ ದೊಡ್ಡ ಮೊಬಲಗು. 'ಚಿತ್ರಗುಪ್ತ' ಉಪಸಂಪಾದಕನಾದ ನನಗೆ ಎಪ್ಪತ್ತೈದು ರೂಪಾಯಿ ಸಂಬಳ.

ಈಗಾಗಲೇ ನಿರಂಜನ ಅನುಪಮಾರವರನ್ನು ಮದುವೆ ಮಾಡಿಕೊಂಡಿದ್ದರು. ನನ್ನ ಸಹೋದ್ಯೋಗಿ ವೆಂಕಟರಾಜ ಪಾನಸೆಯವರಿಗೂ ಆಗಿತ್ತು. ಈಗ ನನ್ನ ಸರದಿ.

ನಮ್ಮ ಮೂವರಿಗೂ ಹೆಚ್ಚು ಕಡಿಮೆ ಆರು ತಿಂಗಳ ಅಂತರದಲ್ಲಿ ಮದುವೆ ಮುಗಿಯಿತು.

ಆದರೆ ಒಂದು ವ್ಯತ್ಯಾಸ. ನನಗೂ ಪಾನಸೆಯವರಿಗೂ ನಮ್ಮ ನಮ್ಮ ಅಕ್ಕನ ಮಗಳು ವಧು. ನಿರಂಜನರಿಗೆ ಕೋಲಾಹಲದ ಅಂತರ್ಜಾತೀಯ ಮದುವೆ. ●

ವಿಪರ್ಯಾಸ

ವರನ
ವರಮಾನ
ಕೇಳಿದರೆ—
ಹೋಗುವದಂತೆ
ವರನ-ಮಾನ!

● ಪ್ರೊ। ಸಜ್ಜನ ಆರವಿಂದ



ಜಗದ್ಗುರು

ಪ್ರತಿ ಊರೂ
ಒಂದು ಜಗತ್ತೇ
ಹೇಗೆಂದರೆ
ಊರಿಗೊಬ್ಬ ಜಗದ್ಗುರು

● ಗಿರಿಧರ ಉದ್ಯಾವರ

ನೇಮನಾಯಕರನ್ನು ಕೈದು ಮಾಡಿದರೆಂಬ ಸುದ್ದಿ ಕಾಡುಕಿಚ್ಚಿನಂತೆ ಹಳ್ಳಿಹಳ್ಳಿಗೂ ಹಬ್ಬಿತು. ಜತೆಯಲ್ಲೆ ಆಲೀಖಾನರನ್ನು ಗಿರಫ್ತಾರ್ ಮಾಡಿದರೆಂಬ ವಾರ್ತೆ ಭುಗಿಲ್ ಭುಗಿಲೆನ್ನುತ್ತ ವಾತಾವರಣವನ್ನೆಲ್ಲ ತುಂಬಿಕೊಂಡಿತು. ಅಂಗಳದಲ್ಲಿ ಆಡುತ್ತಿದ್ದ ಪೋರ, ಎಲೆ ಅಡಿಕೆ ಮೆಲುಕು ಹಾಕುತ್ತಿದ್ದ ಅಜ್ಜ, ಹೊಲದಲ್ಲಿ ದುಡಿದು ಬಂದ ಗಂಡಹೆಂಡಿರು, ಸಂಘದ ಯುವಕ ಕಾರ್ಯಕರ್ತರು—ಎಲ್ಲರೂ ಆಡುತ್ತಿದ್ದ ಸೊಲ್ಲು ಒಂದೇ:

"ಯಾಕೆ? ಯಾಕೆ? ಕೈದು ಯಾಕೆ? ಗಿರಫ್ತಾರ್ ಯಾಕೆ?"

ಯಾಕೆ ಎಂದು ಯಾರಿಗೆ ಗೊತ್ತು? ಯಾರನ್ನು ಕೇಳಬೇಕು?

ಎಪ್ಪತ್ತು ವರ್ಷದ ಮುದಿ ಮುದುಕ, ಆಲೀ ಖಾನ್. ಅರುವತ್ತು ವರ್ಷದ ವೃದ್ಧ, ನಾಯಕ. ಇಬ್ಬರನ್ನೂ ಅರ್ಧ ದಾರಿ ನಡೆಸಿ, ಉಳಿದರ್ಧ ದಾರಿ ಲಾರಿಯಲ್ಲಿ ಹಾಕಿ ಮುಟ್ನೂರಿಗೆ ಸಾಗಿಸಿದರಂತೆ. ಪೊಲೀಸ್ ಅಧಿಕಾರಿ ಆಲೀಖಾನರ

'ಈ ಭೂಮಿಗೆ ನಾವು ಮತ್ತೆ ಹೋಗಿಯೇ ಹೋಗುತ್ತೇವೆ. ಸಾಯುವ ಮೊದಲು ರೈತರ ರಾಜ್ಯ ಆಗಿಯೇ ಆದೀತು...'—ಪೊಲೀಸರಿಂದ 'ಗೂಂಡಾ'ಗಳು ಎಂದು ನಾಮಕರಣ ಮಾಡಿಸಿಕೊಂಡಿದ್ದ ಆ ಇಬ್ಬರು ಮುದುಕರು ಕನಸುಕಂಡರು.

ನಿರಂಜನ ಅವರು 11 ಮೇ 1947ರಲ್ಲಿ ಬರೆದು ಪ್ರಕಟವಾದ ಕಥೆ ಇದು. ಅವರ ಪ್ರಗತಿಶೀಲ ತುಡಿತದ ಮಾದರಿ ನೋಟ.

ಇಬ್ಬರು ಘುಂಡರು

● ನಿರಂಜನ



ತುಷಾರ



ಕನ್ನಡ
ಕಥಾಲೋಕ

ಬಡಕಲು ಕೈಗಳನ್ನು ಸಂಕೋಲೆಯಿಂದ ಬಿಗಿದಾಗ ಆ ಮುದುಕ ಹೇಳಿದರಂತೆ:

"ಈ ಜನ ಮಾಡುವುದು ಅಲ್ಲಾ ಮೆಚ್ಚದ ಕೆಲಸ. ಏನು ಕದ್ದೆ, ಯಾವ ತುಡುಗು ಮಾಡಿದೆ—ಎಂತ ಈ ಶಿಕ್ಷೆ? ಖೂನಿ ಮಾಡಿದವರಿಗೆ ಹಾಕುವ ಹಾತ್‌ಬೇಡಿ ನನಗೆ! ಭೇಷ್!"

ನಾಯಕರು ಹೇಳಿದರಂತೆ:

"ಹಿಂದೆ ಒಮ್ಮೆ ಕಾಂಗ್ರೆಸ್ ಸತ್ಯಾಗ್ರಹ ಆದಾಗ ನನ್ನ ಕೈಗೆ ಬೇಡಿ ಬಿದ್ದಿತ್ತು— ಈಗ ರೈತ ಚಳುವಳಿ ಮಾಡಿದ್ದಕ್ಕೂ ಬೇಡಿ. ಇರಲಿ. ಸಾಯುವ ಮೊದಲು ಈ ಗೌರವ ಇನ್ನೊಮ್ಮೆ ಬಂತಲ್ಲ!"

ಹೀಗೆ ಅವರಿಬ್ಬರು ಮಾತಾಡಿದರೆಂಬ ಸುದ್ದಿ ಹಬ್ಬತೊಡಗಿತು.

ಹಳ್ಳಿಗೆ ಹಳ್ಳಿಯೇ ಆಗಲೇ ಮುಟ್ಟೂರಿಗೆ ಹೋಗಬೇಕೆಂದು ಕೆಲವರು ಒತ್ತಾಯಪಡಿಸ ತೊಡಗಿದರು. ಆದರೆ ಕೊನೆಗೆ, ನಿರಲದಿಂದ ಬಸಪ್ಪ ಬರುವ ತನಕ ಕಾದಿರಬೇಕೆಂದು ತೀರ್ಮಾನವಾಯಿತು.

ರಾತ್ರಿ ಎಂಟು ಗಂಟೆಗೆ ನಿರಲ ರೈತ ಸಂಘದ ಕಾರ್ಯದರ್ಶಿ ಬಸಪ್ಪ ಬಂದ.

"ಹೆದರಬೇಡಿ, ಹೆದರಬೇಡಿ," ಎಂದ ಬಸಪ್ಪ.

ಅವನ ಎತ್ತರದ ದೇಹ ಮತ್ತೂ ಸ್ವಲ್ಪ ಎತ್ತರವಾಗಿ ಕಾಣಿಸುತ್ತಿತ್ತು. ಆ ದಿನ ಸ್ವರದ ತೀಕ್ಷ್ಣತೆ ಹೆಚ್ಚಾಗಿತ್ತು.

ಅವನು ಹೇಳಿದ:

"ಆದದ್ದೆಲ್ಲಾ ಛಲೋ ಆತು. ನಾಳೆ ನಸುಕಿಲೆ ಮೆರವಣಿಗೆ ತಗೊಂಡು ಹೊರಟು ಬಿಡೋಣ. ನಲಗ, ಸಣ್ಣೂರು, ಚಿಮಾರ—ಎಲ್ಲ ರೈತರದೂ ಮೆರವಣಿಗೆ ಬರೋದೈತಿ. ನೋಡೋಣಂತ ಮುಖಂಡರನ್ನ ಎಲ್ಲಿಗೆ ಒಯ್ತಾರೊ ನೋಡೋಣು..."

ಆ ರಾತ್ರಿ ಗಂಭೀರ ವಾತಾವರಣ ಹಳ್ಳಿಯನ್ನು ಪಸರಿಸಿತ್ತು. ಮಿಣಿಮಿಣಿ ಎಳ್ಳೆಣ್ಣೆ ದೀಪಗಳು ಅಲ್ಲಲ್ಲಿ ಉರಿಯುತ್ತಿದ್ದುವು. ನಾಯಿಗಳು

ಪ್ರಗತಿಶೀಲ ನಿರಂಜನ ಅವರ ಪ್ರಾತಿನಿಧಿಕ ಕಥೆ

ಶೋಷಣೆಯ ನಿಷ್ಠುರ ನೋಟ

ಕಥೆ ಆಯ್ಕೆ—ವಿಮರ್ಶೆ: ಪ್ರೊ। ಎಲ್. ಎಸ್. ಶೇಷಗಿರಿ ರಾವ್

ಪ್ರಗತಿಶೀಲ ಸಾಹಿತ್ಯ ಯುಗದ ಕಾದಂಬರಿ—ಸಣ್ಣ ಕಥೆಗಳನ್ನು ಈಗ ಓದಿದಾಗ ಒಂದು ರೀತಿಯಲ್ಲಂತೂ ಸಂತೋಷವಾಗುತ್ತದೆ. ಆ ಬರಹಗಾರರ ಲೇಖನಿಯಲ್ಲಿ ಹರಿಯುತ್ತಿದ್ದದ್ದು ಶಾಯಿಯಷ್ಟೇ ಅಲ್ಲ, ತಾವು ಒಂದು ಮಹತ್ಕಾರ್ಯದಲ್ಲಿ ಭಾಗಿಗಳಾಗುತ್ತಿದ್ದೇವೆ. ಒಂದು ಮಹಾನ್ ಹೋರಾಟದ ಯೋಧರಾಗಿದ್ದೇವೆ, ಕಡೆಗೆ ವಿಜಯ ತಮ್ಮದು ಎಂಬ ಭರವಸೆ.

ಪ್ರಗತಿಶೀಲ ಪಂಥದ ಪ್ರಮುಖ ಕಾದಂಬರಿಕಾರ—ಕಥೆಗಾರರಲ್ಲಿ ಒಬ್ಬರು ನಿರಂಜನರು. 1947ರ ಪ್ರಾರಂಭದಲ್ಲಿ ಅವರ ಎರಡು ಸಂಗ್ರಹಗಳು, 'ಸಂಧಿ ಕಾಲ' ಮತ್ತು 'ರಕ್ತ ಸರೋವರ' ಪ್ರಕಟವಾದಾಗ ಅವರು ಕುಳುಕುಂದ ಶಿವರಾವ್ ಆಗಿದ್ದರು. ಈ ಸಂಗ್ರಹಗಳು ಪ್ರಕಟವಾಗುತ್ತಲೇ ಬೀಸಿದ ವಿಮರ್ಶೆಯ ಸುಂಟರಗಾಳಿಯ ನೆನಪು ನನಗಿದೆ. ಈ ಕಥೆಗಳಲ್ಲಿ ಕಲೆಯ ದೃಷ್ಟಿಯಿಂದ ಹಸಿ ಎನ್ನಬಹುದಾದ ಬರಹ ಸಾಕಷ್ಟಿತ್ತು. ಆದರೆ ಅಚ್ಚಾದ ಪುಟವನ್ನು ಮುಟ್ಟಿದರೆ ಕೈಸುಡುತ್ತದೆ ಎನ್ನುವಂತಹ ಬಿಸಿ ಕೋಪವಿತ್ತು. ಬಿಸಿ ಕಂಬನಿ ಬೆರಳಿಗೆ ತಗಲುತ್ತದೆ ಎನ್ನುವಂತಹ ಅನುಕಂಪವಿತ್ತು. ಮುಂದೆ ನಿರಂಜನರ ಕೈಗೆ ಅನುಭವ ಬೆಳೆದಂತೆ 'ಕೊನೆಯ ಗಿರಾಕಿ'ಯಂತಹ ಶ್ರೇಷ್ಠ ಕಥೆಯನ್ನು ಬರೆದರು. ಭಾಷೆಯನ್ನು ಅತ್ಯಂತ ಮಿತವ್ಯಯದಿಂದ, ಸಂಯಮದಿಂದ ಬಳಸಿ, ಕಥೆಯಲ್ಲಿ ವಿನ್ಯಾಸವೇ ಇಲ್ಲ ಎನ್ನಿಸುವಷ್ಟು ಮಟ್ಟಿಗೆ ಅದ್ಭುತವಾದ ಕಲೆಯನ್ನು ಅಡಗಿಸಿ, ಸಂಕೇತವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿದರು.

ಆಗಾಗ್ಗೆ ಕಚ್ಚಾಡುತ್ತಿದ್ದುವು.

ಬೆಳ್ಳಿ ಚಿಕ್ಕೆ ಮೂಡುವ ಕಾಲಕ್ಕೆ ಎಲ್ಲರೂ ಎಚ್ಚರ್ರಾದರು.

ನಡೆಯಲಾಗದವರು, ಹಣ್ಣು ಮುದುಕರು, ಹಸುಳೆ ಮಕ್ಕಳು—ಇಷ್ಟು ಜನ ಮಾತ್ರ ಮನೆಗಳಲ್ಲೇ ಉಳಿದರು. ಆ ದಿನ ಹೊಲಕ್ಕೆ ಯಾರೂ ಹೋಗಲಿಲ್ಲ. ಹೆಂಗಸರು ಬುತ್ತಿ ಕಟ್ಟಿದರು. ಗಂಡಸರು ರುಮಾಲು ಸುತ್ತಿದರು. ಉತ್ಸಾಹದ ಹುಡುಗ ಹುಡುಗಿಯರು ಬಾವುಟ ಹಿಡಿದರು. ಒಳ್ಳೆಯ ಕಂಠವಿದ್ದವರು ದೇಶಪ್ರೇಮದ ಹಾಡು ಹಾಡಿದರು.

ಕತ್ತಲೆಯನ್ನು ಹೊಡೆದೋಡಿಸುತ್ತ, ಬೆಳಕನ್ನು ಬಾ ಎನ್ನುತ್ತ, ರೈತ ಸಮುದಾಯದ ಠೋಳಿ ಹೊರಟಿತು.

.... ಅವರು ಮುಟ್ಟೂರಿಗೆ ಹೋಗುವವರು. ಅಲ್ಲಿ ಅಧಿಕಾರಿಗಳನ್ನು ಕಂಡು "ನೀವು ಮಾಡಿದ್ದು ತಪ್ಪು; ನಮ್ಮವರನ್ನು ಬಿಡಿರಿ" ಎನ್ನುವರು. ನೇಮನಾಯಕ, ಆಲೀಖಾನ ಇಬ್ಬರನ್ನೂ ಬಿಡಿಸಿ ವಿಜೃಂಭಣೆಯಿಂದ ಹಿಂದೆ ತಂದು ಅವರ ಗ್ರಾಮಕ್ಕೆ ಮುಟ್ಟಿಸಿ, ಅಲ್ಲಿಂದ ತಮ್ಮ ತಮ್ಮ ಮನೆಗೆ ಮರಳುವರು. ತಮಗೆ ಆಗ ಜಯವಾಗುವುದು, ತಮ್ಮ ಶಕ್ತಿ ಆಗ ಸರಕಾರಕ್ಕೆ ತಿಳಿಯುವುದು!...

"ರೈತ ಸಂಘಕ್ಕೆ ಜಯವಾಗಲಿ!" ಎಂದು ಅವರು ಘೋಷಿಸಿದರು.

"ಇಂಕ್ವಿಲಾಬ್ ಜಿಂದಾಬಾದ್!"

"ನಮ್ಮ ಮುಖಂಡರನ್ನು ಬಿಟ್ಟುಬಿಡಿರಿ!"

"ಹೊಲ ಯಾರದು? ರೈತನದು?"

ಕೆಲವರು ಸಿಟ್ಟಿಗೆದ್ದದ್ದು ಆ ಕೊನೆಯ ಘೋಷವನ್ನು ಕೇಳಿ. ಹೊಲ ರೈತನದಂತೆ! ಹೊಲ ಜಮೀನ್ದಾರನದು. ರೈತ ದುಡಿಯುವ ಆಳು. ಅದನ್ನೊಪ್ಪದೆ ಹೊಲ ರೈತನದೆಂದು ಹೇಳುವುದೇ?

ಆದರೆ ರೈತರು, "ಈಗಲೇ ಹೊಲ ವಶಪಡಿಸಿಕೊಳ್ಳುತ್ತೇವೆ" ಎನ್ನಲಿಲ್ಲ. ಕಾಂಗ್ರೆಸ್ ಸರಕಾರ

1922ರಲ್ಲಿ ಹುಟ್ಟಿದ ನಿರಂಜನ 1941ರ ಹೊತ್ತಿಗೇ ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. 1941ರಲ್ಲಿ (42ರ ಹೋರಾಟಕ್ಕೆ ಮೊದಲು,ಗಾಂಧೀಜಿ ಬದುಕಿದ್ದಾಗ) ಅವರು ಬರೆದ 'ಬಾಪೂಜಿ!... ಬಾಪೂ' ಗಾಂಧೀಜಿ ತೀರಿದ ನಂತರದ ಭಾರತವನ್ನು ಚಿತ್ರಿಸುತ್ತದೆ. ಆಗ ಅನೇಕರಿಗೆ 'ಷಾಕ್'—ಬದುಕಿದ್ದ ಗಾಂಧೀಜಿ ಸತ್ತ ಪ್ರಸ್ತಾಪ ಮಾಡುತ್ತಿದ್ದಾನೆ ಈ ಹುಡುಗ ಎಂದು. ಇವತ್ತು ಆ ಕಥೆ ಓದಿದಾಗ 19 ವರ್ಷದ ಕುಳುಕುಂದ ಎಷ್ಟು ಸರಿಯಾಗಿ ಭವಿಷ್ಯವನ್ನು ಊಹಿಸಿದರು ಎಂದು ಆಶ್ಚರ್ಯವಾಗುತ್ತದೆ.

ಶೋಷಣೆಯು ಹಲವು ಮುಖಗಳಿಂದ ಹಲವು ನಾಲಗೆಗಳಿಂದ ಸಮಾಜದ ಸಂಪತ್ತನ್ನೂ ನೆಮ್ಮದಿಯನ್ನೂ ನುಂಗುವುದನ್ನು ನಿರಂಜನ ತಮ್ಮ ಪ್ರಾರಂಭದ ಕಥೆಗಳಲ್ಲೆ ಚಿತ್ರಿಸಿದರು. ನಗರದಲ್ಲಿ, ಹಳ್ಳಿಯಲ್ಲಿ, ವೃದ್ಧರ ಬದುಕಿನಲ್ಲಿ, ಎಳೆಯರ ಬಾಳಿನಲ್ಲಿ ಇದರ ಬೆಂಕಿ ಸುಡುತ್ತಿದ್ದುದನ್ನು ಚಿತ್ರಿಸಿದರು. ಇಲ್ಲಿ ಆರಿಸಿರುವ 'ಇಬ್ಬರು ಗುಂಡರು' 1947ರ ಮೇ 11ರಂದು ಬರೆದದ್ದು. ('ಗುಂಡರು' ಎಂದರೆ ಇಲ್ಲಿ ಗೂಂಡಾಗಳು, ಸಮಾಜ ಘಾತುಕರು.) ನಿರಂಜನರ ಕಥೆಗಳ ಮೂರು ಮುಖ್ಯ ಗುಣಗಳನ್ನು ಇಲ್ಲಿ ಕಾಣಬಹುದು 1) ಸಮಾಜದಲ್ಲಿ ಅಂತರ್ಗತವಾದ ಶೋಷಣೆ, ಹಿಂಸೆ ಇವು ಜನಸಾಮಾನ್ಯನ ಬದುಕಿನಲ್ಲಿ ಹಾಸುಹೊಕ್ಕಾಗಿ ಹೇಗೆ ಸಾಮಾನ್ಯರ ಮನೆಗಳ ಹೆಂಗಸರ, ಮಕ್ಕಳ, ಮುದುಕರ ಬಾಳುಗಳನ್ನು ತಿರುಚಿ ಹಾಕುತ್ತಿವೆ, ಸರಕಾರವೇ ಹೇಗೆ ಹಿಂಸೆಯ ಮೇಲೆ, ಅನ್ಯಾಯದ ಮೇಲೆ ನಿಂತಿದೆ ಎನ್ನುವುದನ್ನು ಮೂರ್ತವಾಗಿ ಚಿತ್ರಿಸುವುದು 'ಥಿಯರಿ', ಸಿದ್ಧಾಂತ ಬದುಕಿನ ಸತ್ವವಾಗಿ ಸಾಹಿತ್ಯದಲ್ಲಿ ಪ್ರಕಟವಾಗುವುದನ್ನು ಇಲ್ಲಿ ಕಾಣಬಹುದು 2) ಶೋಷಣೆ; ಕ್ರೌರ್ಯ, ಹಿಂಸೆ ಇವುಗಳು ಎಷ್ಟು ಪ್ರಬಲವಾದವು ಎನ್ನುವುದನ್ನು ನಿಷ್ಠುರವಾಗಿ ಚಿತ್ರಿಸುತ್ತಲೇ ಭರವಸೆಯನ್ನೂ ಶೋಷಿತರ ಹೋರಾಟದ ಅಂತಿಮ ವಿಜಯದ ದೃಢ ವಿಶ್ವಾಸವನ್ನೂ ಧ್ವನಿಸುವುದು. 3) ಸಣ್ಣ ಸಣ್ಣ, ಸ್ಪಷ್ಟವಾದ, ಮೂರ್ತ ವಿವರಗಳಿಂದ ಕೂಡಿದ, ಭಾವತೀಕ್ಷ್ಣತೆಯಿಂದ ಶಕ್ತಿ ಪಡೆಯುವ ಶೈಲಿ, ವೇಗವಾಗಿ ಸಾಗುವ ಕ್ರಿಯೆ, ಬಾಣ ಗುರಿಯನ್ನು ಮುಟ್ಟುವಂತೆ ಪರಿಣಾಮವನ್ನು ಸಾಧಿಸುವ ಕಥೆಗಾರಿಕೆ. 'ಇಬ್ಬರು ಗುಂಡರು' ಪ್ರಗತಿಶೀಲ ನಿರಂಜನರ ಪ್ರಾತಿನಿಧಿಕ ಕಥೆ. ●

ತಂದ ಹೊಲ ಸಾಗುವಳಿ ಕಾಯಿದೆ–ಟೆನೆನ್ಸಿ ಆ್ಯಕ್ಟ್–ಸರಿಯಾಗಿ ನಡೆಯಲಿ ಎಂಬುದು ಅವರ ಆಸೆ. ಅದನ್ನು ಅವರು ಸ್ವಾಗತಿಸಿದ್ದಾರೆ. ಆದರೆ ಆ್ಯಕ್ಟಿನ ಕಣ್ಣು ತಪ್ಪಿಸಿ ಜಮೀನ್ದಾರರು ಮೋಸ ಮಾಡುವುದು ಬೇಡ. ಮೋಸ ಮಾಡಲು ಬಿಡ ಲಾರೆವು!– ಎನ್ನುವುದು ರೈತರ ಖಂಡತುಂಡ ಸ್ಪಷ್ಟೋಕ್ತಿ.

ಇದು ಹೊಲದೊಡೆಯ ಶ್ರೀಮಂತ ವರ್ಗಕ್ಕೆ ಹೇಗೆ ಸಹನೆಯಾದೀತು? ಅವರ ಆಪ್ತರಾದ ಅಧಿಕಾರಿ ಬಳಗ, ರೈತರ ಈ ಮನೋವೃತ್ತಿ ಯಿಂದ ಶಾಂತಿ ಭಂಗವಾಗುವ ಸಂಭವವಿದೆ ಎಂದು ಹೇಗೆ ತೀರ್ಮಾನಿಸದೆ ಇದ್ದೀತು?

..... ಮುಟ್ಟೂರು ಕೋರ್ಟು ಆರಂಭ ವಾಗುವುದು ಹನ್ನೊಂದು ಗಂಟೆಗೆ.

ಆದರೆ ಒಬ್ಬರು ಇನ್ನೊಬ್ಬರನ್ನು ಸೇರಿ, ಒಂದು ಹಳ್ಳಿಯವರು ಇನ್ನೊಂದು ಹಳ್ಳಿಯವ ರನ್ನು ಕೂಡಿಕೊಂಡು, ಮೆರವಣಿಗೆ ಉದ್ದದ ಮೆರವಣಿಗೆಯಾಗಿ, ಹತ್ತು ಹೊಡೆಯುವುದ ರೊಳಗಾಗಿಯೇ ರೈತರು ಮುಟ್ಟೂರನ್ನು ಸೇರಿದರು..

ನಗರದಲ್ಲಿ ಆಗ ಜೀವ ಸಂಚಾರವಾಗುತ್ತಿತ್ತು. ಅಂಗಡಿಗಳನ್ನು ತೆರೆದಿದ್ದರು. ಕಚೇರಿಯವರು ಬಿರುಸು ಬಿರುಸಾಗಿ ನಡೆಯುತ್ತಿದ್ದರು. ಹನ್ನೊಂದು ಗಂಟೆಯ ಸಾಲೆಗೆಂದು ಹೊರಟ ಹುಡುಗರು ಅಲ್ಲಿ ಇಲ್ಲಿ ಬೀದಿ ತುಂಬ ತುಂಬಿದ್ದರು. ಉಡುಪಿ ಬ್ರಾಹ್ಮಣರದೊಂದು ಹೊಟೇಲಿನ ಫೋನೋ "ತುಮ್‌ನೆ ಮುಜ್ ಕೋ ಪ್ರೇಮ ಸಿಖಾಯಾ" ಹಾಡುತ್ತಿತ್ತು.

ಹಳ್ಳಿಗಮಾರರ ಜಯಘೋಷ–ಮೆರವಣಿಗೆ ಊರಿನ ಶಾಂತಿಯನ್ನು ಕದಡಿತು. ಗುಸು ಗುಸು ಮಾತಾಡಿದರು ಜನ. ಮಧ್ಯಮ ವರ್ಗದವರೆಲ್ಲ ಕೂತಲ್ಲೇ ನಿಂತಲ್ಲೇ ಕಣ್ಣು ಬಿಟ್ಟು ನೋಡಿದರು.

ನಮ್ಮ ನಗರ

ಇದು ಚಕ್ರವ್ಯೂಹ
ಒಳಗೆ ಬರಬಹುದು
ಒಮ್ಮೆ ಬಂದಿರೊ ಒಳಗೆ
ಹಿಂದೆ ಹೋಗುವ ದಾರಿ ಬಂದಾದ ಹಾಗೆಯೇ!
ಕರೆತಂದ ದೈವಗಳು ಕೈಬಿಟ್ಟ ಹಾಗೆಯೇ!
ನಗರವಲ್ಲ ಇದು
ಸಿಕ್ಕ ಜೀವವನ್ನೆಲ್ಲ ನುಂಗಿ ಸೊಕ್ಕಿರುವ
ಹೆಬ್ಬಾವಿನಂಥ ಜಡ ಅಜಗರ
ದಿಕ್ಕು ದಿಕ್ಕಿಂದಲೂ ಉಕ್ಕಿ ಧಾವಿಸುತ್ತಿರುವ
ಲಕ್ಷವಾಹಿನಿ ಮರೆತ ಜನಸಾಗರ.
ಏನೆಲ್ಲ ಭಾಷೆ, ಎಷ್ಟೆಲ್ಲ ಆಸೆ,
ನೂರೆಂಟು ರುಚಿ ಕಲಸುಮೇಲೋಗರ.
ಬಂದವರಿಗೆಲ್ಲ ಇಲ್ಲಿ ಭವಿಷ್ಯ ಇರದಿದ್ದರೂ
ಆಟಬಲ್ಲ ಖದೀಮ ಮಾತ್ರ ಹಾಕಿಯೆ ಬಿಡುವ ಕೇಳಿದ ಗರ!

ಎಲ್ಲ ಸಮೃದ್ಧ ಇಲ್ಲಿ
ಕೆಲವು ಜಾಗಗಳಲ್ಲಿ
ನೀರಿಲ್ಲದಿದ್ದರೂ ನಲ್ಲಿಯಲ್ಲಿ

ಕಿವಿಗೊಟ್ಟು ಕೇಳಿದರು. ಸಭ್ಯತೆಯ ಯಾವ ಲಕ್ಷಣವೂ ಇಲ್ಲದೆ, ಯಾವ "ಲಜ್ಜೆ"ಯೂ ಇಲ್ಲದೆ, ಯಾವು ಯಾವುದೋ ಹಾಡು ಹಾಡುತ್ತ, ಕೆಂಪು ಬಾವುಟ ಹಿಡಿದುಕೊಂಡು ನೇರವಾಗಿ ಬೀದಿಯುದ್ದಕ್ಕೂ ನಡೆಯುತ್ತಿದ್ದರು ರೈತ ಯುವಕ-ಯುವತಿಯರು, ಇಳಿ ವಯಸ್ಸಿನ ನರೆಗೂದಲ ಮುದುಕ ಮುದುಕಿಯರು.

"ಅವರ ಮುಖಂಡರನ್ನು ಬಂಧಿಸಿದ್ದಾರಂತೆ. ಬಿಡಿಸಿಕೊಂಡು ಹೋಗಲು ಬಂದಿದ್ದಾರೆ ರೈತ ಸಂಘದ ಜನ" ಎನ್ನುವ ಮಾತು ಪ್ರಚಾರ ವಾಯಿತು.

ಊರೆಲ್ಲ ಸುತ್ತಾಡಿದ ಸಾವಿರ, ಎರಡುಸಾವಿರ ರೈತ ಸ್ತ್ರೀ, ಪುರುಷರು ಕೋರ್ಟಿನ ಆವಾರ ದೊಳಕ್ಕೆ ಬಂದರು.

ಆಗ ಗದ್ದಲವಾಯಿತು. ಪೊಲೀಸ್ ಅಧಿಕಾರಿ ಗಳು ಕೋರ್ಟಿನ ಸುತ್ತಲೂ ರಕ್ಷಣೆಯ ರಿಸರ್ವ್ ದಳವನ್ನಿಟ್ಟರು.

ಡಿ.ಎಸ್.ಪಿ. ಬಂದು ಹೇಳಿದ:

"ಯಾಕೆ ಬಂದೀರಿ ಇಲ್ಲೆ? ಹೊರಟು ಹೋಗ್ರಿ..."

ಒಬ್ಬರೂ ಮಿಸುಕಾಡಲಿಲ್ಲ.

ಸಂಘದವನೊಬ್ಬ ಕೇಳಿದ:

"ಕೋರ್ಟು ಐತೇನ್ರಿ ಈಗ?"

ಡಿ.ಎಸ್.ಪಿ. ಸಿಟ್ಟು ಬೆಂಕಿಯಾಗಿ ಗರ್ಜಿಸಿದ:

"ಐತಿ; ಯಾಕ?"

ಶಾಂತ ಮತ್ತು ಗಂಭೀರ ಧ್ವನಿಯಲ್ಲಿ ಉತ್ತರ ಬಂತು:

"ನಮ್ಮ ಮಂದಿ ಇಬ್ಬರ ವಿಚಾರಣೆ ಐತಿ. ಅದು ಖುಲಾಸೆ ಆಗೋ ಮಟ ಇಲ್ಲೇ 'ಇರಾವು ನಾವು".

ದೂರ ನಿಂತಿದ್ದ ಊರಿನ ಶಾಲೆಯ ಕೆಲ ಹುಡುಗರಲ್ಲಿ ಯಾರೋ ಕೆಲವರು ಅಧಿಕಾರಿ

ಗಲ್ಲಿ ಗಲ್ಲಿಗಳಲ್ಲಿ ಹೆಜ್ಜೆ ಹೆಜ್ಜೆಗು ತೀರ್ಥ ಅಂಗಡಿಯ ತುಂಬ ಬಾಟಲಲ್ಲಿ!
ಎಣ್ಣೆಯಿದೆ ಕಾಳಲ್ಲಿ, ಬೆಣ್ಣೆ ಹಳೆಕಥೆಯಲ್ಲಿ
ಅಕ್ಕಿ ಸಕ್ಕರೆ ಬೇಳೆ ಕೆಲಸವಿಲ್ಲದೆ ಪಾಪ
ಗೊರಕೆ ಹೊಡೆಯುತ್ತಿವೆ ನೆಲಮಾಳಿಗೆಯ ಒಳಗೆ ಕತ್ತಲಲ್ಲಿ!

ಓಡುವುದು ಇಲ್ಲಿ, ಎಲ್ಲೆಂದರಲ್ಲಿ
ಸಿಟೀ ಬಸ್ಸು.
ಕೂತುಕೊಂಡೋ, ಇಲ್ಲ ನಿಂತುಕೊಂಡೋ
ಮೇಲೆ ಕಂಬಿಯ ಹಿಡಿದು ಜೋತುಕೊಂಡೋ
ಅಥವಾ ಫುಟ್‌ಬೋರ್ಡ್ ಮೇಲೆ ಮುಂಗಾಲನ್ನೂರಿ
ಹವೆಯಲ್ಲಿ ಮೈತೂರಿ ತೂಗಿಕೊಂಡೋ
ಹೇಗೆ ಬೇಕಾದರೂ ಹೋಗಬಹುದು
ಅದೃಷ್ಟವಿದ್ದರೆ ಸ್ಟಾಪು ಸೇರಬಹುದು!

ಹಿಂದೆ ಒಂದಾನೊಂದು ಕಾಲದಲ್ಲಿ
ಇತ್ತಂತೆ ಪೂರ ಕನ್ನಡವೆ ಇಲ್ಲಿ!
ಈಗ ಮಾತ್ರ ಎಲ್ಲೋ ಸಂದಿಗೊಂದಿಗಳಲ್ಲಿ,
ಮಿಡುಕುತಿದೆ ಜೀವ ಬಾಲದಲ್ಲಿ.
ಅಕ್ಕಪಕ್ಕದ ಮನೆಯ ಸೋದರರು ದಯಮಾಡಿ
ಮೇಲೆಬ್ಬಿಸಿರುವ ಗಾಳಿಯಲ್ಲಿ
ಹೊಯ್ದಾಡುತ್ತಿದೆ ಪುಟ್ಟ ಕನ್ನಡದ ಹಣತೆ
ಗುಡ್‌ಬೈ ಹೇಳುವ ಧಾಟಿಯಲ್ಲಿ!

● ಡಾ। ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ನೀನಿರದ ಆ ಹೊತ್ತು!

● ಸುಂದರ ನಾಡಕರ್ಣಿ

ನೀನಿರದ ಆ ಹೊತ್ತು
ಹೊತ್ತು ಹಾಕುತ್ತೇನೆ
ಸಿಗರೇಟಿನ ಹೊಗೆಯ ಭಾರದಲ್ಲಿ
ಕಡ್ಡಿಗೀರುವ ಭರಭರಾಟದಲ್ಲಿ

ನೀನಿರದ ಆ ಹೊತ್ತು
ಶಬ್ದಗಳ ಸರಬರಾಜುಗಳಲ್ಲಿ
ಒಂಟಿತನ ಕಂಡಿದ್ದ ಅರ್ಥ ಕೆದಕುತ್ತೇನೆ
ಹಾವಸೆಗಟ್ಟಿದ ಎದೆಯಾಳದಲ್ಲಿ

ನೀನಿರದ ಆ ಹೊತ್ತು
ದಿನದ ಆಡಂಬರ ಕಾಲೆತ್ತಿದಾಗ
ಈ ಸೆರೆಯನ್ನು ಸೆರೆಯಲ್ಲಿ ಅದ್ದಿಡಲು
ಖಾಲಿತನದ ಗ್ಲಾಸು ತುಂಬುತ್ತೇನೆ.

ನೀನಿರದ ಆ ಹೊತ್ತು
ಹೊತ್ತು ಹಾಕಲು ಎಲ್ಲಿ ಇರುತ್ತೇನೆ
ಏನು ಆಗುತ್ತೇನೆ
ನನಗೆಲ್ಲಿ ಗೊತ್ತು?

ಯನ್ನು ನೋಡಿ, "ಬುಲ್‌ಡಾಗ್" ಎಂದರು. ಆತ ಬುಸುಗುಟ್ಟುತ್ತಾ ಒಳಗೆ ಹೋದ.

ಒಂದು ತಾಸಿನ ಹೊತ್ತಾದರೂ ನ್ಯಾಯಾಧೀಶರಾಯರು ಬರಲಿಲ್ಲ. ಆದರೆ ಹೊರಗಿನಿಂದ ಮತ್ತೆ ಐವತ್ತು ಪೊಲೀಸರು ಬಂದರು. ರೈತ ಹೆಂಗಳೆಯರೂ ಗಂಡಸರೂ ಹಾಡುತ್ತ ಕುಳಿತರು. ಊರಿನ ಜನ ಆ ಬಯಲು ಪ್ರದೇಶದಲ್ಲೆಲ್ಲ ಉರಿಬಿಸಿಲನ್ನು ಲೆಕ್ಕಿಸದೆ ಮೂಗಿನ ಮೇಲೆ ಬೊಟ್ಟಿಟ್ಟು ನಿಂತರು.

ಡಿ.ಎಸ್.ಪಿ. ಆಜ್ಞಾಪಿಸಿದ:

"ಹಾಡುವುದು ಬಂದ್ ಮಾಡ್ರಿ."

ಯಾರೋ ಸೀನಿದರು; ಯಾರೋ ನಕ್ಕರು; ಯಾರೋ ಕೂ ಎಂದರು. ನಿಂತು ನೋಡುತ್ತಿದ್ದವರೋ, ಕುಳಿತು ಹಾಡುತ್ತಿದ್ದವರೋ, ಅಂತೂ ಯಾರೋ! ಕಂಪಿಸುತ್ತ ಅಧಿಕಾರಿ ಪೊಲೀಸರನ್ನು ನೋಡಿ ಕರ್ಕಶ ಧ್ವನಿಯಲ್ಲಿ ಏನನ್ನೋ ಒದರಿದ. ಆ ಐವತ್ತು ಮಂದಿ ಕೈ ಬಡಿಗೆಗಳನ್ನು ಮೇಲಕ್ಕೆತ್ತಿದರು. ರೈತ ಸಮುದಾಯವೂ ಎದ್ದು ನಿಂತಿತು. ಮುಟ್ಟೂರಿನ ಮಧ್ಯಮ ವರ್ಗದವರ ಹೃದಯ ಡವಡವನೆ ಹೊಡೆದುಕೊಂಡಿತು.

ಇನ್ನೇನಾಗುವುದು? ಇನ್ನೇನಾಗುವುದು?

ಅಧಿಕಾರಿ ಸಿಳ್ಳು ಹೊಡೆದ. ನ್ಯಾಯಾಧೀಶರ ಕಾರೂ ಅಷ್ಟರಲ್ಲೇ ಹಾರನ್ ಮಾಡುತ್ತಾ ಬಂತು. ಅಧಿಕಾರಿ "ಡ್ಯಾಮಿಟ್" ಎಂದ. ಲಾಠೀ ಚಾರ್ಜು ಆಗಲಿಲ್ಲ. ಅಧಿಕಾರಿ ನ್ಯಾಯಾಧೀಶರೊಡನೆ ಮಾತಾಡಿದ.

ಅವರು ಹೇಳಿದರು:

"ಸುಮ್ಮನೆ ಕೂಡಲು ಹೇಳಿ. ಜಜ್‌ಮೆಂಟ್ ಆದ ಮೇಲೆ ಬಂದ ಹಾದಿ ಹಿಡಿಯಲಿ!"

ಅವಮಾನಿತರಾದವರಂತೆ ರೈತರು ಒಬ್ಬರ ಮುಖವನ್ನೊಬ್ಬರು ನೋಡಿದರು.

ಪೊಲೀಸು ಲಾರಿ ಗಡಗಡ ಎನ್ನುತ್ತ ಬಂತು.

ನೆರೆದಿದ್ದ ಜನಸ್ತೋಮ ನೋಡುತ್ತಿದ್ದಂತೆ ಆ ಮುದುಕರಿಬ್ಬರು ಇಳಿದು ಬಂದರು. ಆಲೀಖಾನರ ಎಡಕೈಗೂ ನಾಯಕರ ಬಲಕೈಗೂ ಕೂಡಿಯೇ ಬೇಡಿ ಹಾಕಿದ್ದರು. ಸುಟ್ಟೂರಿನ ಜನ ಬೊಟ್ಟು ಮಾಡಿ ತೋರಿಸಿದರು: "ಅವರು! ಅವರು!"

ನೆರೆದಿದ್ದ ರೈತರೆಡೆಯಿಂದ ಘೋಷ ಮೊಳಗಿತು:

"ಆಲೀಖಾನರಿಗೆ ಜಯವಾಗಲಿ! ನೇಮನಾಯಕರಿಗೆ ಜಯವಾಗಲಿ! ಕಿಸಾನ ಸಭಾ ಕಿ ಜಯ್!"

ಚಿಮೂರಿನ ರೈತ ಮುಖಂಡ ಹೇಳಿದ:

"ನಿನ್ನೆ ಒಬ್ಬರ ಹೆಗಲ ಮೇಲೊಬ್ಬರು ಕೈ ಇಟ್ಟು ನಡೆದಿದ್ದರು. ಈ ದಿವಸ ಒಬ್ಬರ ಕೈಯಲ್ಲಿ ಇನ್ನೊಬ್ಬರ ಕೈ!"

ಯಾರೋ ಘೋಷಣೆ ಮಾಡಿದರು. ಎಲ್ಲರೂ ಸ್ವರ ಕೂಡಿಸಿದರು.

"ನಮ್ಮ ಮುಖಂಡರಿಗೆ ಅಭಿವಂದನೆ!"

ಆ ಮುದುಕರಿಬ್ಬರ ಮುಖಗಳೂ ತೇಜಃಪುಂಜವಾದವು. ಆ ನಾಲ್ಕು ಕಣ್ಣುಗಳು ತುಂಬಿ ಬಂದುವು.

ಪೊಲೀಸರ ರಕ್ಷಣೆಯಲ್ಲಿ ಅವರನ್ನು ಒಳಕ್ಕೊಯ್ದರು. ಹೊರಗೆ ಜನರ ಒತ್ತಡ ಹೆಚ್ಚಿತು.

ಒಳಗೆ ವಿಚಾರಣೆಯಾಯಿತಂತೆ. ಹೊರಗಿನ ಯಾರಿಗೂ ಅದು ಗೊತ್ತಾಗಲಿಲ್ಲ.

"ನೀವು ಕೊಲೆ–ಸುಲಿಗೆ–ಹಿಂಸೆ ಮಾಡುವಂತೆ ಅಜ್ಞರಾದ ಹಳ್ಳಿಯವರನ್ನು ಪ್ರೇರೇಪಿಸಿದ್ದೀರಿ" ಎಂದು ಆರೋಪಿಸಲಾಯಿತಂತೆ.

"ಸುಳ್ಳು!" ಎಂದು ಮುದುಕರಿಬ್ಬರೂ ಉತ್ತರವಿತ್ತರಂತೆ.

"ನಾವು ರೈತ ಸಂಘದವರು. ಹಿಂಸೆ ಮಾಡುವ ದರೋಡೆಖೋರರಲ್ಲ. ನಮ್ಮದು ನ್ಯಾಯಬದ್ಧ ಹೋರಾಟ. ನಮ್ಮ ಹಳ್ಳಿಗಳಲ್ಲಿ ಹಿಂಸೆಯ ಕೃತಿ ಒಂದೇ ಒಂದು ಎಲ್ಲಿಯೂ ಆಗಲಿಲ್ಲವಲ್ಲ!" ಎಂದರಂತೆ.

"ನೀವು ಸರಕಾರಕ್ಕೆ ದ್ರೋಹ ಬಗೆಯುತ್ತಿದ್ದೀರಿ", ಎಂದರಂತೆ ಪೊಲೀಸ್ ಪ್ರಾಸಿಕ್ಯೂಟರರು.

"ದ್ರೋಹವೆಂದರೇನು? ಇರುವ ಸಾಗುವಳಿ ಶಾಸನವನ್ನು ಕೃತಿಗೆ ಇಳಿಸುತ್ತಿರುವವರು ನಾವು. ಕಾಯಿದೆಯನ್ನು ವಿರೋಧಿಸಿ ಮೋಸ ಮಾಡುತ್ತಿರುವವರು, ಜನತೆಗೆ ದ್ರೋಹ ಮಾಡುತ್ತಿರುವವರು, ಹೊಲದೊಡೆಯರು", ಎಂದು ಅವರಿಬ್ಬರೂ ಉತ್ತರ ಕೊಟ್ಟರಂತೆ.

"ನಮ್ಮನ್ನು ಬಿಡಿ. ಹೊಲದೊಡೆಯರನ್ನು ಬಂಧಿಸಿರಿ. ರೈತರ ಸಂಘ ಬೆಳೆಯಲಿ. ಜಮೀನ್ದಾರರ ಸಂಘದವರನ್ನು ವಿಚಾರಣೆಗೆ ಗುರಿ ಮಾಡಿ", ಎಂದು ಅವರು ಆಹ್ವಾನವಿತ್ತರಂತೆ.

ಒಂದು ತಾಸು ಕಳೆದ ಮೇಲೆ ತೀರ್ಪಾಯಿತಂತೆ.

"ಪೊಲೀಸ್ ಆ್ಯಕ್ಟಿನ ಗುಂಡಾ ಕಾಯಿದೆಯನ್ವಯ ನೇಮನಾಯಕ, ಆಲೀಖಾನ ಇಬ್ಬರನ್ನೂ ಜಿಲ್ಲೆಯಿಂದ ಹೊರಹಾಕಲಾಗಿದೆ."

... ಮುದುಕರನ್ನು ಮರಳಿ ಪೊಲೀಸ್ ಲಾರಿಯ ಬಳಿಗೆ ತಂದಾಗ ನಡೆದದ್ದು ಎಲ್ಲರಿಗೂ ತಿಳಿಯಿತು.

ಹೊರ ಹಾಕಿದರಂತೆ. ಹದ್ದುಪಾರು ಆಜ್ಞೆಯಂತೆ. ಗಡೀಪಾರಾಜ್ಞೆಯಂತೆ! ಆ ಮುದುಕರನ್ನು! ಜಿಲ್ಲೆಯಿಂದ ಹೊರಗೆ! ಓ ದೇವರೇ!

ಉದ್ರೇಕಗೊಂಡ ರೈತ ಸಮುದಾಯ ಲಾರಿಯನ್ನು ಮುತ್ತಿತು.

"ನಮ್ಮ ಮುಖಂಡರನ್ನು ಬಿಟ್ಟುಬಿಡಿರಿ!" ಎಂದು ರೈತರು ಗರ್ಜಿಸಿದರು.

ಆ ಗರ್ಜನೆಗೆ ಉತ್ತರ, ಬಲವಾದ ಲಾಠೀ ಚಾರ್ಜು, ಜನ ಚದರಲೆಂದು ಆಕಾಶದತ್ತ ಹೊಡೆದ ಬಂದೂಕಿನ ಎರಡು ಗುಂಡು.

ಮೋಟಾರು ಬಲು ಪ್ರಯಾಸದಿಂದ ಹೊರಟು ಹೋಯಿತು. ಪೊಲೀಸರು ಶಾಂತಿಪಾಲನೆಯ ಕರ್ತವ್ಯ ನೆರವೇರಿಸಿದರು.

ಮಧ್ಯಾಹ್ನದ ಊಟಕ್ಕೆಂದು ಹೊರ ಬಂದಿದ್ದ ಸಾಲೆಯ ಹುಡುಗರು ಮುಖ ಕಿರಿದು ಮಾಡಿ ನಿಂತರು. ಮಧ್ಯಮ ವರ್ಗದ ಜನ ಮುಖ ಬೆವರೊರೆಸಿದರು.

ವಾತಾವರಣವೆಲ್ಲ ಕೆಂಧೂಳಿಯಿಂದ ತುಂಬಿತು. ಮರದೆಲೆಗಳು ಬಾಡಿದುವು. ಮರುಭೂಮಿಯ ಬಣಗುಡುವ ಮೌನ ಹರಡಿತು.

ಬಂದ ಮೆರವಣಿಗೆ ತಲೆ ಬಾಗಿಸಿ ಭಾರವಾದ ಹೃದಯದಿಂದ ಹಿಂದಿರುಗುವ ಹೊತ್ತು.

... ಪೊಲೀಸು ಮೋಟಾರು ಸಂಜೆ ಆರು ಗಂಟೆಗೆ ಜಿಲ್ಲೆಯ ಗಡಿಯನ್ನು ತಲುಪಿತು. ಅಲ್ಲಿ ಆ ಮುದುಕರನ್ನು ಇಳಿಸಿದರು.

ಅವರಿನ್ನು ಮುದುಕರಲ್ಲ; ಗುಂಡರು. ಜಾತೀಯ ಗಲಭೆಯಾದಾಗ, ಹಿಂದೂ-ಮುಸಲ್ಮಾನ ಕಲಹವಾದಾಗ, ಪುಂಡರನ್ನು ಬಂಧಿಸಿ ಆ ಪ್ರದೇಶದಿಂದ ಹೊರಕ್ಕೆ ಗಡೀಪಾರು ಮಾಡಲೆಂದು ಆ ಪೊಲೀಸ್ ಆ್ಯಕ್ಟನ್ನು–ಗುಂಡಾ ಕಾಯಿದೆಯನ್ನು ತಯಾರಿಸಲಾಗಿತ್ತು.

ಆದರೆ ಈಗ ಅದೇ ಶಾಸನವನ್ನು, ರೈತ ಚಳುವಳಿಯ ಇಬ್ಬರು ಮುಖಂಡರ ಮೇಲೆ–ಒಬ್ಬ ಹಿಂದೂ ಇನ್ನೊಬ್ಬ ಮುಸಲ್ಮಾನ–ಇವರಿಬ್ಬರ ಮೇಲೆ, ಪ್ರಯೋಗಿಸಲಾಗಿತ್ತು. ಅವರನ್ನು "ಗುಂಡ"ರೆಂದು ನಾಮಕರಣ ಮಾಡಲಾಗಿತ್ತು.

ಆ ಎತ್ತರದಲ್ಲಿ ನಿಂತು, ಪಶ್ಚಿಮದತ್ತ ನೋಡುತ್ತ, ತಮ್ಮ ನಾಡನ್ನು ನಿರೀಕ್ಷಿಸುತ್ತ ಆ ಇಬ್ಬರು ಗುಂಡರು ನಿಂತರು. ಮುಳುಗುವ ಸೂರ್ಯನ ಹೊಂಬಣ್ಣ ಅವರ ಬಳಲಿದ ಮುಖದ ಮೇಲೆ ಬೆಳಕು ಚೆಲ್ಲಿತ್ತು. ನೇಮನಾಯಕರ ಮೀಸೆ, ಮನದ ದುಗುಡವನ್ನು ಪ್ರತಿಬಿಂಬಿಸುತ್ತ, ಕುಣಿಯುತ್ತಿತ್ತು. ಆಲೀಖಾನರ ಬೋಳುತಲೆ ಚಕಚಕಿಸುತ್ತಿತ್ತು. ಬಿಳಿಯ ಗಡ್ಡ

ಹಾರಾಡುತ್ತಿತ್ತು.

ಕೆಳಗೆ ಕಾಣುತ್ತಿರುವುದು ಅವರು ಮೈ ಮುರಿದು ದುಡಿದಿದ್ದ ಭೂಮಿ. ಅಲ್ಲೇ ಅವರು ಹುಟ್ಟಿದ್ದು, ಬೆಳೆದದ್ದು. ಆ ಕರಾವಳಿಯ ಪ್ರಿಯಕರವಾದ-ಹವೆ, ಆ ಶೋಷಕ ಜಮೀನ್ದಾರರ ಕ್ರೂರ ಆಳುಗಳು, ಆ ಹೊಳೆ, ಕೆರೆ, ಅಲ್ಲಿನ ಕಳ್ಳ ಸಂತೆಯ ವ್ಯಾಪಾರಿಗಳು, ತಮ್ಮ ಪ್ರೀತಿಯ ಸಂಘಟನೆ—ಜನ—ಕಚೇರಿ—ಬಾವುಟ, ಎಲ್ಲವನ್ನೂ ಬಿಟ್ಟು ಅವರು ಬಂದಿದ್ದರು.

ನಾಯಕನ ಹಿರಿಯ ಮಗನ ಲಗ್ನ, ತಂದೆ ಇಲ್ಲದೆಯೇ ನಡೆಯಬೇಕು. ತನ್ನ ಸೊಸೆಯ ಮೂರನೆ ಹೆರಿಗೆಯ ಕಾಲದಲ್ಲಿ ಮುದುಕ ಆಲೀಖಾನ ಹತ್ತಿರ ಇರಲಾರ.

ತುಂಬಿ ಬರುತ್ತಿದ್ದ ಕಣ್ಣುಗಳನ್ನು ಒರಸುತ್ತಾ ಆಲೀಖಾನ ಹೇಳಿದ:

"ಇಲ್ಲಿ ನೇಮು... ಈ ಭೂಮಿಗೆ ನಾವು ಮತ್ತೆ ಹೋಗಿಯೇ ಹೋಗುತ್ತೇವೆ. ಸಾಯುವ ಮೊದಲು ರೈತರ ರಾಜ್ಯ ಆಗಿಯೇ ಆದೀತು..."

ನೇಮು ಮರುಧ್ವನಿ ಕೊಟ್ಟ:

"ಹೌದು ಆಲಿ, ಈ ಪ್ರಿಯ ಭೂಮಿಗೆ ಮತ್ತೆ ಹೋಗಿಯೇ ಹೋಗುತ್ತೇವೆ."

... ಮುಖಂಡರನ್ನು ಕಳೆದುಕೊಂಡ ರೈತರು ಮೌನವಾಗಿ ಹಳ್ಳಿ ಸೇರಿ, ಆಯಾಸದಿಂದ ಬಳಲಿ, ನಿದ್ದೆ ಹೋದರು. ಗಾಳಿ ತಂಪಾಗಿ ಸದ್ದಿಲ್ಲದೆ ಬಂದು, ಕಳೆಗುಂದಿದ್ದ ಅವರೆಲ್ಲರ ದೇಹಗಳಲ್ಲಿ ಹೊಸ ಚೇತನ ತುಂಬಿತು.

ಆ ರಾತ್ರಿ ಸಂಘದ ಕಚೇರಿಯ ದೊಡ್ಡ ಬಾವುಟ ಮಾತ್ರ ಹಾರಾಡಲೇ ಇಲ್ಲ.

... ಕೋಳಿ ಕೂಗಿತು. ಬೆಳ್ಳಗೆ ಬೆಳಗಾಯಿತು. ಯಾರೋ ಸಂಘದ ಹಾಡನ್ನು ಏರುಧ್ವನಿಯಲ್ಲಿ ಹಾಡುತ್ತಿದ್ದರು. ರೈತ ಸ್ತ್ರೀ ಪುರುಷರು ಎಚ್ಚೆತ್ತು ಕಣ್ಣೊರಸಿ ನೋಡಿದರು. ಅವರ ಸಂಘದ ಕೆಂಪು ಬಾವುಟ ಎತ್ತರದಲ್ಲಿ ಪಟಪಟನೆ ಹಾರಾಡುತ್ತಿತ್ತು. ತನಗೆ ಸೋಲಿಲ್ಲ, ತನಗೆ ಸೋಲಿಲ್ಲ— ಎಂದು ಅದು ಹೊಯ್ದಾಡುತ್ತಿತ್ತು.

(ಕೃಪೆ: ದಿವಂಗತ ನಿರಂಜನ ಕುಟುಂಬ)

ನನ್ನೂರು ನನ್ನ ಜನ

ಬಿಜಾಪುರ ಜಿಲ್ಲೆ

ಬಣ್ಣದ ಬಾಗಲಕೋಟೆ

ಬಿಜಾಪುರ ಸುಲ್ತಾನ ತನ್ನ ಮಗಳ ಬಳೆ ಖರೀದಿಗಾಗಿ ಮೀಸಲಿಟ್ಟ ಸ್ಥಳ—'ಬಾಂಗಡಿಕೋಟೆ' ಆಗಿ, ಬರುಬರುತ್ತ ಬಾಗಲಕೋಟೆ ಆಗಿದೆಯೆಂದು ಇತಿಹಾಸ.

ಇಲ್ಲಿ ಆಚರಿಸಲಾಗುವ ವಿಶಿಷ್ಟ ಹೋಳಿಹಬ್ಬ ಹಿಂದೆ ಐದು ದಿನಗಳು ನಡೆಯುತ್ತಿದ್ದದ್ದು ಈಗ ಮೂರು ದಿನಗಳಿಗೆ ಇಳಿದಿದ್ದರೂ ಮೂಲ ಸೊಗಡನ್ನು ಕಳೆದುಕೊಂಡಿಲ್ಲ. ವಿವಿಧ ಜಾತಿಯವರು ರಾತ್ರಿ ಹಾಕುವ 'ಸೋಗು' ವೈಶಿಷ್ಟ್ಯಪೂರ್ಣ. ಪೌರಾಣಿಕ ಸನ್ನಿವೇಶಗಳನ್ನು ಕಾಣಿಸುತ್ತ ಎತ್ತಿನ ಬಂಡಿಯಲ್ಲಿ ಬೆಳಕು ಹರಿಯುವವರೆಗೂ ಊರೆಲ್ಲ ಸುತ್ತುತ್ತಾರೆ.

ಬಾಗಲಕೋಟೆಯ ಹಲಗೆ ಮೇಳ ಜಾನಪದದಲ್ಲಿ ವಿಶೇಷ ಸ್ಥಾನ ಪಡೆದಿದೆ.

ಇಲ್ಲಿನ ವಿಶೇಷ ವಿಷಯ: ಲದ್ದೂಮುಲ್ಲಾ ಎನ್ನುವ ವ್ಯಕ್ತಿಯೊಬ್ಬನಿದ್ದಾನೆ. ಈತನ ಜನನ-ಇತಿಹಾಸ ಯಾರಿಗೂ ಗೊತ್ತಿಲ್ಲ. ಈತ ಇಲ್ಲಿಯ ಪ್ರತ್ಯಕ್ಷ ದೇವರು. ಟೊಂಕಕ್ಕೊಂದು ಗೋಣಿಚೀಲ, ತಲೆಗೊಂದು ರುಮಾಲು; ಮುಂಜಾನೆಯಿಂದ ಸಂಜೆವರೆಗೆ ಬೀದಿ ಬೀದಿ ಸುತ್ತುತ್ತಾನೆ. ಯಾವುದೇ ಅಂಗಡಿ ಹೊಕ್ಕು ಯಾವುದೇ ವಸ್ತು ತೆಗೆದುಕೊಂಡರು ಯಾರೂ ಆಕ್ಷೇಪಿಸುವುದಿಲ್ಲ. ಬದಲಾಗಿ ತಮ್ಮ ಅಂಗಡಿಯ ವ್ಯಾಪಾರ ಚೆನ್ನಾಗಿ ಆಗುತ್ತದೆ ಎಂದು ಭಾವಿಸುತ್ತಾರೆ. ಹೀಗೆ ತಂದ ವಸ್ತುವನ್ನು ಈತ ದಾರಿಯಲ್ಲಿ ಸಿಗುವ ಹುಡುಗರಿಗೆ ಕೊಟ್ಟುಬಿಡುತ್ತಾನೆ. ಹಳ್ಳಿಗರು-ಪೇಟೆಯವರು ಈತನನ್ನು ಮುಟ್ಟಿ ನಮಸ್ಕರಿಸುತ್ತಾರೆ. ಒದ್ದರೆ ಒದಿಸಿಕೊಳ್ಳುತ್ತಾರೆ, ಮಹಾಪ್ರಸಾದ ಎನ್ನುತ್ತಾರೆ. ಈತ ಬಾಗಲಕೋಟೆಯ ಪ್ರತ್ಯಕ್ಷ ಜೀವಂತ ದೇವರೇ ಸೈ.

● ವೀರೇಶ್ ಬಂಗಾರ ಶೆಟ್ಟಿ

ಒದುಗರಿಗೆ—ಲೇಖಕರಿಗೆ

ವಿಶೇಷ ಆಹ್ವಾನ

ತುಷಾರ 20ರ ಸಂಭ್ರಮ 1973-1993

1973 ಎಪ್ರಿಲ್—ಯುಗಾದಿಯಂದು ಪ್ರಕಟಣೆ ಪ್ರಾರಂಭಿಸಿದ ನಿಮ್ಮ ಮೆಚ್ಚಿನ 'ತುಷಾರ' ಮಾಸಪತ್ರಿಕೆಗೆ 1992-93 ಇಪ್ಪತ್ತರ ವರ್ಷವಾಗಲಿದೆ. ಈ ಇಪ್ಪತ್ತರ ಸಂತೋಷವನ್ನು ಸಂಭ್ರಮದಿಂದ ಆಚರಿಸಲು ಆಲೋಚಿಸಲಾಗಿದೆ. 'ತುಷಾರ' ನಡೆದು ಬಂದ ಇಪ್ಪತ್ತು ವರ್ಷಗಳ ಸಾಹಿತ್ಯಿಕ ಹೆಜ್ಜೆ ಕಾಣಿಸುವ ಇಪ್ಪತ್ತು ಅತ್ಯುತ್ತಮ ಕೃತಿಗಳ ಪ್ರಕಟಣೆ ಮತ್ತು ವಿವಿಧ ಸ್ಪರ್ಧೆಗಳು ಈ ಇಪ್ಪತ್ತರ ಸಂಭ್ರಮದ ವಿಶೇಷವಾಗಲಿದೆ.


● 20 ಪುಸ್ತಕಗಳ ಪ್ರಕಟಣೆ

1973ರಿಂದ 1993ರವರೆಗೆ 'ತುಷಾರ'ದಲ್ಲಿ ಪ್ರಕಟವಾದ ಅತ್ಯುತ್ತಮ ಕಥೆಗಳ ಸಂಕಲನಗಳು, ಅತ್ಯುತ್ತಮ—ಸುಪ್ರಸಿದ್ಧರ ಕಾದಂಬರಿಗಳು, ಕಾವ್ಯ ಸಂಪುಟ, ಕನ್ನಡ ಸಾಹಿತ್ಯವಾಹಿನಿ (1989ರ ಲೇಖನಮಾಲೆ), ಬದುಕು—ಬರೆಹ (1990), ನೆನಪು ಸಿಹಿ-ಕಹಿ (1991), ವಿಶೇಷ ಸಾಹಿತ್ಯ ಸಂದರ್ಶನ—ಲೇಖನಗಳ ಸಂಕಲನ, ಹಾಸ್ಯ ಲೇಖನಗಳ ಸಂಕಲನ, ಶ್ರೀದೇವಿ—ಶಾಲಿನಿ ಖೊಕ್ ಧಾರಾವಾಹಿಗಳು, ಜೊತೆಗೆ ಐದು ಹೊಸ ಕೃತಿಗಳು: ಹೀಗೆ ಕನ್ನಡ ಸಾಹಿತ್ಯ ಪ್ರಕಾರಕ್ಕೆ ಅತ್ಯುತ್ತಮ ಕೊಡುಗೆಯಾಗಬಲ್ಲ ಇಪ್ಪತ್ತು ಕೃತಿಗಳು ಸುಂದರವಾಗಿ ಪ್ರಕಟವಾಗಲಿವೆ.

ಈ 20 ಪುಸ್ತಕಗಳ ಎಲ್ಲ ವಿವರಗಳು, 'ತುಷಾರ' ಓದುಗರಿಗೆ ಪ್ರಕಟಣಪೂರ್ವ ರಿಯಾಯಿತಿ ಬೆಲೆ, ಪ್ರಕಟಣೆಯ ಸಂದರ್ಭಗಳು—ಮೊದಲಾದ ವಿವರಗಳೆಲ್ಲವೂ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ.

ಇಂಥದೊಂದು ಉಪಯುಕ್ತ ಯೋಜನೆಗೆ 'ತುಷಾರ' ಓದುಗರೆಲ್ಲರ ಬೆಂಬಲ ಬೇಕು.



ತುಷಾರ 20ರ ಸಂಭ್ರಮ 1973- 1993

● ಕಾದಂಬರಿ ಸ್ಪರ್ಧೆ

ಅತ್ಯುತ್ತಮ ಕಾದಂಬರಿಯನ್ನು 'ತುಷಾರ'ದ ಓದುಗರಿಗೆ ಕಾಣಿಸಬೇಕು ಎನ್ನುವ ಆಕಾಂಕ್ಷೆಯಿಂದ ಕನ್ನಡದ ಹಿರಿ-ಕಿರಿಯ ಕಾದಂಬರಿಕಾರರಿಗಾಗಿ ಈ ಕಾದಂಬರಿ ಸ್ಪರ್ಧೆ ಏರ್ಪಡಿಸಲಾಗಿದೆ. ಮನೆಮಂದಿಯೆಲ್ಲ ಓದಬಹುದಾದ, ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆ ಎನಿಸಬಲ್ಲ ಯಾವ ವಸ್ತುವಾದರೂ ಆಗಬಹುದು (ಪತ್ತೇದಾರಿ, ಆ್ಯಕ್ಷನ್ ವಸ್ತುಗಳೂ ಸೇರಿ). ಅತ್ಯುತ್ತಮ ಎಂದು ಆಯ್ಕೆಯಾಗುವ ಒಂದು ಕೃತಿಗೆ ನಾಲ್ಕು ಸಾವಿರ ರೂಪಾಯಿ ಬಹುಮಾನ. ಮೆಚ್ಚುಗೆ ಎಂದು ಮೂರು ಕೃತಿಗಳನ್ನು ಆಯ್ಕೆ ಮಾಡಲಾಗುವುದು. ಈ ನಾಲ್ಕು ಹಸ್ತಪ್ರತಿಗಳನ್ನು ಪುಸ್ತಕ ರೂಪವಾಗಿ ಮತ್ತು 'ತುಷಾರ' ಧಾರಾವಾಹಿಯಾಗಿ ಪ್ರಕಟಿಸುವ ಹಕ್ಕು, ಮಣಿಪಾಲ ಮುದ್ರಣ–ಪ್ರಕಾಶನ ಲಿ., ಸಂಸ್ಥೆಯದಾಗಿರುತ್ತದೆ.

ಕಾದಂಬರಿ ಹಸ್ತಪ್ರತಿ, ಫುಲ್‌ಸ್ಕೇಪ್ ಇನ್ನೂರು ಪುಟಗಳಷ್ಟಿರಬೇಕು. ಒಂದೇ ಬದಿ ಬರೆದಿರಬೇಕು, ಸ್ಫುಟವಾಗಿರಬೇಕು. ಅನುವಾದಿತ/ಆಧಾರಿತ ಕೃತಿಗಳಿಗೆ ಅವಕಾಶವಿಲ್ಲ.

ಹಸ್ತಪ್ರತಿಯನ್ನು 30 ಆಗಸ್ಟ್ 1992ರ ಮೊದಲು ತಲುಪಿಸಬೇಕು.

● ಕಥಾ ಸ್ಪರ್ಧೆ

ಎಂಟು ಪುಟ ಫುಲ್‌ಸ್ಕೇಪ್ ಹಸ್ತಪ್ರತಿಯ ಉತ್ತಮ–ಸ್ವಾರಸ್ಯ ಕಥೆಗಳು ಆಗಬೇಕು.

ಒಂದೇ ಬದಿ ಸ್ಫುಟವಾಗಿ ಬರೆದಿರಬೇಕು. ಅತ್ಯುತ್ತಮವೆನಿಸುವ ಮೂರು ಕಥೆಗಳಿಗೆ, ಕ್ರಮವಾಗಿ ಒಂದು ಸಾವಿರ, ಏಳುನೂರಐವತ್ತು ಮತ್ತು ಐನೂರು ರೂಪಾಯಿ ಬಹುಮಾನ.

ಉತ್ತಮವೆನಿಸುವ ಕಥೆಗಳನ್ನೂ ಪ್ರಕಟಣೆಗೆ ಆಯ್ಕೆ ಮಾಡಲಾಗುವುದು. ಆಧಾರ–ಅನುವಾದಗಳು ಬೇಡ. ಹಸ್ತಪ್ರತಿಯನ್ನು 30 ಆಗಸ್ಟ್ ಮೊದಲು ತಲುಪಿಸಬೇಕು



● ಪ್ರತಿ ತಿಂಗಳೂ

- ಅತ್ಯುತ್ತಮ—ಅರ್ಥಗರ್ಭಿತ, 'ತುಷಾರ'ದಲ್ಲಿ ಒಂದು ಪುಟ ಆಗುವ, ವ್ಯಂಗ್ಯಚಿತ್ರ ಮಾಲಿಕೆ ಒಂದಕ್ಕೆ ಒಂದುನೂರು ರೂಪಾಯಿ ಬಹುಮಾನ. ಉತ್ತಮ ಎನಿಸುವ ಉಳಿದ ಎರಡು—ಮೂರರ ಪ್ರಕಟಣೆ.
  ಪ್ರತಿ ತಿಂಗಳೂ 15ರೊಳಗೆ ಚಿತ್ರವನ್ನು ತಲುಪಿಸಬೇಕು.
- ಅತ್ಯುತ್ತಮ—ಅಪರೂಪ ಫೋಟೋ ಲೇಖನ ಒಂದು—ಪ್ರತಿ ತಿಂಗಳೂ ಪ್ರಕಟಣೆಗೆ ಆಯ್ಕೆಗೊಂಡು ಉತ್ತಮ ಗೌರವಧನ ಪಡೆದುಕೊಳ್ಳುವುದು.
  ಫುಲ್‌ಸ್ಕೇಪ್ ನಾಲ್ಕು ಪುಟ ಹಸ್ತಪ್ರತಿ—ಜೊತೆಗೆ ನಾಲ್ಕೈದು ಉತ್ತಮ ಕಪ್ಪು-ಬಿಳುಪು ಫೋಟೋಗಳು, ಪ್ರತಿ ತಿಂಗಳೂ 15ರೊಳಗೆ ತಲುಪಿಸಬೇಕು.
- ಬಾಲ ಪ್ರಪಂಚದಲ್ಲಿ ಮಕ್ಕಳಿಗಾಗಿ ತಿಂಗಳಿಗೊಂದು ಸ್ಪರ್ಧೆ ಇರುತ್ತದೆ. ಗೆದ್ದವರಿಗೆ ಒಂದು ಸುಂದರ ಮಕ್ಕಳ ಪುಸ್ತಕ ಬಹುಮಾನ.
- ಹಿರಿಯರ ಆಯ್ಕೆ ಕವನ ವಿಭಾಗದಲ್ಲಿ ಆಯ್ಕೆಗೊಂಡು ಪ್ರಕಟವಾದ ಮೂವತ್ತಾರು (ಒಂದು ವರ್ಷದ್ದು) ಕವಿತೆಗಳಿಂದ ಅತ್ಯುತ್ತಮ ಎಂದು ಮೂರನ್ನು ಆಯ್ದು, ತಲಾ ಇನ್ನೂರೈವತ್ತು ರೂಪಾಯಿ ಕೊಡಲಾಗುವುದು (ವರ್ಷಾಂತ್ಯದಲ್ಲಿ).

● ಓದುಗರಿಗೆ

- ಮೊದಲ 'ತುಷಾರ'ದಿಂದ (ಏಪ್ರಿಲ್ 1973) ಈ ವರೆಗಿನ ಎಲ್ಲ ಸಂಚಿಕೆಗಳು ಈಗಲೂ ನಿಮ್ಮಲ್ಲಿವೆಯೇ? ಹಾಗಾದರೆ ಈ ಇಪ್ಪತ್ತು ವರ್ಷಗಳಲ್ಲಿ 'ತುಷಾರ' ಬೆಳೆದದ್ದರ ಬಗ್ಗೆ ನಿಮಗೇನನ್ನಿಸುತ್ತದೆ? ನಿಮಗೆ ತುಂಬ ಮೆಚ್ಚಿಕೆಯಾದ ಕತೆ/ಕವನ/ಬರೆಹಗಳನ್ನು ನೆನಪು ಮಾಡಿಕೊಂಡು ಸಂಕ್ಷಿಪ್ತವಾಗಿ ಬರೆಯಿರಿ.
- 'ತುಷಾರ' ಈಗ ಹೇಗಿದೆ, ಹೇಗಿರಬೇಕೆಂದು ನಿಮಗನ್ನಿಸುತ್ತದೆ? ರಚನಾತ್ಮಕ ಸಲಹೆಗಳೊಂದಿಗೆ ಬರೆಯಿರಿ.

— ಅತ್ಯುತ್ತಮ ನೆನಪುಗಳಿಗೆ, ಆಲೋಚನೆಗಳಿಗೆ ಬಹುಮಾನ ಉಂಟು.

ಹಸ್ತಪ್ರತಿ ಹಿಂದೆ ಬಯಸುವವರು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಕವರ್ ಕಳುಹಿಸಬೇಕು. ನಿಮ್ಮ ಸರಿ ವಿಳಾಸ—ಹೆಸರನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಹಸ್ತಪ್ರತಿಯೊಂದಿಗೆ ಲಗತ್ತಿಸಿರಿ. ಎಲ್ಲ ಹಿರಿಕಿರಿಯ ಲೇಖಕರ—ಓದುಗರ ಸಂಭ್ರಮದ ಸಹಕಾರ ಕೋರುತ್ತೇವೆ.

ಎಲ್ಲ ಬರೆಹಗಳನ್ನೂ ಈ ವಿಳಾಸಕ್ಕೆ ಕಳುಹಿಸಬೇಕು—

'ತುಷಾರ' (ಇಪ್ಪತ್ತರ ಸಂಭ್ರಮ),
ಎನ್ 201, ನಾರ್ಥ್ ಬ್ಲಾಕ್, ಫ್ರಂಟ್ ವಿಂಗ್,
ಮಣಿಪಾಲ ಸೆಂಟರ್,
47, ಡಿಕನ್‌ಸನ್ ರೋಡ್,
ಬೆಂಗಳೂರು — 560 047.

ಹಿರಿಯರ ಆಯ್ಕೆ

ಆಯ್ಕೆ: ದೊಡ್ಡರಂಗೇಗೌಡ

ನನ್ನೊಳಗೆ

ಉದಯದ ಹೊನ್ನಿನ ಕಿರಣದಲಿ
ಹಸಿರುಟ್ಟ ಪ್ರಕೃತಿಯ ಮಡಿಲಿನಲಿ
ನಸುನಗುತ ಬಿರಿವ ಹೂಗಳಲಿ
ನನ್ನ ಕವಿತೆ ಅರಳುತ್ತದೆ.

ಜಿಂಕೆಯ ಚಂಚಲ ಕಣ್ಣುಗಳಲಿ
ಪಕ್ಷಿಗಳ ಕೊರಳಿನ ನಿನಾದದಲಿ
ಸಸ್ಯ ಶ್ಯಾಮಲೆ ಬೀಸು ತಂಗಾಳಿಯಲಿ
ನನ್ನ ಕವಿತೆ ಮುದಗೊಳ್ಳುತ್ತದೆ.

ನೇಗಿಲ ಯೋಗಿಯ ಬೆವರಿನಲಿ
ಉತ್ತು ಬಿತ್ತುವ ಭೂದೇವಿಯ ಒಡಲಿನಲಿ
ನಳನಳಿಸಿ ಬೆಳೆದ ಬೆಳೆಯ ಹಸಿರಿನಲಿ
ನನ್ನ ಕವಿತೆ ಚಿಗುರೊಡೆಯುತ್ತದೆ.

ತಾಯಿಯ ಸ್ಪರ್ಶದ ಮಮತೆಯಲ್ಲಿ
ಮುದ್ದು ಹಸುಳೆಯ ಹಾಲು ಗಲ್ಲದಲ್ಲಿ
ಸ್ತನಪಾನ ಮಾಡಿದ ಅಧರಗಳಲ್ಲಿ
ನನ್ನ ಕವಿತೆ ಮುತ್ತು ಕೊಡುತ್ತದೆ.

ಕಾಮುಕರ ಕಣ್ಣಾಗುಡ್ಡೆ ಮೀಟುವಲ್ಲಿ
ಭ್ರಷ್ಟರಿಗೆ ಕೈ ಕೋಳ ಹಾಕುವಲ್ಲಿ
ಶೋಷಣೆಗೈದ ಧನಿಕನೆದೆ ಸೀಳುವಲ್ಲಿ
ನನ್ನ ಕವಿತೆ ಸಿಡಿದೇಳುತ್ತದೆ.

ಕೃಷಿ ಕಾರ್ಮಿಕರ ನಿಸ್ತೇಜ ನೋಟದಲ್ಲಿ
ಒಲೆ ಉರಿಯದ ಮುರುಕು ಗುಡಿಸಲಲ್ಲಿ
ಹೊಟ್ಟೆಗೆ ಹಿಟ್ಟಿಲ್ಲದೇ ಬಿಕ್ಕುವ ಜೀವದಲ್ಲಿ
ನನ್ನ ಕವಿತೆ ಸೋಲುತ್ತದೆ.

ಅನ್ಯಾಯ ಸುಳಿಯುವಲ್ಲಿ
ನನ್ನ ಕವಿತೆ ಕಿಡಿ ಕಾರುತ್ತದೆ.
ನ್ಯಾಯದ ಅಡಿಯಲ್ಲಿ
ನನ್ನ ಕವಿತೆ ತಲೆ ಬಾಗುತ್ತದೆ.

● ನೇತಾಜಿ, ಮಿರಗಾಣೆ

ನಮ್ಮ ಬದುಕಿನಲ್ಲಾಗುವ ಎಲ್ಲ ಅನುಭವಗಳೂ ಹೇಳಿಕೊಳ್ಳುವುದಕ್ಕೆ ಮುಖ್ಯವಾಗುವುದಿಲ್ಲ. ಕೆಲವು ಅಭಿವ್ಯಕ್ತಿಗೆ ಚಡಪಡಿಸುತ್ತವೆ. ನುಡಿಗಳ ಮೂಲಕ ಶಬ್ದಚಿತ್ರ ಕಟ್ಟಿಕೊಡುವ ಪ್ರಯತ್ನವಾಗುತ್ತದೆ. ಅಮೂರ್ತ ಭಾವನೆಗಳಿಗೂ ಮೂರ್ತ ಸ್ವರೂಪ ನೀಡಿ ಸಮರ್ಥ ವಾಗರ್ಥ ಪಲ್ಲವಿಸುವುದಾಗುತ್ತದೆ. ಭಾಷೆಯ ಜಾಯಮಾನ ತಿಳಿದು ಪದಪದಗಳನ್ನು ನಾಟ ಹೇಳುವುದೂ ಆಗುತ್ತದೆ. ಹೀಗೆ ಅನುಭವಕ್ಕೆ ಆಕಾರ ಕೊಡಲು ಶ್ರಮಿಸಿದ ಆರು ಕವಿತೆಗಳನ್ನಿಲ್ಲಿ ಆರಿಸಿದ್ದೇನೆ. 'ಕಾಣೆಯಾಗಿದ್ದಾಳೆ'ಯಲ್ಲಿ ಅಂಥ ಕಷ್ಟಸಾಧ್ಯ ನುಡಿಗಟ್ಟು ಹಿಡಿದಿಡುವ ಪ್ರಯತ್ನವಿದೆ. ಕವಯತ್ರಿಯ ವಿಷಾದ ಭಾವ ಮಾತಾಗಿ ಹೆಪ್ಪುಗಟ್ಟಿದೆ. 'ನೇಪಥ್ಯ' ಅಪೂರ್ವ ಅನುಭವವನ್ನು ದಾಖಲಿಸುತ್ತದೆ. ಇಲ್ಲೂ ವಿಷಾದವೇ ಸ್ಥಾಯಿ. 'ನನ್ನೊಳಗೆ' ನೂತನ ಪ್ರಯತ್ನ. ಯುವ ಕವಿ ಬೇರೊಂದು ಆಯಾಮದಿಂದ ಕಾವ್ಯ ಕಟ್ಟುವ ನಿಷ್ಠೆ ತೋರಿದ್ದಾರೆ.

● ದೊರಂಗೌ

ನೇಪಥ್ಯ

ಬರೇ ನೆನಪು;
ಅಪ್ಪನೊಂದಿಗೆ ಹೇಳುತ್ತೇನೆಂದು
ಅಮ್ಮನನ್ನು ಹೆದರಿಸಿದ್ದು,
ಅಳುತ್ತಾಳುತ್ತಾ ಕುಳಿತು
ಅಳುವುದ್ಯಾಕೆಂದು ಮರೆತು
ಅಪ್ಪ ಬಂದಾಗ ಕೈಯಲ್ಲಿ ತಿಂಡಿ ಕಂಡಾಗ
ಸಿಟ್ಟನಳುವೆಲ್ಲಾ ಮರೆತು
ಹರವಾದೆದೆಯ ಮೇಲೆ ಮಲಗಿ
ರಾಮಾಯಣ ಮಹಾಭಾರತ
ಕಥೆ ಕೇಳಿದ್ದು,
ಕೇಳುತ್ತಲೇ ನಿದ್ದೆಹೋಗುತ್ತಿದ್ದದ್ದು.

ಆಗ;
ನನಗೂ ತಂಗಿಗೂ ಜಗಳ
ಆಕೆಗೋ ಸಿಟ್ಟಿನ ಭರ
ನಾನು ತಮಾಷೆಯ ಪರ
ನಾಸಿನ್ನ ಕೊಲ್ಲುವೆನೆಂದಾಗ
ಒಳಗೋಡಿ ಚಾಕು ತಂದು
ತ್ಯಾಗಮಯಿಯಂತೆ ನಿಂತುಬಿಟ್ಟಾಗಲೆಲ್ಲ
ಹೇಳುತ್ತೇನೆ;
ಈಗ ಪುರುಸೊತ್ತಿಲ್ಲ ಮತ್ತೆ ಬಾ
ಎನ್ನುತ್ತಲೆರಡು ಬಿಗಿಯುತ್ತೇನೆ.
ಅವಳಳುತ್ತಾಳೆ
ನಾ ನಗುತ್ತೇನೆ.

ಈಗೆಲ್ಲ ಹಾಗಿಲ್ಲ,
ಜೀವಂತವಿಹುದು ನೆನಪು ಮಾತ್ರ
ಬೆಳೆದುಬಿಟ್ಟದ್ದೇವೆನ್ನುವ ಭ್ರಮೆ
ಭಾವನೆಗಳು ಬೆಳೆದೇ ಇಲ್ಲ
ಕಳೆದ ಹಗಲಿರುಳುಗಳ
ತೆಕ್ಕೆಯಲ್ಲಿ
ನವುರು ನೆನಪುಗಳೀಗ ಮೌನ
ಈಗ ಏನಿಲ್ಲ
ಶೂನ್ಯ ಭಾವ
ಸುತ್ತ ಬೇಲಿ ಹಾಕಿಕೊಂಡಿದ್ದೇವೆ
ಬದುಕುವ ಭರದಲ್ಲಿ
ಕೆದಕುವ ತವಕದಲ್ಲಿ.

● ರವಿರಾಜ್, ವಳಲಂಬೆ

ಕಾಣೆಯಾಗಿದ್ದಾಳೆ!

ಸೂರ್ಯ ಹುಟ್ಟುವ ಮುನ್ನ
ಮುಂಜಾವಿನ ಹೊಂಬೆಳಕಿನಲ್ಲಿ
ಬರೆಯಬೇಕು ಬದುಕಿನ ಕಥೆಯನ್ನು.
ಹಕ್ಕಿಗಳ ಚಿಲಿಪಿಲಿ ಸ್ವರಗಳ
ಉಲಿತದ ಮೈಮರೆವಿನಲ್ಲಿ
ಅರಿಯಬೇಕು ಮನಸಿನ ವ್ಯಥೆಯನ್ನು–
ಎನ್ನುತ್ತಲೇ ಎಲ್ಲೋ ಕಳೆದು ಹೋಗಿದ್ದಾಳೆ ಹುಡುಗಿ!

ಹರಿಯುವ ನೀರಿನ ಅಲೆಗಳ ಸದ್ದಿನಲ್ಲಿ
ಗೆದ್ದು ಬದುಕುವ ಸ್ವಾಭಿಮಾನದ ಜಿದ್ದಿನಲ್ಲಿ
ವಾಸ್ತವದ ಬದುಕಿನ ಅನ್ವೇಷಣೆಯ ಹಾದಿಯಲ್ಲಿ
ಎಲ್ಲೋ ತಪ್ಪಿಸಿಕೊಂಡಿದ್ದಾಳೆ ಹುಡುಗಿ!

ಸೂರ್ಯ ಮುಳುಗುವ ಹೊತ್ತಿನಲ್ಲಿ
ಗಿಜಿಗುಟ್ಟುವ ಬೀದಿಯ ಮಧ್ಯದಲ್ಲಿ
ಕಂಡರೂ ಕಾಣಲಾರದ ಹುಡುಗಿ
ಸರಿದು ಹೋಗಿದ್ದಾಳೆ!
ನಿದ್ದೆಗಣ್ಣಿನಲಿ ಕನಸುಗಳ
ತುಂಬಿಕೊಂಡ ಕೆಂಪು ಗಲ್ಲದ ಹುಡುಗಿ
ಕಾಣೆಯಾಗಿದ್ದಾಳೆ!!

● ಬಿ. ಕೆ. ಸರಸ್ವತಿ, ಜಡ್ಡಿಗದ್ದೆ

– ಮೆಚ್ಚುಗೆ ಪಡೆದ ಕವನಗಳು –

ವಿಫಲ	● ಅರುಂಧತಿ ರಮೇಶ್, ದಾವಣಗೆರೆ
ಬಿಸಿಲಿನ ಚಿತ್ರಗಳು	● ವಾಸುದೇವ ನಾಡಿಗ್, ಶಿವಮೊಗ್ಗ
ಸಂದೇಶ	● ವನಿತಾ ಅಂಬುತೀರ್ಥ, ನೊಣಬೂರು (ತೀರ್ಥಹಳ್ಳಿ)

ಹೊಸ ಧಾರಾವಾಹಿ ಪ್ರಾರಂಭ

ಅಧ್ಯಾಯ – 1: ವ್ಯೂಹದ ಸೆಳೆತ



ವ್ಯೂಹ

● 'ಚಿರಂಜೀವಿ'

ರಾಮರಾಯರು ಸರಸರನೆ ಒಳಗೆ ಬರುತ್ತಿದ್ದುದನ್ನು ನೋಡಿ ಸೀತಾಬಾಯಿ ಆಶ್ಚರ್ಯದಿಂದ ನಿಂತರು. ತನ್ನ ಕೊಠಡಿಯಲ್ಲಿ ಏನೊ ಮಾಡುತ್ತಿದ್ದ ರಘು, ಹೊರಗೆ ಕಾರಿನ ಸದ್ದು, 'ಲೇಯ್, ಲೇಯ್' ಎನ್ನುವ ತಂದೆಯ ಆತುರದ ಕೂಗು ಕೇಳಿ ಹೊರಗೆ ಬಂದು ಬಾಲ್ಕನಿಯಲ್ಲೆ ನಿಂತು ಆತುರಾತುರದಿಂದ ಬರುತ್ತಿದ್ದ ಅವರನ್ನು ನೋಡಿದ. ರಮೇಶ ಅಡುಗೆ ಮನೆಯಲ್ಲೆಲ್ಲೊ ಇದ್ದವನು ರಭಸದಿಂದ ಹೊರಬಂದು, 'ಏನಪ್ಪಾ,



ಹಳೆಯ ಫೋರ್ಡ್ ಕಾರಿನಲ್ಲೆ ಸಂಸಾರ ಸಾಗಿಸಿದ್ದ ಮನೆಗೆ ಸೊಸೆ ಬರಬೇಕೆನ್ನಿಸಿದಾಗ, ಹೊಸ ಕಾರೂ ಬರಬೇಕು ಎನ್ನುವ ಕಿರಿಯರ ಒತ್ತಾಯ.

ಏನಾಯ್ತು ? ಫಾರಿನ್‌ಗೆ ಏನಾದ್ರೂ ಹೋಗ್ತಿದ್ದೀರಾ ?' ಎಂದ. ರಾಮರಾಯರು ನಿಂತು ಅವನನ್ನೇ ದುರುಗುಟ್ಟುಕೊಂಡು ನೋಡಿದರು. 'ನಾನು ನಿನ್ನನ್ನ ಕೂಗ್ಲಿಲ್ಲ. ನಿಮ್ಮಮ್ಮನ್ನ ಕೂಗಿದ್ದು. ಸ್ವಲ್ಪ ಏನಾದ್ರೂ ಸಂಭ್ರಮ ತೋರ್ಸಿದ್ರೆ, ಫಾರಿನ್ನು ಅಂದುಕೊಂಡು ಬಿಡೋದು: ಯಾವಾಗ್ಲೂ ಫಾರಿನ್‌ದೇ ಜ್ಞಾನ', ಎನ್ನುತ್ತ ಅವನನ್ನು ಪಕ್ಕಕ್ಕೆ ಸರಿಸಿ, 'ಲೇಯ್' ಎಂದು ಕೂಗಲು ಬಾಯಿ ತೆರೆದಾಗ, 'ನಾನಿಲ್ಲೆ ಇದ್ದೀನಿ. ಯಾಕೆ, ಯಾಕೆ ಹಾಗೆ ಕೂಗ್ತಿದೀರಿ?' ಎನ್ನುವ ಹೆಂಡತಿಯ ಮುಖ ಕಾಣಿಸಿತು.

ರಾಮರಾಯರು ಸೋಫಾದ ಮೇಲೆ ಕಾಲು ಚಾಚಿ ಕುಳಿತರು. ಒಂದು ನಿಮಿಷ ಉಸಿರೆಳೆದು ಕೊಂಡು ಸುಧಾರಿಸಿಕೊಂಡು–ತಮ್ಮೆದುರು ಬಂದು ಕುಳಿತ ಹೆಂಡತಿಯನ್ನೆ ನೋಡಿದರು. 'ಲೇಯ್, ನಾಣಿ ಸಂಸಾರ ಸಮೇತ ನಾಳೆ ಇಲ್ಲಿಗೆ ಬರ್ತಿದಾನೆ. ಈಗ ಫೋನ್ ಮಾಡ್ದ. ಕೂಡ್ಲೆ ನಿಂಗೆ ಹೇಳೋಕೆ ಬಂದ್ಬಿಟ್ಟೆ'–ಎಂದರು.

ಸೀತಾಬಾಯಿ ಮುಖದ ತುಂಬ ಸಂತೋಷ ತುಂಬಿಕೊಂಡಿತು. 'ಅಯ್ಯೊ, ಹೌದೇನ್ರಿ ?' ಎಂದರು. 'ಅದಕ್ಕೆ ಅಯ್ಯೊ ಯಾಕೆ? ಸಂತೋಷದ ಸಮಾಚಾರಾ ಅಲ್ವೇನೇ?' ಎಂದು ಗಂಡ ಕೇಳಿದ್ದಕ್ಕೆ 'ಅಯ್ಯೊ, ಸಂತೋಷಾನೇರೀ. ಲಕ್ಷ್ಮಿ, ಶಾಲಿನಿ, ಸುಧಾ ಎಲ್ಲಾರೂ ಬರ್ತಿದಾರಂತೆ ತಾನೇ?' ಎಂದರು. 'ಹೂಂ, ಶಾಲಿನಿ, ಡಾಕಿನಿ, ಷೇಕಿನಿ, ಸಿಂಹಿಣಿ ಎಲ್ಲರೂ ಬರ್ತಿದಾರೆ', ಎಂದು ಮೇಲಿನಿಂದಲೇ ರಘು ಗೊಣಗಿಕೊಂಡ. 'ಏನೋ ಅದು ಏನು ಹೇಳ್ತಿದೀಯೋ?' ಎಂದವನನ್ನು ಕೇಳುವಷ್ಟರಲ್ಲಿ ರೂಮು ಸೇರಿ ಕೊಂಡಿದ್ದ. 'ಅಬ್ಬಾ, ಇನ್ನೊಂದಿಷ್ಟು ದಿನ ಬೇರೆ ಬೇರೆ ಮುಖಗಳ್ನೂ ನೋಡ್ಬೋದು'–ಎನ್ನುತ್ತ ರಮೇಶ ಹೊರಗೆ ಹೋದ.

ಸೀತಾಬಾಯಿ ಅವರಿಗೆ ತಮ್ಮನ ಕುಟುಂಬ ಬರುವ ಸಂಭ್ರಮ. ರಾಮರಾಯರಿಗೆ ಚಿಕ್ಕಂದಿನಿಂದ ಪರಿಚಿತ ಸ್ನೇಹಿತ ನಾಣಿ ಅಲಿಯಾಸ್ ನಾರಾಯಣ ರಾವ್ ಬರುವ ಸಂಭ್ರಮ. 'ಅವನ್ಜೊತೆ ಹರಟೆ ಹೊಡೆದು ತುಂಬಾ ಕಾಲಾನೇ ಆಗಿತ್ತು. ಮಾರ್ನಿಂಗ್ ವಾಕ್, ಈವ್ನಿಂಗ್ ವಾಕ್, ಊಟ-ತಿಂಡಿ, ಯಾಕೆ ಮಲ್ಕೊಂಡ ಮೇಲೂ ಅವನು ಅದ್ಭುತವಾದ ಕಂಪನಿ. ಅವನು ಸ್ವಾರಸ್ಯವಾಗಿ ಮಾತು ಪ್ರಾರಂಭಿಸಿದ್ರೆ, ದಿನಗಳು ಹೋಗೋದೇ ಗೊತ್ತಾಗೊಲ್ಲ', ಎಂದರು ರಾಮರಾಯರು. 'ನಂಗೂ ಅಷ್ಟೆ, ಲಕ್ಷ್ಮೀನ–ಮಕ್ಳನ್ನ ನೋಡಿ ತುಂಬ ದಿನ ಆಗೋಗಿತ್ತು. ನಾವಂತೂ ಅವರ ಮನೆಗೆ ಹೋಗ್ಲಿಲ್ಲ. ಅವರಾದ್ರೂ ಮನಸ್ಸು ಮಾಡಿ ಯಾವಾಗ್ಲಾದ್ರೂ ಒಂದೊಂದ್ಸಲ ಬರ್ತಾರಲ್ಲ. ಅದೇ ಸಮಾಧಾನ' ಎಂದರು ಸೀತಾಬಾಯಿ.

ರಾಮರಾಯರು ಇನ್ನೊಂದು ಹೊಸ

ಸಮಾಚಾರ ಹೇಳಿದರು. ನಾರಾಯಣರಾಯರು ಹೊಸ ಕಾರ್ ಕೊಂಡಿದ್ದಾರೆ. 'ನಾಣಿ ಹೊಸ ದೊಡ್ಡ ಕಾರು ಕೊಂಡ್ಕೊಂಡಿದಾನಂತೆ. ನಾಳೆ ಎಲ್ರೂ ಅದ್ರಲ್ಲೆ ಬರ್ತಿದಾರೆ. ಹಳೆ ಫೋರ್ಡ್ ಗಾಡಿ ಉಪಯೋಗಿಸಿದ್ದು ಸಾಕು. ಅದನ್ನ ಯಾವ್ದಾದ್ರೂ ಮ್ಯೂಜಿಯಂಗೆ ಕೊಟ್ಬಿಡಿ. ಹೊಸ ಕಾರು ತೊಗೊಳ್ಳೋವರ್ಗೂ ನಾನು ನಿಮ್ಜೊತೆ ತಿಂಡಿ ತಿನ್ನೊಲ್ಲ, ಊಟ ಮಾಡೊಲ್ಲ ಅಂತ ಶಾಲಿನಿ ಹಠ ಹಿಡಿದ್ಳಂತೆ. ಆ ನಾಣಿ ಹೊರಗಡೆ ಎಷ್ಟು ದೊಡ್ಡ ಮನ್ಷ ಆಗಿದ್ರೇನು, ಮನೇಲಿ ಸೋತ', ಎಂದರು ರಾಮರಾಯರು.

ಗಂಡ ಮಾತನಾಡುತ್ತಿರುವುದು ತಮ್ಮ ಕಿವಿಗೆ ಬೀಳುತ್ತಲೇ ಇಲ್ಲವೇನೊ ಎಂಬಂತೆ ಸೀತಾಬಾಯಿ ಆಗಲೇ ನಾಳಿನ–ಮುಂದಿನ ದಿನಗಳ ಯೋಚನೆ ಮಾಡುತ್ತಿದ್ದರು. ನಾಳೆ ಅವರೆಲ್ಲ ಬಂದಾಗ ಹೇಗಿರಬಹುದು, ಪರಸ್ಪರ ಹೇಗೆ ಮಾತನಾಡಿಕೊಳ್ಳಬಹುದು, ನಾಳಿನ ಅಡುಗೆ–ತಿಂಡಿ ವಿಶೇಷಗಳು, ಮುಂದಿನ ದಿನಗಳ ವಿಶೇಷಗಳು, ಎಲ್ಲೆಲ್ಲಿ–ಯಾರು ಯಾರ ಮನೆಗಳಿಗೆ ಭೇಟಿ ಕೊಡಬೇಕಾಗಬಹುದು–ಹೀಗೆ ಅವರ ತಲೆ ಎಂಟು ದಿಕ್ಕುಗಳಲ್ಲೂ ಹಾರಾಡುತ್ತಿತ್ತು.

ಅವರ ಸಂಭ್ರಮಕ್ಕೆ ಇನ್ನೊಂದು ಮುಖ್ಯ ಕಾರಣವೂ ಇದೆ: ತಮ್ಮನ ಮಗಳು ಶಾಲಿನಿಯನ್ನು ರಘುವಿಗೆ ತಂದುಕೊಳ್ಳಬೇಕು ಎಂದು ಮೊದಲೇ ನಿರ್ಧರಿಸಿದ್ದಾಗಿದ್ದರೂ ರಘು ಮದುವೆಯನ್ನು ಮುಂದೆ ಮುಂದೆ ಹಾಕುತ್ತಿದ್ದ. ಯಾವುದೋ ಒಂದು ಕಾರಣ: ಇಂಜಿನಿಯರಿಂಗ್ ಪದವಿ ಮುಗಿಸಿದ ಮೇಲೆ ಇನ್ನೆರಡು ವರ್ಷ ಓದಬೇಕು ಎಂದ. ಎಂಇಯೂ ಮುಗಿದು, ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಡಿಪ್ಲೊಮಾ ಪಡೆದದ್ದೂ ಆಯಿತು. ಇನ್ನೂ ಅವನು ಮೀನ ಮೇಷ ನೋಡುತ್ತಿದ್ದ. 'ಯಾಕೋ ರಘು, ಮದ್ವೆ ಅಂದ್ರೆ ಹೆದ್ರಿಕೆ ಏನೊ? ಅಥ್ವ ಶಾಲಿನಿ ಏನಾದ್ರೂ ಕುರೂಪಿನಾ? ಅಥ್ವ ಬೇರೆ ಯಾರ್ನಾದ್ರೂ ಲವ್ ಮಾಡ್ತಿದ್ದೀಯೇನೋ? ಎಂದೆಲ್ಲ ರಾಮರಾಯರು ಮಗನನ್ನು ಕೇಳಿಬಿಟ್ಟಿದ್ದರು. 'ಸ್ವಲ್ಪ ದಿವಸ ನಾನು ಹಾಯಾಗಿ ಓಡಾಡಿಕೊಂಡಿರ್ಬೇಕಪ್ಪ, ಆಮೇಲೇ ಮದ್ವೆ'–ಎಂದಿದ್ದ ರಘು.

ಈಗ ಶಾಲಿನಿ ಇನ್ನೂ ಸುಂದರಿಯಾಗಿ, ಸೊಬಗಿನ ಹೆಣ್ಣಾಗಿ ಬೆಳೆದಿರಬಹುದು. ಚಿಕ್ಕವಳಿದ್ದಾಗ, ಹೈಸ್ಕೂಲು ಓದುತ್ತಿದ್ದಾಗ, ಲಂಗ ಜಂಪರಿನ–ದಾವಣಿ ಹುಡುಗಿಯನ್ನು ನೋಡಿದಾಗಲೇ ಅವಳ ಲಾವಣ್ಯವನ್ನವರು ಗುರುತಿಸಿದ್ದರು. ತನ್ನ ತವರಿನ ಹುಡುಗಿ ಎನ್ನುವ ಹೆಮ್ಮೆ ಅವರಿಗೆ. ಈಗಂತೂ ಹದಿನೆಂಟು ದಾಟಿದ ಹೆಣ್ಣು. ತನ–ಮಗನಿಗೆ ಸುಂದರಿಯಾದ ಹೆಂಡತಿ ಬರಬೇಕು ಎನ್ನುವುದಲ್ಲದೆ, ತಮ್ಮನ ಮಗಳೇ ತನ್ನ ಸೊಸೆಯಾಗಿ ಬರಬೇಕೆಂಬ ಹಂಬಲ ಬೇರೆ.

ಅಡುಗೆಯವ ತಂದುಕೊಟ್ಟ ಬಿಸಿಬಿಸಿ ಕಾಫಿ ಮುಗಿಸಿ ಕಪ್ ಮುಂದಿರಿಸಿದ ರಾಮರಾಯರು, 'ಏನೇ ಎಲ್ಲಿ ಓಡಾಡ್ತಿದ್ದೀಯಾ? ನಾನು ಹೇಳಿದ್ದು ಗೊತ್ತಾಯ್ತಾ? ., ನಾಣಿ ಹೊಸ ಕಾರು ತೊಗೊಂಡಿದಾನಂತೆ. ಅದೂ ದೊಡ್ಡ ಕಾರು. ನಾಳೆ ಅವ್ರೆಲ್ಲ ಅದ್ರಲ್ಲೆ ಬರ್ತಾರಂತೆ'–ಎಂದರು. 'ಗೊತ್ತಾಯ್ತು, ಗೊತ್ತಾಯ್ತು, ನೀವು ಮೊದಲ್ನೆ ಸಲ ಹೇಳಿದಾಗಲೇ ಗೊತ್ತಾಯ್ತು. ನನ್ನ ಸೊಸೆ ಹಠ ಹಿಡಿದ ಮೇಲೆ ಯಾವುದು ಆಗೊಲ್ಲ ಹೇಳಿ?' ಎಂದರು ಸೀತಾಬಾಯಿ. 'ನನ್ನ ಸೊಸೇನೂ ಅಲ್ವೇನೇ? ಇನ್ನು ಇಲ್ಲಿಗೆ ಬಂದು ಏನೇನು ಹಠ ಹಿಡಿತಾಳೋ ಗೊತ್ತಾಗ್ಲಿಲ್ಲ'–ಎಂದರು ರಾಮರಾಯರು. 'ಹಠ ಹಿಡಿದ್ರೆ ಏನಂತೆ. ಕೇಳಿದ್ದು ಕೊಡ್ಸೊ ಯೋಗ್ಯತೇನ ದೇವ್ರು ನಮ್ಗೆ ಕೊಟ್ಟಿದ್ದಾನಲ್ಲ'–ಎಂದ ಹೆಂಡತಿ ಮಾತು ಕೇಳುತ್ತ, 'ಸ್ವರಿ ಸ್ವರಿ... ಅದ್ನೆಲ್ಲ ನೀನು ನೋಡ್ಕೊ. ನಾನು ಇನ್ನೊಂದ್ಸಲ ಆಫೀಸ್ ಕಡೆಗೆ ಹೋಗ್ಬಿಟ್ಟು ಬರ್ತೀನಿ'–ಎಂದು ರಾಯರು ಹೊರಟರು. ದೊಡ್ಡ ಡಾಡ್ಜ್ ಕಾರು ಸದ್ದು ಮಾಡಿ ಮುಂದೆ ಹೋದದ್ದನ್ನು ಕೇಳಿ–ನೋಡಿ ಸೀತಾಬಾಯಿ ಅಡುಗೆ ಮನೆ ಕಡೆಗೆ ನಡೆದರು. ಅವರ ತಲೆಯ ಮೇಲೆ ಈಗ ದೊಡ್ಡ ಜವಾಬ್ದಾರಿ ಇತ್ತು.

ತಂದೆ-ತಾಯಿ ಮಾತುಗಳನ್ನು ರಘು ಸುಮ್ಮನಾಗಿ ಕೇಳಿಸಿಕೊಂಡಿದ್ದ. ನಾಣಿ ಸೋದರ ಮಾವನ ಕುಟುಂಬ ಅವನಿಗೆ ತುಂಬಾ ಸಂತೋಷ ಕೊಡುತ್ತಿದ್ದ ನಂಟು. ಹಿಂದೆಲ್ಲ ಅವರು ಬೆಂಗಳೂರಿಗೆ ಬಂದಾಗ ಸೋದರ ಮಾವ–ಸೋದರತ್ತೆ ಸಂಭ್ರಮದಿಂದ ಎತ್ತರಿಸಿದ ದನಿಯಲ್ಲಿ–ಆತ್ಮೀಯತೆಯಿಂದ ಆಡುತ್ತಿದ್ದ ಮಾತುಗಳು, ಶಾಲಿನಿ–ಸುಧಾ ಅವರೊಂದಿಗೆ

ಸಂಭಾಷಣೆ–ಓಡಾಟ, ಮನೆಯಲ್ಲಿ ಇದ್ದಕ್ಕಿದ್ದ ಹಾಗೆಯೆ ಆವರಿಸಿಕೊಳ್ಳುತ್ತಿದ್ದ ಹಾಯಾದ ವಾತಾವರಣ–ಇವೆಲ್ಲ ಅವನ ನೆನಪಿಗೆ ಬರುತ್ತಿತ್ತು. ಶಾಲಿನಿ ತನಗಾಗಿ ಬೆಳೆಯುತ್ತಿರುವ ಹುಡುಗಿ ಎಂದು ತಿಳಿದಾಗ ಏನೇನೊ ಭಾವನೆಗಳು: ಮದುವೆ, ಗಂಡ ಹೆಂಡತಿ ಎಂದರೆ ಏನೆಂದೇ ತಿಳಿಯದಿದ್ದಾಗ ಅವಳೊಂದಿಗೆ ಆಡುತ್ತಿದ್ದದ್ದು, ಚಿಕ್ಕವರಾಗಿದ್ದಾಗ ಗಂಡ ಹೆಂಡಿರ ಆಟ ಆಡಿದ್ದು, ತಾನು ಹೈಸ್ಕೂಲು–ಕಾಲೇಜಿಗೆ ಬರುವ ವೇಳೆಗೆ ಲಂಗ ಜಂಪರಿನ ಹುಡುಗಿ ಎದೆಯ ಮೇಲೊಂದು ದಾವಣಿ ಹಾಕಿಕೊಂಡು ಮೊದಲಿನಂತೆ ಬೆರೆಯದೆ ದೂರ ದೂರ ನಿಂತಾಗ ಅವನಲ್ಲಿ ಏನೊ ಹೊಸ ಭಾವನೆಗಳು ಏಳುತ್ತಿದ್ದವು. ಯಾವಾಗಲೂ ಅವಳೊಂದಿಗೆ ಮಾತನಾಡುತ್ತ ಕುಳಿತಿರಬೇಕು ಅನ್ನಿಸುತ್ತಿತ್ತು. ಅವರೆಲ್ಲ ಹೊರಟುಹೋದ ಮೇಲೆ ಅವಳ ನೆನಪು ಕಾಡುತ್ತಿತ್ತು.

ಈಚಿನ ವರ್ಷಗಳಲ್ಲಿ ಇಬ್ಬರೂ ಪ್ರಬುದ್ಧ ರಾಗಿದ್ದಾರೆ. ಸಂಕೋಚ ಬಿಟ್ಟು ಬೇಕಾದಷ್ಟು ಮಾತನಾಡುತ್ತಾರೆ. ಇಬ್ಬಿಬ್ಬರೆ ಅಂಗಡಿ, ಸಿನಿಮಾ, ಹೊಟೇಲ್ ಹೋಗಿಬಂದಿದ್ದಾರೆ. ಈ ಜೋಡಿಯನ್ನು ನೋಡಿದವರೆಲ್ಲ ತುಂಬಾ ಮೆಚ್ಚಿಕೊಂಡಿದ್ದಾರೆ. ಆದರೂ ರಘುವಿಗೆ ಮದುವೆ ಎಂದರೆ ಏನೊ ಒಂದು ರೀತಿಯ ಆಲೋಚನೆ. ಈಗಿನಷ್ಟು ಸ್ವತಂತ್ರವಾಗಿ ಓಡಾಡಿ ಕೊಂಡು ಇರಲಾಗುವುದಿಲ್ಲ. ಒಬ್ಬೊಬ್ಬನೆ ಓಡಾಡುವಂತಿಲ್ಲ. ಎಲ್ಲಿ ಹೋದರೂ ಹೆಂಡತಿ ಯನ್ನು ಕರೆದೊಯ್ಯಬೇಕು–ಆದರೆ ಪ್ರೀತಿ, ಪ್ರೇಮ, ಕಾಮಗಳ ಬಗ್ಗೆ ಹೆಚ್ಚು ಹೆಚ್ಚು ಅರಿವಾ ದಾಗ, ಸಿನಿಮಾದಲ್ಲಿ ಶೃಂಗಾರ ಚೇಷ್ಟೆಗಳನ್ನು ನೋಡಿದಾಗ, ಕನಸಿನಲ್ಲಿ ಶಾಲಿನಿ ಬಂದು ಅವನನ್ನು ಕಂಗೆಡಿಸಿದ್ದುಂಟು. ಅವಳನ್ನು ಹಿಡಿ ದೆಳೆದು ಬಿಗಿದಪ್ಪಬೇಕು ಎಂದೆಲ್ಲ ಹುಚ್ಚು ಹುಚ್ಚಾಗಿ ಅನ್ನಿಸಿದ್ದುಂಟು.

ಈಚೆಗೆ ಮಾವ ಅವನಿಗೆ ಒಂದೆರಡು ಕಾಗದಗಳನ್ನು ಬರೆದಿದ್ದರು. ಕ್ಷೇಮ ಸಮಾಚಾರ ವಿಚಾರಿಸಿದ್ದರು. ಶಾಲಿನಿ ಚೆನ್ನಾಗಿದ್ದಾಳೆ. ಡಿಗ್ರಿ ಮುಗಿಸುತ್ತಿದ್ದಾಳೆ ಎಂದೆಲ್ಲ ಬರೆದಿದ್ದರು. ಮದ್ರಾಸ್‌ಗೆ ಬಾ, ಒಂದೆರಡು ದಿನ ನಮ್ಮೊಂದಿಗೆ ಇರು–ಎಂದು ಹೇಳಿದ್ದರು. ಮದ್ರಾಸ್‌ಗೆ ಹೋಗಲಾಗಿರಲಿಲ್ಲ. ಹೋಗಬೇಕೆಂದು ತುಂಬ



ಅಲ್ಲೇನ್ರೀ ತಳ್ತೀರಾ? ಮೊದ್ಲು ಇಲ್ಲಿ ತಳ್ರೀ...!

ಅನ್ನಿಸಿತ್ತು. 'ಹೋಗ್ಬಿಟ್ಟು ಬಾರೊ. ಅವ್ರು ಅಷ್ಟು ಪ್ರೀತಿಯಿಂದ ಕರೀತಿದಾರೆ'–ಎಂದು ತಾಯಿ ಹೇಳಿದ್ದರೂ ಹೋಗಲಾಗಲಿಲ್ಲ.

ರಘು ಸ್ನೇಹಿತನೊಬ್ಬನೊಂದಿಗೆ ಸೇರಿ ಕಿರುಕಾರ್ಖಾನೆಯೊಂದನ್ನು ಸ್ಥಾಪಿಸಿದ್ದ. ಅದು ಚೆನ್ನಾಗಿ ಬೇರೂರಲು ತುಂಬ ಕೆಲಸಗಳು ಮಾಡುವುದಿತ್ತು. ಕಾರ್ಖಾನೆ ಚೆನ್ನಾಗಿ ನಡೆದು, ಒಂದಿಷ್ಟು ಲಾಭ ಗಳಿಸಿದ ಮೇಲೆ ಮದುವೆ ಮಾಡಿಕೊಳ್ಳಬಹುದು ಅಂದುಕೊಂಡಿದ್ದ. ಅವನೇನೂ ಸಂಪಾದಿಸಿ ಯಾವ ಆಸ್ತಿಯನ್ನೂ ಮಾಡಬೇಕಾಗಿದ್ದಿರಲಿಲ್ಲ–ರಾಮರಾಯರು ಬೇಕಾ ದಷ್ಟು ಸಂಪಾದಿಸಿದ್ದರು. ಅವರ ಮಂಡಿ ವ್ಯಾಪಾರ ದೊಡ್ಡದಾಗಿ ನಡೆದಿತ್ತು. ಜೊತೆಗೆ ಸೋದರಮಾವ ದೊಡ್ಡ ಇಂಜಿನಿಯರಿಂಗ್ ಕಂಟ್ರಾಕ್ಟರ್ ಆಗಿ ಲಕ್ಷಾಂತರ ಸಂಪಾದಿಸಿದ್ದಾ ಗಿತ್ತು. ಆದರೂ ರಘುವಿಗೆ ತನ್ನದೇ ಆದ ಕನಸುಗಳಿದ್ದವು. ಆಸೆ ಆಶೋತ್ತರಗಳಿದ್ದವು.

ಹೋದ ವರ್ಷಕ್ಕಿಂತಲೂ ಈ ವರ್ಷ ರಘು ತುಂಬಾ 'ಬಿಸಿ'. ಕಾರ್ಖಾನೆ ಬೆಳೆಸಲು ತುಂಬಾ ಓಡಾಡಬೇಕಾಗಿತ್ತು. ಒಮ್ಮೊಮ್ಮೆ ಹತ್ತಿರದ–ದೂರದ ಊರುಗಳಿಗೂ ಹೋಗಬೇಕಾಗಿತ್ತು. ದೆಹಲಿಗೆ ಒಂದೆರಡು ಸಲ ಹೋಗಿ ಬಂದಿದ್ದ. ಈ ಸಮಯದಲ್ಲಿ ಇವರೆಲ್ಲ ಬಂದು ತನ್ನ ಕೆಲಸಕ್ಕೆ



ನಾನು ಭಗವದ್ಗೀತೆ ಮುಟ್ಟಿ ಪ್ರಮಾಣ ಮಾಡಿ ಸತ್ಯ ಹೇಳುತ್ತೇನೆ–ನಮ್ಮ ಲಾಯರ್ ನನಗೆ ಪೂರಾ ಸುಳ್ಳು ಹೇಳಲು ತಿಳಿಸಿದ್ದಾರೆ!!

ಅಡ್ಡಿಯಾಗಬಹುದು ಅನ್ನಿಸಿತ್ತು. ಅತ್ತೆ-ಮಾವ ಮಾತು ಕೇಳುತ್ತ ಕುಳಿತುಕೊಳ್ಳಬೇಕು. ಶಾಲಿನಿ–ಸುಧಾ ಅವರನ್ನು ಒಂದಿಷ್ಟು ಅಲ್ಲಲ್ಲಿ ಓಡಾಡಿಸಬೇಕು. ರಮೇಶ್ ಈಗ ಆ ಕೆಲಸ ಮಾಡಬಹುದು. ಅವನೂ ಈಗ ಹದಿನಾರು–ಹದಿನೇಳು ವರ್ಷದ ಚಿಗುರುಮೀಸೆ ಹುಡುಗ.

ಮರುದಿನ ಬಹುಬೇಗ ಬಂದಿತು. ಮಧ್ಯಾಹ್ನದ ವೇಳೆಗೆ ಮನೆಯ ಮುಂದೆ ಭವ್ಯವಾದ ಸ್ಟಾಂಡರ್ಡ್-2000 ಕಾರು ಬಂದು ನಿಂತಿತು. ರಾಯರು, ಸೀತಾಬಾಯಿಯಾದಿಯಾಗಿ ಎಲ್ಲರೂ ಬೆಪ್ಪಾಗಿ ನಿಂತರು. ಪುಷ್ಪಕ ವಿಮಾನದ ಹಾಗೆ ಆ ಕಾರು ಬಂದು ಸದ್ದಿಲ್ಲದೆ ನಿಂತದ್ದು, ಅದರಿಂದ ಅವರೆಲ್ಲ ಕೆಳಗೆ ಇಳಿದದ್ದು–ಇವನ್ನೆ ಇವರೆಲ್ಲ ನೋಡುತ್ತ ನಿಂತರು.

ರಘು ಕೂಡಲೇ ಕುತೂಹಲದಿಂದ ಗಮನಿಸಿದ್ದು ಶಾಲಿನಿಯನ್ನು–ಸ್ವರ್ಗಲೋಕದ ಅಪ್ಸರೆಯ ಹಾಗೆ ತೇಲಿಕೊಂಡು ತನ್ನತ್ತ ಬರುತ್ತಿದ್ದ ಆ ಅಪರೂಪ ಸೌಂದರ್ಯರಾಶಿಯನ್ನು. ರಘು ಅವಳನ್ನೆ ನೋಡುತ್ತ ನಿಂತ.

ಅವನ ಎದೆ ಮೃದುವಾಗಿ ಬಡಿದುಕೊಂಡಿತು. ಕಣ್ಣುಗಳು ತಮ್ಮನ್ನೆ ತಾವು ನಂಬಲಿಲ್ಲ. ಶಾಲಿನಿ ಎಷ್ಟು ಸುಂದರವಾಗಿದ್ದಾಳೆ ಎನ್ನಿಸಿತು: ಆಕಾಶ ನೀಲಿ ಬಣ್ಣ ಸೀರೆ–ಕುಬುಸ, ಗಾಳಿಗೆ ಹಾರಾಡುತ್ತಿದ್ದ ಸೊಂಪಾದ ತುಂಬುಗೂದಲು, ಬಿಳುಪು ಮುಖ, ರಕ್ತವೇರುತ್ತಿದ್ದ ತುಟಿಗಳು–ಕೆನ್ನೆಗಳು, ಲಯಬದ್ಧವಾಗಿ ಹಾಕುತ್ತಿದ್ದ ಹೆಜ್ಜೆಗಳು, ಲಾವಣ್ಯ ತುಳುಕಾಡುತ್ತಿದ್ದ ಆಕರ್ಷಕ ಅಂಗ ಸೌಷ್ಟವ, ಹೂಚೆಲ್ಲುತ್ತಿದ್ದ ಸುಂದರ ನಗು. ರಘು ನಿಜವಾಗಲೂ ಬೆಪ್ಪಾಗಿ ನಿಂತ. ಅವನೊಂದಿಗೆ ಉಳಿದವರಿಗೂ ಅಷ್ಟೇ ಆಶ್ಚರ್ಯವಾಗಿತ್ತು. ತನ್ನ ಹತ್ತಿರ ಹೆಜ್ಜೆ ಹಾಕುತ್ತಿದ್ದ ಶಾಲಿನಿಯತ್ತ ಓಡಿಹೋಗಿ ಅವಳನ್ನು ಬಿಗಿದಪ್ಪಿಕೊಂಡ ತಾಯಿಯ ಆತುರವನ್ನು ನೋಡಿ ಅವನಿಗೆ ಅಸಂತೋಷವಾಗಿತ್ತು.

ಸೀತಾಬಾಯಿಯ ಹೆಗಲ ತುದಿಯಿಂದಲೇ ಶಾಲಿನಿ ರಘುವನ್ನು ನೋಡಿದಳು. 'ಹಲೋ' ಎಂದು ಕೈ ಆಡಿಸಿದಳು. 'ಹೇಯ್' ಎಂದು ಸುಧಾ ಕೂಗಿದಳು. ರಮೇಶ ನಿಧಾನವಾಗಿ ಅವರತ್ತ ಹೆಜ್ಜೆ ಹಾಕಿದ. ರಘು ಕಾಲು ಸರಿಸಿದ. 'ಹಾಯ್ ರಘು, ಹೌ ಆರ್ ಯೂ ಮೈ ಡಿಯರ್ ಬಾಯ್?' ಎನ್ನುತ್ತ ನಾಣಿ ಮಾವ ಹತ್ತಿರ ಬಂದು ಕೈಕುಲುಕಿ ಅಪ್ಪಿಕೊಂಡರು.

ಇದ್ದಕ್ಕಿದ್ದ ಹಾಗೆಯೇ ಆ ಮನೆಯಲ್ಲಿ ಎಲ್ಲೆಲ್ಲೂ ಸಂಭ್ರಮ–ಸಂತೋಷಗಳು ತುಂಬಿಕೊಂಡವು. ಮನೆಯಲ್ಲಿ ಬರಿ ಗಂಡು ಮುಖಗಳನ್ನೇ ನೋಡುತ್ತಿದ್ದ ಸೀತಾಬಾಯಿ ಮಹಿಳಾ ಅತಿಥಿಯರ ಸಾನ್ನಿಧ್ಯದಲ್ಲಿ ಮೈಮರೆತರು. ದೊಡ್ಡ ಸೋಫಾದ ಮೇಲೆ ರಾಯರಿಬ್ಬರೂ ಭುಜದ ಮೇಲೆ ಕೈ ಹಾಕಿ ಕುಳಿತರು. ಸೀತಾಬಾಯಿ ತಮ್ಮನ ಹೆಂಡತಿ ಲಕ್ಷ್ಮಿಯೊಂದಿಗೆ ಕುಳಿತರು. ಶಾಲಿನಿ–ಸುಧಾ ಒಂದು ಕಡೆ, ರಘುವೊಂದು ಕಡೆ, ರಮೇಶ್ ಒಂದು ಕಡೆ ಕುಳಿತರು. ಕಾಫಿ ಸರಬರಾಜು ಆಯಿತು.

'ಅಂತೂ ಮನಸ್ಸು ಮಾಡಿ ಫೋರ್ಡ್ ಗಾಡಿನ ಪಕ್ಕಕ್ಕೆ ತಳ್ಳಿಟ್ಟೆ. ಭರ್ಜರಿ ಗಾಡೀನೆ ತೊಗೊಂಡುಬಿಟ್ಯಲ್ಲಯ್ಯ'–ಎಂದರು ರಾಮರಾಯರು. 'ಈ ಹುಡುಗಿರ್ದು ಎಲ್ಲ ಆಧುನಿಕ ಆಲೋಚನೆಗಳು. ಕಾಲೇಜ್ನಲ್ಲಿ ಅವಳ ಸ್ನೇಹಿತೆಯರು ಹೊಸ ಹೊಸ ಕಾರ್ನಲ್ಲಿ ಬರ್ತಿದ್ದನ್ನ ನೋಡಿ ನೋಡಿ, ನಮಗೂ ಹೊಸ ಕಾರು ಬೇಕೂಂತ ಹಠ ಹಿಡಿದ್ಬಿಟ್ರು. ನಂಗೂ ಇಂಥ ಕಾರಿನ ಮೇಲೆ ತುಂಬಾ ಕಣ್ಣಿತ್ತು. ತೊಗೊಂಡ್ಬಿಟ್ಟೆ'–ಎಂದರು ನಾಣಿ ಮಾವ.

'ಅದಿರ್ಲಿ ನಮ್ಮಾಯ್ತು. ನೀವು ಯಾವಾಗ ಮಾವ ನಿಮ್ಮ ಹಳೆ ಕಾರನ್ನು ಸ್ಕ್ರಾಫ್ ಮಾಡೋದು?' ಎಂದಳು ಸುಧಾ. 'ಅಂಥ ಆಲೋಚ್ನೆ ಏನೂ ಇಲ್ಲಾಮ್ಮ. ಎಷ್ಟೊ ವರ್ಷಗಳಿಂದ ಒಂದು ರೀತಿ ತಲೆತಲಾಂತರಗಳಿಂದ ಈ ಗಾಡೀನೇ ನಮ್ಮ ಓಡಾಟದ ಕೆಲ್ಸ ಎಲ್ಲ ಮಾಡ್ತಿದೆ. ಏನೂ ತೊಂದ್ರೆ ಆಗಿಲ್ಲ. ಹಾಗಾಗಿ ನಾವು ಬೇರೆ ಯೋಚ್ನೇನೇ ಮಾಡಿಲ್ಲ. ಅದೂ ಅಲ್ದೆ ನಿಮ್ಮ ಹಾಗೆ ನಮ್ಮ ಹುಡುಗ್ರೂನೂ ಬೇರೆ ಕಾರು ಬೇಕೂಂತ ಕೇಳ್ಳಿಲ್ವಲ್ಲಮ್ಮಾ'—ಎಂದರು ರಾಮ ರಾಯರು. 'ನೋಡು ರಘು ಸ್ಕೂಟರ್ ತೊಗೊಂಡಿದಾನೆ. ರಮೇಶ್ ಒಂದು ಮೋಟರ್ ಬೈಕ್ ತೊಗೊಂಡಿದಾನೆ. ಅವ್ರಿಬ್ರೂ ಈ ಕಾರನ್ನು ಉಪಯೋಗಿಸೋದೇ ಇಲ್ಲ'—ಎಂದರು.

'ಆದ್ರೂ ನೀನೊಂದು ಹೊಸ ಕಾರು ತಗೊಳ್ಳೇ ಬೇಕು ಕಣಯ್ಯ', ಎಂದರು ನಾಣಿ ಮಾವ. 'ಅಯ್ಯೊ ಅದೆಲ್ಲ ಏನು ಬೇಡಯ್ಯ'— ಎಂದುಬಿಟ್ಟರು ರಾಯರು.

ಸಂಜೆ ಎಲ್ಲರೂ ಹೊಸ ಕಾರಿನಲ್ಲಿ ಕುಳಿತು ಸುತ್ತಿ ಬಂದರು. ಹೊಸ ಆಧುನಿಕ ಕಾರಿನ ಅದ್ಭುತ ರಾಮರಾಯರಿಗೆ ಅರ್ಥವಾಗಿತ್ತು. ರಘುವಿಗೂ ತೇಲಿಹೋದ ಅನುಭವವಾಗಿತ್ತು. ಆ ಕಾರನ್ನು ತುಂಬಾ ಹೊಗಳಿದರೆ ಹೊಸದಿನ್ನೊಂದು ಕಾರನ್ನು ತಾವು ತೆಗೆದುಕೊಳ್ಳಬೇಕಾಗಿ ಬರುತ್ತದೆ ಎಂದವರಿಗೆ ಗೊತ್ತು. ಹೊಸ ಕಾರು ಕೊಳ್ಳುವುದಕ್ಕಿಂತಲೂ ಕೆಲಸ ಮಾಡುತ್ತಿರುವ ಹಳೆ ಕಾರನ್ನು ಪಕ್ಕಕ್ಕೆ ತಳ್ಳಲು ಅವರ ಮನಸ್ಸು ಒಪ್ಪಿರಲಿಲ್ಲ.

ಆದರೆ ಮರುದಿನ ನಾಣಿ ಮಾವ ಆದಿಯಾಗಿ ಎಲ್ಲರೂ ಅವರ ತಲೆ ತಿನ್ನಲು ಪ್ರಾರಂಭಿಸಿದ್ದರು. ಇಷ್ಟೊಂದು ಆಸ್ತಿಪಾಸ್ತಿ, ಆಳುಕಾಳು, ದೊಡ್ಡಸ್ತಿಕೆ ಇದ್ದರೂ ಸರಿಯಾದ ಆಧುನಿಕ ಕಾರೊಂದು ಇಲ್ಲದಿರುವುದು ಅವಮಾನ ಎಂದೆಲ್ಲ ಆ ಹುಡುಗಿಯರೂ ವಾದಿಸಲು ಪ್ರಾರಂಭಿಸಿಬಿಟ್ಟರು. ರಘು ಸ್ಕೂಟರಿನ ಮೇಲೆ ಹೊರ ಹೊರಟಾಗ ಶಾಲಿನಿ ಹತ್ತಿರದಲ್ಲೆ ನಿಂತು ತಮಾಷೆ ಮಾಡುತ್ತಿದ್ದಳು. 'ದೊಡ್ಡ ಶ್ರೀಮಂತ ಪುತ್ರ, ಹೈಲಿ ಕ್ವಾಲಿಫೈಡ್, ಕಾರ್ಖಾನೆ ಮಾಲಿಕ— ಒಂದು ಕಾರಿಲ್ಲ. ಸಾಧಾರಣ ಸ್ಕೂಟರ್ ಮೇಲೆ ಪ್ರಯಾಣ...'—ಎಂದೆಲ್ಲ ಛೇಡಿಸುತ್ತಿದ್ದಳು.

ಅಷ್ಟೆ ಅಲ್ಲದೆ, ಆ ಸ್ಕೂಟರಿನ ಒಂದೆ ಕುಳಿತು ಎಲ್ಲೂ ಸುತ್ತಲು ಬರುವುದಿಲ್ಲ ಎಂದುಬಿಟ್ಟಳು.

ರಘು ಒಂದಿಷ್ಟು ತುರ್ತು ಕೆಲಸಗಳ ಓಡಾಟದಲ್ಲಿದ್ದ. ಹೊಸದೊಂದು ದೊಡ್ಡ ಕೆಲಸದ ಕಾಂಟ್ರಾಕ್ಟ್ ಆಗುವುದರಲ್ಲಿತ್ತು. ಇದಕ್ಕಾಗಿ ದೊಡ್ಡ ಕಾರ್ಖಾನೆಯ ಆಡಳಿತವರ್ಗದೊಂದಿಗೆ ಸಂಧಾನ ನಡೆಸಬೇಕಾಗಿತ್ತು. ಅವರಿಗೆ ಬೇಕಾದ ಉಪಕರಣಗಳನ್ನು ತಯಾರಿಸಿಕೊಡುವ ತಾಂತ್ರಿಕ ಒನ್ನೆಲೆ—ಬೆಂಬಲ ತಮ್ಮಲ್ಲಿ ಇದೆ ಎಂದವರಿಗೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಮೂರು, ನಾಲ್ಕು ದಿವಸ ಈ ಓಡಾಟವೇ ಆಯಿತು. ಅವರಿಗೆ ತೃಪ್ತಿಯಾಗುವಂತೆ ಒಂದೆರಡು ಮಾದರಿ ಕೆಲಸಗಳನ್ನು ಮಾಡಿತೋರಿಸಿದ್ದೂ ಆಯಿತು. ಕಾಂಟ್ರಾಕ್ಟ್ ಕೈಗೆಟಕುವ ಆಶಾಭಾವನೆ ಉಂಟಾಗುವಂತಾಗಿತ್ತು.

ಜೊತೆಗೆ ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ದೊಡ್ಡದೊಂದು ಷೆಡ್ ಸಿಗುವಂತಿತ್ತು. ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ, ಮಾತನಾಡಿಸಿ ಒಲಿಸಿಕೊಂಡು ಈ ಷೆಡ್ ಪಡೆದುಕೊಳ್ಳಬೇಕಾಗಿತ್ತು. ರಘು ಜೊತೆಗಾರ ಇದಕ್ಕೆ ಪ್ರಯತ್ನವನ್ನಂತೂ ಪ್ರಾರಂಭಿಸಿದ್ದ. ರಘುವನ್ನೂ ಒಮ್ಮೆ ಓಡಾಡಿ ಬರಲು ಅವನು ಹೇಳಿದ್ದ. ಈ ಜವಾಬ್ದಾರಿ ಬೇರೆ ರಘುವಿನ ತಲೆಯ ಮೇಲೆ ಬಿದ್ದಿತ್ತು. ರಘು ಬೆಳಗ್ಗೆ ಹೋದರೆ ರಾತ್ರಿ ಮನೆಗೆ ಬರುತ್ತಿದ್ದ— ಮಧ್ಯಾಹ್ನದ ಊಟಕ್ಕೂ ಬರುತ್ತಿರಲಿಲ್ಲ.

'ಏನೊ ಇದು, ಮನೆಗೆ ತುಂಬಾ ಬೇಕಾದವ್ರು ಬಂದಿದಾರೆ. ನೀನು ಹೀಗೆ ಹಗಲು ರಾತ್ರಿ ಮನೇಗೆ ಬರ್ದೆ ಓಡಾಡ್ತಿದ್ದೀಯ'—ಎಂದು ತಾಯಿ ರಾತ್ರಿ ಊಟ ಬಡಿಸುತ್ತ ರಾಗವೆಳೆದಾಗ, 'ನಾವು ಬಂದಿದ್ದು ತೊಂದರೆ ಆಯ್ತೇನೊ: ಮುಖ ತೋರಿಸ್ಲಿಕ್ಕೆ ಹೆದರ್ತಿದಾರೆ'—ಎಂದಳು ಶಾಲಿನಿ. ರಘು ದೊಡ್ಡದಾಗಿ ನಕ್ಕುಬಿಟ್ಟ. 'ಅಮ್ಮಾ, ಬಿಸಿನೆಸ್‌ಗೆ ಇಳಿದಾಗ ಕೆಲಸ ಮುಖ್ಯವೇ ಹೊರ್ತು ಮನೆ—ಊಟ ಮುಖ್ಯ ಅಲ್ಲ ಅಂತ ನಿಂಗೆ ಗೊತ್ತೇ ಇದ್ಯಲ್ಲಮ್ಮಾ. ಅಪ್ಪ ಬೆಳಗ್ಗೆ ಹೋಗಿ ರಾತ್ರಿ ಬರ್ತಿರ್ಲಿಲ್ವಾ? ಇದೇನು ಆಶ್ಚರ್ಯದ ವಿಷ್ಯ ಏನಲ್ವಲ್ಲಮ್ಮಾ?' ಎಂದ. ಆದರೂ ಸೀತಾ ಬಾಯಿ ಸಮಾಧಾನವಾಗಲಿಲ್ಲ. 'ನಿಮ್ಮಪ್ಪ ಮಾಡ್ತಿದ್ರೂ ಅಂತ ನೀನೂ ಮಾಡ್ಬೇಕಾಗಿದ್ದಿಲ್ಲ.

ಅವರಿಗೋಸ್ಕರ ಹಗಲು ರಾತ್ರಿ ಹ್ಯಾಗೆ ನಾನು ಕಾಯ್ತಿದ್ದೆ ಅಂತ ನಂಗೊಬ್ಬಳಿಗೆ ಗೊತ್ತು'—ಎಂದರು. 'ಆಗ್ಲಮ್ಮಾ, ನಾಳೆಯಿಂದ ಸಂಜೆ ಬೇಗ ಬರ್ತೀನಿ'—ಎಂದ ರಘು.

ಅವನ ಓಡಾಟದ ಕೆಲಸ ಒಂದು ರೀತಿ ಮುಗಿದಿತ್ತು. ಪ್ರಯತ್ನಗಳೆಲ್ಲ ಫಲ ಕೊಡುವಂತಿತ್ತು. ಮರುದಿನ ಮಧ್ಯಾಹ್ನ ಅವನಿಗೆ ಕಾರ್ಖಾನೆಯ ದೊಡ್ಡ ಕಾಂಟ್ರಾಕ್ಟ್ ದೊರಕಿದ ಸುದ್ದಿ ಮುಟ್ಟಿತ್ತು. ಗೆಳೆಯರಿಗೆಲ್ಲ ಸಂತೋಷವೊ ಸಂತೋಷ. ಎಲ್ಲರೂ ಸಿಹಿ ತಿಂದರು. ಸಿಹಿ ಪೊಟ್ಟಣಗಳನ್ನು ಮನೆಗಾಗಿ ಕಟ್ಟಿಸಿಕೊಂಡರು.

ಸಿಹಿ ಪೊಟ್ಟಣದೊಂದಿಗೆ ಮನೆಗೆ ಬಂದಾಗ ಶುಭ ಸಮಾಚಾರ ತಿಳಿದು ಎಲ್ಲರಿಗೂ ತುಂಬ ಸಂತೋಷವಾಗಿತ್ತು. 'ಭಾವಿ ಸೊಸೆ ಮನೆಗೆ ಕಾಲಿಟ್ಟ ಘಳಿಗೆ ಚೆನ್ನಾಗಿದೆ'—ಎಂದು ತಂದೆ ಹೇಳಿದಾಗ ರಘುವಿಗೆ ಕೋಪ ಬಂದಿತ್ತು. ಶಾಲಿನಿ ಅವನನ್ನು ಕಿಲಾಡಿ ನೋಟದಿಂದ ನೋಡಿದಳು. 'ಏನಪ್ಪಾ, ಹತ್ತಿಪ್ಪತ್ತು ದಿವಸಗಳಿಂದ ಹಗಲು—ರಾತ್ರಿ ಅಲೆದು ಈ ಕೆಲ್ಸ ಮಾಡ್ಸಿದೀನಿ. ನಿನ್ನೆ ಮೊನ್ನೆ ಬಂದು ಹಾಯಾಗಿ ಮನೇಲಿ ಉಂಡುಕೊಂಡು. ತಿಂದುಕೊಂಡು ಇದ್ದವ್ರಿಗೆ ಕ್ರೆಡಿಟ್ ಕೊಟ್ಬಿಟ್ರಲ್ಲಪ್ಪ?' ಎಂದ ರಘು. ಎಲ್ಲರೂ ನಕ್ಕರು. 'ಹಾಗೇ ಕಣೋ ಹೇಳೋದು. ಅದೇ ಲೋಕಾರೂಢಿ ಮಾತು. ಗಂಡನಿಗಾಗೋ ಸುಖದುಃಖಗಳಲ್ಲೆಲ್ಲ ಹೆಂಡ್ತಿ ಪಾಲು ದೊಡ್ಡದು'—ಎಂದರು ರಾಮರಾಯರು.

ರಾತ್ರಿ ಎಲ್ಲರೂ ನಾಣಿ ಮಾವನ ಹೊಸ ಕಾರಿನಲ್ಲಿ ಕುಳಿತು ದೊಡ್ಡ ಹೋಟೇಲ್‌ಗೆ ಹೋಗಿ ಊಟ ಮಾಡಿದರು. ದಾರಿಯುದ್ದಕ್ಕೂ ಶಾಲಿನಿಯ ಒಂದೇ ವರಾತಃ 'ಮಾವ ನೀವೂ ಒಂದು ಹೊಸ ಕಾರ್ ತೊಗೋಬೇಕು. ನಾವೆಲ್ಲ ನಿಮ್ಮ ಹೊಸ ಕಾರಲ್ಲಿ ಕೂತ್ಕೊಂಡು ಓಡಾಡ್ಬೇಕು.' ರಾಮರಾಯರು ಬಹಳ ಹೊತ್ತು ಅವಳ ಮಾತು ಕೇಳಿದರು. ಕೊನೆಗೆ ಅವರೊಂದು ತತ್‌ಕ್ಷಣದ ಉತ್ತರ ಕೊಡಲೇಬೇಕಾಯಿತು. 'ನೋಡಮ್ಮ ಶಾಲಿನಿ. ನಂಗೆ ಈಗಿರೊ ಹಳೆ ಕಾರು ತುಂಬಾ ಒಗ್ಗೋಗಿದೆ. ಅದನ್ನು ಬಿಡೊಕ್ಕೆ ನಂಗೆ ಮನಸ್ಸಾಗೊಲ್ಲ. ಜೊತೆಗೆ ಹೊಸ ಕಾರು ತೊಗೊಂಡರೂ ನಾನೇನೂ ಡ್ರೈವ್ ಮಾಡೊಲ್ಲ. ಡ್ರೈವರ್ ಒಬ್ಬ ಡ್ರೈವ್ ಮಾಡ್ಬೇಕು. ಹಾಗಿದ್ದಾಗ ನಂಗೆ ಈ ಕಾರಾದ್ರೇನು. ಯಾವ ಕಾರಾದ್ರೇನು?' ಎಂದುಬಿಟ್ಟರು. ಶಾಲಿನಿ ಸುಮ್ಮನಾಗಲಿಲ್ಲ. 'ನಿಮಗೆ ಸರಿ ಮಾವ. ಆದ್ರೆ ಇಷ್ಟು ದೊಡ್ಡ ದೊಡ್ಡೋರಾಗಿರೊ ನಿಮ್ಮ ಮಕ್ಕಳೂ ಹಳೇ ಕಾರು. ಡ್ರೈವರ್ ಅಂತ ಕೂತಿರ್ಬೇಕಾ? ಅವರಿಗಾದ್ರೂ ಹೊಸ ಕಾರು. ಸ್ವಂತ ಡ್ರೈವಿಂಗ್ ಅನುಭವ ಬೇಡ್ವೆ?' ಎಂದಳು.

ರಾಮರಾಯರು ದೊಡ್ಡದಾಗಿ ನಕ್ಕರು. 'ಅಬ್ಬಾ. ಎಷ್ಟು ಚೆನ್ನಾಗಿ ವಾದ ಮಾಡ್ತೀಯೇ ನೀನು. ನೀನೇ ಓಗೆ ಮಾತಾಡಿರ್ಬೇಕಾದ್ರೆ, ಆ ಸಾವಿತ್ರಿ ತನ್ನ ಗಂಡನಿಗಾಗಿ ಆ ಯಮನ ಹತ್ರ ಎಷ್ಟು ಚೆನ್ನಾಗಿ ವಾದಾ ಮಾಡಿರ್ಬೇಕು. ಆಯ್ತು—ನಿನ್ನ ಯುಕ್ತಿಗೆ ಮೆಚ್ಚಿದೆ. ತೊಗೊ ವರ ಕೊಟ್ಟಿದ್ದೇನೆ; ಹೊಸ ಕಾರು ಸ್ಯಾಂಕ್ಷನ್'.

ಶಾಲಿನಿ, ಸುಧಾ, ರಮೇಶ್ ಚಪ್ಪಾಳೆ ಹೊಡೆದು 'ಹೋ' ಎಂದು ಕೂಗಿದರು. ನಾಣಿ ಮಾವ ಚಪ್ಪಾಳೆಯಲ್ಲಿ ಸೇರಿಕೊಂಡರು. ರಘು ಆಶ್ಚರ್ಯದಿಂದ ತಂದೆಯನ್ನೆ ನೋಡಿದ.

ರುಚಿ

ಮೀಸೆ
ಚುಚ್ಚಿದಾಗಲೇ
ಅಲ್ಲವೆ ಸಲ್ಲ
ಮುತ್ತಿನ ರುಚಿ
ಹೆಚ್ಚುವುದು ?

● ಡಿ. ವಿ. ಬಡಿಗೇರ



ಗುಟ್ಟು—ರಟ್ಟು

ಕಳ್ಳತನದಲಿ ನಿನ್ನ
ಕೈಯ ಹಿಡಿದೆಳೆದರೆ,
ನಿನ್ನ ಬಳೆಗಳ ದನಿಯುದನು
ಬಯಲು ಮಾಡಿಬಿಡುವುದೇ ?

● ಎಂ. ಕೆ. ರಾಧಾ

ರಾಮರಾಯರು ಕೈ ಮೇಲಕ್ಕೆತ್ತಿ ಹೇಳಿದರು: 'ಶಾಂತಿ, ಶಾಂತಿ. ಆದ್ರೆ ನಾನು ಹಳೆ ಕಾರು ಬಿಡೊಲ್ಲ. ರಘು ಬೇಕಿದ್ರೆ ಹೊಸ ಕಾರು ಕೊಂಡ್ಕೊಬೌದು'. 'ಏನೊ ರಘು?' ನಾಣಿ ಮಾವ ಕೇಳಿದರು.

ರಘು ನಿಧಾನವಾಗಿ ಶಾಲಿನಿಯ ಮುಖವನ್ನೆ ನೋಡುತ್ತ ಹೇಳಿದ: 'ನನಗೇನೂ ಅಭ್ಯಂತರ ವಿಲ್ಲ. ಆದ್ರೆ ನಾನು ಇಂಥ ಪೆಡಂಭೂತಾನ ತೊಗೊಳ್ಳೊಲ್ಲ. ಚಿಕ್ಕದಾಗಿ–ಚೆನ್ನಾಗಿರೊ ಕಾರನ್ನ ಇಷ್ಟಪಡ್ತೀನಿ'–ಎಂದ.

ಎಲ್ಲರಿಗಿಂತಲೂ ತುಂಬಾ ಸಂತೋಷ ವಾಗಿದ್ದು ಶಾಲಿನಿಗೆ: 'ಓ ಗುಡ್. ಏನೊ. ಅಂತೂ ಈ ಮನೆಗೊಂದು ಹೊಸ ಕಾರು ಬರುತ್ತೆ. ಯಾರು ತೊಗೊಂಡ್ರೇನು?' ಎಂದಳು. 'ಹೊಸ ಕಾರು ಮನೆಗೆ ಬರ್ತಿದ್ದ ಹಾಗೆ, ಬೇಗ ಸೊಸೆನೂ ಬಂದ್ಬಿಡ್ಲಿ, ಏನೇ ಶಾಲಿ?' ಎಂದರು ಸೀತಾಬಾಯಿ. ಶಾಲಿನಿ ಜೋರಾಗಿ ನಗುತ್ತ ಹೇಳಿದಳು: 'ನಂಗೇನೂ ಅಭ್ಯಂತರವಿಲ್ಲ. ಆದ್ರೆ ನಾನು ಇಪ್ಪತ್ತನಾಲ್ಕು ಗಂಟೆ ಹೊರಗೆ ಓಡಾಡೋ ಗಂಡನ್ನ ಇಷ್ಟಪಡೊಲ್ಲ. ಬೆಳಗ್ಗೆ ಹೋಗಿ ಸಾಯಂಕಾಲ ಬರೊ ಗಂಡನ್ನು ಇಷ್ಟಪಡ್ತೀನಿ'.

ಮರು ಸಂಜೆ ರಘು–ಶಾಲಿನಿ ಇಬ್ರೇ ವಾಕಿಂಗ್ ಹೋಗಿ ಬಂದರು. ಆಗಲೇ ರಘು ಒಂದು ಮಾತು ಹೇಳಿದ: 'ಶಾಲಿ, ಈ ಕೂಡ್ಲೆ ಹೊಸ ಕಾರು ಕೊಂಡ್ಕೊಳ್ಳಿಕ್ಕೆ ಸಿಗೊಲ್ಲ. ನಾನು ಯಾವ್ದಾದ್ರೂ ಬ್ಯೂಟಿಫುಲ್ಲಾಗಿರೊ ಫಾರಿನ್ ಕಾರು ತೊಗೊಳ್ತೀನಿ. ಒಂದಿಷ್ಟು ಹಳೆಯ ದಾಗಿದ್ರೂ ಪರ್ವಾಗಿಲ್ಲ'–ಎಂದ. 'ನೋ ಅಬ್ಜೆಕ್ಷನ್' ಎಂದಳು ಶಾಲಿನಿ. (ಸಶೇಷ)

●

ನನ್ನೂರು ನನ್ನ ಜನ

ಬಿಜಾಪುರ ಜಿಲ್ಲೆ

ನಿಂಬಾಳಕ್ಕೆ ಬನ್ನಿ

ನೀವು ಹುಬ್ಬಳ್ಳಿ-ಸೋಲಾಪೂರ ನಡುವೆ ಮೀಟರ್‌ಗೇಜ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಬಿಜಾಪುರದ ನಂತರ 40 ಕಿ.ಮೀ. ಅಂತರದಲ್ಲಿ ನಿಂಬಾಳ ಎಂಬ ರೈಲು ನಿಲ್ದಾಣ ಕಾಣಿಸುತ್ತದೆ. ಅಲ್ಲಿ ನೀವೊಮ್ಮೆ ಇಳಿಯಿರಿ. ಆಗ ನಿಮಗೆ ಜಗತ್ಪ್ರಸಿದ್ಧ ತತ್ವಜ್ಞಾನಿಗಳಾದ ಶ್ರೀ ಗುರುದೇವರ ಆಶ್ರಮ ಕಾಣಿಸುತ್ತದೆ. ನೀವು ಆ ಆಶ್ರಮದಲ್ಲಿ ಪ್ರವೇಶಿಸಿದರೆ ಸಾಕು. ಎಲ್ಲಿಲ್ಲದ ಶಾಂತತೆ, ಮನಸ್ಸಿಗೆ ನೆಮ್ಮದಿ ಆ ಆಶ್ರಮದಲ್ಲಿ ಸಿಗುತ್ತದೆ. ಗುರುದೇವರ ಸಮಾಧಿ ಇರುವ ಈ ಸ್ಥಳದಲ್ಲಿ ಕುಳಿತರೆ ಮನಸ್ಸಿಗೆ ಮುದ ನೀಡುವ ಸುಂದರ ತಾಣ ಅದು ಎನಿಸುತ್ತದೆ. ಇಲ್ಲಿಗೆ ದೇಶ-ವಿದೇಶಗಳ ಆಧ್ಯಾತ್ಮ ಜೀವಿಗಳು ಶ್ರೀ ಗುರುದೇವರ ದರ್ಶನಕ್ಕಾಗಿ ಬರುತ್ತಾರೆ.

ನಿಂಬಾಳ ಸ್ಟೇಶನದಿಂದ ಒಂದು ಕಿ.ಮೀ. ದೂರದಲ್ಲಿ ನಿಂಬಾಳ ಊರಿದೆ. ಇಲ್ಲಿ ಪುರಾತನ ಕಾಲದ ಶಂಕರಲಿಂಗ ದೇವಸ್ಥಾನವಿದೆ. ಇದನ್ನು ಹೆಸರಾಂತ ಶಿಲ್ಪಿಗಳಾದ ಡಕಣಾಚಾರಿ-ಜಕಣಾಚಾರಿ ಕಟ್ಟಿದರೆಂದೂ, ಇದೇ ಅವರ ಪ್ರಪ್ರಥಮ ಗುಹಾಲಯ ಎಂದೂ ಹೇಳುತ್ತಾರೆ. ಜಕಣಾಚಾರಿ ಡಕಣಾಚಾರಿಗಳ ನಿಜವಾದ ಜನ್ಮಸ್ಥಳ 'ನಿಂಬಾಳ' ಎಂದೂ ಕೆಲ ಜನ ಹೇಳುತ್ತಾರೆ.

ಒಟ್ಟಿನಲ್ಲಿ ನೀವು ಬಿಜಾಪುರದ ಗೋಲಗುಮ್ಮಟ ನೋಡಿದಾಗ ಅಥವಾ ನೋಡಲು ಬಂದಾಗ ಶ್ರೀ ಗುರುದೇವರ ದರ್ಶನ ಪಡೆಯದೆ ಹಿಂದಿರುಗಬೇಡಿ, ಅದಕ್ಕಾಗಿಯೇ ಒಂದು ಸಲ ನಿಂಬಾಳಕ್ಕೆ ಭೇಟಿ ಕೊಡಿ.


● ಬಸವರಾಜ ಅ. ದಯಾಸಾಗರ

ಲತಾ, ನಿನಗೆ ನೆನಪಿದೆಯೆ, ಮಲೆನಾಡಿನ ದಟ್ಟ ಕಾಡುಗಳ ಮಧ್ಯೆ ಹಸಿರು ದುಪ್ಪಟಿ ಹೊದ್ದು ತಣ್ಣಗೆ ಮಲಗಿದ್ದ ಪುಟ್ಟ ಹಳ್ಳಿಯೊಂದರಲ್ಲಿ ನಾವು ಕಳೆದ ಆ ನಾಲ್ಕಾರು ವರ್ಷಗಳು!


ಪ್ರಪಂಚದ ನೋವು–ನಲಿವುಗಳ ವಿಚಾರ, ವಿಕಾರಗಳ ಸೋಂಕಿಲ್ಲದೆ ಹಕ್ಕಿಗಳಂತೆ ಹಾರಾಡುತ್ತಿದ್ದ ಸ್ವಚ್ಛ ಭಾವನೆಗಳ ಮುಕ್ತ, ಮುಗ್ಧ ಪರಿಸರ ಎಷ್ಟು ಚೆನ್ನಾಗಿತ್ತು. ನನಗೆ ಅನಿಸುತ್ತದೆ ಲತಾ, ಬಹುಶಃ ನೀನು ಒಂದನೇ ಕ್ಲಾಸಿನಿಂದಲೂ ನನ್ನ ಜೊತೆಯೇ ಇದ್ದೆಯೇನೋ ಎಂದು. ಏಕೆಂದರೆ ನನಗೇನು ಗೊತ್ತು–ನಾನು ಸರಿಯಾಗಿ ನಿನ್ನನ್ನು ನೋಡಿದ್ದೇ ಐದನೇ ಕ್ಲಾಸಿನಲ್ಲಿದ್ದಾಗ. ಅದೂ ಯಾಕೆ ಗೊತ್ತೆ? ಲೆಕ್ಕ ಹಾಕಿದರೆ ಏಳು–ಎಂಟನೇ ಕ್ಲಾಸಿನಲ್ಲಿ ಇರಬೇಕಾದ ವಾಸು, ಸೀತ, ಮೋನು ಇವರೆಲ್ಲ ಅದ್ಯಾವ ಮೋಹದಿಂದಲೋ ನಮ್ಮ ಕ್ಲಾಸಲ್ಲೇ ಉಳಿದು ಬಿಟ್ಟಿದ್ದರಲ್ಲ. ಅವರೆಲ್ಲ ತಮ್ಮೊಳಗೆ 'ಕಿಸಿ ಕಿಸಿ' 'ಪಿಸಿ ಪಿಸಿ' ಮಾಡುತ್ತಿದ್ದರೆ ನಾನೊಬ್ಬನೇ ದೂರ ಹೇಗೆ ಕುಳಿತಿರಲು ಸಾಧ್ಯವಿತ್ತು?. ನಾನೂ ಕಿವಿಗೊಟ್ಟೆ. ಮದುವೆ, ಗಂಡು–ಹೆಣ್ಣು, ತಬ್ಬಿಕೊಳ್ಳುವುದು, ಮಲಗಿಕೊಳ್ಳುವುದು, ಮಕ್ಕಳಾಗುವುದು... ಒಂದೇ ಎರಡೇ, ನನಗವೆಲ್ಲ ಅರ್ಥವಾದರೆ ತಾನೇ ನೆನಪಿಟ್ಟುಕೊಳ್ಳುವುದಕ್ಕೆ. ಆದರೂ ಇಷ್ಟು ಮಾತ್ರ ಹೇಳಬಲ್ಲೆ ಲತಾ–ಹುಡುಗ, ಹುಡುಗಿಯರ ನಡುವೆ ಯಾವುದೋ ಒಂದು ಅವ್ಯಕ್ತ ಆಕರ್ಷಣೆ ಇದೆ. ಅಲ್ಲದೆ ಇದು ಅನಿವಾರ್ಯವೂ ಹೌದು ಎಂಬುದನ್ನು ತಿಳಿದುಕೊಂಡುಬಿಟ್ಟೆ.

ಆಗಾಗ ಕ್ಲಾಸಿನಲ್ಲಿ ಮೇಷ್ಟ್ರಿಲ್ಲದಾಗ ವಾಸು, ಸೀತ ಇವರೆಲ್ಲ ತಮ್ಮ ತಮ್ಮ ಮೆಚ್ಚಿನ ಹುಡುಗಿಯರ ಬಗ್ಗೆ ಹೇಳಿಕೊಂಡು ಕನಸು ಕಾಣಲಾರಂಭಿಸಿದಾಗ, ನಾನು ಎಚ್ಚರಗೊಂಡೆ. ನನ್ನ ಸಂಗಾತಿಗಾಗಿ ಬಿಟ್ಟ ಕಣ್ಣುಗಳಿಂದ ಹುಡುಕ ತೊಡಗಿದೆ. ಆಗ ಅಲ್ಲವೇ ನಿನ್ನನ್ನು ಮೊದಲ ಸಾರಿ ಸರಿಯಾಗಿ ನೋಡಿದ್ದು. ಹತ್ತಾರು ಜನ ಹುಡುಗಿಯರ ನಡುವೆ ಎದ್ದು ಕಾಣುತ್ತಿದ್ದೆ ನೀನು. ಅಲ್ಲ ಲತಾ, ನೀನು ಆಗಲೇ ಎಷ್ಟು ಚಂದ ಇದ್ದೆ! ದುಂಡು ದುಂಡಾದ ಮುಖ, ಸದಾ ಮಿನುಗುವ ಮಂದಹಾಸ, ಕಣ್ಣಲ್ಲಿ ಹೊಮ್ಮುವ ತುಂಟತನ, ಲವಲವಿಕೆ. ನಾನು ನೋಡಿಬಿಟ್ಟೆ ಲತಾ, ಅಲ್ಲೇ ನಿಂತುಬಿಟ್ಟೆ! ಸತ್ಯ ಹೇಳಿಬಿಡಲೆ? ನಿನ್ನ ಆ ಜೋಡಿ ಬಟ್ಟಲುಗಣ್ಣುಗಳು ನನ್ನ ಸೆರೆ ಹಿಡಿದುಬಿಟ್ಟವು. ಅಂದಿನಿಂದ ನೀನು ನನ್ನವಳಾದೆ. (ನಾನು ನಿನ್ನವನಾದೆನೆ? ಯಾರಿಗೆ ಗೊತ್ತು? ಒಂದೋ ನಾನು ಕೇಳಬೇಕಿತ್ತು. ಇಲ್ಲವೇ ನೀನು ಹೇಳಬೇಕಿತ್ತು. ಎರಡೂ ಆಗಲಿಲ್ಲ; ಆಯಿತೆ?)


ಮತ್ತಿನ ದಿನಗಳಲ್ಲಿ ನಾವಿಬ್ಬರೂ ಮಾತಾಡಿದ್ದು, ನಕ್ಕಿದ್ದು, ಚರ್ಚಿಸಿದ್ದಕ್ಕೆ ಲೆಕ್ಕ ಇದೆಯೆ. ಒಂಭತ್ತು ಗಂಟೆಗೆಲ್ಲ ಶಾಲೆಯಲ್ಲಿ ಹಾಜರಾಗಿ ಕೇರಂ ಆಡುತ್ತಾ ಉಳಿದವರಿಗೆ ಅಸೂಯೆ ಹುಟ್ಟಿಸುತ್ತಿದ್ದ ಪರಿಯನ್ನು ಮರೆಯಲು ಸಾಧ್ಯವೆ? ಎಷ್ಟೇ



'ನಿನ್ನ ಒಂದು ಮೋಹಕ ನಗುವಿನಿಂದ ನಾನು ಎಲ್ಲ ಮರೆಯುತ್ತಿದ್ದೆ. ಹೊಸ ಹುಟ್ಟು ಪಡೆಯುತ್ತಿದ್ದೆ. ನಿನಗೋಸ್ಕರ ಎಂಥ ತ್ಯಾಗಕ್ಕಾದರೂ ಸಿದ್ಧನಾಗಿರುವಂತೆ ನನ್ನ ಮೈಮನಗಳಿಗೆ ಆದೇಶ ನೀಡಿದ್ದೆ...'



● ಎಂ. ದಿನೇಶ, ತೊಡಿಕಾನ



ಕಷ್ಟ; ಆದರೂ ರಾಣಿ (ಕೆಂಪು ಬಿಲ್ಲೆ)ಯನ್ನು ಮಾತ್ರ ನಾನೇ ಹೊಡೆದು ಕೊಳ್ಳುತ್ತಿದ್ದೆ. (ಏಕೆಂದರೆ ನೀನೇ ರಾಣಿ ತಾನೇ) ಎಷ್ಟೋ ಬಾರಿ ಬೊಗಸೆ ಗಂಗಳನ್ನು ಮತ್ತಷ್ಟು ಅರಳಿಸಿ, ತೊಂದರೆ ಕೊಡುವ ಜಡೆಗಳನ್ನು ಹಿಂದಕ್ಕೆಸೆಯುತ್ತಾ ಆಟದಲ್ಲಿ ತಲ್ಲೀನಳಾಗಿರುತ್ತಿದ್ದ ನಿನ್ನನ್ನೇ ನೋಡುತ್ತಾ ನಾನು ಸೋತುಬಿಟ್ಟಿದ್ದೇನೆ.

ನಿನಗೆ ಗೊತ್ತಿಲ್ಲದ ಲೆಕ್ಕಗಳನ್ನು ನಾನು ಹೇಳಿಕೊಡುತ್ತಿದ್ದುದಕ್ಕೆ ಪ್ರತಿಯಾಗಿ, ಆಯಾ ವಾರದ 'ಸುಧಾ'ದಲ್ಲಿನ ಡಾಬೂ, ಶೂಜ, ಆಜಾದ್, ಮಜನೂ ಇವರ ಸಾಹಸಗಳನ್ನು

ನೀನು ಹೇಳಬೇಕಿತ್ತು. ಮೈಯಾರೆ ಕಿವಿಯಾಗಿ ಕುಳಿತ ನನಗೆ, ನೀನು ಹಾವಭಾವಗಳಿಂದ ವಿವರಿಸುತ್ತಿದ್ದುದನ್ನು ನೋಡಿ ಸಹಿಸಲಾರದ ಕೆಲವರಿಂದ ಹೊಸ ಬಗೆಯ ಟೀಕೆ, ಆಕ್ಷೇಪ, ತಮಾಷೆಯ ನುಡಿಗಳು ಬಂದಾಗ ಮೊದಲ ಬಾರಿಗೆ 'ನಾನು ಎಲ್ಲಿ ತಪ್ಪಿದ್ದೇನೆ' ಎಂದು ವಿಶ್ಲೇಷಿಸಲು ಯತ್ನಿಸಿ ಸೋಲುತ್ತಿದ್ದೆ.

ನಿನಗೆ ಗೊತ್ತಿಲ್ಲ ಲತಾ, ಝಿರೀ... ಎಂದು ಸುರಿಯುತ್ತಿದ್ದ ಮಳೆ ನಿಲ್ಲುವುದನ್ನೇ ಕಾಯುತ್ತಿದ್ದ ನಾನು ಅರ್ಧ ಮಳೆಗೆ ನೆನೆಯುತ್ತಾ ಶಾಲೆಗೆ ಓಡಿ ಬರುತ್ತಿದ್ದದ್ದು. ಮತ್ತೆ ನೀನು ಬಣ್ಣಬಣ್ಣದ ಕೊಡೆ ಅರಳಿಸಿ ವಯ್ಯಾರದಿಂದ ಬರುವುದನ್ನು ಕಂಡು ನನಗೆ ಮೆಚ್ಚುಗೆಗಿಂತ ಅಸೂಯೆಯೇ ಹೆಚ್ಚಾಗಿತ್ತೇನೋ. ನನಗೆ ಕಡೆಗೂ ಗೊತ್ತಾಗಲಿಲ್ಲ, ಲತಾ ಅಷ್ಟು ದೊಡ್ಡ ಮನೆಯ ನೀನು ಹರಿದ ಚಡ್ಡಿ, ಅಂಗಿಗಳ ನನ್ನನ್ನು ಯಾಕೆ ಪ್ರೀತಿಯಿಂದ ಮಾತನಾಡಿಸುತ್ತಿದ್ದೆ ಎಂಬುದು. ಪಾಠದಲ್ಲಿ ಸ್ವಲ್ಪ ಹುಷಾರಿದ್ದಿರಬಹುದು ನಾನು—ಆದರೆ ನಿನಗಿಂತ ಕೆಳಜಾತಿಯವನಲ್ಲವೆ?

ಆ ದಿನ—ನೆನಪಿದೆಯೆ ಲತಾ. ನೆನೆದರೆ ನನ್ನ ಬಗ್ಗೆ ನನಗೇ ಮತ್ಸರವಾಗುತ್ತಿದೆ. ಅಂದು ಶನಿವಾರ. ಮಧ್ಯಾಹ್ನದ ವರೆಗೆ ಶಾಲೆ. ಮಾಸ್ತರು, ಹುಡುಗರು, ಹುಡುಗಿಯರೆಲ್ಲ ಕೊಡೆ ಬಿಡಿಸಿಕೊಂಡು ಹೊರಟೇ ಹೋದರಲ್ಲ. ನಾನು ಅಲ್ಲೇ ನಿಂತಿದ್ದೆ ಮೂಲೆಯಲ್ಲಿ. ಮಳೆ ಬಿಟ್ಟರೆ, ತಾನೇ. ಆಗ ನೀನು ಅಲ್ಲಿ ಬಂದೆ. ನಾನು ಅಂದುಕೊಂಡೆ—ಆಗ ತಾನೇ ಸಭೆಯಲ್ಲಿ ಶಾಲೆ ಮೇಲೋ, ಮನೆ ಮೇಲೋ ಎಂಬ ಚರ್ಚೆಯಲ್ಲಿ 'ಮನೆಯೇ ಮೇಲು' ಎಂದು ವಾದಿಸಿ ನಿನ್ನ ಸೋಲಿಸಿಬಿಟ್ಟಿದ್ದೆನಲ್ಲ—ಅದಕ್ಕೆ ಬಯ್ಯಲು ಬರುತ್ತಿದ್ದೀ ಅಂತ. ಆದರೆ, ನೀನು ನನ್ನ ಹೊಗಳಿಬಿಟ್ಟೆ. ಷೇಕ್ ಹ್ಯಾಂಡ್ ಕೊಟ್ಟೆ. ಮತ್ತೆ ಕೈ ಹಿಡಿದು ನಿನ್ನ ಕೊಡೆಯಲ್ಲೇ ನನ್ನನ್ನೂ ಕರೆದೊಯ್ದೆ. ಆಗ ಭಾರಿ ಮಳೆಯಾಗಿತ್ತಲ್ಲ. ಗುಡುಗು, ಸಿಡಿಲು, ಗಾಳಿ, ಮಳೆಗೆ ನಿನ್ನ ಬಣ್ಣದ ಕೊಡೆ ಮೇಲಕ್ಕೆ ಮಡಿಚಿಕೊಂಡಿತು. ನೀನು ಆದಷ್ಟು, ನನ್ನನ್ನು ಒತ್ತಿ ಹಿಡಿದುಕೊಂಡು ದೊಡ್ಡ ಮಾವಿನ ಮರದ ಕೆಳಗೆ ನಿಂತಿದ್ದೆ. 'ಆದಷ್ಟು ಬೇಗ ಮಳೆ ಬಿಡಲಿ ದೇವರೇ' ಎಂದು ಆಗಾಗ ದೇವಸ್ಥಾನದ ಕಡೆ ಕೈ ಮುಗಿಯುತ್ತಿದ್ದೆ. ಸುಮ್ಮನೆ ಗಡಗಡ ನಡುಗುತ್ತಿದ್ದ ನನ್ನ ಕಣ್ಣು ಅರಳಿದ್ದು ಏಕೆ ಗೊತ್ತೇ? ಚಿಟ್ಟೆ ಇತ್ತಲ್ಲ. ಬಣ್ಣದ ಚಿಟ್ಟೆ... ನಿನ್ನ ಎದೆಯ ಮೇಲೆ ಹಾರುತ್ತಿತ್ತು. ನಿನ್ನ ಬ್ಲೌಸ್‌ನ ಮೇಲಿದ್ದ ಆ ಚಿತ್ರ ಎಷ್ಟು ಚೆನ್ನಾಗಿತ್ತು!!

ನಾನೋ—ಎಲ್ಲಾ ಮರೆತು ಅದಕ್ಕೆ ಕೈ ಹಾಕಿಬಿಟ್ಟೆ.

ಆದರೆ ನೀನೂ—ಅದ್ಯಾಕೆ ಹಾಗೆ ನಕ್ಕುಬಿಟ್ಟೆ? ಕೆಂಪಾಗಿಬಿಟ್ಟೆ? ಅಪ್ಪಿಕೊಂಡು ಸಿಹಿಯಾದ ಮುತ್ತು ಕೊಟ್ಟೆ? ನೆನೆದರೆ ನನಗೆ ತುಂಬಾ ಖುಷಿಯಾಗುತ್ತಿದೆ ಲತಾ ಅಂದಿನಿಂದ ಪ್ರತಿದಿನ ನಿನ್ನ ನೋಡುತ್ತಿದ್ದೆ. ಮಾತಾಡುತ್ತಿದ್ದೆ. ಒಂದು ದಿನ ನೀನು ಶಾಲೆಗೆ ಬರದಿದ್ದರೆ ನಾನೆಷ್ಟು ಒದ್ದಾಡುತ್ತಿದ್ದೆ—ಗೊತ್ತೆ?

ಅವತ್ತು ಐಸ್‌ಕ್ಯಾಂಡಿಯವನು ಬಂದಿದ್ದ. ಎಲ್ಲರೂ ಜೇಬಿನಿಂದ ಝಣಝಣ ದುಡ್ಡು ತೆಗೆದು ಐಸ್‌ಕ್ಯಾಂಡಿ ಸುರ್‌ಸುರ್...ಅಂತ ತಿನ್ನುತ್ತಿದ್ದರು. ನನ್ನಲ್ಲಿ ದುಡ್ಡಿತ್ತೆ? ಕ್ಲಾಸಲ್ಲೇ ಕೂತಿದ್ದೆ—ಅಮರ ಚಿತ್ರಕಥೆ ಓದುತ್ತಾ. ಆಗ ನೀನು ಬಂದೆ. ಕ್ಯಾಂಡಿ ಚೀಪುತ್ತಾ, ಚಿಗರೆಯಂತೆ ಜಿಗಿಯುತ್ತಾ ಬಂದವಳು ಗಕ್ಕನೆ ನಿಂತೆ. ನಾನು ಮತ್ತೆ ಪುಟ ತಿರುಗಿಸುವುದರೊಳಗೆ ನೀನು ನನ್ನೆದುರು ಐಸ್‌ಕ್ಯಾಂಡಿ ಹಿಡಿದಿದ್ದೆ. ನನ್ನ ಕಣ್ಣಲ್ಲಿ ನೀರು ಬಂತು. (ಆದಷ್ಟು ಬೇಗ ದೊಡ್ಡವನಾಗಬೇಕು ಅಂದುಕೊಂಡೆ)

ಈ ಮಧ್ಯೆ ನಾನೊಂದು ಪದ್ಯ ಬರೆದಿದ್ದೆ—ನೆನಪಿದೆಯೆ. ಅದನ್ನು ನೀನೇ ಹಾಡಿ ಉದ್ಘಾಟಿಸಿಬಿಟ್ಟೆಯಲ್ಲ. "ಮೆರೆಯುತಲಿರುವುದು ನಮ್ಮಯ ಶಾಲೆ, ಮೆರೆವುದು ನೋಡಿ ಹೆಮ್ಮೆಯ ಶಾಲೆ..." ಆಗ ನನ್ನ ಸಂತೋಷ ಯಾರಿಗೆ ಹೇಳಲಿ. ಶಂಭು ಮಾಸ್ತರು, "ಇವನು ಮುಂದೆ ಒಬ್ಬ ಕವಿಯಾಗುತ್ತಾನೆ" ಅಂತ ಹೇಳಿದ್ದು ನಿಜತಾನೇ.

ನಾನು ಒಪ್ಪುತ್ತೇನೆ ಲತಾ, ಶಂಭು ಮಾಸ್ತರು ಒಳ್ಳೆಯವರೇ ಸರಿ. ಸಮಾಜ, ಲೆಕ್ಕ, ಹಿಂದಿ ಎಲ್ಲಾ ಚೆನ್ನಾಗಿ ಪಾಠ ಮಾಡುತ್ತಿದ್ದರು. ಆದರೆ ಅವರು ಮಾತುಮಾತಿಗೆ ನಿನಗೆ ಪ್ರಶ್ನೆ ಕೇಳುವುದು, ಹತ್ತಿರ ಕರೆದು ಅದು ಇದು ಕೇಳುವುದು, ಸುಮ್ಮ ಸುಮ್ಮನೆ ಆಫೀಸ್ ಕೋಣೆಗೆ ಕರೆದು ಪಕ್ಕದಲ್ಲೇ ನಿಲ್ಲಿಸಿಕೊಂಡು ಎಷ್ಟೋ ಹೊತ್ತು ನಗುನಗುತ್ತಾ ಮಾತಾಡುವುದು ನನಗೆ ಹಿಡಿಸೀತೆ? ಮುಳ್ಳಿನ ಮೇಲೆ ಕುಳಿತವನಂತೆ ಚಡಪಡಿಸುತ್ತಿದ್ದೆ

ನಾನು. ನನಗೆ ಗೊತ್ತು ಲತಾ, ನನ್ನ ಪ್ರೀತಿಯ ಮಾಸ್ತರನ್ನು ನಿನಗೋಸ್ಕರವೇ ದ್ವೇಷಿಸತೊಡಗಿದೆ.

ಆ ದಿನವನ್ನು ನೀನು ಮರೆಯುವುದಾದರೂ ಹೇಗೆ ಸಾಧ್ಯ? ಅಂದು ಲೆಕ್ಕ ಕ್ಲಾಸ್ ಆದ ಮೇಲೆ ಶಂಭು ಮಾಸ್ತ್ರ ಜೊತೆ ಆಫೀಸ್ ಕೋಣೆಗೆ ಹೋದವಳು ಎಷ್ಟೊತ್ತಾದರೂ ಹೊರಗೆ ಬರಲೇ ಇಲ್ಲ. ನಾನಾದರೂ ಎಷ್ಟೆಂದು ಕಾಯಲಿ. ಮೆಲ್ಲನೆ ಬಂದೆ. ಮುಚ್ಚಿದ್ದ ಬಾಗಿಲ ಬಳಿ ನಿಂತೆ. ಮಾತು, ನಗು, ನಗು, ಮಾತು...ಸ್ವಲ್ಪ ಹೊತ್ತು. ಮತ್ತೆ ಏಕೋ ನಿನ್ನ ಸದ್ದೇ ಇಲ್ಲ. ಅವರೇ ಸಣ್ಣದಾಗಿ ಮಾತಾಡುತ್ತಿದ್ದರು, ನಗುತ್ತಿದ್ದರು. ನನಗೆ ಎದೆ ಢವಢವ ಅನ್ನುತ್ತಿತ್ತು. 'ಲತಾ' ಎಂದು ಕರೆಯಲೆ ಅಂದು ಕೊಂಡೆ. ಮತ್ತೆರಡು ನಿಮಿಷ ಉರುಳಿತು. ಆಗ ಒಮ್ಮೆಗೇ– ನೀನು ಚೀರಿಕೊಂಡೆಯಾ, 'ಅಮ್ಮಾ' ಎಂದೆಯಾ, 'ಬಿಡಿ ಬಿಡಿ' ಎಂದೆಯಾ, ಯಾರಿಗೆ ಗೊತ್ತು? ಒಟ್ಟಿನಲ್ಲಿ ನನಗೆ ತಡೆಯಲಾಗಲಿಲ್ಲ. ಬಾಗಿಲನ್ನು ಧಡಾರನೆ ದೂಡಿಕೊಂಡು ನಾನು ಒಳಗೆ ಬರಲಿಲ್ಲವೆ? ನಿನ್ನ ನಳಿದೋಳುಗಳನ್ನು ಹಿಡಿದು ಕೊಂಡಿದ್ದ ಶಂಭು ಮಾಸ್ತ್ರು ತಟ್ಟನೆ ಬಿಟ್ಟು ಬಿಡಲಿಲ್ಲವೆ? ನೀನು ಅಳುತ್ತಳುತ್ತಾ ಹೊರಗೋಡಿ ಬಂದದ್ದು, ತಕ್ಷಣ ನಾನೂ ಜಾಗ ಖಾಲಿ ಮಾಡಿದ್ದು ನೆನಪಿದೆಯೆ ನಿನಗಿನ್ನೂ?

ಮರುದಿನ ರಾದ್ಧಾಂತ ಆಯ್ತಲ್ಲ? ಶಾಲೆಯ ಗೋಡೆ, ಬಾವಿಕಟ್ಟೆ,... ಎಲ್ಲಾ ಕಡೆ ನಿನ್ನ ಹಾಗೂ ಮಾಸ್ತ್ರ ಹೆಸರು ಸೇರಿಸಿ ಪೋಲಿ ಪೋಲಿಯಾಗಿ ಏನೇನೋ ಬರೆದಿತ್ತಲ್ಲ. ನನಗೆ ಹೇಗೆ ಹೇಗೋ ಆಯಿತು. ಮತ್ತೆ ಅರ್ಧ ಗಂಟೆಯಲ್ಲೇ ನನಗೆ ಕರೆ ಬಂತು, ಹೆಡ್ ಮಾಸ್ತ್ರಿಂದ. ಅವರೆದುರು ನಿಂತಿದ್ದ ಶಂಭು ಮಾಸ್ತ್ರು ನನ್ನ ಕಡೆಗೆ ಕ್ರೂರವಾಗಿ ನೋಡಿ, "ಇವನದೇ ಸಾರ್ ಕೆಲ್ಸ. ಬಿಸಿ ತಾಗಿದರೆ ಬಾಯಿ ಬಿಡುತ್ತಾನೆ" ಎಂದು ಹೇಳಿ, ಮಾತಿಗೂ ಅವಕಾಶ ಕೊಡದೆ ಮುಖ, ಬೆನ್ನು, ಕೈ ಕಾಲು ನೋಡದೆ ಚೆನ್ನಾಗಿ ಬಾರಿಸಿ ಬಿಟ್ಟರು. ತಪ್ಪಿಲ್ಲದೆ, ಪೆಟ್ಟು ತಿಂದು ಕುಂಟುತ್ತಾ ಬರುತ್ತಿದ್ದ ನನಗೆ ಮೂಲೆಮನೆ ಚೆನ್ನ, ನಿನ್ನೆ ಸಂಜೆ ಅವನು ಎರಡಕ್ಕೆ ಹೊಳೆ ಬದಿಗೆ ಬಂದಿದ್ದಾಗ 'ಶಂಭು ಮಾಸ್ತ್ರು ಕೈಯಲ್ಲಿ ಮಸಿ ಹಿಡಿದುಕೊಂಡು ಗೋಡೆಯಲ್ಲಿ ಏನೇನೋ ಗೀಚುತ್ತಿದ್ದುದನ್ನು ಕಂಡೆ' ಅಂತ


ಈ ಟಿಕೇಟನ್ನು ಯಾಕೆ ಕೈಲಿ ಹಿಡಿದಿದ್ದೇನೆ...? ಈಗ ನೆನಪಾಯ್ತು! ಕಂಡಕ್ಟರ್‌ನಿಂದ ಚಿಲ್ಲರೆ ಪಡೆಯೋದಿತ್ತು!!

ಪಿಸುಗುಟ್ಟಿದ. ಆಗ ನನಗೆ ಎಲ್ಲ ಅರ್ಥ ವಾಯ್ತು. ದೊಡ್ಡವರ ಸಣ್ಣತನದ ಬಗ್ಗೆ ಹೇಸಿಕೆಯೂ ಆಯ್ತು. ಅದೇ ದಿನ ಸಂಜೆ ನನ್ನ ಮೈ ಮೇಲಿನ ಬಾಸುಂಡೆಯ ಮೇಲೆ ನೀನು ಮೃದುವಾಗಿ ಕೈಯಾಡಿಸಿದಾಗ ನನ್ನ ನೋವೆಲ್ಲಾ ಹಾರಿ ಹೋಯಿತು. ಲತಾ, ನಿನ್ನ ಒಂದು ಮೋಹಕ ನಗುವಿನಿಂದ ನಾನು ಎಲ್ಲ ಮರೆಯು ತ್ತಿದ್ದೆ–ಹೊಸ ಹುಟ್ಟು ಪಡೆಯುತ್ತಿದ್ದೆ. ನಿನ ಗೋಸ್ಕರ ಎಂಥ ತ್ಯಾಗಕ್ಕಾದರೂ ಸಿದ್ಧವಾಗಿರು ವಂತೆ ನನ್ನ ಮೈಮನಗಳಿಗೆ ಆದೇಶ ನೀಡಿದ್ದೆ. ಅಷ್ಟೊಂದು ಸಮರ್ಪಣಾ ಭಾವ, ಪ್ರೀತಿಯ ಉತ್ಕಟತೆ ಆಗಲೇ ಅದು ಹೇಗೆ ಬಂದಿತ್ತೋ?! ಅಂದ ಹಾಗೆ–ನಾನು ಒಮ್ಮೆಯೂ 'ಐ ಲವ್ ಯೂ' ಅನ್ನಲೇ ಇಲ್ಲ ಅಲ್ಲ? ಆದರೂ ನಾನು ಆಗಲೇ ನಿರ್ಧರಿಸಿಬಿಟ್ಟಿದ್ದೆ ನೋಡು, 'ಮದುವೆ ಯಾದರೆ ನಿನ್ನನ್ನೇ' ಅಂತ.

ಹಾಳಾದ್ದು, ಪರೀಕ್ಷೆ ಎಷ್ಟೊಂದು ಬೇಗ ಬಂದುಬಿಟ್ಟಿತ್ತು. ನಾವಿಬ್ಬರೂ ಪಾಸೂ ಆಗಿ ಬಿಟ್ಟೆವು. ಕೊನೆಯ ದಿನ ಏನಾಯ್ತು ಗೊತ್ತೆ? ಗಂಟೆಗಟ್ಟಲೆ ಮಾತಾಡ ಬೇಕೆಂದಿದ್ದವನು ಮೂಕನಾಗಿ ಬಿಟ್ಟೆ. ನೀನು ನನ್ನನ್ನು, ನಾನು ನಿನ್ನನ್ನು ನೋಡುತ್ತಾ ನಿಂತಿದ್ದೆವು ಸುಮಾರು ಹೊತ್ತು. ಮತ್ತೆ ನೀನೇ ಕೈ ಬೀಸಿ ಟಾಟಾ ಮಾಡಿದೆ. ನನ್ನ ಕೈ ಮಣಭಾರವಾಗಿತ್ತು.

ಆಮೇಲೆ ನೀನು ಬಹಳ ಅಪರೂಪವಾಗಿ ಬಿಟ್ಟೆ. ನಾನು ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಹೋದರೆ, ನೀನು ಅಲ್ಲೇ ಎಲ್ಲೋ ಒಂದು ಕಡೆ ಸೇರಿಕೊಂಡೆಯಂತಲ್ಲ. ಊರಿಗೆ ಬಂದಾಗಲೆಲ್ಲ ನಿನ್ನ ಬಗ್ಗೆ ಸುಳಿಯುವ ಮಾತು ಗಳಿಗೆ ಕಿವಿಯಾಗುತ್ತಿದ್ದೆ.

'ಲತಾ ಪುತ್ತೂರಲ್ಲಿ ಓದುತ್ತಿದ್ದಾಳಂತೆ'

'ಅಬ್ಬ! ಎಷ್ಟು ಬೇಗ ಬೆಳೆದುಬಿಟ್ಟಿದ್ದಾಳೆ! ಈಗ ಭಾರಿ ಜಂಬ ಅಂತೆ' ಹೀಗೆ ಹಲವಾರು.

ಆ ಮೇಲಿನ ನಾಲ್ಕು ವರ್ಷಗಳಲ್ಲಿ ನೀನು ಕಾಣ ಸಿಕ್ಕಿದ್ದು ಎರಡೇ ಎರಡು ಬಾರಿ. ಒಮ್ಮೆ ಜಾತ್ರೆಯ ಜನ ಜಂಗುಳಿಯಲ್ಲಿ ನನ್ನ ಕಣ್ಣಿಂದ ತಪ್ಪಿಸಿ ಕೊಂಡು ನುಸುಳಿ ಹೋಗಿದ್ದೆ. ಇನ್ನೊಮ್ಮೆ 'ರತಿ ಕಲ್ಯಾಣ' ಯಕ್ಷಗಾನಕ್ಕೆ ಬಂದವಳು ನನ್ನ ನೋಡಿ ಮುಗುಳ್ನಕ್ಕಿದ್ದೆ. ನೀನೇ ನನ್ನ ಶಾಲೆ, ಓದಿನ ಬಗ್ಗೆ ವಿಚಾರಿಸಿದ್ದೆ. ನಾನು ಬಾಯಿ ಬಿಟ್ಟಿದ್ದೇನೆ? ಅಚ್ಚರಿಯಿಂದ ಮಾತು ಬಂದರೆ ತಾನೇ! ಎಷ್ಟು ಸೊಂಪಾಗಿ ಬೆಳೆದಿದ್ದೆ ನೀನು! ನನ್ನ ಕಣ್ಣುಗಳಿಗೇ ವಂಚಿಸುವಷ್ಟು!! ಬಿಳಿಯ ಮೈಬಣ್ಣ, ಉಬ್ಬಿ ನಿಂತ ಕುಚದ್ವಯಗಳು, ಮುಖದಲ್ಲಿ ಲಜ್ಜೆ,

ಕವಿಗೋಷ್ಠಿಯ ಒಂದು ಸಂಜೆ

ಕವಿಗೋಷ್ಠಿಯ ಸಂಜೆ ಸಭಾಭವನದ ಸುತ್ತ
ಕುತೂಹಲದ ಉತ್ಸಾಹದ ಉತ್ಸವದ ಕಣ್ಣುಗಳು
ವ್ಯವಹಾರದ ಗಾಂಭೀರ್ಯದ ತಾತ್ಸಾರದ ಕಣ್ಣುಗಳು
ಬಗಲಲ್ಲಿನ ಚೀಲದಿಂದ ಹೆಡೆಯೆತ್ತುವ ಕವಿತೆಗಳು.

ಆಟವಾಡುತ್ತಾ ಕವಿಗಳು ಪದಗಳ ಕೂಡ ಎಸೆಯುತ್ತಾರೆ
ಸಂಕೇತ ಪ್ರತಿಮೆ ಪ್ರತೀಕಗಳ ಹರಿತ ಚೂರಿಗಳ
ಹಾಸ್ಯ ವ್ಯಂಗ್ಯದ ಕುಟುಕು ಕೊಂಡಿಗಳ
ಅಲಂಕಾರದ ಸಂಖ್ಯ ವೈಭವೋಪೇತ ಆಭರಣಗಳ.

ಚುಚ್ಚುವ ಕಚ್ಚುವ ಸಿಡಿಯುವ ಕವಿತೆಗಳು
ರೇಗಿಸುವ ಬೆಚ್ಚಿಬೀಳಿಸುವ ಕವಿತೆಗಳು
ಶೃಂಗಾರ ಕನಸುಗಳ ಬಿಚ್ಚುವ ಕವಿತೆಗಳು
ಬಿಕ್ಕುವ ಉಕ್ಕುವ ನೆನಪ ಖಜಾನೆಗೆ ಕೈಯಿಕ್ಕುವ ಕವಿತೆಗಳು
ಸಂಕೀರ್ಣತೆಯ ಹಾಸು ಹೊಕ್ಕುಗಳ ಹೆಣೆಯುವ ಕವಿತೆಗಳು.

ಚಿಂತನ ಮಂಥನ ಗರಿಬಿಚ್ಚಿದ ಕಲ್ಪನೆ ನಡುವೆ
ಏಳುತ್ತವೆ ನೋವಿನ ನಲಿವಿನ ತೆರೆ
ಅಲುಗುತ್ತದೆ ಮೆಲ್ಲನೆ ಕಾಲದ ಕೆರೆ...

ಅನುರಣಿಸುತ್ತದೆ ಎಲ್ಲ ನಾಲ್ಕು ಗೋಡೆಗಳ ನಡುವೆ
ಪ್ರತಿಮೆಗಳಂತೆ ಕುಳಿತ ಹತ್ತಾರು ಹೃದಯಗಳಲ್ಲಿ
ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕ ಹಾಗೆ.

ಒನಪು ವಯ್ಯಾರ, ನಡಿಗೆಯಲ್ಲಿ ತೂಕ, ಬಾಚಿ ಕಟ್ಟಿದ ತಲೆಕೂದಲು. ಅವೇ ಜೋಡಿ ಬಟ್ಟಲು ಗಣ್ಣುಗಳು. ನನಗೂ ಪ್ರಪಂಚದ ಅರಿವಾಗುತ್ತಿತ್ತು. ಇದು ಸುಳ್ಳಲ್ಲ ಲತಾ, ನೀನು ಬಹಳ ಚಂದ ಇದ್ದೀ!

ನೀನಂತೂ ಮಾತಿಗೆ ಸಿಗಲೇ ಇಲ್ಲ. ನನ್ನನ್ನು ಹುಚ್ಚನನ್ನಾಗಿಸಿ ಮರೆಯಾಗಿಬಿಟ್ಟೆ. ವರ್ಷಗಳು ಎಷ್ಟೆಷ್ಟು ಬೇಗ ಉರುಳುತ್ತವೆ. ನಾನು ಪಿ.ಯು.ಸಿ.ಗೆ ಕಾಲೇಜು ಸೇರಿದೆ. ನೀನು ನನ್ನೊಳಗೆ ಸೇರಿಕೊಂಡು ಬಹಳ ತೊಂದರೆ ಕೊಡುತ್ತಿದ್ದೆ. ನಿನ್ನದೇ ನೆನಪಿನಲ್ಲಿ ಇನ್ನ್ಯಾರನ್ನೂ ಸರಿಯಾಗಿ ನೋಡಲೇ ಇಲ್ಲ. ನನ್ನ ಬಳಿಗೇ ಬಂದ ಬಣ್ಣದ ಬೆಡಗಿಯರನ್ನೆಲ್ಲಾ ತಿರಸ್ಕರಿಸಿಬಿಟ್ಟೆ.

ಆ ಸರ್ತಿಯ ಅಕ್ಟೋಬರ್ ರಜೆಯಲ್ಲಿ ಊರಿಗೆ ಬಂದಾಗ ಆಘಾತ ಕಾದಿತ್ತು. ಮಾಮೂಲಿ ಯಾಗೇ ಹೊರಬಿದ್ದ ಸಂಗತಿ ನನ್ನೆದೆಗೆ ಕೊಳ್ಳಿ ಇಟ್ಟಿತ್ತು "ಲತಾಗೆ ಮದುವೆಯಂತೆ."

ನನಗೆ ಏನೊಂದೂ ಅರ್ಥವಾಗಲಿಲ್ಲ. ಅಷ್ಟೊಂದು ಹಚ್ಚಿಕೊಂಡಿದ್ದು ಕೂಡ ನನ್ನನ್ನು 'ನಗಣ್ಯ'ನಾಗಿಸಿ ಯಾರೂ ಅಲ್ಲದ ಇನ್ನೊಬ್ಬನ

ಆಮೇಲೇನು?—ಪದಗಳು ಚೆದರುತ್ತವೆ ನೆರಿಗೆಗಳು
ಸಡಿಲುತ್ತವೆ ಕನಸುಗಳು ಕದಲುತ್ತವೆ
ಸಿಗರೇಟಿನ ಟೀ ಕಪ್ಪಿನ ಓಡಾಟದ ನಡುವೆ
ಸ್ಕೂಟರುಗಳ ಟಾಟಾ ಸೀ ಯೂಗಳ ನಡುವೆ.

೨

ಹೊರಗೆ
ಸಂಜೆಯ ಕೆಂಪು ನಿಧಾನ ಮಾಸುತ್ತ
ವಿಧ ವಿಧ ವಿಹಗಸ್ವನಗಳು ಕುಗ್ಗುತ್ತ
ಗೂಡುಗಳು ತುಂಬಿ ಬೆಚ್ಚಗಾಗುತ್ತವೆ
ದಣಿದ ಹಗಲಿಗೆ ಸಾಂತ್ವನ ಹೇಳುವ ಹಾಗೆ
ನಿರಭ್ರ ಆಕಾಶ ವಿಸ್ತಾರಕ್ಕೆ ತೆರೆದು ನಿರಾಳ
ಅರಳಿಸುತ್ತದೆ ಲಕ್ಷ ನಕ್ಷತ್ರಗಳ
ಮೌನದ ಗುಂಗು ಆವರಿಸಿ ತಬ್ಬುತ್ತದೆ
ಎಲ್ಲೋ ಉರಿಸಿಟ್ಟ ಅಗರುಬತ್ತಿಯ ಪರಿಮಳದ ಹಾಗೆ.

ಈಗ ಸದ್ದಿಗೇ ಭಯ. ಕೊಂಚ ಮುಲುಕಿದರೂ ಎಲ್ಲಿ
ಏನು ಕೆಡುವುದೋ ಎನ್ನುವ ಹಾಗೆ
ಉಸಿರು ಬಿಗಿ ಹಿಡಿದು ಕೆಡೆದಿದೆ
ಬೆಳದಿಂಗಳಿನ ಹುಚ್ಚು ಹೊನಲಿನ ಅಡಿಗೆ.

ಅದೇನು?—ಅಗೊ ಅಲ್ಲಿ, ಅಲ್ಲಿಯೇ
ನಿಧಾನಕ್ಕೆ
ಆಕಾರ ತಳೆದದ್ದು
ವನವೇ ಕ—
ವನವೇ?

● ಸುಬ್ರಾಯ ಚೊಕ್ಕಾಡಿ



ಹಿಂದೆ ಹೋಗಲು ನಿನ್ನ ಮನಸ್ಸಾಕ್ಷಿ ನಿಜಕ್ಕೂ ಒಪ್ಪಿತೆ? ನಾನಲ್ಲದ ಇನ್ನೊಬ್ಬರೊಡನೆ ನಿನ್ನನ್ನು ಖಂಡಿತಾ ಊಹಿಸಿಕೊಳ್ಳಲಾರೆ, ಲತಾ, ಇಲ್ಲ, ನೀನು ನನ್ನನ್ನು ಅನಾಥನಾಗಿ ಮಾಡಿಬಿಟ್ಟೆ.

ನಿನ್ನ ಮದುವೆಯ ದಿನ ಹತ್ತಿರ ಬಂದಂತೆ ನನ್ನ ಚಡಪಡಿಕೆ ಹೆಚ್ಚಾಯಿತು. ನನ್ನನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಕಷ್ಟವಾಯಿತು. ನನ್ನ ಲತಾಳ ಮದುವೆಗೆ ನಗು ನಗುತ್ತಾ ಬಂದು, ಹೊಟ್ಟೆ ತುಂಬಾ ಊಟ ಮಾಡಿ ಹೋಗಬೇಕೆಂದು ಮಾಡಿಕೊಂಡಿದ್ದ ನಿರ್ಧಾರ ಹುಸಿಯಾಯಿತು.

ಆ ದಿನ ನಾನು ರಜೆ ಹಾಕಿ ಬಂದುಬಿಟ್ಟಿದ್ದೆ, ಲತಾ. ಏನಾದರೂ ಪವಾಡ ನಡೆಯುತ್ತದೋ ಎಂದು ಕಾದಿದ್ದೆ. ಮದುವೆ ಮಂಟಪಕ್ಕೆ ಬಂದು ನಿನ್ನ ಹಾರಿಸಿಕೊಂಡು ಹೋಗೋಣ ಎಂದು ಲೆಕ್ಕ ಹಾಕಿದ್ದೆ. ಆದರೆ—ನಾನು ಕಲ್ಲಾಗಿದ್ದೆ ಲತಾ. ಜಳಕದ ಹೊಳೆಯ ದಡದಲ್ಲಿದ್ದ ಕಲ್ಲುಗಳ ಜೊತೆ ಕಲ್ಲಾಗಿ ಕೂತುಬಿಟ್ಟಿದ್ದೆ. ಆ ದಿನ ಹರಿಯುತ್ತಿದ್ದ ನೀರಿನ ಜೊತೆ ನನ್ನ ಕಣ್ಣೀರಿನ ಪಾಲೂ ಬಹಳಷ್ಟಿತ್ತು.

ನಿನ್ನ ಮದುವೆಯ ಬ್ಯಾಂಡು, ವಾಲಗ ಭಾರಿ ಜೋರು ಕೇಳುತ್ತಿತ್ತು. ವಾಲಗ ಅಂತೂ ನನ್ನ ಕಿವಿಗೇ ಇಟ್ಟು ಊದಿದಂತೆ ಹಿಂಸೆ ಕೊಡುತ್ತಿತ್ತು. ನೀನು ಬಹಳ ಅತ್ತುಬಿಟ್ಟೆಯಂತೆ. ನಾನು ವಸಂತನ ಕೈಯಲ್ಲಿ ಕಳಿಸಿದ ರಾಧಾಕೃಷ್ಣರ ಚಿತ್ರವನ್ನು ಎದೆಗವಚಿಕೊಂಡೆಯಂತೆ? ನನ್ನನ್ನು ಕ್ಷಮಿಸಿಬಿಡು ಲತಾ, ನನಗಾಗಿ ಕಾದಿದ್ದೆಯೋ ಏನೋ. ಅಪ್ಪನಲ್ಲಿ, "ವಿಕಾಸ ಏನು ಮಾಡುತ್ತಾನೆ" ಎಂದು ಕೇಳಿದೆಯಂತೆ?! ಅಂದಿಗೆ ಮುಗಿಯಿತು ಲತಾ. ನಮ್ಮಿಬ್ಬರ ನಡುವೆ ಯಾರೋ ಒಬ್ಬ ಪರಕೀಯ ಬಂದನಲ್ಲ. ನನಗೋ ನಿನ್ನ ಮುದ್ದು ಮುಖ ಮೂಡಿ ಬಂದಂತೆ, ಬೊಗಸೆಗಂಗಳಲ್ಲಿ ಹೂನಗೆ ಮಿಂಚಿಸಿ ಕರೆದಂತೆ, ಇನ್ನೊಮ್ಮೆ ಮುಖ ತಿರುಗಿಸಿ ದೂರ... ಬಹಳ ದೂರ ಹೊರಟು ಹೋದಂತೆ ಅನಿಸಿ ಹೃದಯ ಹಿಂಡಿದಂತಾಗುತ್ತಿತ್ತು. ರಾತ್ರಿಯಿಡೀ ಹಾಸಿಗೆಯಲ್ಲಿ ಮುಖ ಹುದುಗಿಸಿ ಪುಟ್ಟ ಬಾಲಕನಂತೆ ಮನಸಾರೆ ಅತ್ತುಬಿಟ್ಟೆ.

ಇವೆಲ್ಲಾ ಯಾಕೆ ನೆನಪಾಯ್ತು ಗೊತ್ತೇ?

ಮೊನ್ನೆ ಮೊನ್ನೆ ಹೀಗೆ ಯಾರದೋ ಮನೆಗೆ ಹೋಗುವ ದಾರಿಯಲ್ಲಿ ನೀನು ಏಕಾಏಕಿ ನನ್ನೆದುರು ಬಂದುಬಿಟ್ಟೆ. ಏನೂ ಆಗದವರಂತೆ ಎಷ್ಟು ಚೆನ್ನಾಗಿ ಮಾತಾಡಿಸಿದೆ! ನಾನು ನಿನ್ನನ್ನು, ನನಗೆ ಮೋಡಿ ಹಾಕಿದ ನಿನ್ನ ಬೊಗಸೆಗಣ್ಣುಗಳನ್ನು ಎವೆಯಿಕ್ಕದೇ ದಿಟ್ಟಿಸುತ್ತಿದೆ. ಇಲ್ಲ ಲತಾ, ನೀನು ನನ್ನೆದುರು ನಿಲ್ಲಲೇ ಇಲ್ಲ. ಹೂ ಅರಳುವ ರೀತಿಯಲ್ಲಿ ಮುಗುಳುನಗೆ ಬೀರುತ್ತಾ ದೂರ ದೂರ ಹೋಗಿಬಿಟ್ಟೆ.

ಆದರೆ... ಹೋಗುವ ಮುಂಚೆ ಮತ್ತೊಮ್ಮೆ ನನ್ನನ್ನು ದಿಟ್ಟಿಸಿದ ಆ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಏನಿತ್ತು ಹೇಳು?

ಪ್ರೀತಿಯೆ, ಬೆದರಿಕೆಯೆ, ಸಂತಾಪವೆ, ದುಃಖವೆ???

ನಿಂತಲ್ಲೇ ಕಂಬವಾದ ನನ್ನನ್ನು ನೆನಪುಗಳೆಲ್ಲಾ ನುಗ್ಗಿ ಬಂದು ಅಲ್ಲಾಡಿಸಿದವು. ನಾನು ಚಡಪಡಿಸುತ್ತಾ, ನನಗೇ ಕೇಳಿಸದಂತೆ ಲೊಚಗುಟ್ಟಿದೆ: "ಲತಾ, ಐ ಲವ್‌ಡ್ ಯೂ".

ಉತ್ತರವೆಂಬಂತೆ ನಿನ್ನೆರಡು ಜಡೆಗಳು ಅತ್ತಿಂದಿತ್ತ ತುಯ್ದಾಡುತ್ತಾ ನಸುನಕ್ಕವು. ●

ಖೊಕ್ ಧಾರಾವಾಹಿ – 5

ಶಾಲಿನಿ



● ಎಂ. ಕೆ. ಗೋಪಿನಾಥ್

ಮನಸ್ಸಿನಲ್ಲಿ ಪುಟಿದೇಳುವ ವಿಕಾರ ಭಾವಗಳನ್ನು ಹಿಮ್ಮೆಟ್ಟಿಸಿ ಪ್ರಸನ್ನವಾದ ಮುಖವನ್ನು ಬಿಂಬಿಸುವುದರಲ್ಲಿಯಾಗಲಿ ಅಥವಾ ಮನಸ್ಸಿನಲ್ಲಿ ಉದಿಸಿ ಬರುವ ನೂರು ಮಧುರ ಭಾವಗಳನ್ನು ಬರೇ ಕಣ್ಣಾಡಿಸುವುದರಲ್ಲೇ ತೋರಬಲ್ಲ ಅದ್ಭುತ ಕೌಶಲ ಸ್ತ್ರೀವರ್ಗಕ್ಕೆ ದೈವದತ್ತವಾಗಿ ಬಂದಿರುವ ವರವೇ ಇರಬೇಕು.

'ಬಂದು ಒಂದೆರಡು ದಿನ ಇದ್ದುಹೋಗು', ಎಂದು ಶಾಲಿನಿಯ ತಾಯಿ ಜ್ಯೋತಿ ಡಾ। ಪ್ರತೀಕನಿಗೆ ಕಾಗದ ಬರೆದು ಹಾಕಿದ್ದಿದ್ದೇನೋ ನಿಜ. ಸರಿಯೆ. ಹಾಗೆ ಆಮಂತ್ರಿಸಲಿಕ್ಕೆ ಬಲವಾದ ಕಾರಣವನ್ನೇನೂ ಜ್ಯೋತಿ ಕೊಟ್ಟಿರಲಿಲ್ಲ. ಸಾಲದ್ದಕ್ಕೆ ಆ ಕಾಗದದಲ್ಲಿ 'ಕೂಡಲೇ ಬಾ' ಎಂದೂ ಬರೆದಿರಲಿಲ್ಲ. ಇದನ್ನೆಲ್ಲಾ ಲೆಕ್ಕಿಸಿ, 'ಕೊಳ್ಳೆಹೋಗುವುದೇನೂ ಇಲ್ಲ. ನಿಧಾನವಾಗಿ ಯಾವಾಗಲಾದರೂ ಹೋದರಾಯಿತು' ಎಂದುಕೊಂಡು ಪ್ರತೀಕ ಬರದೆ ಇದ್ದುಬಿಟ್ಟಾನೆಂಬ ಅಳುಕು ಜ್ಯೋತಿಗಿತ್ತು.

ಬ್ರೀಫ್‌ಕೇಸ್ ತೂಗಾಡಿಸುತ್ತಾ ಸಂಜೆಯ ಹೊತ್ತು ಊರಿನ ದೀಪಗಳೆಲ್ಲಾ ಒಮ್ಮೆಗೇ ಹೊತ್ತಿಕೊಳ್ಳುವಂತೆ ಬಂದಿಳಿದ ಪ್ರತೀಕನನ್ನು ಕಂಡದ್ದೇ ತಡ ಜ್ಯೋತಿಯ ಕಣ್ಣುಗಳು ಪ್ರಭೆ ತುಂಬಿಕೊಂಡು ಬೆಳಗಿದವು. ಆ ಹೊತ್ತಿನಲ್ಲಿ ತನ್ನಲ್ಲುಂಟಾದ ಹರ್ಷ ಆನಂದ ಸಂತೋಷ ಸಮಾಧಾನಗಳಿಗೆ ಯಥೇಷ್ಟವಾಗಿ ಸಂಭ್ರಮವನ್ನೂ ಬೆರಸಿ,

'ಬಾ ಪ್ರತೀಕ, ಬಾ. ನೀನೆಲ್ಲಿ ಬರದೇ ಇದ್ದುಬಿಡುತ್ತೀಯೋ ಅಂತ ಅಂಜಿಕೆ ಇತ್ತು. ಸದ್ಯ ಬಂದೆಯಲ್ಲ. ನನ್ನ ಕಾಗದ ಯಾವತ್ತು ಸೇರಿತು? ಮನೆಯವರೆಲ್ಲಾ ಕುಶಲವೆ?' ಎಂದು ಬಡಬಡಿಸತೊಡಗಿದಳು. ಡಾ। ಪ್ರತೀಕ ಅಚಾನಕವಾಗಿ ತಾನಾಗಿ ಬಂದಿರುವುದಲ್ಲ. ಇದರಲ್ಲಿ ತನ್ನ ಅಮ್ಮನ ಮಸಲತ್ತೇನೋ ಇದೆ ಎಂಬ ಶಂಕೆ ಶಾಲಿನಿಯ ಮನಸ್ಸನ್ನು ಪ್ರವೇಶಿಸಿತು, ಜ್ಯೋತಿ–ಪ್ರತೀಕರ ಮಾತುಕತೆಯಿಂದಾಗಿ.

ಸ್ವಭಾವತಃ ವಿನಯದ ಸಾಕಾರಮೂರ್ತಿಯಾದ ಡಾ। ಪ್ರತೀಕ ಜ್ಯೋತಿಯ ಅತ್ಯುತ್ಸಾಹದ ಪ್ರಶ್ನೆಗಳಿಗೆಲ್ಲಾ ಚುಟುಕಾಗಿ ಉತ್ತರಿಸುತ್ತಾ, ಜ್ಯೋತಿ ಶಾಲಿನಿಯರು ಕುಳಿತಿದ್ದ ಸೋಫಾದೆದುರು ಕುರ್ಚಿ ಎಳೆದುಕೊಂಡು ಕೂತ.

ಗೋಡೆ ಗಡಿಯಾರ ಸಂಜೆ ಐದೂವರೆ

ಉಡುಪಿಯಲ್ಲಿ ಕಂಡ ದಿವಾಕರ ಮತ್ತೆ ಬೆಂಗಳೂರಿನಲ್ಲಿ ಕಂಡಾಗ ಶಾಲಿನಿಗೆ ಆಶ್ಚರ್ಯ. ಅವನು ಶಾಲಿನಿಯ ಮನೆಗೂ ಬಂದು ಅವಳ ಹಾಡು ಕೇಳಿದ. ಆಗಲೇ, ಶಾಲಿನಿಯ ತಾಯಿ ಮುಂದಾಲೋಚನೆಯಿಂದ ನಂಟರ ಹುಡುಗ ಡಾ। ಪ್ರತೀಕನನ್ನು ಬರುವಂತೆ ಬರೆಯುತ್ತಾಳೆ. ಅವನು ಅನಿರೀಕ್ಷಿತವಾಗಿ ಎಂಬಂತೆ ಬಂದೂ ಬಿಡುತ್ತಾನೆ.



ಇವಳೇ ನಮ್ಮೂರ 'ಶಾಲಿ'ನಿ!

ಯಾದದ್ದನ್ನು ನವಿಲಿನ ಕೇಕೆಯ ಧ್ವನಿಯಲ್ಲಿ ಉಲಿಯಿತು. 'ಕೂತ್ಕೊಂಡು ಶಾಲಿನಿ ಜೊತೆ ಮಾತಾಡ್ತಿರು. ಕಾಫಿ ತರ್ತೇನೆ' ಎನ್ನುತ್ತಾ ಜ್ಯೋತಿ ಅಡಿಗೆಮನೆ ಕಡೆ ತೆರಳಿದರು.

ಇದೀಗ ಶಾಲಿನಿ—ಡಾ। ಪ್ರತೀಕರು ಎದುರು ಬದರಾದರು.

'ಎಲ್ಲಿಗೋ ಹೊರಡಲಿಕ್ಕೆ ಅಲಂಕಾರ ಮಾಡಿಕೊಂಡು ಸಿದ್ಧವಾದಂತಿದೆ ಶಾಲಿನಿ ರಾಣಿ ಸಾಹೇಬರು' ಎಂದು ಡಾ। ಪ್ರತೀಕ ಮಾತಿಗೆ ಮೊದಲು ಮಾಡಿದ, ಶಾಲಿನಿಯನ್ನು ತದೇಕ ದೃಷ್ಟಿಯಿಂದ ನೋಡುತ್ತಾ.

'ಸಂಗೀತ ಪಾಠಕ್ಕೆ ಹೊರಟಿದ್ದೆ. ಅಷ್ಟರಲ್ಲಿ ನೀವು ಬಂದಿರಿ'

'ಸಾರಿ ಫಾರ್ ದಿ ಡಿಸ್ಟರ್ಬೆನ್ಸ್ ಶಾಲಿನಿ ಮೇಡಮ್. ನನ್ನಿಂದಾಗಿ ನಿಮ್ಮ ಸಂಗೀತಾಭ್ಯಾಸ ನಿಲ್ಲೋದು ಬೇಡ. ಪ್ಲೀಸ್ ಕ್ಯಾರಿ ಆನ್. ನೀವು ಹೋಗಿಬನ್ನಿ' ಎಂದ ಡಾ। ಪ್ರತೀಕ. ಅಷ್ಟರಲ್ಲಿ ಕೈನಲ್ಲಿ ಕಾಫಿ ಟ್ರೇ ಹಿಡಿದುಕೊಂಡು ಬಂದ ಜ್ಯೋತಿ, ಶಾಲಿನಿಯನ್ನು ಕುರಿತು,

'ಡಾ। ಪ್ರತೀಕ ನಮ್ಮ ಮನೆಗೆ ಈ ದಿನದ ಮತ್ತು ನಾಳೆಯ ಬಹು ಮುಖ್ಯ ಅತಿಥಿ. ಅವರ ವಿಷಯ ನಿನಗೆ ಈಗಾಗಲೇ ಅಲ್ಪಸ್ವಲ್ಪ ತಿಳಿದಿರಬೇಕು. ಇನ್ನೂ ತಿಳಿಯಬೇಕಾದ್ದು ಇದೆ. ಅವೆಲ್ಲಾ ನಾಳೆ ನಾಡಿದ್ದರಲ್ಲಿ ನಿನಗೆ ತಿಳಿಯಲಿದೆ. ಸಂಗೀತದ ಕ್ಲಾಸು ಮುಗಿಸಿಕೊಂಡು ಬಾ ಹೋಗು' ಎಂದು ಮಗಳಿಗೆ ತಾಕೀತು ಮಾಡಿದರು.

ಈ ಅಮ್ಮನದು ಯಾಕೋ ಸ್ವಲ್ಪ ಅತಿಯಾಯಿತಲ್ಲವೆ ಎನಿಸಿತು ಶಾಲಿನಿಗೆ. ಅಲ್ಲ, ನಾನಿನ್ನೂ ಕಣ್ಣು ತೆರೆಯಲಿಕ್ಕೇ ಇಲ್ಲ. ಆಗಲೇ ನನ್ನನ್ನು ಈ ಪ್ರತೀಕನಿಗೆ ಕೊಟ್ಟು ಮದುವೆ ಮಾಡಿ ನನ್ನನ್ನು ಸಾಗಹಾಕಿಬಿಡಬೇಕೆಂಬ ಆತುರ ಈ ಅಮ್ಮನಿಗೆ. ನನಗೋ ಈ ಪ್ರತೀಕ ಬೇಡ ಅಂತಲ್ಲ. ಇನ್ನೊಬ್ಬರು ಬೇಕು ಅಂತಲ್ಲ. ನನ್ನ ಮನಸ್ಸು ಈ ಹಾಳು ಮದುವೆ ಎಂಬುದರ ಕಡೆ ಹರಿಯುತ್ತಲೇ ಇಲ್ಲ. ಇನ್ನೊಂದೆರಡು ವರ್ಷ ಹಾಯಾಗಿ ಓದಿಕೊಂಡು ಸಂಗೀತಾಭ್ಯಾಸ ಮಾಡಿಕೊಂಡು ಇದ್ದುಬಿಡೋಣ ಅಂತಲೇ ನನ್ನ ಮನಸ್ಸು. ಇಲ್ಲಿ ನೋಡಿದರೆ ಈ ಅಮ್ಮ ಡಾ। ಪ್ರತೀಕನನ್ನು ಮುಂದಿಟ್ಟುಕೊಂಡು ಏನೋ ಭಾನಗಡಿ ನಡೆಸಿಟ್ಟಿದ್ದಾಳೆ. ಅಮ್ಮನ ಸ್ವಭಾವ ಮೊದಲಿನಿಂದಲೂ ಹಾಗೆಯೇ. ನಿಧಾನ ಎಂಬುದು ಅವಳ ಜಾತಕಕ್ಕೆ ಬಂದೇ ಇಲ್ಲ. ದೋರೆಗಾಯಿಗಳ ತೊಟ್ಟಿನ ಭಾಗಕ್ಕೆ ಸುಣ್ಣ ಹಚ್ಚಿಯೋ ಅಥವಾ ಅವುಗಳನ್ನು ಒಣಹುಲ್ಲಿನಲ್ಲಿ ಹದುಗಿಸಿಟ್ಟೋ ಹಣ್ಣು ಮಾಡಲಿಕ್ಕೆ ಅವಸರ ಪಡುತ್ತಾರಲ್ಲ ಫಲವ್ಯಾಪಾರಿಗಳು ಆ ತೆರನ ಮರ್ಜಿ. ಎಂದೋ ಪ್ರಸ್ತಾಪ ಬಂತಂತೆ—'ನಮ್ಮ ಶಾಲಿನೀನ್ನ ನಿಮ್ಮ ಪ್ರತೀಕನಿಗೆ ತಂದುಕೊಳ್ಳೋದು ನಿಮಗಿಷ್ಟವಾ' ಅಂತ ಅಮ್ಮ ಪ್ರತೀಕನ ತಾಯಿಯನ್ನು ಕೇಳಿದರಂತೆ. ಆಕೆ ಆಗಲಿ ಅಂದರಂತೆ. ಅನ್ನದೆ ಏನು ಮಾಡಿಯಾರು? ಪ್ರತೀಕನೂ ನನ್ನನ್ನು ಎಂದೋ ನೋಡಿ ನನ್ನದೇ ಗುಂಗಿನಲ್ಲಿದ್ದನಂತೆ. ಅವರಮ್ಮ 'ಶಾಲಿನೀನ್ನ ಮಾಡ್ಕೊಳ್ತೀಯೇನೋ' ಎಂದೇಟಿಗೆ ಜಂಪ್ ಮಾಡುತ್ತಾ 'ಹೂಂ' ಎಂದರಂತೆ. ಹಾಗೆ ನೋಡಿದರೆ ಅಮ್ಮನ ಈ ಹಾರಾಟಕ್ಕೆಲ್ಲ ಅಪ್ಪನೇ ಕಾರಣ. ಅಪ್ಪ ಅಮ್ಮನಿಗೆ ತುಂಬ ಸ್ವಾತಂತ್ರ್ಯ ಕೊಟ್ಟುಬಿಟ್ಟಿದ್ದಾರೆ. ಇರಲಿ ಏನೇನಾಗುತ್ತೋ ನೋಡೋಣ. ಅಮ್ಮ ಪ್ರತೀಕನ ಕಡೆಗಿದ್ದರೆ ಅಪ್ಪ ನನ್ನ ಕಡೆಗಿದ್ದೇ ಇದ್ದಾರೆ.

ಹೀಗೆಲ್ಲಾ ಯೋಚಿಸುತ್ತಾ ಶಾಲಿನಿ ಸಂಗೀತ ಪಾಠಕ್ಕೆ ಹೊರಟಿದ್ದಳು. ಹಾದಿಯಲ್ಲಿ ಪುಟ್ಟ ಗಣಪತಿ ಗುಡಿ ಸಿಕ್ಕಿತು. ಶಾಲಿನಿ ಗಣಪತಿ ಯೆದುರು ಕೈಜೋಡಿಸಿ ನಿಂತು,

'ಈ ಸಲ ಈ ಪ್ರತೀಕ ಹಿಂದಿರುಗಿ ಹೋಗುವಂತೆ ಮಾಡಿಬಿಡಪ್ಪಾ ಗಣಪ. ನಾನು ನಿನ್ನ

ಎದುರು ನಿಂತು ಹತ್ತು ಹಾಡು ಹೇಳ್ತೀನಿ' ಎಂದು ಬೇಡಿಕೊಂಡು ಪಾಠಕ್ಕೆ ಹೋದಳು. ಅವಳ ಮನಸ್ಸು ಪಾಠದಲ್ಲಿ ನಿಲ್ಲಲೇ ಒಲ್ಲದು. ತನಗೇನೋ ಆಪತ್ತು ಒದಗಿದೆ. ಅದರಿಂದ ಪಾರಾದರೆ ಸಾಕು ಎನಿಸಿತ್ತು ಅವಳ ಮನಸ್ಸಿಗೆ.

ಕಾಟಾಚಾರಕ್ಕೆ ಸಾಪಾಸಾ ಹೇಳಿದ್ದಷ್ಟೆ ಸಂಗೀತದ ಕ್ಲಾಸ್‌ನಲ್ಲಿ ನಡೆದಿದ್ದು. ಕಾಲೆಳೆದುಕೊಂಡು ಮನೆಗೆ ಬರುವ ಹೊತ್ತಿಗೆ ಶಾಲಿನಿಗೆ ಆದ ದೊಡ್ಡ ಸಮಾಧಾನವೆಂದರೆ ತಂದೆ ಹರಿಪ್ರಸಾದರು ಮನೆಗೆ ಬಂದಿದ್ದದ್ದು. ಅವರೂ ಅವಳಿಗಾಗಿಯೇ ಕಾಯುತ್ತಿದ್ದಂತಿತ್ತು. ಮಗಳನ್ನು ಹಿತ್ತಲ ಕಡೆಗೆ ಕರೆದುಕೊಂಡು ಹೋಗಿ ಅವಳಿಗಷ್ಟೇ ಕೇಳುವಂತೆ,

'ಶಾಲಿನಿ, ನಿನ್ನ ಬಾಳಸಂಗಾತಿಯ ಆಯ್ಕೆಯ ವಿಷಯದಲ್ಲಿ ನಿನಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆನ್ನುವವ ನಾನು. ನಿಮ್ಮ ಅಮ್ಮ ಹಾಗಲ್ಲ. ಅವಳು ಹೇಳಿದ್ದೇ ನಡೆಯಬೇಕೆಂಬುದು ಅವಳ ಹಠ. ಡಾ। ಪ್ರತೀಕನನ್ನೂ ನಿನ್ನನ್ನೂ ಮುಖಾಬಿಲೆ ಮಾಡಿಸಿ ನೀನಾಗಿ ಮನಸಾರೆ ಪ್ರತೀಕನಿಗೆ ಒಲಿಯುವಂತೆ ಮಾಡುವ ಉದ್ದೇಶದಿಂದ ಪ್ರತೀಕನನ್ನ ಈ ಊರಿಗೆ ಬರಮಾಡಿದ್ದಾಳೆ. ಇಷ್ಟೊಂದು ಪಾರುಪತ್ಯ ನನಗೆ ಸರಿತೋರುತ್ತಿಲ್ಲ. ಈಗ ಸದ್ಯದಲ್ಲಿ ನಾನೇನೂ ಮಾಡುವಂತೆಯೂ ಇಲ್ಲ. ನಿನಗೆ ಪ್ರತೀಕ ಇಷ್ಟವಾದಾನೆಯೆ ?'

'ನಾನು ಅಷ್ಟೆಲ್ಲಾ ದೂರ ಯೋಚಿಸಿಯೆ ಇಲ್ಲ ಅಪ್ಪ'

'ಡೊಂಟ್‌ವರಿ. ನೀನೀಗ ಇಷ್ಟು ಮಾಡು. ಯಾವುದೇ ಕಾರಣಕ್ಕೂ ನೀನು ನಿಮ್ಮ ಅಮ್ಮನನ್ನಾಗಲಿ, ಡಾ। ಪ್ರತೀಕನನ್ನಾಗಲಿ ಅಸಂತುಷ್ಟಿಗೊಳಿಸಬೇಡ. ಆಮೇಲೆ ನೋಡೋಣ'

ಹರಿಪ್ರಸಾದರು, ಜ್ಯೋತಿ, ಡಾ। ಪ್ರತೀಕ, ಶಾಲಿನಿ ಮತ್ತು ಹರಿಪ್ರಸಾದ್ ದಂಪತಿಗಳ ಮಗ ಶೈಲೇಶ್ ಈ ಐವರೂ ಡೈನಿಂಗ್ ಟೇಬಲ್ ಮುಂದೆ ಕೂತಾಗ ರಾತ್ರಿ ಒಂಬತ್ತಾಗಿತ್ತು. ಜ್ಯೋತಿ ಸಂಭ್ರಮದಿಂದ ತಯಾರಿಸಿದ್ದ ಹಪ್ಪಳ ಸಂಡಿಗೆಗಳು ಆ ರಾತ್ರಿಯ ಸರಳವಾದ ಊಟಕ್ಕೆ ಹಿಮ್ಮೇಳದಂತಿದ್ದವು. ಡೈನಿಂಗ್ ಟೇಬಲ್ ಮುಂದೆ ನಡೆದದ್ದು ಊಟಕ್ಕಿಂತ ಮಾತೇ ಹೆಚ್ಚು. ಮಾತಿನ ಹೆಚ್ಚು ಭಾಗವನ್ನಾಡಿದವಳು ಜ್ಯೋತಿ. ನೇರವಾಗಿ ಶಾಲಿನಿಯ ವಿಷಯಕ್ಕೇ ಬರುತ್ತ ಜ್ಯೋತಿ ಹರಿಪ್ರಸಾದರಿಗೆಂದಿದ್ದಳು–

'ನೋಡಿ ಇನ್ನು ನಿಧಾನಿಸುವುದು ಬೇಡ. ಹೇಗೂ ಡಾ। ಪ್ರತೀಕ ಬಂದಿದ್ದಾನೆ. ಶಾಲಿನಿಯ ಮದುವೆ ವಿಚಾರ ಒಂದಿಷ್ಟು ಮಾತಾಡಿ ಮುಗಿಸಿಬಿಟ್ಟರೆ ನನಗೆ ಒಂದಿಷ್ಟು ನೆಮ್ಮದಿ ಸಿಕ್ಕುತ್ತೆ'

'ಹುಡುಗ ಹುಡುಗಿ ಒಬ್ಬರನ್ನೊಬ್ಬರು ನೋಡಿದ್ದಾರೆ ನಿಜ. ಒಂದೋ ಎರಡೋ ಮಾತುಗಳನ್ನೂ ಆಡಿದ್ದಾರು. ಅಷ್ಟು ಮಾತ್ರಕ್ಕೆ ಒಬ್ಬರನ್ನೊಬ್ಬರು ಅರಿತು ಅರ್ಥ ಮಾಡಿಕೊಂಡಂತಾಯಿತೆ. ಒಬ್ಬೊಬ್ಬರಲ್ಲಿ ಒಂದೊಂದು ನ್ಯೂನತೆ ಇರುತ್ತೆ ವಕ್ರತೆ ಇರುತ್ತೆ. ಹಾಗೆಯೇ ಒಬ್ಬೊಬ್ಬರಿಗೊಂದೊಂದು ವಿಶೇಷತೆಯೂ ಇರುತ್ತೆ.'

'ಯಾತರದೋ ಕಾಗೆಪುರಾಣ ಷುರುಮಾಡಿದಿರಲ್ಲ. ಏನು ಹೇಳ್ಬೇಕೋ ಅದನ್ನು ಅರ್ಥ ಆಗೋ ಹಾಗೆ ಹೇಳಿ'

ಹರಿಪ್ರಸಾದರಿಗೆ ಈ ರೇಜಿಗೆಯೇ ಬೇಕಾಗಿರಲಿಲ್ಲ. ಶಾಲಿನಿಯ ವಿಷಯಕ್ಕೆ ಸಂಬಂಧಿಸಿದ ಮಾತು ಮುಗಿದರೆ ಸಾಕಾಗಿತ್ತು ಅವರಿಗೆ.

'ನೀನು ಹ್ಯಾಗೆ ನಿರ್ಧರಿಸಿದರೂ ಅದಕ್ಕೆ ನನ್ನ ಒಪ್ಪಿಗೆ ಇದೆ' ಎಂದುಬಿಟ್ಟರು, ಹರಿಪ್ರಸಾದ್. ಬಹುಶಃ ಜ್ಯೋತಿಗೆ ಬೇಕಾಗಿದ್ದುದೂ ಇದೇ. ಅವರು ಕೂಡಲೇ ಆಡಳಿತ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು.

'ಶಾಲಿನಿ–ಡಾ। ಪ್ರತೀಕ–ನೀವು ಮುಂದೆ ದಂಪತಿಗಳಾಗುವವರು. ನಿಮ್ಮ ಭಾವೀ ವೈವಾಹಿಕ ಜೀವನದ ಸವಿಗನಸುಗಳನ್ನು....'

ಜ್ಯೋತಿಯ ಮಾತುಗಳನ್ನು ಆಲಿಸುತ್ತಾ ಈವರೆಗೆ ಬೆಪ್ಪಳಂತೆ ಕುಳಿತಿದ್ದ ಶಾಲಿನಿ ಜೋರಾಗಿ ನಗುತ್ತಾ ತಾಯಿಗೆಂದಳು–

"ಪರವಾಗಿಲ್ಲಮ್ಮ ನೀನು. ಒಂದು ಪೈಸೆ ಕೂಡ ಖರ್ಚು ಮಾಡದೇ ಒಂದೇ ನಿಮಿಷದಲ್ಲಿ ಮದುವೆ ಮುಗಿಸಿಬಿಟ್ಟೆಯಲ್ಲ, ಮಕ್ಕಳ ಬೊಂಬೆಯಾಟದ ಮದುವೆಯ ಹಾಗೆ."

ಆ ರಾತ್ರಿಯ ನಿದ್ದೆಯಲ್ಲಿ ಕನಸು ಕಾಣದವರೆಂದರೆ ಹರಿಪ್ರಸಾದ್ ಮತ್ತು ಶಾಲಿನಿ ಇಬ್ಬರೇ. ಹೆಚ್ಚು ಕನಸು ಕಂಡದ್ದು ಜ್ಯೋತಿ.

ಮರುದಿನ ಬೆಳಗಾಯಿತು. ಎಂಟೂವರೆ

ಹೊತ್ತಿಗೆಲ್ಲಾ ಡಾ। ಪ್ರತೀಕ ಡ್ರೆಸ್ ಮಾಡಿಕೊಂಡು ನಿಂತಿದ್ದ, ಶಾಲಿನಿಯೊಂದಿಗೆ ಊರು ಸುತ್ತಾಡಿ ಬರಲು ಸಿದ್ಧನಾಗಿ. ಡಾ। ಪ್ರತೀಕನ ಜೊತೆ ಊರು ಸುತ್ತಲು ಹೊರಡಬೇಕೆಂದು ಶಾಲಿನಿಗೆ ಜ್ಯೋತಿ ತಾಕೀತು ಮಾಡಿದಳು.

ಅಮ್ಮನ ಮಾತಿನಿಂದ ಶಾಲಿನಿಗೆ ಸಿಟ್ಟು ಬರುವುದರ ಬದಲಿಗೆ ತುಂಬ ಮುಜುಗರ ಉಂಟಾಯಿತು. ತಾನು ಒಮ್ಮೆ ಕೂಡ ಸರಿಯಾಗಿ ದೃಷ್ಟಿ ಬೀರಿ ನೋಡದಾತ ಈ ಡಾ। ಪ್ರತೀಕ. ಈಗ ಅವನೊಂದಿಗೆ ಸುತ್ತಾಡಲು ಹೋಗಬೇಕಂತೆ. ಅದೂ ಅವನ ನಲ್ಲೆಯೆಂಬ ಅವಧಾರಣೆ ಬೇರೆ ಹೊತ್ತು. ಖಂಡಿತವಾಗಿ ಈ ಅಮ್ಮನ ಮೇಲೆ ಹಿಂದಿ ಸಿನಿಮಾಗಳು ಗಾಢವಾದ ಪ್ರಭಾವ ಬೀರಿರುವುದು ನಿಜ. ಉತ್ತರ ಕ್ಷಣದಲ್ಲಿ 'ಆಯಿತಲ್ಲ. ಈ ಪ್ರತೀಕನ ಜೊತೆ ಹೊರಗಡೆ ಓಡಾಡಿ ಬಂದರೆ ಮುಳುಗಿ ಹೋಗುವುದೇನು. ನಾನೇನೂ ನೇರವಾಗಿ ಮದುವೆ ಮಂಟಪಕ್ಕೇ ಹೋಗುತ್ತಿಲ್ಲವಲ್ಲ' ಎಂದುಕೊಂಡಳು.

ತಿಳಿ ನೀಲಿ ಬಣ್ಣದ ತುಂಬು ತೋಳಿನ ಷರ್ಟ್ ಅನ್ನು ಬಾದಾಮಿ ಬಣ್ಣದ ಪ್ಯಾಂಟ್ ಒಳಕ್ಕೆ ಇನ್‌ಸರ್ಟ್ ಮಾಡಿ ತುಂಬ ಸರಳವಾಗಿ ಉಡುಪು ಧರಿಸಿದ್ದ ಡಾ। ಪ್ರತೀಕನನ್ನು ಅನುಸರಿಸಿ ಶಾಲಿನಿಯೂ ಸಾಲ್ವಾರ್-ಕಮೀಜ್‌ನ ಸರಳ ಉಡುಪಿಗೆ ಒಲಿದಳು. ಇಬ್ಬರೂ ಮನೆಯಿಂದ ಹೊರ ಬಂದಾಗ ಗಂಟೆ ಒಂಬತ್ತು.

'ಎಲ್ಲಿಗೀಗ?' ಪ್ರತೀಕನ ಪ್ರಶ್ನೆ.

'ನೀವು ಇಷ್ಟಪಡುವ ಕಡೆಗೆ' ಶಾಲಿನಿಯ ಚುಟುಕಾದ ಉತ್ತರ.

'ಯಾವುದಾದರೂ ಮೂವೀಗೆ ಹೋಗೋಣವೆ!'

'ಬೇಡಪ್ಪ. ಟಿ.ವಿ. ಸಿನಿಮಾಗಳಿಂದ ಬೋರಾಗ್ತಿರೋದೇ ಸಾಕು'.

'ಕಬ್ಬನ್ ಪಾರ್ಕ್‌ಗೆ ಹೋಗಿ ಐಸ್‌ಕ್ರೀಂ ತಿನ್ನೋಣವೆ?'

'.......'.

ಮೌನವು ಸಮ್ಮತಿ ಸೂಚಕ. ಶಾಲಿನಿಯ ಮೌನಕ್ಕಂತೂ ಡಾ। ಪ್ರತೀಕ ಅರ್ಥ ಮಾಡಿದ್ದು ಹಾಗೆ. ಇಬ್ಬರೂ ಆಟೋದಲ್ಲಿ ಕೂತು ಕಬ್ಬನ್ ಪಾರ್ಕ್‌ನಲ್ಲಿ ಬಂದಿಳಿದರು.

ಕಬ್ಬನ್ ಪಾರ್ಕ್‌ನ ಬಿದಿರುಮೆಳೆಯ ಬಳಿಯ ಹುಲ್ಲುಹಾಸಿನ ಮೇಲೆ ಕೂತದ್ದಾಯಿತು. ಪ್ರಣಯಪಕ್ಕಿಗಳು ಬಿಡುಬೀಸ್ಾಗಿ ಕುಳಿತು ಮನಸ್ಸಿನ ಪಾತಳಿಗಳಲ್ಲಿ ಹೂತು ಹೋದ ಅನಿಸಿಕೆಗಳನ್ನೆಲ್ಲಾ ನಿರ್ಭಿಡೆಯಿಂದ ಹೊರ ಹಾಕುತ್ತಾ ಪ್ರಣಯಾರಾಧನೆಯಲ್ಲಿ ತೊಡಗಲು ಪ್ರಶಸ್ತವಾದ ಸ್ಥಳ, ಕಬ್ಬನ್ ಪಾರ್ಕ್.

ಈ ಶಾಲಿನಿ–ಪ್ರತೀಕರಾದರೋ ಮಾತೇ ಆಡದೆ ಮೂಕರಂತೆ ಕುಳಿತಿದ್ದಾರೆ. ಇಬ್ಬರೂ ಮಾತಾಡಿಕೊಂಡು ಮೂಕರ ಪಾರ್ಟು ಅಭಿನಯಿಸುತ್ತಿದ್ದಾರೋ ಹ್ಯಾಗೆ?

ಮನೆ ಬಿಟ್ಟು ಹೊರ ಹೊರಟಲಾಗಾಯಿತು ಶಾಲಿನಿ ಹೆಚ್ಚು ಮಾತಾಡಲು ಇಷ್ಟಪಟ್ಟಂತೆಯೇ ಕಾಣಲಿಲ್ಲ ಡಾ। ಪ್ರತೀಕನಿಗೆ. ಶಾಲಿನಿ ಹೈಸ್ಕೂಲು, ಕಾಲೇಜುಗಳ ಚರ್ಚಾಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದ ಮಾತುಗಾತಿಯಾಗಿದ್ದರೂ ತೀರಾ ಸ್ವಂತದ್ದಾದ ಬದುಕಿನಲ್ಲಿ ಅಂತರ್ಮುಖಿ; ಮಾತಾಳಿಯಲ್ಲ. ಪ್ರತೀಕನಿಗೆ ಮಾತು ಇಷ್ಟ. ಅದರಲ್ಲೂ ಗೆಜ್ಜೆಯುಲಿಯ ನಾದದಂತೆ ಮಾತಾಡುತ್ತಿದ್ದ ಸೌಂದರ್ಯದ ಖನಿ ಶಾಲಿನಿ ಮಾತಾಡಲಿ ಎಂದು ಪ್ರತೀಕನ ಅಪೇಕ್ಷೆ.

ಶಾಲಿನಿ ಮೌನವಹಿಸಿ ಬಿಟ್ಟಿದ್ದಾಳೆ. ಗಾಢವಾದ ಮೌನ. ಕಗ್ಗತ್ತಲಿನಂಥದು. ಕೊನೆಗೆ ಪ್ರತೀಕನೇ ಮೌನ ಮುರಿಯಬೇಕಾಯಿತು.

'ಬ್ಯೂಟಿಫುಲ್' ಎಂದು ಪ್ರತೀಕ ಉದ್ಗರಿಸಿದ.

'ಯಾರು? ನಾನೆ?' ಎಂದು ಶಾಲಿನಿಯ ಪ್ರಶ್ನೆ.

'ಅಲ್ಲ. ಈ ಮೌನ' ಎಂದ ಪ್ರತೀಕ, ಚೇಷ್ಟೆಯ ಧ್ವನಿಯಲ್ಲಿ.

'ಹೋ ಇನ್ನೇನಪ್ಪ ಗತಿ' ಎಂದು ರೋಧಿಸುವ ದನಿಯ ಅನುಕರಣೆಯಲ್ಲಿ ತಲೆಗೆ ಕೈನ ಆಸರೆ ಕೊಟ್ಟು, ತಲೆ ಮೇಲೆ ಕೈ ಹೊತ್ತ ಭಂಗಿಯಲ್ಲಿ ಕುಳಿತಳು, ಶಾಲಿನಿ.

'ಅಳೋ ಅಂಥದು ಏನಾಯ್ತು? ನಾನು ಸಂಯಮದಿಂದಲೇ ಕೂತಿದ್ದೀನಲ್ಲ' ಎಂದ ಡಾ। ಪ್ರತೀಕ.

'ನೀವೇನೋ ಸಂಯಮದಿಂದಲೇ ಕೂತಿದ್ದೀರಿ ಕಣಪ್ಪ. ಅದಕ್ಕಾಗಿ ವಂದನೆಗಳು ಕೂಡ ತಕ್ಕೊಳ್ಳಿ ಮಾರಾಯರೆ. ಮೌನವನ್ನು ಹೊಗಳುವ ಭರದಲ್ಲಿ ನನ್ನನ್ನು ಬ್ಯೂಟಿಫುಲ್ ಅಲ್ಲ ಎಂದು ಬಿಟ್ಟಿರಲ್ಲ. ನನಗೆ ಇಂಥ ಅವಮಾನ ಎಂದೂ ಆಗಿಲ್ಲ. ನಡೆಯಿರಿ ಮನೆಗೆ ಹೋಗೋಣ'.

'ಮನೇಲೇನು ಮಾಡ್ತೀರಿ? ಅಮ್ಮನಿಗೆ ಹೇಳಿ ನನ್ನನ್ನು ಹೊಡೆಸ್ತೀರಾ?'.

'ಹೊಡೆದರೂ ಜಗ್ಗೋ ಕುಳದ ತರಹ ಕಾಣಿಸ್ತಿಲ್ಲ ನೀವು'.

ಶಾಲಿನಿ ಮಾತು ಬಲ್ಲವಳು. ಅವಳು ಅದನ್ನು ಚುಚ್ಚುಗೋಲಾಗಿ ಉಪಯೋಗಿಸಿ ಪ್ರತೀಕನನ್ನು ಛೇಡಿಸಿದಳು. ಪ್ರತೀಕನೂ ಮಾತು ಬಲ್ಲವನೆ. ಅವನದನ್ನು ಚೇಷ್ಟೆಯ ಅಸ್ತ್ರವಾಗಿ ಪ್ರಯೋಗಿಸುತ್ತಿದ್ದ ಶಾಲಿನಿಯ ಮೇಲೆ.

ಶಾಲಿನಿಗೆ ತನ್ನನ್ನು ಕೊಡಬೇಕೆಂದು ಜ್ಯೋತಿ ಯೋಚಿಸಿದ್ದದ್ದೂ, ಈ ಏರ್ಪಾಟಿಗೆ ತನ್ನ ತಾಯಿ ತಂದೆಗಳ ಪರೋಕ್ಷ ಒಪ್ಪಿಗೆ ಇದ್ದದ್ದೂ ಡಾ। ಪ್ರತೀಕನಿಗೆ ಗೊತ್ತಿತ್ತು. ಹರಿಪ್ರಸಾದರ ಮನಸ್ಸು ಹೇಗೋ ಪ್ರತೀಕನಿಗೆ ತಿಳಿದಿರಲಿಲ್ಲ. ಶಾಲಿನಿಯನ್ನು ವರಿಸಲು ಪ್ರತೀಕ ಸಿದ್ಧನಾಗಿಯೂ ಇದ್ದ. ಆದರೂ ಮದುವೆಯಂಥ ವಿಚಾರದಲ್ಲಿ ಊರಿಗೆ ಮುಂಚೆ ನಿರ್ಧಾರ ಮಾಡಿಕೊಂಡು ಮನಸ್ಸಿನ ಮಂಡಿಗೆಯನ್ನು ಚಪ್ಪರಿಸುವುದು, ಅತಿ ರಂಜಿತ ಕಲ್ಪನಾ ವಿಲಾಸದಲ್ಲಿ ವಿಹರಿಸುವುದು, ಕೊನೆಗೆ ದೈವವೇ ಬೇರೊಂದು ಬಗೆದು ಎಲ್ಲಾ ಠುಸ್ಸೆಂದುಬಿಡುವುದು, ಸಂಬಂಧಿಸಿದ ಎಲ್ಲರ ಮನಸ್ಸಿನಲ್ಲಿ ಹಾಲಾಹಲ ತುಂಬಿಕೊಳ್ಳುವುದು ಮುಂತಾದ ವಿಷಯಗಳಿಗೆ ಪ್ರತೀಕ ವಿರೋಧಿಯಾಗಿದ್ದ. ಇದೇ ಕಾರಣಕ್ಕೆ ಡಾ। ಪ್ರತೀಕ ಪ್ರತಿ ಹೆಜ್ಜೆಯನ್ನೂ ಎಚ್ಚರಿಕೆಯಿಂದಲೇ ಇಡುತ್ತಿದ್ದ; ಆಡುತ್ತಿದ್ದ; ಪ್ರತಿ ಮಾತನ್ನೂ ತೂಕ ಮಾಡಿ ಆಡುತ್ತಿದ್ದ. ಪ್ರಸ್ತುತ ಈ ದಿನ ಶಾಲಿನಿಯ ಮನಸ್ಸನ್ನು ಸ್ವಲ್ಪವಾದರೂ ಅರಿಯಬಹುದೆಂಬ ಆಸೆಯಿಂದ—ಹುರುಪಿನಿಂದ ಎನ್ನುವುದು ಸರಿ—ಬಂದಿದ್ದ ಪ್ರತೀಕನಿಗೆ ಶಾಲಿನಿಯಿಂದ ಯಾವ ಸೂಚನೆಯೂ ಸಿಗದೆ ದಂ ಸ್ವಲ್ಪ ಇಳಿದುಬಿಟ್ಟದ್ದೇನೋ ಹೌದು. ಈ ನಿಮಿಷದಲ್ಲಿ ಅವನು ಶಾಲಿನಿಯನ್ನು ತನ್ನ ಬಾಳಸಂಗಾತಿಯನ್ನಾಗಿ ಸ್ವೀಕರಿಸುವ ವಿಷಯದಲ್ಲಿ ಪೂರ್ತಿ ನಿರಾಶನಾಗಿಲ್ಲ; ಆದರೆ ಮೊದಲಿನ ಭದ್ರವಾದ ಭರವಸೆಯನ್ನೇನೋ ಬಿಟ್ಟುಕೊಡುವುದರಲ್ಲಿದ್ದಾನೆ.

ಕಡಲೇಕಾಯಿ ತಿಂದದ್ದಾಯಿತು. ಸೌತೇಕಾಯಿ ತಿಂದದ್ದಾಯಿತು. ಕೊನೆಗೆ ಐಸ್‌ಕ್ರೀಂ ತಿಂದದ್ದೂ ಆಯಿತು. ಈ ಯಾವುದೂ ರೂಪಸಿಯಾದ ಶಾಲಿನಿಯಿಂದ ಒಂದು ಮಾತನ್ನಾದರೂ ಆಡಿಸಿದ್ದರೆ ಜ್ಯೋತಿ ಇಟ್ಟ ಆಣೆ.

'ಏಳಿ ಇನ್ನು, ಹೊರಡೋಣ' ಎನ್ನುತ್ತಾಳೆ ಶಾಲಿನಿ. ಏಳುತ್ತಾ ಪ್ರತೀಕನೆನ್ನುತ್ತಾನೆ.

'ಶಾಲಿನಿ ನೀವು ರಾಜವಂಶದಲ್ಲಿ ಜನಿಸಿದ್ದರೆ

ವಿಜಾಪುರ ಜಿಲ್ಲೆ: ಪತ್ರಿಕೆಗಳು

ಭೀಕರ, ಹುಚ್ಚ, ಓ ಶಿವಾ, ವಿಷಸರ್ಪ, ಧಡಲಬಾಜಿ, ಹೋಮಿಯೋ ಕಿಂಗ್-ಏಜೆಂಟ್ ಎಕ್ಸ್... ಇವೆಲ್ಲಾ ಏನೆಂದು ಗಾಬರಿಯಾಗಬೇಡಿ! ಇವು ವಿಜಾಪುರ ಜಿಲ್ಲೆಯಿಂದ ಹೊರಡುವ ಪತ್ರಿಕೆಗಳ ಹೆಸರುಗಳು.

ಇನ್ನೂ ಕೆಲ ಸ್ಯಾಂಪಲ್‌ಗಳನ್ನು ಕೇಳಿ: ನಿನ್ನೆಲ್ಲಾ ಮೊನ್ನೆ, ಮರ್ಝಾ ಪ್ರಭುತ್ವ, ಜೀವಂತ ಗೋರಿ, ಕಣ್ಣೀರಿನ ಶೋಧನೆ, ಬಡಿದ ಸಿಡಿಲು, ಕಂದನ ಕಣ್ಣೀರು, ಸತತ ಸಂಶೋಧನೆ, ಕೂಲಿಯವರ ಕೂಗು, ಹೊಸ ಹುರುಪು, ಸಿಟಿ ಲೈಫ್, ರಣರಂಗ, ಕುರುಕ್ಷೇತ್ರ, ಸುರಂಗ, ಟಂಕಾರ್, ಜುಗುನು, ತಾಯಿ ಜೀವ, ವೀರರಾಜ, ಭೀಮ ಗುರಿ, ರಾಜಮಾರ್ಗ.

ಒಟ್ಟು ವಿಜಾಪುರ ಜಿಲ್ಲೆಯಾದ್ಯಂತ 106 ಪತ್ರಿಕೆಗಳು ಪ್ರಕಟಗೊಳ್ಳುತ್ತಲಿವೆ. ಅವುಗಳಲ್ಲಿ 10 ದಿನಪತ್ರಿಕೆಗಳು, 89 ವಾರಪತ್ರಿಕೆಗಳು, 2 ಪಾಕ್ಷಿಕ, 4 ಮಾಸಿಕ, 1 ತ್ರೈಮಾಸಿಕ ಹಾಗೂ 1 ವಾರ್ಷಿಕ ಪತ್ರಿಕೆಗಳಿವೆ.

ಇವುಗಳಲ್ಲಿ ಹೆಚ್ಚು ಪತ್ರಿಕೆಗಳು ಜಿಲ್ಲಾ ಸ್ಥಳದಿಂದಲೇ ಪ್ರಕಟಗೊಳ್ಳುತ್ತಿದ್ದರೆ, ತಾಲೂಕು ಸ್ಥಳಗಳಲ್ಲಿ ಕೆಲವು ಹಾಗೂ ಗ್ರಾಮಾಂತರ ಪ್ರದೇಶಗಳಿಂದಲೂ ಹೊರಡುತ್ತಲಿರುವುದೊಂದು ಜಿಲ್ಲೆಯ ವಿಶೇಷವೆನಿಸಿದೆ.

● ಸುಮಾಪತಿ



ರಾಜಕುಮಾರನ ಪಟ್ಟದರಸಿಯಾಗಿ ಅಂತಃಪುರದಲ್ಲಿರುತ್ತಿದ್ದಿರೇನೋ. ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿರುವ ನಿಮ್ಮದಲ್ಲದ ತಪ್ಪಿಗಾಗಿ ನೀವೀಗ ಒಬ್ಬ ಡಾಕ್ಟರನ್ನೋ ಇಲ್ಲವೆ ಎಂಜಿನಿಯರ್‌ನನ್ನೋ ವರಿಸಿ ತೃಪ್ತಿಪಟ್ಟುಕೋಬೇಕಷ್ಟೆ'.

'ಡಾಕ್ಟರು ಎಂಜಿನಿಯರುಗಳು ಮಾತ್ರ ಮದುವೆಗೆ ಅರ್ಹರು. ಉಳಿದವರು ಅಲ್ಲವೋ?'

'ಈ ಜನ್ಮದಲ್ಲಂತೂ ನೀವು ಒಬ್ಬ ಡಾಕ್ಟರನ್ನೋ ಎಂಜಿನಿಯರನ್ನೋ ಕೈ ಹಿಡಿದು ಬಾಳು ಮುಗಿಸಬೇಕು' ಎಂದಿದ್ದ ಡಾ। ಪ್ರತೀಕನ ಮಾತನ್ನು ಹಿಡಿದು ವಾದಿಸಿ, ವಾದಿಸಿ ಕೊನೆಗೆ ಶಾಲಿನಿ ಹೇಳಿದಳು—

'ಮದುವೆ ಒಂದು ಅರ್ಥದಲ್ಲಿ ಬಯೋಲಾಜಿಕಲ್ ನೀಡ್. ಅಷ್ಟಕ್ಕೆ ಡಾಕ್ಟರು, ಎಂಜಿನಿಯರ್ ಏನೂ ಆಗಬೇಕಾಗಿಲ್ಲ. ಇನ್ನೊಂದರ್ಥದಲ್ಲಿ ಮದುವೆ ಎಂದರೆ ಎರಡು ಭಿನ್ನ ಭಿನ್ನ ಜೀವಿಗಳ ಸಮ್ಮಿಳನ. ಈ ಸಮ್ಮಿಳನಕ್ಕೆ ಗಾಂಭೀರ್ಯ, ಸಾಂಸ್ಕೃತಿಕತೆಗಳ ಮೆರುಗೂ ಸೇರಿಕೊಂಡರೆ ಬಾಳಿಗೆ ಅರ್ಥ ಬಂದೀತು...'

'ಉಪನ್ಯಾಸ ಸಾಕು ಮಾಡಿ ಮಹರಾಯಿತಿ. ನಡೆಯಿರಿ ಮನೆಗೆ ಹೋಗೋಣ' ಎಂದು ಡಾ। ಪ್ರತೀಕ ನಿಧಾನವಾಗಿ ಮುಂದೆ ಮುಂದೆ ಹೆಜ್ಜೆ ಇಡತೊಡಗಿದ. ಅವನ ಹಿಂದೆ ಶಾಲಿನಿ ಮದಗಜ ಗಮನೆಯಂತೆ ಹೆಜ್ಜೆಯಿಡತೊಡಗಿದಳು...

ಆಗಲೇ ಆಶ್ಚರ್ಯ ಎನಿಸುವಂತೆ ಅವಳಿಗೆ ದಿವಾಕರ ಎದುರಿಗೆ ಕಾಣಿಸಿದ. ಇಬ್ಬರೂ ಒಬ್ಬರನ್ನೊಬ್ಬರು ಆಶ್ಚರ್ಯ—ಸಂತೋಷಗಳಿಂದ ನೋಡಿ 'ಹಾಯ್' ಎಂದರು. ಅವನು ಹತ್ತಿರ ಬಂದಾಗ, ಡಾ। ಪ್ರತೀಕ ದಿವಾಕರನನ್ನು ನೋಡಿದ, ದಿವಾಕರ ಅವನನ್ನು ನೋಡಿದ.

'ನನ್ನ ಪರಿಚಿತರು. ದಿವಾಕರ್, ಇವರು ನನ್ನ ರಿಲೇಟಿವ್. ಡಾ। ಪ್ರತೀಕ'—ಎಂದು ಅವಳು ಪರಿಚಯಿಸಿದಾಗ ಆ ಗಂಡುಗಳಿಬ್ಬರೂ ಮತ್ತೂ ಮುಖಗಳನ್ನು ದಿಟ್ಟಿಸಿ ನೋಡಿದರು.

ಮತ್ತೊಮ್ಮೆ ಮೂವರೂ ಹಸಿರಿನ ನಡುವೆ ಕುಳಿತರು. ಎರಡು ಗಂಡುಗಳೂ ಬಹುಬೇಗ ಸ್ನೇಹಿತರಂತೆ ಮಾತನಾಡತೊಡಗಿ, ಆ ಒಂದು ಹೆಣ್ಣು ಮಾತಿನೊಂದಿಗೆ ಬೆರೆತುಕೊಂಡರೂ, ಆ ಮೂವರ ಹೃದಯಗಳೂ ಬೇರೇನೊ ಯೋಚಿಸುತ್ತಿದ್ದವು, ಚಿಂತಿಸುತ್ತಿದ್ದವು.

●(ಖೊಕ್...)

ಒಂದು ವರ್ಷದ ನೋಟ
ಈ ಯುಗಾದಿಯಿಂದ ಮುಂದಿನ ಯುಗಾದಿ ವರೆಗೆ ಹೇಗಿದೆ?

'ನಿಮ್ಮ ತಾರಾಫಲ'ದ ಲೇಖಕಿ ಟೈನಿ ಅವರು 'ತುಷಾರ'ದ ಓದುಗರಿಗೆ ಚಿರಪರಿಚಿತರು. 'ಟಾರೆಟ್ ಕಾರ್ಡ್' ಎನ್ನುವ ಅದೃಷ್ಟ ಚೀಟಿಗಳ ಮೂಲಕ ಭವಿಷ್ಯ ಹೇಳುವ ಮಾಧ್ಯಮದಲ್ಲಿ ವಿಶೇಷ ಪರಿಣತಿ ಸಾಧಿಸಿರುವ ಅವರು ಈಗ 'ತುಷಾರ' ಓದುಗರಿಗೆಂದೇ ಈ ವಿಶೇಷ ಭವಿಷ್ಯ ಕಳಿಸಿದ್ದಾರೆ.

ಯುಗಾದಿಯ ಶುಭ ಸಡಗರದಲ್ಲಿ 'ಟಾರೆಟ್ ಕಾರ್ಡ್' ನೀಡುವ ನಿಮ್ಮ ಬದುಕಿನ ಒಂದು ವರ್ಷದ ವಿಶೇಷಗಳನ್ನು ಇಲ್ಲಿ ನೀಡುತ್ತಿದ್ದೇವೆ.

ಮಾರ್ಚ್ 22ರಿಂದ ಎಪ್ರಿಲ್ 20:

ವಿಶಾಲವಾದ ದಾರಿಯಲ್ಲಿ ಹಲವಾರು ತಿರುವುಗಳು. ಅಂತರ್ಯದ ಅರಿವು ಮತ್ತು ಯಾವುದೇ ಅಸ್ಪಷ್ಟ ಸನ್ನಿವೇಶಗಳಲ್ಲೂ ಹೊಸ ದಾರಿಯನ್ನು 'ಟಾರೆಟ್ ಕಾರ್ಡ್' ತೋರಿಸುತ್ತದೆ. ಜೂನ್ ಸುಮಾರಿಗೆ ವಿಶೇಷ ಬಲ ಮತ್ತು ಹರ್ಷದ ಸೆಲೆಯನ್ನೂ ನಿಮಗಿದು ನೀಡಬಹುದು. ಬೂದು ವರ್ಣ ಈ ವರ್ಷ ನಿಮ್ಮ ಅದೃಷ್ಟದಾಯಕ ಬಣ್ಣ.

ಎಪ್ರಿಲ್ 21ರಿಂದ ಮೇ 21:

ನಿಮ್ಮ ಬಾಹ್ಯದ ಮಹತ್ವದ, ದೇಹದ ಸತ್ಯಸ್ಥಿತಿಯನ್ನು 'ಟಾರೆಟ್ ಕಾರ್ಡ್' ತೋರಿಸುತ್ತದೆ. ಆರೋಗ್ಯ, ದೈಹಿಕ ಸಾಮರ್ಥ್ಯ, ಹಣ ಹಾಗೂ ಸಂಪತ್ತುಗಳ ಕರಾರುವಾಕ್ ಲೆಕ್ಕಾಚಾರಗಳಿಂದಾಗಿ ಮುಂಜಾಗ್ರತೆ ವಹಿಸಿಕೊಳ್ಳಲು ಸಾಧ್ಯವಾಗಬಹುದು. ಕೆಲಸದ ವಿಷಯವೊಂದು ಮೂರು ತಿಂಗಳಲ್ಲಿ ತೀರ್ಮಾನವಾಗಬಹುದು. ಅದೃಷ್ಟದಾಯಕ ಬಣ್ಣ—ಕಡು ಕೆಂಪು.

ಮೇ 22ರಿಂದ ಜೂನ್ 21:

ಕೆಲಸದ ಯೋಜನೆಯೊಂದರಲ್ಲಿ ನಿಮ್ಮ ಪ್ರತಿಭೆ, ಶ್ರಮ ಪರಾಕಾಷ್ಠೆ ತಲುಪಬಹುದು. ಮನೆಯ ವಿಷಯವೊಂದು ಸೆಪ್ಟಂಬರ್ ವೇಳೆಗೆ ಮುಗಿಯಬಹುದು, ಹಣದೊಂದಿಗೆ ಈಗಲೆ ಸಿದ್ಧವಾಗಿರಿ. ಯಾವುದೇ ವಿಷಯವನ್ನು ನಿರಾಯಾಸವಾಗಿ ನೀವಿಂದು ಬಗೆಹರಿಸಲು ಶಕ್ತರಾಗುವಿರಿ. ಸಾಗರ ಹಸುರು—ನಿಮ್ಮ ಅದೃಷ್ಟದಾಯಕ ಬಣ್ಣ.

ಜೂನ್ 22ರಿಂದ ಜುಲೈ 23:

ಕೆಲವು ಸಮಯದಿಂದ ಬಾಕಿಯಾಗಿದ್ದ ಗುಟ್ಟೊಂದನ್ನು ಅರಿಯಲು ನೇರವಾಗಿ ಪ್ರಯತ್ನಿಸುವುದೊಳಿತು. ಸಂಸ್ಕಾರ ಶಾಸ್ತ್ರಗಳಲ್ಲಿ, ಚಿಂತನೆಗಳಲ್ಲಿ ಮನಸ್ಸನ್ನು ಹೆಚ್ಚೆಚ್ಚು ತೊಡಗಿಸಿಕೊಳ್ಳಿ. ಕಳೆದು ಹೋದವುಗಳನ್ನು ಮರಳಿ ಕಂಡುಕೊಳ್ಳುವಿರಿ. ಮೇ ಬಳಿಕ ಬದಲಾವಣೆ, ಬೆಳವಣಿಗೆಗಳಾಗಬಹುದು. 'ಬದುಕೊಂದು ನಾಟಕರಂಗ' ಎನ್ನುವುದನ್ನು ಮರೆಯದಿರಿ. ಗುಲಾಬಿ ಬಣ್ಣ ಇಂದು ನಿಮಗೆ ಅದೃಷ್ಟದಾಯಕ.

ಜುಲೈ 24ರಿಂದ ಆಗಸ್ಟ್ 21:

ಅತಿ ಸಲುಗೆ ಒಳ್ಳೆಯದಲ್ಲ, ಜನಪ್ರಿಯತೆಯೂ ಕುಸಿಯಬಹುದು. ಆದರೆ

ವಿಸ್ಮಯಗೊಳ್ಳುವ ಸಂದರ್ಭಗಳೂ ಎದುರಾಗಬಹುದು. ನಿಮ್ಮ 'ಅಹಮ್' ಅನ್ನು ಇವು ಪುಸಲಾಯಿಸಲೂ ಬಹುದು. ಬಳಸು ದಾರಿಯಲ್ಲಿ ನಿಮಗಿದು ಅನುಕೂಲವಾಗಬಹುದು. ಅದೃಷ್ಟದಾಯಕ ವರ್ಣ—ಕಂದು ಬಣ್ಣ.

ಆಗಸ್ಟ್ 22ರಿಂದ ಸೆಪ್ಟಂಬರ್ 21:

ಮೇಲೇರುವ ಸನ್ನಿವೇಶಗಳು ನಿಚ್ಚಳವಾಗಿವೆ. ವ್ಯಕ್ತಿಯೊಬ್ಬರ ಭೇಟಿ, ಕನಸೊಂದರ ಸಾಕಾರ, ಆತಂಕಿತ ದೂರ ಪ್ರವಾಸ ಎಲ್ಲವೂ ಧೈರ್ಯವಾಗಿ ಮುನ್ನಡೆಯುವವರಿಗೆ ಸಾಧ್ಯವಾಗಬಹುದು. ಕೆಲಸದ ವಿಷಯವೊಂದು ನಿಮ್ಮನ್ನು ಬಹುದೂರ ಕೊಂಡೊಯ್ಯಬಹುದು. ಜೇನು ವರ್ಣ ನಿಮ್ಮ ಅದೃಷ್ಟದಾಯಕ ಬಣ್ಣ.

ಸೆಪ್ಟಂಬರ್ 22ರಿಂದ ಅಕ್ಟೋಬರ್ 23:

ನಿಮ್ಮ ಉದ್ದೇಶಗಳ ಈಡೇರಿಕೆಗಾಗಿ ಯೋಜನಾಬದ್ಧವಾಗಿ ನಿಧಾನ—ನಿರ್ದಿಷ್ಟವಾಗಿ ಸಂದರ್ಭವನ್ನು ಸದುಪಯೋಗಿಸಿಕೊಳ್ಳಿ. ನಿಮ್ಮ ಗುರಿ ಮೀರಿದ ಯೋಜನೆಗಳ ಬಗ್ಗೆಯೂ ಎಚ್ಚರವಾಗಿರಿ. ಹೆಚ್ಚಿನ ಜನಪ್ರಿಯತೆ, ಚಟುವಟಿಕೆಯಲ್ಲಿರುವವರಿಗೆ ನಿರಾಯಾಸ ಮುನ್ನಡೆ. ಸಮಸ್ಯಾತ್ಮಕವೆನಿಸುವ ಕೆಲಸಗಳಿಗೆ ಕೈ ಹಾಕದಿರಿ. ಅದೃಷ್ಟದಾಯಕ ಬಣ್ಣ—ಎಲೆ ಹಸುರು.

ಅಕ್ಟೋಬರ್ 24ರಿಂದ ನವೆಂಬರ್ 21:

ಮನೆ ನೆಮ್ಮದಿಯ ನೆಲೆಯಾಗಬಹುದು. ಪ್ರತಿಯೊಂದು ವಿಷಯಗಳಲ್ಲೂ ಅದೃಷ್ಟ ನಿಮ್ಮನ್ನು ಸರ್ವಾಧಿಕಾರದೆಡೆಗೇ ಕೊಂಡೊಯ್ಯಬಹುದು. ಅದೃಷ್ಟದ ಆಟದಿಂದಾಗಿ ಎಲ್ಲದರಲ್ಲೂ ನಿರಾತಂಕವಾಗಿ ಮುನ್ನಡೆಯುವಿರಿ. ಅದೃಷ್ಟ ಬಣ್ಣ—ಮಡಕೆ ಕಪ್ಪು.

ನವೆಂಬರ್ 22ರಿಂದ ಡಿಸೆಂಬರ್ 21:

ಈ ವರ್ಷ ಮನಸ್ಸಿನ ವ್ಯಗ್ರತೆ ಮತ್ತು ಒತ್ತಡ ಸ್ವಲ್ಪ ಹೆಚ್ಚಿಗಿದೆ. ಆದರೆ ಈ ಒತ್ತಡಗಳ ನಿವಾರಣೆ ಎರಡು ತಿಂಗಳ ಒಳಗಾಗುವ ಸೂಚನೆಯನ್ನೂ 'ಟಾರೆಟ್ ಕಾರ್ಡ್' ಒದಗಿಸುತ್ತದೆ. ಕೌಟುಂಬಿಕ ಬದುಕಿನಲ್ಲಿ ನೆಮ್ಮದಿಯ ದಿನಗಳು. ಅದೃಷ್ಟದಾಯಕ ವರ್ಣ—ಸೂರ್ಯಕಾಂತಿ ಹಳದೀ ಬಣ್ಣ.

ಡಿಸೆಂಬರ್ 22ರಿಂದ ಜನವರಿ 20:

ಕೈ ಹಾಕಿದಲ್ಲೆಲ್ಲ ಜಯ ಸಾಧಿಸುವಿಕೆ, ಯಶಸ್ಸು ಜೀವನಗತಿಗೇ ಒಂದು ತಿರುವು ಕೊಡಬಹುದು. ಸೂಕ್ತ ಪರಿಸರವೂ ಎದುರಿಗಿರುವುದರಿಂದ ನಿರಾತಂಕವಾಗಿ ಮುನ್ನಡೆಯುವಿಕೆ ಸಾಧ್ಯವಾಗಬಹುದು. ಆಗಸ್ಟ್‌ನಲ್ಲಿ ಮನೆಯಲ್ಲಿ ಆವೇಶದಿಂದ ವರ್ತಿಸದಿರಿ. ನವಿಲ ನೀಲಿ—ಅದೃಷ್ಟದಾಯಕ ಬಣ್ಣ.

ಜನವರಿ 21ರಿಂದ ಫೆಬ್ರವರಿ 19:

ವೈವಿಧ್ಯದತ್ತ ಗಮನ ಹರಿಸುವಿರಿ. ಸ್ವರ್ಗದ ಬಾಗಿಲು ತೆರೆಯತೊಡಗಿದೆ. ಕೆಲಸದಲ್ಲೂ ನಿಮ್ಮ ಬದಲಿಸಲಾಗದ ಪ್ರಾಮಾಣಿಕತೆ ಬೆಳಕಿಗೆ ಬರಬಹುದು. ತಾತ್ಕಾಲಿಕ ಸಂಶಯಗಳಿಂದಲೂ ನಿರಾತಂಕವಾಗಿ ಪಾರಾಗುವಿರಿ. ಮನೆಯಲ್ಲೂ ಸಹಾಯ ಹಸ್ತವಿದೆ. ಅದೃಷ್ಟದಾಯಕ ವರ್ಣ—ನೀಲಮಣಿ ಬಣ್ಣ.

ಫೆಬ್ರವರಿ 20ರಿಂದ ಮಾರ್ಚ್ 21:


ಮೇ ಮತ್ತು ಜುಲೈ ನಡುವಿನ ವಿಶಿಷ್ಟ ಸಂದರ್ಭಗಳಲ್ಲಿ ಅದೃಷ್ಟದ ಕೈವಾಡ ನಡೆಯಬಹುದೆಂದು 'ಟಾರೆಟ್ ಕಾರ್ಡ್' ತೋರಿಸುತ್ತದೆ. ನಿಮ್ಮೊಂದಿಗೆ ಸಂಪರ್ಕಗಳೂ ಹೆಚ್ಚಬಹುದು. ಅದೃಷ್ಟ ಬಣ್ಣ—ಹಾಲಿನ ಕೆನೆ ವರ್ಣ.

ಡೋಂಟ್ ಫಿಕರ್

ರಾಂಪುರದ 'ಡೋಂಟ್ ಫಿಕರ್' ಬಸ್ ಸರ್ವೀಸ್ ಮಾತ್ರಾ ಅಲ್ಲ ಅಂಚೆ ಮತ್ತು ಕೊರಿಯರ್ ಸರ್ವೀಸ್ ಕೂಡಾ– ಇದನ್ನು ನಾಗತ್ತೆ ಚೆನ್ನಾಗಿ ಉಪಯೋಗಿಸಿಕೊಂಡರು.

● 'ಕೇಫ'

ನಮ್ಮ ಮಹಿಷಾಸುರನೂರಿಂದ ಭೀಮಮಾನವ ರಾಂಪುರಕ್ಕೂ ಭಾಗೀರತೀ ಚಿಕ್ಕಮ್ಮನ ಹೆಬ್ಬೂರಿಗೂ ಹಾಗೂ ಶೌರಿ ಅಕ್ಕನ ಮಗ ಅಕಿಲಾಂಡಿ ಯಾ ಮುರಳಿ ಉರುಫ್ ಟಿಪ್ಪು ಊರು ಹೆಗ್ಗಡದೇವನ ಕೋಟೆಗೂ ಮಧ್ಯೆ ಓಡಾಡೋ ಬಸ್ ಸರ್ವಿಸ್– ಡೋಂಟ್ ಫಿಕರ್. ಅದು ಕೇವಲ ಬಸ್ ಸರ್ವಿಸ್ಸೇ ಅಲ್ಲ. ಮೋಸ್ಟ್ ರಿಲಯಬಲೆಸ್ಟ್ ಕೊರಿಯರ್ ಸರ್ವಿಸ್ ಕೂಡ. ನೀವು ಸಾಗರ್ ತಯಾರಿಸಿದ ರಾಮಾಯಣನ ಟಿ.ವಿ.ಲಿ ನೋಡಿದ್ದಿದ್ರೆ ನಾನೀಗ ಹೇಳ್ತಿರೋದು ನಿಮಗರ್ಥವಾಗುತ್ತೆ. ಖಾದರ್‌ನ ಕೇಳಿದ್ರೆ ಇನ್ನೂ ಡಿಟೆಯಿಲಾಗಿ ವಿವರಿಸ್ತಾನೆ. ವಿಜಯ್ ಅರೋರಾ ಒಂದು ಅಸ್ತ್ರ ಬಿಡ್ತಾನೆ. ಲಕ್ಷ್ಮಣ್‌ಭಯ್ಯಾ ಆಫ್ ಆಗ್ತಾನೆ. ಓ ಫೌಜ್‌ಕಾ ಹಕೀಮ್–ಸಾರಿ–ಆರ್ಮಿ ಡಾಕ್ಟರು ಬಂದು ನೋಡಿ ಕೇಸ್ ಹೋಪ್ಲೆಸ್–ತಕ್ಷಣ ಸಂಜೀವಿನಿ ಮೂಲಿಕೆ ರಸ ಕುಡಿಸದೇ ಇದ್ದರೆ–ಅಂತ ಹೇಳಿ ಬಿಡ್ತಾರೆ. ಪೇಷೆಂಟ್ ಇದ್ದದ್ದು ಲಂಕೇಲಿ. ಸಂಜೀವಿನಿ ಇದ್ದದ್ದು ನಾರ್ತ್‌ನಲ್ಲಿ– ಹಿಮಾಲಯದ ಹತ್ರ. ವೇರ್ ಟು ವೇರಿನ ಲೆಕ್ಕ! ಆಂಜನೇಯ ಉರುಫ್ ದಾರಾಸಿಂಗ್ ಒಂದೇ ಜಂಪಿಗೆ ಹಾರಿ ಪರ್ವತವೆಲ್ಲಾ ಹುಡುಕಿ ಮೂಲಿಕೆ ಸಿಗದೆ ಇಡೀ ಪರ್ವತವನ್ನೇ ಹೊತ್ತುಕೊಂಡು ಬಂದು ಡಾಕ್ಟರ್‌ಗೆ ಒಪ್ಪಿಸ್ತಾನೆ. ಆ ಸಮಯದಲ್ಲಿ ಅಲ್ಲಿ ನಮ್ಮ ಡೋಂಟ್ ಫಿಕರ್ ಖಾದರ್ರೋ ಬುಡನ್ನೋ ಅಥವಾ ಸಲೀಮ್ ಆದರೂ ಇದ್ದಿದ್ದರೆ ಆಂಜನೇಯಾ ತೆಗೆದುಕೊಂಡಿದ್ದ ಸಮಯದಲ್ಲಿ ಅರ್ಧ ಟೈಮ್‌ನಲ್ಲೇ ಆ ಸಂಜೀವಿನೀ ಒರಿಜಿನಲ್ ಮೂಲಿಕೇನ್ನೇ ಪತ್ತೆಹಚ್ಚಿ ತಂದಿರೋರು! ಇದು ನನ್ನ ಈಕ್ವೇಷನ್ನು. ನನಗೊಂದು ಥ್ರಿಲಿಂಗ್ ಅನುಭವವಾಯ್ತು. ರಾಂಪುರದಲ್ಲಿ ಭೀಮಮಾವನ ಡಾಟರ್ ವಿಮಲಾಗೆ ಏನೋ ಫಂಕ್ಷನ್. ಮದುವೆ ಆದ ಮೇಲೆ ಮಗು ಆಗೋಕೆ ಮುಂಚೇನೋ ಅಥವಾ ಆಮೇಲೋ ಗರ್ಲ್ಸ್‌ಗೆ ಬರುತ್ತಲ್ಲಾ ಆ ಫಂಕ್ಷನ್–ಅದಕ್ಕೆ ವಿಮಲಾದು ನೆಕ್‌ಲೇಸ್‌ನ ಶೀನಯ್ಯಶೆಟ್ಟರ ಜ್ಯೂಯಲರೀ ಷಾಪಿಂದ ತಕೊಂಡು ರಾಂಪುರಕ್ಕೆ ಬರೋಕೆ ನಾಗತ್ತೆ ಆರ್ಡರ್ ಆಗಿತ್ತು. ವಿಮಲಾಗೆ ಕೊಡೋಕೆ



ನಾನೊಂದು ಸರ್‌ಪ್ರೈಜ್ ಪ್ರೆಸೆಂಟ್ ತಕೊಂಡಿದ್ದೆ ಬಾಬು ಫ್ಯಾನ್ಸಿ ಸ್ಟೋರಿಂದ. ಮೈಕೇಲ್ ಜಾಕ್ಸನ್ ರಬ್ಬರ್ ಡಾಲ್. ತಲೇ ಮೇಲೆ—ಅದರ ತಲೇ ಮೇಲೆ ಕುಟ್ಟಿದರೆ ಕುಣಿಯೋದು ತುಂಬಾ ಚೆನ್ನಾಗಿತ್ತು.

ರಾಂಪುರದಲ್ಲಿ ಡೋಂಟ್ ಫಿಕಿರ್‌ನಿಂದ ಇಳಿದು ರಾಂಪುರದ ಮನೆ ಮೆಯಿನ್‌ಗೇಟ್ ಹೊಕ್ಕೆ.

"ಜರಾ... ಪಾಂಡುಭಯ್ಯಾ..."

ತಿರುಗಿದೆ—

ಖಾದರ್‍ರು...! ಡೋಂಟ್ ಫಿಕಿರ್ ಕಂಡಕ್ಟರ್ ಖಾದರ್.

"ಏನು ಖಾದರ್ ?"

"ಶೌರೀ ಅಣ್ಣ ಕೊಟ್ಟ ಪಾಂಡುಸಾಬ್ ಭೂಲ್ ಜಾತಾಯ್ ಕರ್ಕೊ ಬೋಲಾ..." ಅಂತ ಒಂದು ಬಾಕ್ಸ್ ಕೊಟ್ಟ ನನ್ನ ಕೈಗೆ.


ವದ್ದುಬಿಡಲೇ ಅನ್ನಿಸಿತು—ನನ್ನನ್ನ ನಾನೇ! ನಾಗತ್ತೆ ನಂಗೆ ತಕೊಂಬಾ ಅಂತ ಹೇಳಿದ್ದ ನೆಕ್‌ಲೇಸ್ ಬಾಕ್ಸ್ ಅದು! ಈಗ ನೀವೇ ಹೇಳಿ ನಮ್ಮ ಖಾದರ್ ತಂದ ನೆಕ್‌ಲೇಸ್ ಎಲ್ಲಿ? ಆಂಜನೇಯ ತಂದ ಒಂದು ಬೇರೆಲ್ಲಿ?

ಡೋಂಟ್ ಫಿಕಿರ್‌ದು ಒಂದು ಲಾಂಗ್ ರೂಟ್ ಸರ್ವಿಸ್ ಇದೆ. ಬಸ್-ವಯಾ ರಾಂಪುರ ಹೆಬ್ಬೂರು-ಹೆಗ್ಗಡದೇವನ ಕೋಟೆಗೋ ಕಲ್ಲಳ್ಳಿಗೋ ಹೋಗಿ ವಾಪಸ್ ಬರುತ್ತೆ ಮೈಸೂರಿಗೆ. ಆ ಬಸ್‌ಗೆ ಮಾಮೂಲು ಡ್ರೈವರ್—ಮಾಬೂಬಾಲಿ. ಒಂದುಬಾರಿ ರಾಂಪುರದ ಜಾತ್ರೆಗೆ ನನಗೆ ಸುತರಾಂ ಇಷ್ಟವಿಲ್ಲದಿದ್ದರೂ ಹೋಗಬೇಕಾಯ್ತು. ಭೀಮಮಾವನ ಒತ್ತಾಯ. ನೀನು ಜಾತ್ರೆಗೆ ಬರದೇ ಹೋದ್ರೆ ನಿನ್ನ ಮಂಡೆ ನಿನ್ನ ರುಂಡದ ಕೈಲಿ—ಅಂತ ಹೆದರಿಸಿದ್ದರು. ನಾನು ಬಾಬೂ ಜೊತೆ ಗುಲ್ಬರ್ಗಾಕ್ಕೆ ಹೋಗೋಕೆ ಪ್ಲಾನ್ ಮಾಡಿದ್ದೆ. ಕ್ಯಾನ್ಸಲ್ ಮಾಡಿ ಮಾಬೂಬಾಲಿ ಬಸ್‌ನಲ್ಲಿ ರಾಂಪುರಕ್ಕೆ ಪ್ರಯಾಣ ಮಾಡಿದೆ. ನೀವು ಒಂದು ಬಾರಿ ಮಾಬೂಬಾಲಿ ಬಸ್‌ನಲ್ಲಿ ಪ್ರಯಾಣ ಮಾಡಿ ಸರ್—ನಿಮ್ಮ ಮೂಡೇ ಬದಲಾಯಿಸುತ್ತೆ ಅಂತ ಶೌರಿ ನನ್ನನ್ನ ಆ ಬಸ್ ಹತ್ತಿಸಿದ್ದ.

ಖಾದರ್ ಕಂಡಕ್ಟರು.

"ಫ್ರಂಟ್‌ನಾಗೆ ಕೂತ್ಕೊ ಪಾಂಡೂಭಯ್ಯಾ—ಮಜಾ ಇರ್ತದೆ" ಅಂತ ಎನ್‌ಕರೇಜ್ ಮಾಡಿದ್ದ.

"ಹೇಗೆ?" ಅಂತ ಕೇಳಿದೆ.



ಇವ್ನ ಯಾರ್ದೋ... ಒಂದು ರೂಪಾಯಿ ಧರ್ಮ ಮಾಡಿ ಹೋಗ್ತಿದ್ದಾನೆ... ಬಹುಶಃ ರೂಪಾಯಿ ಬೆಲೆ ಬಿದ್ದು ಹೋಗಿರ್ಬೇಕು ಕಾಣೋ!!

"ಖೂಬ್‌ಸೂರತ್" ಅಂದ.

ಖೂಬ್‌ಸೂರತ್ ಪಿಕ್ಚರ್ ನೋಡಿದಾಗ್ಲಿಂದ ನಮ್ಮ ಡೋಂಟ್ ಫಿಕರ್ ಪಟಾಲಂ ಆ ವರ್ಡನ್ನ ತುಂಬಾ ಹಚ್ಚಿಕೊಂಡುಬಿಟ್ಟಿದ್ದಾರೆ.

ಬಸ್ ಹೊರಡ್ತು. ನಗರದ ಎಲ್ಲೆ ಬಿಟ್ಟು ಬಸ್ಸು ಗೆದ್ಲಳ್ಳಿ ಹತ್ರಕ್ಕೆ ಬಂತು–ರಸ್ತೆ ಬದೀಲಿ ಇಬ್ಬರು ಕೈತೋರಿಸಿದರು. ಖಾದರ್ ಶಿಳ್ಳೆ ಊದಿದ. ಧಡಧಡಾಂತ ಬಸ್ ನಿಲ್ಲಿಸಿದ ಮಾಬೂಬಾಲಿ.

"ಎಡದಾಕಡೆ ಬನ್ನಿ. ಬಸ್‌ಗೆ ಎಡದಾಕಡೆ ಬಾಕ್ಲಿರಾದು" ಅಂದ.

ಕೈತೋರಿಸಿದ ಇಬ್ಬರೂ ಬಳಸಿಕೊಂಡು ಬಂದು ಬಸ್ ಹತ್ತಿದರು. ಬಸ್ ಹೊರಡ್ತು.

ಸುಬ್ಬನಕೊಪ್ಪ–ಇಬ್ಬರು ಮೆನ್ನೂ ಒಬ್ಬ ಉಮನ್ನೂ ನಿಂತಿದ್ರು.

"ಎಡದಾಕಡೆ ಬನ್ನಿ–ಬಸ್‌ಗೆ ಎಡದಾಕಡೆ ಬಾಕ್ಲಿರಾದು ನಿಮ್ಗೆ ಗೊತ್ತಿಲ್ಲಾ?"–ಅಂತ ಬಸ್ ನಿಲ್ಲಿಸಿದ ಮಾಬೂಬಾಲಿ.

ಮತ್ತೆ ಸುಮಾರು ಮೂರು ಕಿಲೋಮೀಟರ್ ಹೋಗಿರಬಹುದು. ಒಂದು ಇಡೀ ಕುಟುಂಬ ಬಲಬದಿ ನಿಂತು ಕೈತೋರಿಸಿದರು. ಖಾದರ್ ಶಿಳ್ಳೆ ಊದಿದ. ಬಸ್ ಚೀರ್ತಾ ನಿಂತಿತು. ಖಾದರ್ ನನ್ನ ಹತ್ರ ಬಂದು ನನ್ನ ಕಿವೀಲಿ "ಅಬ್ ತಮಾಷ್ ದೇಖೋ" ಅಂತ ಊದಿದ.

"ಬಸ್‌ಗೆ ಎಡದಾಕಡೆ ಬಾಕ್ಲಿರಾದು ಅಂತ ಎಷ್ಟುಸಾರಿ ಬಡ್ಕೊಳ್ಳಾದು ನಿಂಗೆ–ಎಡದಾಕಡೆ ಬನ್ನಿ..." ಮಾಬೂಬಾಲಿ ಎತ್ತಿದ ಧ್ವನೀಲಿ ಕಿರುಚಿದ.

ಕುಟುಂಬ ಕಂಗಾಲಾಗಿ ಬಸ್ ಹತ್ತಿತು.

ನನಗೆ ಸ್ವಲ್ಪ ಝೊಂಪು ಹತ್ತಿರಬೇಕು. ಬಸ್ ಕಿರ್ರ್ ಅಂತ ಬ್ರೇಕ್ ಹಾಕ್ಕೊಂಡು ಧಡಕ್ ಅಂತ ನಿಂತಾಗ ನನಗೆಚ್ಚರವಾಯ್ತು.

"ಏನಪ್ಪ–ನಿಂಗೋಸ್ರ ಬಸ್‌ಗೆ ಬಲದಾಕಡೆ ಕದಾ ಇಡಿಸಾಣಾ? ಇಲ್ಲಾ ನನ್ನ ತಲೇ ಮೇಲಿಂದ ಹತ್ತಬೇಕೂಂತಿದ್ದೀಯಾ? ಆಗ್ಲಿಂದ ಬಡ್ಕೊಳ್ತಿಲ್ವಾ ಎಡದಾಕಡೆ ಹತ್ತು, . ಎಡದಾಕಡೆ ಹತ್ತೂ ಅಂತ?" ಮಾಬೂಬಾಲಿ ಕೂಗಾಡ್ತಾ ಇದ್ದ.

ಬಸ್ ನಿಲ್ಲಿಸಿದ್ದ ಪಾಪಿ ಸುಸ್ತೋ ಸುಸ್ತು.

"ಮಾಬೂಭೈಯಾ ಮನಸ್ನಾಗೆ ಏಕೀಚ್ ಆದ್ಮಿ ಇಷ್ಟು ಕಡೇನೂ–ಬಲ್ದಾಕಡೆ ನಿಂತಿದ್ದಾನೇ ಕರ್ಕೆ" ಅಂತ ಖಾದರ್ ವಿವರಿಸಿದ.

ಶುಭಾಶಯ



ಓ ನನ್ನ ನಲ್ಲ ನಿನಗಿದೋ
ಹೊಸ ವರುಷದ ಶುಭಾಶಯ.
ಹೊಸ ವರುಷ ಬಂತೆಂದು
ಹಳೆ ವರುಷದಲಿ ನಿನ್ನನ್ನು
ಪ್ರೀತಿಸಿದ ನನ್ನನ್ನು
ಮರೆಯಬೇಡ ॥

ಹೊಸ ವರುಷದಲಿ
ಹೊಸ ಹುಡುಗಿಯನ್ನು
ಮೀಟ್ ಮಾಡಲು ಹೋಗಿ
ಕೆನ್ನೆಗೆರಡೇಟು ತಿಂದು
ದುಃಖದಿಂದ ಹಳೆ ವರುಷಕ್ಕೆ
ಹಿಂದಿರುಗಬೇಡ ॥

● ಕು। ಶಕುಂತಳಾ

ಡೋಂಟ್ ಫಿಕರ್ ಆ ದಿನ ರಾಂಪುರ ಸೇರಿ ನೇರವಾಗಿ ಭೀಮಮಾವನ ಮನೆ ಮುಂದೆ ನಿಲ್ತು. ನಾನು ಇಳಿದೆ.

ಖಾದರ್ ಮಾಬೂಬಾಲಿ ಇಬ್ರೂ ಸೇರಿ ಐದಾರು ಮೂಟೆಗಳನ್ನು ಬಸ್‌ನಿಂದ ಇಳಿಸಿದರು.

ನಾಗತ್ತೆ ಭೀಮಮಾವ ಬಂದರು.

'ಪಾಂಡು, ದೊಡ್ಡಮನಸ್ಸು ಮಾಡಿ ನೀನು ಜಾತ್ರೆಗೂ ಬಂದಿದ್ದಲ್ದೆ ಮನೆ ಸಾಮಾನುಗಳನ್ನೂ ಮರೀದೆ ತಂದೆಯಲ್ಲಾ–ಬಾ ಒಳಗೆ ನಿಂಗೀವತ್ತು ದೃಷ್ಟಿ ತೆಗೀತೀನಿ" ಅಂದ್ರು ನಾಗತ್ತೆ.

ಅಷ್ಟು ಮನೆ ಲಗೇಜ್ ಇದ್ದದ್ದು ನಂಗೆ ಗೊತ್ತೇ ಇರ್ಲಿಲ್ಲ.

ಥ್ಯಾಂಕ್ಸ್ ಡೋಂಟ್ ಕೇರ್–ಐ ಮೀನ್-ಥ್ಯಾಂಕ್ಸ್ ಡೋಂಟ್ ಫಿಕರ್ ಅಂದುಕೊಂಡೆ ಮನಸ್ಸಿನಲ್ಲೇ. ●

ಬಹುಮಾನಿತ ಚಿತ್ರಕವನ

"ಕರ್ಮಣ್ಯೇವ..."



ಕಾಲೂರಿ ನಿಂತಾಗ ತೆರವಾದ ಕೈಗಳಿಗೆ
ಕೊಡಬೇಕು ಕಾಯಕದ ರೋಮಾಂಚನ
ನೆಲ ಜಲ ಶಿಲಾತಳ ಸಂಗಮದಿ
ಇರಲಿರಲಿ ಜಂಗಮ, ರಸಕ್ಷಣ!

ವಿಪತ್ತುಗಳ ಕೂಟ ಇರಲಿ ಅತ್ತಿತ್ತ
ವಿಕಸನಕೆ ಬೇಕು ದಿವ್ಯ ನಿರ್ಲಕ್ಷ್ಯ
ದುರಿತಗಳಿಗೆಲ್ಲ ಬೆನ್ನಿಕ್ಕಿದರೆ ತಾನೆ
ದಕ್ಕುವುದು ಸಾಧನೆಯ ಶೃಂಗ?

ಸುಖದ ಸುಗ್ಗಿಗೆ ಸಾಕು ಇರುವ ಸವಲತ್ತುಗಳೆ
ನೂರು ಕೊರತೆಯ ನೆಪವು ಹೇಡಿತನಕೆ
ಗಾಳಿ ಬೀಸಲು, ಒಡನೆ ತೂರಿಕೊಳ್ಳಲು ಬೇಕು
ಮೂರು ಗಳಿಗೆಯ ಬಾಳು–ಶಾಶ್ವತವೆ?

ತಂಪಾದ ಮೈ ಮನಕೆ ಬಿಸಿಲೇನು? ಮಳೆಯೇನು?
ಕರ್ಮಯೋಗಕೆ ಇಲ್ಲ ಯಾವ ಹಂಗು
'ಕಠಿಣ ಭವ ತೊರೆಯೊಳಗೆ' ಗೆಜ್ಜೆ ಹೊಳಪನು ಕಾಯ್ದು
ದಾಖಲಿಸು ಮಗುವೇ ಧನ್ಯತೆಯ ಬದುಕು.

● ಎಂ. ಜಾನಕಿ, ಬ್ರಹ್ಮಾವರ

ಚಿತ್ರಕವನ ಸ್ಪರ್ಧೆ–105
ಫಲಿತಾಂಶ

ಬಹುಮಾನಿತ ಕವನ:

'ಕರ್ಮಣ್ಯೇವ.... ● ಎಂ. ಜಾನಕಿ, ಬ್ರಹ್ಮಾವರ

ಮೆಚ್ಚುಗೆ ಪಡೆದ ಕವನಗಳು

ಚೆತ್ತಲೆ	● ಕವಿತಾ ಬಿ. ಎಸ್. (ಬುಕ್ಕಾಂಬುಧಿ), ಬೆಂಗಳೂರು
ಹರಸಬಲ್ಲಿರಾ?	● ಶೈಲಜಾ ಹಿರೇಮಠ, ಹುಬ್ಬಳ್ಳಿ
ಉತ್ಕರ್ಷ	● ಮೈ. ಸತೀಶ್‌ಕುಮಾರ್, ಕೆ.ಜಿ.ಎಫ್
ನಿನಗ್ಯಾರು ಸಾಟಿ?	● ಬಿ. ಪ್ರೇಮಲತಾ, ಬೆಂಗಳೂರು

ವರ್ತುಲದೊಳಗೆ...

● ರಾಧಾಕೃಷ್ಣ ಕಲ್ಚಾರ್



"ಹೇಳಿ ಸರ್. ಅವಳು ಹೀಗೆ ಮಾಡಬಹುದ? ನಾನೇನು ಅನ್ಯಾಯ ಮಾಡಿದ್ದೆ ಸರ್ ಅವಳಿಗೆ? ನನ್ನ ಮನಸ್ಸಿನಲ್ಲಿ, ಹೃದಯದಲ್ಲಿ ಎಂತಹ ಉನ್ನತ ಸ್ಥಾನ ಕೊಟ್ಟಿದ್ದೆ ಗೊತ್ತ? ಅವಳೇ ನನ್ನ ಸರ್ವಸ್ವ, ನನ್ನ ಬದುಕಿನ ಬೆಳಕು ಅಂತ ನಂಬಿದ್ದೆ ಸರ್. 'ನನ್ನಲ್ಲಿ ಏನು ದೋಷ ಕಂಡಿದ್ದಿ ಹೇಳು ತಿದ್ದಿಕೊಳ್ಳುತ್ತೇನೆ. ದಯವಿಟ್ಟು ನಮ್ಮ ಸಂಬಂಧ ವನ್ನು ಕತ್ತರಿಸಬೇಡ" ಅಂತ ಎಷ್ಟು ಬಾರಿ ಬೇಡಿಕೊಂಡೆ. 'ನನ್ನನ್ನು ದೂರ ಮಾಡಬೇಡ.

ನಿನ್ನನ್ನು ರಾಣಿಯ ಹಾಗೆ ನೋಡಿಕೊಳ್ಳುತ್ತೇನೆ. ನೀನಿಲ್ಲದಿದ್ರೆ ನನ್ನ ಜೀವನ ಸುಟ್ಟು ಹೋಗುತ್ತದೆ ಪ್ಲೀಸ್' ಅಂತ ಅಂಗಲಾಚಿದೆ. ಕೇಳಲಿಲ್ಲ ಸರ್ ಅವಳು. ಹೋಗಿ ಬಿಟ್ಟಳು. ಹೋಗಿಯೇ ಬಿಟ್ಟಳು ನನ್ನ ಪ್ರೀತಿಯನ್ನು ಒದ್ದು. ಅಷ್ಟು ಅಗ್ಗವಾಗಿ ಹೋಯ್ತು ಸರ್ ಅವಳಿಗೆ ನನ್ನ ಪ್ರೀತಿ. ಹೇಳಿ ಸರ್, ನಾನೇನು ಮಾಡಲಿ? ಹೇಳಿ... ಏನು ಮಾಡಲಿ ಸರ್ ನಾನು?"

ನಾಯಕ್ ನನ್ನೆದುರು ಕುಳಿತು ಒಂದೇ ಸವನೆ ಮಾತನಾಡುತ್ತಿದ್ದ. ಮುಖ ಕೆಂಪಾಗಿತ್ತು. ಕಣ್ಣಲ್ಲಿ ನೀರಪೊರೆ. ಅವನ ಉದ್ವೇಗ, ಆವೇಶಗಳನ್ನು ಕಂಡು ನನಗೆ ಅನುಕಂಪ ಮೂಡಿತು. ಹಾಗೆಂದು ನಾನಾದರೂ ಏನು ಮಾಡಬಹುದು, ಬರಿಯ ಸಾಂತ್ವನ ಹೇಳುವುದನ್ನು ಬಿಟ್ಟು?

ಸುಮ್ಮನಿರಲಾರದೆ ನನ್ನ ಮುಖವನ್ನೇ ನೋಡುತ್ತಿದ್ದ ಅವನಿಗೆ ಹೇಳಿದೆ, "ನಾಯಕ್ ಪ್ಲೀಸ್ ಬಿ ಕಾಮ್. ಡೋಂಟ್ ಗೆಟ್ ಫ್ರಸ್ಟ್ರೇಟೆಡ್. ನೀವು ಹೀಗೆ ಉದ್ವಿಗ್ನರಾಗುವುದರಿಂದ ಏನೂ ಸಾಧಿಸಿದ ಹಾಗಾಗುವುದಿಲ್ಲ. ಸಮಾಧಾನ ಮಾಡಿಕೊಳ್ಳಿ" ಮೇಜಿನ ಮೇಲಿದ್ದ ಅವನ ಕೈಯನ್ನು ತಟ್ಟಿದೆ.

ಒಂದು ಕ್ಷಣ ಮೌನ. ನಿಟ್ಟುಸಿರುಬಿಟ್ಟ ನಾಯಕ್ ಹೇಳಿದ, "ಹೇಗೆ ಸಮಾಧಾನ ಮಾಡಿಕೊಳ್ಳಲಿ ಸರ್?... ಇದು... ನನ್ನ ಮೊದಲ ಪ್ರೀತಿ ಸರ್. ಮಾಯಾ ನನ್ನೆದೆಗೆ ಬೆಂಕಿ ಹಾಕಿದ್ದಾಳೆ ಸರ್. ನೋಡಿ ಇಲ್ಲಿ... ಎದೆಯಲ್ಲಿ ಉರೀತಾ ಇದೆ... ನೋಡಿ..." ಎದೆ ಮುಟ್ಟಿಕೊಂಡು ನುಡಿದ ಅವನ ಮಾತುಗಳಲ್ಲಿ ಮೊದಲಿನ ಆವೇಶ ಇರಲಿಲ್ಲ. ಕಂದಿ ಹೋಗಿದ್ದ ನಾಯಕ್. ಇನ್ನೇನು ಗಟ್ಟಿಯಾಗಿ ಅತ್ತು ಬಿಡುತ್ತಾನೆ ಅನಿಸಿತು.

"ನನಗೆ ಅರ್ಥವಾಗುತ್ತದೆ ನಾಯಕ್. ಆದರೆ ಏನು ಮಾಡಬಹುದು ಹೇಳಿ... ನಮ್ಮ ಪ್ರೀತಿ, ಸ್ನೇಹ ಎಲ್ಲ ಎಷ್ಟೋ ಬಾರಿ ಅಪಾತ್ರದಾನವಾಗಿ ಬಿಡುತ್ತವೆ. ಪಡೆದವರಿಗೆ ಅದರ ಬೆಲೆ ಗೊತ್ತಿರುವುದಿಲ್ಲ. ಹಾಗೆಂದು ನಿಮ್ಮಂತಹ ಪ್ರತಿಭಾವಂತ ಹುಡುಗ ಹೀಗೆ... ಛೇ!... ಪ್ಲೀಸ್ ಡೋಂಟ್ ಬಿ ಅಪ್‌ಸೆಟ್."

ಮುಖ ಮುಚ್ಚಿಕೊಂಡು ಬಿಕ್ಕುತ್ತಿದ್ದನವ. ಹತ್ತು ನಿಮಿಷ ಅವನ ಪಾಡಿಗೆ ಅವನನ್ನು ಬಿಟ್ಟು ಮತ್ತೆ ಮೃದುವಾಗಿ,

ಅನಿರೀಕ್ಷಿತ ತಿರುವುಗಳು ಬದುಕಿನ ಗತಿಯನ್ನೇ ಬದಲಿಸಿ ಬಿಡುತ್ತವೆ. ನಾಯಕ್‌ನ ವಿಚಾರದಲ್ಲೂ ಹೀಗೆಯೇ ಆಯಿತು. ಅವನ ಬದುಕಿನಲ್ಲಿ ಮಾಯಾ ಪ್ರವೇಶ ಮಾಡಿದಳು.

"ಏಳಿ. ಹೊರಗಡೆ ಹೋಗೋಣ... ಇಲ್ಲಿ ನಿಮ್ಮನ್ನು ಈ ಸ್ಥಿತಿಯಲ್ಲಿ ಸ್ಟಾಫ್ ಮೆಂಬರ್ಸ್ ನೋಡುವುದು ಚೆನ್ನಾಗಿರುವುದಿಲ್ಲ. ಏಳಿ ಏಳಿ. ಬನ್ನಿ" ಎಂದು ಎದ್ದು ನಿಂತೆ. ನಿಧಾನವಾಗಿ ಮೇಲೆದ್ದ ನಾಯಕ್ ಸೋತ ಹೆಜ್ಜೆಗಳಲ್ಲಿ ನನ್ನನ್ನು ಹಿಂಬಾಲಿಸಿದ.

* * *

ನಾಯಕ್ ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿ. ಕುಮಟಾ ಕಡೆಯವ. ಬಂದ ಒಂದು ವಾರದೊಳಗೇ ನನಗೆ ಬಹಳ ಇಷ್ಟವಾಗಿದ್ದ. ನಾಗರಿಕತೆಯ ಪರದೆ ಕವಿಯದ ಸ್ವಚ್ಛ ದೃಷ್ಟಿಯ ಮುಗ್ಧ. ಕಲ್ಮಷದ ಸೋಂಕಿಲ್ಲದ ಆ ಸರಳತೆಗಾಗಿಯೇ ಅವನನ್ನು ಮೆಚ್ಚಿಕೊಂಡಿದ್ದೆ. ಕನ್ನಡ ವಿಭಾಗದಲ್ಲಿ ಉಪನ್ಯಾಸಕನಾಗಿದ್ದ ನಾನು ನಾಯಕ್‌ನ ಕ್ಲಾಸಿಗೆ ನವೋದಯ ಕಾವ್ಯವನ್ನು ಪಾಠ ಮಾಡುತ್ತಿದ್ದೆ. ಸಹಜವಾಗಿಯೇ ಆದರ್ಶ, ಭಾವುಕತೆ, ಪ್ರೇಮ, ಜೀವನ ಮೌಲ್ಯಗಳ ಬಗ್ಗೆ ಆಗಾಗ ಹೇಳುತ್ತಲೂ ಇದ್ದೆ. ಆಗೆಲ್ಲ ತರಗತಿಯ ಹತ್ತೈವತ್ತು ಕಣ್ಣುಗಳಲ್ಲಿ ಮಿನುಗುವ ಬೆಳಕು ನನಗೆ ಪ್ರಿಯವಾಗುತ್ತಿತ್ತು. ಪ್ರತಿಯೊಂದು ಹೊಸ ಬ್ಯಾಚ್ ಬಂದಾಗಲೂ ಅದು ಯುನಿವರ್ಸಿಟಿಗೆ ವಿದಾಯ ಹೇಳುವವರೆಗೆ ಆ ಬ್ಯಾಚ್‌ನ ಪ್ರತಿಯೊಬ್ಬರ ನಡವಳಿಕೆ, ಮನಃಸ್ಥಿತಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಅವರ ನಡುವೆ ಆಗೊಮ್ಮೆ ಈಗೊಮ್ಮೆ ನಾಯಕ್‌ನಂತಹ ಸಾಚಾ ಹುಡುಗರು ಕಾಣಸಿಗುತ್ತಿದ್ದರು.

ನಾಯಕ್ ನನಗೆ ಇಷ್ಟವಾದ ಎಂದೆನಲ್ಲ. ಅವನ ಲವಲವಿಕೆ, ಹೊಸ ಅರಿವಿಗೆ ಸದಾ

ತನ್ನನ್ನು ತೆರೆದುಕೊಳ್ಳುವ ಉತ್ಸಾಹ, ಸೆಮಿನಾರುಗಳು ಹಾಗೂ ಪಾಠ್ಯ ಚಟುವಟಿಕೆಗಳಲ್ಲಿ ಆತ ತೋರುತ್ತಿದ್ದ ಆಸಕ್ತಿ ಅಧ್ಯಾಪಕನಾಗಿಯೂ ನಾನು ಅವನನ್ನು ಮೆಚ್ಚಿಕೊಳ್ಳುವಂತೆ ಮಾಡಿದ್ದವು. ನನ್ನ ಧೋರಣೆಗಳು, ಯುನಿವರ್ಸಿಟಿಯ ರಾಜಕೀಯಗಳಲ್ಲಿ ತಲೆ ಹಾಕದೆ ನನ್ನ ಪಾಡಿಗೆ ನಾನಿರುತ್ತಿದ್ದ ರೀತಿ ಅವನು ನನ್ನನ್ನು ಹಚ್ಚಿಕೊಳ್ಳಲು ಕಾರಣವಾಗಿರಬೇಕು. ಹಾಗೆಂದು ಅವನನ್ನೆಂದೂ ನನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲಿಲ್ಲ ನಾನು. ಅದು ನನ್ನ ಜಾಯಮಾನವೂ ಅಲ್ಲ. ಸುತ್ತ ಮುತ್ತ ಅದು ತೀರ ಸಾಮಾನ್ಯವಾಗಿರುವಾಗ ನನ್ನ ನಡವಳಿಕೆ ಅವನಿಗೆ ಆದರ್ಶಪ್ರಾಯವಾಗಿ ಕಾಣಿಸಿದ್ದು ಕೌತುಕವೇನೂ ಆಗಿರಲಿಲ್ಲ. "ಸರ್... ಸರ್..." ಎಂದು ನನ್ನ ಜತೆಗೇ ತಿರುಗುತ್ತ ನನ್ನ ಪಟ್ಟ ಶಿಷ್ಯನೇ ಆದ ನಾಯಕ್.

ದಿನಗಳು ಹೀಗೆಯೇ ಸಾಗುತ್ತಿದ್ದರೆ ಬಹುಶಃ ನಾನು ತಲೆಕೆಡಿಸಿಕೊಳ್ಳಬೇಕಾಗುತ್ತಿರಲಿಲ್ಲ. ಆದರೆ ಅನಿರೀಕ್ಷಿತ ತಿರುವುಗಳು ಬದುಕಿನ ಗತಿಯನ್ನೇ ಬದಲಿಸಿ ಬಿಡುತ್ತವೆ. ನಾಯಕ್‌ನ ವಿಚಾರದಲ್ಲೂ ಹೀಗೆಯೇ ಆಯಿತು. ಅವನ ಬದುಕಿನಲ್ಲಿ ಮಾಯಾ ಪ್ರವೇಶ ಮಾಡಿದಳು.

* * *


ಮಿಸ್ ಮಾಯಾ ಉತ್ತಪ್ಪ ಇಪ್ಪತ್ತನಾಲ್ಕರ ಬೆಡಗಿ. ಯುನಿವರ್ಸಿಟಿಯ ಕಂಬ ಕಂಬಗಳಿಗೂ ಅವಳ ಪರಿಚಯವಿದೆ ಎಂದಮೇಲೆ ಉಳಿದ ನರಜೀವಿಗಳ ಪಾಡೇನು? ಮಾಯಾ ಕನ್ನಡ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿನಿ. ಕೊಡಗಿನ ಕಾಫಿ ಪ್ಲಾಂಟರೊಬ್ಬಳ ಮಗಳು. ಕನ್ನಡ ಎಂ.ಎ. ಮುಗಿಸಿ ಈಗ ಪಿಎಚ್.ಡಿ. ಆರಂಭಿಸಿದ್ದಳು. ಅವಳ ಕುರಿತು ಸಾಕಷ್ಟು ಗಾಳಿ ಸುದ್ದಿಗಳು ಸ್ಟಾಫ್‌ರೂಮಿನ ಗೋಡೆಗಳನ್ನು ದಾಟಿ ನನ್ನ ಕಿವಿಗಳಿಗೂ ಬಿದ್ದಿದ್ದವು. ಸ್ವಚ್ಛಂದವಾಗಿರುವುದೇ ಜೀವನವೆಂಬ ಸಿದ್ಧಾಂತ ಅವಳದು. ಸಾಕಷ್ಟು ಮಂದಿ ಅವಳ ನಡತೆಯ ಕುರಿತು ಪಿಸುಮಾತಾಡುತ್ತಿದ್ದರು. ಅವುಗಳಲ್ಲಿ ಅರ್ಧಕ್ಕರ್ಧ ಅದ್ಭುತ 'ಪರ್ಸನಾಲಿಟಿ' (ಹಾಗೆಂದರೇನೋ ನನಗೆ ತಿಳಿಯದು. ಅವಳು ಸುಂದರಿ ನಿಜ– ಅದಕ್ಕೆ ಪುಟವಿಡುವಂತೆ ಉಡುಪೂ, ಅಲಂಕಾರವೂ ಇತ್ತು.) ಕಂಡು ಬೆರಗಾದ ಕೆಲವು ಅಧ್ಯಾಪಕರೂ ವಿದ್ಯಾರ್ಥಿಗಳೂ ತಮುಗವಳು



ಹಾಲಿನ ಬಿಲ್ ಬಾಕಿ ಇದೆಯಾ? ಒಂದು ಪೇಟಿಂಗ್ ತೆಗೊಂಡು ಹೋಗು... ಆ ಆರ್ಟ್ ಗ್ಯಾಲರಿಯಲ್ಲಿ ಕ್ಯಾಶ್ ಮಾಡಿಸ್ಕೊ...

ದಕ್ಕದ ಹೊಟ್ಟೆ ಉರಿಗೆ ಸೃಷ್ಟಿಸಿದ್ದಾದರೆ, ಇನ್ನುಳಿದದ್ದು ಎಗ್ಗಿಲ್ಲದ ನಡತೆ, ಯಾರನ್ನೂ ಯಾವುದಕ್ಕೂ ಕ್ಯಾರ್ ಮಾಡದ ತನ್ನ ಸ್ವಭಾವದಿಂದಾಗಿ ಅವಳೇ ಹುಟ್ಟಿಸಿಕೊಂಡದ್ದು. ಏನೇ ಇರಲಿ, ಯುನಿವರ್ಸಿಟಿಯ ಕೆಲವರೊಂದಿಗೆ ಅವಳ ಸಂಬಂಧ ಬೆಡ್‌ರೂಮಿನವರೆಗೂ ಮುಂದುವರಿದಿತ್ತೆಂಬುದಂತೂ ಸತ್ಯ. ಇವರಲ್ಲಿ ಕೆಲವರು ಅಧ್ಯಾಪಕರೂ ಸೇರಿದ್ದರಿಂದ ಅವಳು ಪ್ರತಿಭಾವಂತೆಯಲ್ಲದಿದ್ದರೂ ಯಶಸ್ವಿಯಾಗಿ ಸಂಶೋಧನೆ ಮುಗಿಸುತ್ತಾಳೆಂಬುದರಲ್ಲಿ ನನಗೇನೂ ಸಂದೇಹವಿರಲಿಲ್ಲ!

ಇಂತಹ ಮಾಯಾಳಿಗೆ ನಾಯಕ್ ಮರುಳಾದ ಎನ್ನುವುದು ನನಗೆ ಅಚ್ಚರಿಯ ಹೇಗೋ ಹಾಗೆಯೇ ವ್ಯಥೆಯ ಸಂಗತಿಯೂ ಆಗಿತ್ತು. ಎಂ.ಎ. ಎರಡನೇ ವರ್ಷಕ್ಕೆ ಈಗಷ್ಟೇ ಪ್ರವೇಶಿಸಿದ್ದ ನಾಯಕ್ ಮೊದಲ ವರ್ಷದ ಪರೀಕ್ಷೆಗಳಲ್ಲಿ ಫಸ್ಟ್‌ಕ್ಲಾಸ್ ಪಡೆದಿದ್ದ. ಪ್ರಥಮ ರ್‍ಯಾಂಕ್ ಬರುವ ಎಲ್ಲ ಸಾಧ್ಯತೆಗಳೂ ಇದ್ದವು. ಅವನ ಬಗ್ಗೆ ನನಗೆ ಮಾತ್ರವಲ್ಲ ಕನ್ನಡ ವಿಭಾಗದ ನಿರ್ದೇಶಕರಿಗೂ ತುಂಬು ಭರವಸೆಯಿತ್ತು. ಆದರೇಕೋ ದಿನಗಳು ಉರುಳಿದಂತೆ ನನ್ನಿಂದ ದೂರವೇ ಇರತೊಡಗಿದ ನಾಯಕ್. ಪುಸ್ತಕಗಳು, ಟಿಪ್ಪಣಿ, ಚರ್ಚೆಗಳೆಂದು ನನ್ನ ಬೆನ್ನ ಹಿಂದೆಯೇ ತಿರುಗುತ್ತಿದ್ದ ಈ ಹುಡುಗ ನನ್ನೆದುರಿಗೆ



ಮ್ಯಾನೇಜರನ್ನು ಕಾಣಬೇಕಿದ್ರೆ ನೆಹರೂ ಮೈದಾನಕ್ಕೆ ಹೋಗಿ. ಕ್ಯಾಶಿಯರನ್ನು ಕಾಣಬೇಕಿದ್ರೆ ಗಾಂಧೀ ಮೈದಾನಕ್ಕೆ ಹೋಗಿ... ಸಿಗಲೂಬಹುದು.

ಬರುವುದನ್ನೇ ತಪ್ಪಿಸುತ್ತಿದ್ದ. ಬರೇ ವಿಶ್ ಮಾಡುವ ಮಟ್ಟಕ್ಕೆ ಬಂದುಬಿಟ್ಟಿತು ನಮ್ಮ ಸಂಪರ್ಕ. ನನಗೊಂದು ಒಗಟಾದ ನಾಯಕ್.

ಆ ಬಾರಿಯ ಶೈಕ್ಷಣಿಕ ಪ್ರವಾಸಕ್ಕೆ ನಾಯಕ್ ಹೋಗಲಿಲ್ಲ. ಬಹುಶಃ ಮಾಯಾಳನ್ನು ಅಗಲಿರಲು ಅಸಾಧ್ಯವಾಯಿತೇನೋ ಎಂದು ನನ್ನ ಸಹೋದ್ಯೋಗಿಗಳು ಆಡಿಕೊಳ್ಳುವುದನ್ನು ಕೇಳಿದೆ. ಆದರೂ ಅವನ ಮೇಲಿದ್ದ ನನ್ನ ನಂಬುಗೆ ಪೂರ್ಣವಾಗಿ ಕರಗಲಿಲ್ಲ.

ಒಂದು ದಿನ ಬೆಳಗ್ಗಿನ ಹೊತ್ತು. ಕ್ಲಾಸಿರಲಿಲ್ಲ. ಯಾವುದೋ ಹಳೆಯ ಪುಸ್ತಕವೊಂದನ್ನು ರೆಫರ್ ಮಾಡಬೇಕಾಗಿತ್ತು. ಮನೆಯಿಂದ ಬೇಗನೇ ಬಂದವನು ಲೈಬ್ರೆರಿಯತ್ತ ಸ್ಕೂಟರ್ ತಿರುಗಿಸಿದೆ. ಅಲ್ಲೆಲ್ಲ ಅಚ್ಚುಕಟ್ಟಾಗಿ ದಾರಿಯ ಎರಡೂ ಬದಿಗಳಲ್ಲಿ ಮೇಫ್ಲವರ್ ಗಿಡಗಳನ್ನು ಬೆಳೆಸಿ ಕಲ್ಲಿನ ಬೆಂಚುಗಳನ್ನು ಹಾಕಿಸಿದ್ದರು. ಒಂದು ಬೆಂಚಿನ ಮೇಲೆ ನಾಯಕ್ ಮತ್ತು ಮಾಯಾ ಕೂತಿದ್ದರು. ಹಠಾತ್ತನೆ ನನ್ನನ್ನು ಗಮನಿಸಿದ ನಾಯಕ್ ಬೆಚ್ಚಿಬಿದ್ದು ಅವಳಿಂದ ದೂರ ಸರಿದ. ನಾನು ಮಾತನಾಡದೆ ಲೈಬ್ರೆರಿಯತ್ತ ಸ್ಕೂಟರ್ ಓಡಿಸಿದೆ.

ಇದು ನಿತ್ಯದ ಮಾತಾಗತೊಡಗಿತು. ಕ್ಯಾಂಪಸ್‌ನ ಮೇಫ್ಲವರ್ ಗಿಡಗಳಿಗೆಲ್ಲ ಇವರಿಬ್ಬರ ಪ್ರಣಯ ಮಾಮೂಲು ಸಂಗತಿಯಾಗಿ ತೋರಿರಬೇಕು. ಅದರೊಂದಿಗೇ ನಾಯಕ್‌ನ ಶೈಕ್ಷಣಿಕ ಸಾಧನೆ ಕಳಪೆ ಎಂಬ ಮಟ್ಟಕ್ಕೆ ಕುಸಿಯಿತು. ಒಳ್ಳೆಯ ಭವಿಷ್ಯವಿರುವ ಹುಡುಗ ಹೀಗೆ ಸೊನ್ನೆಯಾಗುತ್ತಿದ್ದಾನಲ್ಲ ಎಂಬ ವ್ಯಥೆಗೆ ಒಂದೆರಡು ಬಾರಿ ನಾಯಕ್‌ನನ್ನು ಕರೆದು ತಿಳಿ ಹೇಳುವ ಪ್ರಯತ್ನ ಮಾಡಿದೆ. ಹೇಳುತ್ತಿದ್ದಷ್ಟು ಹೊತ್ತು ವಿಧೇಯನಾಗಿ ಕೇಳುತ್ತಿದ್ದ, ತಲೆ ತಗ್ಗಿಸಿ, ಮತ್ತೆ ಯಥಾ ಪ್ರಕಾರ ನಾಯಿ ಬಾಲ. ನನಗೇ ಬೇಜಾರೆನ್ನಿಸಿ, 'ಏನಾದರೂ ಮಾಡಲಿ. ಅವನನ್ನು ತಿದ್ದುವ ಪಾರುಪತ್ಯ ನನಗೇಕೆ?' ಎಂದುಕೊಂಡು ಸುಮ್ಮನಾದೆ. ಹೀಗೆಯೇ ಅರ್ಧ ವರ್ಷ ಕಳೆಯಿತು.

* * *

ಗಿರಿಧರ ಗೌಡ ಈ ವರ್ಷದ ಬ್ಯಾಚ್‌ನ ಹುಡುಗ. ಬಂದ ನಾಲ್ಕು ತಿಂಗಳಲ್ಲೇ ಸಾಹಿತ್ಯ, ನಾಟಕ, ಯೂನಿಯನ್ ಅಂತ ಓಡಾಟ ಪ್ರಾರಂಭಿಸಿದ್ದ. ಶೈಕ್ಷಣಿಕವಾಗಿ ವಿಶೇಷ ಪ್ರತಿಭೆ ತೋರಿಸದಿದ್ದರೂ ವ್ಯಾವಹಾರಿಕ ಚಾಲಾಕುತನ ಸಾಕಷ್ಟಿತ್ತು. ಸುಳ್ಯದ ಹುಡುಗ. ಕಟ್ಟುಮಸ್ತಾದ ದೇಹ. ಆಕರ್ಷಕ ಮುಖ. ಅವನ ತಂದೆ ಮಾಬಲ ಗೌಡರು ನನಗೆ ಪರಿಚಿತರು. ನನ್ನವಳ ಊರಾದ ಸುಳ್ಯಕ್ಕೆ ಹೋದಷ್ಟು ಭಾರಿಯೂ ಅವರ ಭೇಟಿ ತಪ್ಪದೆ ಆಗುತ್ತಿತ್ತು. ಭಾರೀ ಅಡಿಕೆ ತೋಟ ಹೊಂದಿದ್ದ ಗಟ್ಟಿ ಕುಳ ಗೌಡರು. ಒಂದೆರಡು ಬಾರಿ ನನ್ನಲ್ಲಿ,"ನನ್ನ ಹೈದನ ಎಂ.ಎ. ಮಾಡಿಕೇಂತ ನಿಮ್ಮೂರಿಗೆ ಕಳ್‌ಸ್ವೊಳೆ. ಮಂಗ್ಳೂರಿಲಿ ನಂಗೆ ನೆಂಟ್ರ್ ಯಾರೂ ಇಲ್ಲೆ. ನೀವು ಹೇಂಗೂ ಅವಂಗೆ ಮಾಷ್ಟ್ರು. ಒಂದ್ ಕಣ್ಣೆರ್ಲಿ ಸ್ವಾಮಿ" ಎಂದಿದ್ದರು. "ಅದಕ್ಕೇನಾಕು ಗೌಡ್ರೆ. ನಾ ಒಳೆ" ಅಂತ ನಾನೂ ಅಭಯ ನೀಡಿದ್ದೆ.

ಗಿರಿಧರ ನನ್ನ ಆತ್ಮೀಯ ವಿದ್ಯಾರ್ಥಿಯಾಗದಿದ್ದರೂ ಸಾಹಿತ್ಯ ಸಂಘದ ಚಟುವಟಿಕೆಗಳಿಂದಾಗಿ ಹೆಚ್ಚು ಮಾತು, ಚರ್ಚೆ ನಮ್ಮ ನಡುವೆ ನಡೆಯುತ್ತಿತ್ತು. "ಸರಿಯಾಗಿ ಓದು ಮಾರಾಯ. ನಿನ್ನ ತಂದೆ ನನ್ನನ್ನು ಸಾಕಷ್ಟು ಎಚ್ಚರಿಸಿದ್ದಾರೆ" ಎಂದು ಆಗಾಗ ಜ್ಞಾಪಿಸು

ತ್ತಲೂ ಇದ್ದೆ. ಅವನ ಬಗ್ಗೆ ಯಾವುದೇ ದೂರು ಗಳಿರಲಿಲ್ಲವಾಗಿ, "ನಿಮ್ಮ ಹೈದ ಮೋಸ ಇಲ್ಲೆ ಗೌಡ್ರೆ" ಎಂದು ಗೌಡರ ಭೇಟಿಯಾದಾಗ ತಿಳಿಸಿದ್ದೆ.

* *

ನಾಯಕ್- ಮಾಯಾರ ಸಂಬಂಧ ಹೆಚ್ಚು ದಿನ ನಡೆಯಲಿಲ್ಲ. ಅವಳಿಗೆ ಇವನ ಸಹವಾಸ ಸಾಕೆನ್ನಿಸಿದಾಗ ಕೊಡವಿಕೊಂಡೇ ಬಿಟ್ಟಳು. ಪ್ರೀತಿ, ಮದುವೆ, ಸಮಾನತೆ ಇತ್ಯಾದಿ ಕನಸು ಕಂಡಿದ್ದ ಈ ಭಾವುಕ ದಿಕ್ಕೆಟ್ಟ. "ಸಾರಿ ಮಿ. ನಾಯಕ್. ಯುನಿವರ್ಸಿಟಿ ಲೈಫ್ ಅಂದ್ಮೇಲೆ ಇವೆಲ್ಲಾ ಕಾಮನ್. ಫೂಲಿಶ್ ಆಗಿ ಬಿಹೇವ್ ಮಾಡ್ಬೇಡಿ. ಸುಂಸುಮ್ನೇ ಸೆಂಟಿಮೆಂಟಲಾದ್ರೆ ನಿಮ್ಗೇ ಕಷ್ಟ. ನಾನಿರೋ ರೀತೀನೇ ಹಾಗೆ. ಮದುವೆ-ಗಿದುವೆ ನಂಗಿಷ್ಟ ಇಲ್ಲ. ಸಾರಿ ಫಾರ್ ದಿ ಡಿಸಪಾಯಿಂಟ್‌ಮೆಂಟ್ ಆ್ಯಂಡ್ ಥ್ಯಾಂಕ್ಸ್ ಫಾರ್ ದಿ ನೈಸ್ ಕಂಪೆನಿ" ಎಂದು ಇವನಿಗೆ ಗುಡ್ ಬೈ ಹೇಳಿ ಬಿಟ್ಟಳು.

ಅಲ್ಲಿಂದ ನನ್ನಲ್ಲಿಗೆ ಓಡಿ ಬಂದು ಕಣ್ಣೀರು ಸುರಿಸುತ್ತಿದ್ದ ನಾಯಕ್‌ಗೆ ನಾನೇನು ತಾನೇ ಹೇಳಬಹುದು? ಹೇಗೋ ಆ ಆಘಾತವನ್ನು ಸಹಿಸಿಕೊಂಡ. ನನ್ನ ಹಿತವಚನ, ಸಾಂತ್ವನ ಕೆಲಸ ಮಾಡಿರಬೇಕು. ಮಾರ್ಚ್ ವೇಳೆಗೆ ಸುಧಾರಿಸಿ ಕೊಂಡು ಎರಡನೆ ವರ್ಷದ ಪರೀಕ್ಷೆಗೆ ಸಿದ್ಧನಾದ.

ಪರೀಕ್ಷೆ ಮುಗಿದು ಫಲಿತಾಂಶಗಳು ಪ್ರಕಟ ವಾದವು. ನಾಯಕ್ ಫಸ್ಟ್ ರ‍್ಯಾಂಕ್ ಕಳಕೊಂಡಿದ್ದರೂ, ಫಸ್ಟ್‌ಕ್ಲಾಸ್‌ನಲ್ಲಿ ತೇರ್ಗಡೆಯಾಗಿದ್ದ. ಅಂತೂ ಗೆಲುವಿನ ಮುಖದಿಂದಲೇ ನಮಗೆಲ್ಲ ವಿದಾಯ ಹೇಳಿದ. ಒಂದು ಅಧ್ಯಾಯ ಮುಗಿಯಿತು ಅಂದುಕೊಂಡೆ.

* * *

ಆ ದಿನ ನಾನು ಕೊಂಚ ಬೇಗನೆ ಕ್ಯಾಂಪಸ್‌ಗೆ ಬಂದೆ. ಕನ್ನಡ ವಿಭಾಗದ ಎದುರಿನ ತಿರುವಿನಲ್ಲಿ ಸ್ಕೂಟರ್‌ನ ವೇಗ ಕಡಿಮೆಗೊಳಿಸುತ್ತಿದ್ದಂತೆ ಮೇಫ್ಲವರ್ ಗಿಡದ ಕೆಳಗೆ ಕೂತಿದ್ದ ಜೋಡಿಯೊಂದು ಕಣ್ಣಿಗೆ ಬಿತ್ತು. ಅರೆ! ಗಿರಿಧರ. ಅವನ ಹೆಗಲಿಗೊರಗಿ ಕುಳಿತಿದ್ದ ಮಾಯಾ ಅದೇನೋ ಅವನ ಕಿವಿಯಲ್ಲಿ ಪಿಸುಗುಡುತ್ತಿದ್ದಳು. ಗಿರಿಧರ ಅವಳ ಮುಖವನ್ನೇ ನೋಡುತ್ತ ಈ ಪ್ರಪಂಚದ ಪರಿವೆ ಇಲ್ಲದೆ ಕುಳಿತಿದ್ದ. ಕಾಲ ಬಳಿ ಒಂದೆರಡು ಪುಸ್ತಕಗಳು. ನಾನು ನಿಟ್ಟುಸಿರೊಂದನ್ನು ಬಿಟ್ಟು ಮುಂದೆ ಸಾಗಿದೆ. ●

ಮಿನಿಗವನಗಳು



ಮಲ್ಲಿಗೆ'
ಕಂಡರೆ
ಬಲು ಇಷ್ಟ
ನನ್ನ—
ಮಲ್ಲಿ-
-ಗೆ

* * *

ನನ್ನವಳ
ಒಂದೊಂದು ಮಾತೂ
ಸ್ಲೋಗನ್ನು
ನನ್ನೆದೆಗಂತೂ-
ಸ್ಲೋ—'ಗನ್ನು'!

● ಡಾ। ಅಶೋಕ ಸಮಗಂಡಿ



ಹೀಗೇಕೆ?

ಮನೆ ಮೇಲೆ ನಿಂತು
ನಿನ್ನ ಮೇಲೆ ನನಗೆ
ಪ್ರೀತಿಯಿಲ್ಲವೆಂದು
ದನಿಯೆತ್ತಿ ಕೂಗಿದರೂ
ಮನದೊಳಗೆ ನಿಂತ ನೀನು
ಹೀಗೇಕೆ ನಗುತ್ತಿರುವೆ?

● ದಾಕ್ಷಾಯಣಿ, ದೇವನಹಳ್ಳಿ

ತುಣುಕು ಮಿಣುಕು

ಬೇಸ್ತು

ಮೂರು ವರ್ಷಕ್ಕೊಮ್ಮೆ ನಮ್ಮೂರಲ್ಲಿ ಮಾರಿಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಬರುವ ಕ್ಯಾಬರೇ ಡ್ಯಾನ್ಸೇ ಯುವಕರಿಗೆ ವಿಶೇಷ ಆಕರ್ಷಣೆ. ಆಗ ನನಗಿನ್ನೂ 21-22 ವರ್ಷ. ಮೊದಲನೇ ಬಾರಿ ಇಂತಹಾ ಡ್ಯಾನ್ಸನ್ನು ನೋಡಲು ಹೋಗುವಾಗ ನನಗೆ ಒಂದು ರೀತಿಯ ಮುಜುಗರ. ನನ್ನ ಸ್ನೇಹಿತರು, ಪರಿಚಯದವರು, ಬಂಧುಗಳು ಯಾರಾದರೂ ನೋಡುತ್ತಾರೇನೋ ಎನ್ನುವ ಭಯ. ಆದರೂ ಕುತೂಹಲದಿಂದ ಯಾರಿಗೂ ಗುರುತು ಸಿಗಬಾರದೆಂದು ತಲೆಗೆ ಮಫ್ಲರ್ ಕಟ್ಟಿ (ವಿಪರೀತ ಶೆಕೆ ಇದ್ದರೂ ಸಹಾ) ರಷ್ ಎಲ್ಲಾ ಕಡಿಮೆ ಆದ ಮೇಲೆ ಆ ಕಡೆ, ಈ ಕಡೆ ನೋಡುತ್ತಾ ಜಾಗರೂಕನಾಗಿ ಟಿಕೇಟು ಪಡೆದು ಒಳಗೆ ಹೋದೆ. ಡ್ಯಾನ್ಸ್ ಇನ್ನೂ ಪ್ರಾರಂಭವಾಗಿರಲಿಲ್ಲ. ಸಹಜವಾಗಿ ಆಚೀಚೆ ಕಣ್ಣಾಡಿಸಿದಾಗ ಎದೆ ಧಸಕ್ಕೆಂದಿತು. ಏಕೆಂದರೆ ಅಲ್ಲಿದ್ದ ಸಭಿಕರಲ್ಲಿ ಹೆಚ್ಚಿನವರು ನನ್ನ ಸ್ನೇಹಿತರು, ಪರಿಚಯದವರು ಹಾಗೂ ನನ್ನ ಬಂಧುಗಳೇ ಆಗಿದ್ದರು!

● ಶ್ರೀಧರ ದಾಮ್ಲೆ, ಬೆಂಗಳೂರು

* * *

ಅನಿರೀಕ್ಷಿತ ಉಪಚಾರ

ನಾವು ಮಾವಿನಕುರ್ವೆ ಶಾಖೆಗೆ ನಿರೀಕ್ಷಣಾ (Inspection) ಕೆಲಸದ ನಿಮಿತ್ತ ಹೋಗಿದ್ದೆವು. ಅದು ಹೊಳೆಯ ಇನ್ನೊಂದು ಬದಿಯಲ್ಲಿದ್ದು ಅಲ್ಲಿಗೆ ಹೋಗಲು ದೋಣಿಯ ಮೂಲಕ ಹೋಗಬೇಕಿತ್ತು. ಬಸ್ಸಿನಿಂದಿಳಿದ ನಾವು ದೋಣಿ ಹಿಡಿಯಲೆಂದು ನದೀ ತೀರಕ್ಕೆ ಬಂದಾಗ ನಮಗೆ ಆಶ್ಚರ್ಯ ಕಾದಿತ್ತು. ಕೆಲವು ಜನರು ಜಯ-ಜಯಕಾರ ಮಾಡುತ್ತಾ ನಮಗೆ ಮುತ್ತಿಗೆ ಹಾಕಿ ನಮಗೆ ಏನನ್ನೂ ಹೇಳಲು ಅವಕಾಶ ಕೊಡದೆ ಹೂಹಾರ ಹಾಕಿದರು. ಪ್ರಾಯಶಃ ಇದು ನಮ್ಮ ಶಾಖಾಧಿಕಾರಿಯ ವ್ಯವಸ್ಥೆ ಇರಬೇಕೆಂದೆನಿಸಿ ಕಸಿವಿಸಿಯಾಯ್ತು. ದೋಣಿಯಲ್ಲಿ ಕೂತು ಆಚೆ ದಡ ಸೇರಿದಾಗ ದಿವ್ಯವಾದ ಲಘು ಉಪಹಾರವನ್ನಿತ್ತು ವಾದ್ಯ ಘೋಷಗಳಿಂದ ನಮ್ಮನ್ನು ಕರೆದೊಯ್ಯಲು ಅಣಿಯಾದಾಗ ಇದು ಅತಿಯೆನಿಸಿ ನಾವು ಪ್ರತಿಭಟಿಸಿದೆವು. ಕೂಲಂಕುಷವಾಗಿ ವಿಚಾರಿಸಿದಾಗ ಆ ದಿನ ಸ್ಥಳೀಯ ದೇವಸ್ಥಾನಕ್ಕೆ ಮುಜರಾಯಿ ಇಲಾಖೆಯಿಂದ ಅಧಿಕಾರಿಗಳು ಬರುವವರಿದ್ದರೆಂದೂ ನಮ್ಮನ್ನು ಅವರೆಂದು ತಪ್ಪಾಗಿ ತಿಳಿದು ಅವರಿಗಾಗಿ ಏರ್ಪಡಿಸಿದ್ದ ಸ್ವಾಗತ ಹಾಗೂ ಉಪಚಾರ ನಮಗೆ ಸಂದದ್ದು ತಿಳಿದು ಹೊಟ್ಟೆ ಹುಣ್ಣಾಗುವಷ್ಟು ನಕ್ಕಾಗ ಗಲಿಬಿಲಿಗೊಳ್ಳುವ ಸರದಿ ಅವರದಾಯ್ತು. ನಾವು ಮುಜರಾಯಿ ಇಲಾಖಾ ಅಧಿಕಾರಿಗಳಲ್ಲ ಬ್ಯಾಂಕಿನ ನಿರೀಕ್ಷಣೆಗಾಗಿ ಬಂದಿರುವ ಬ್ಯಾಂಕ್ ಅಧಿಕಾರಿಗಳೆಂದು ತಿಳಿಸಿ ಹೇಳಿದಾಗ ಮೊದಲು ಅವರು ಸುಸ್ತಾದಂತೆ ಕಂಡರೂ ನಂತರ ಚೇತರಿಸಿಕೊಂಡು ಬ್ಯಾಂಕ್ ಸಹಾ ನಮ್ಮ ಊರಿನ ದೇವಸ್ಥಾನದಂತೆ. ಆದ್ದರಿಂದ ತಮ್ಮ ಸ್ವಾಗತೋಪಚಾರ ವ್ಯರ್ಥವಾಗಲಿಲ್ಲ ಎಂದು ಸಮಾಧಾನಪಟ್ಟುಕೊಂಡು ಬರಲಿರುವ ಮುಜರಾಯಿ ಇಲಾಖೆಯ ಅಧಿಕಾರಿಗಳನ್ನು ಎದುರುಗೊಳ್ಳಲು ಓಡಿದರು.

● ಭಾಸ್ಕರ್, ಉಡುಪಿ

* * *

ಎರಡು ಟ್ಯೂಬ-ಲೈಟುಗಳು!

ಮೂವತ್ತು ವರ್ಷಗಳ ಹಿಂದೆ ಹೈಸ್ಕೂಲಿನಲ್ಲಿ ಶಿಕ್ಷಕನಾಗಿದ್ದಾಗಿನ ಮಾತು. ನಾನು ಊಟ ಮಾಡುತ್ತಿದ್ದ ಖಾನಾವಳಿಯಲ್ಲಿಯೆ ವಿವಿಧ ಇಲಾಖೆಯಲ್ಲಿ ಸೇವೆ ಮಾಡುತ್ತಿದ್ದವರೂ ಊಟ ಮಾಡುತ್ತಿದ್ದರು. ಒಂದೇ ವೃತ್ತಿಯಲ್ಲಿದ್ದ ಇಬ್ಬರು ಕೂಡಿದರೆ ಅದೇ ಮಾತು, ಅದೇ ವಿಷಯವಾದ್ದರಿಂದ ಬೇರೆಯವರ ಕೂಡ ಗೆಳೆತನ ಉತ್ತಮವೆಂದು ನಂಬಿದ್ದವರು. ಒಂದೇ ಬಣ್ಣದ ಹಕ್ಕಿಗಳು ಒಂದೆಡೆ ಕೂಡುವಂತೆ, ವಿವಿಧ ಇಲಾಖೆಯ ನಾವೆಲ್ಲರು

ಕೂಡಿ "ದೀಪ ಮಾಲೆ" ಎನ್ನುವ ಹೆಸರಿನಿಂದ ಒಂದು ಸಂಘ ಸ್ಥಾಪಿಸಿ ಅದರ ಉದ್ಘಾಟನಾ ಸಮಾರಂಭಕ್ಕೆ ಪ್ರಸಿದ್ಧ ಸಂಗೀತಗಾರರನ್ನು ಕರೆಯಿಸಬೇಕೆಂದು ನಿರ್ಣಯಿಸಿ ಅದರ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದ್ದಾಯಿತು. ಸಾಕಷ್ಟು ಪ್ರಯತ್ನಪಟ್ಟು ಸುಪ್ರಸಿದ್ಧ ಸಂಗೀತ ಶಿಕ್ಷಕ ಮಿತ್ರನೊಬ್ಬನನ್ನು ಒಪ್ಪಿಸಿ ಆ ಕಾರ್ಯಕ್ರಮವನ್ನು ಮುಖ್ಯಾಧ್ಯಾಪಕರ ಒಪ್ಪಿಗೆ ಪಡೆದು ನಮ್ಮ ಹೈಸ್ಕೂಲ್ ಸೆಂಟ್ರಲ್ ಹಾಲ್‌ನಲ್ಲಿ ಏರ್ಪಡಿಸಿದ್ದೆವು. ಶ್ರೋತೃಗಳಿಂದ ತುಂಬಿದ ಆ ಸಮಾರಂಭ ಭಾರಿ ಯಶಸ್ವಿಯಾಯಿತು. ಮುಖ್ಯ ಅತಿಥಿಗಳು ನನ್ನ ಖಾಸಾ ಮಿತ್ರರಾಗಿದ್ದರಿಂದ ಮತ್ತು ನಾನು ಶಿಕ್ಷಕನಾಗಿದ್ದರಿಂದ (ಭಾಷಣ ಮಾಡಲು ಬರುವದೆಂಬ ತಿಳಿವಳಿಕೆ) ಅವರ ಪರಿಚಯ, ಆಭಾರ ಮನ್ನಣೆ, ಗೌರವಧನ ಸಮರ್ಪಣೆ ನನ್ನದಾಗಿತ್ತು. ಮತ್ತು ಪೂಜಾ ಸಮಯದಲ್ಲಿ ಕರಡಿಬಿಟ್ಟಂತಾಗಬಾರದೆಂದು ತಿಳಿದು, ನನ್ನ ಕೆಲಸವನ್ನು (ಅತಿಥಿಗಳ ಪರಿಚಯ, ಸ್ವಾಗತ ಸಹಿತ) ಕಾರ್ಯಕ್ರಮದ ನಂತರ ಇಟ್ಟುಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ (ಸಂಗೀತದ ಮೋಡಿಯಲ್ಲಿ) ತಲ್ಲೀನನಾದ ನನ್ನನ್ನು ನಂತರ ಗೆಳೆಯನೊಬ್ಬ ಎಚ್ಚರಿಸಿದ್ದರಿಂದ ಓಡಿ ಹೋಗಿ ಸ್ಟೇಜ್ ಮೇಲೆ ನಿಂತು, ಸ್ವಾಗತ ಪರಿಚಯ ಆಭಾರ ಮನ್ನಣೆ ಹೇಗೊ ಮುಗಿಸಿ, "ಶ್ರೀಯುತರಾದ... ಇವರು ತಮ್ಮ ಅಲ್ಪ ಸೇವೆಗಾಗಿ ಈ ಅಮೌಲ್ಯ ಕಾಣಿಕೆಯನ್ನು ಸ್ವೀಕರಿಸಬೇಕೆಂದು" ಕೇಳಿಕೊಂಡು ಕಾಣಿಕೆ ಅರ್ಪಿಸಿ ನನ್ನ ಕುರ್ಚಿಯಲ್ಲಿ ಕುಳಿತೆ. ಶ್ರೋತೃಗಳು ಚಪ್ಪಾಳೆ ತಟ್ಟುವುದರೊಂದಿಗೆ ನಕ್ಕಿದ್ದೇ ನಕ್ಕದ್ದು. ಗಾಬರಿಯಾಗಿ ಹಿಂದೆ ನೋಡಿದಾಗ ಜಗ್ಗನೇ ಬೆಳಕು ಬಿದ್ದು ಮತ್ತೆ ಸ್ಟೇಜ್ ಮೇಲೆ ಬಂದು ಕೈ ಮುಗಿದು ಹೇಳಿದೆ, "ದಯಮಾಡಿ ಕ್ಷಮಿಸಬೇಕು. ಮುಖ್ಯ ಅತಿಥಿಗಳು ತಮ್ಮ ಅಮೌಲ್ಯ ಸೇವೆಗಾಗಿ ಈ ಅಲ್ಪ ಕಾಣಿಕೆಯನ್ನು ಸ್ವೀಕರಿಸಬೇಕು" ಮತ್ತೊಮ್ಮೆ ಮುಖ್ಯ ಅತಿಥಿಗಳ ಕ್ಷಮೆಕೇಳಿದೆ. ಆಗ ಅವರಿಗೆ ನನ್ನ ತಪ್ಪು ತಿಳಿದು ನಗಲಿಕ್ಕೆ ಆರಂಭಿಸಿದರು. ನಾನೊಬ್ಬನೇ ಟ್ಯೂಬ್‌ಲೈಟ್ ಎಂದು ತಿಳಿದರೆ ಅಲ್ಲಿ ಮತ್ತೊಂದಿತ್ತು!




● ಎಸ್. ಬಿ. ಖೋದಾನಪೂರ, ಬೆಂಗಳೂರು

* * *

ಕಾವೇರಿ ಸ್ನಾನ

ಆಗ ನಾನು ಟಿಕೆಟ್ ಕಲೆಕ್ಟರ್ ಆಗಿದ್ದೆ. ನಮ್ಮ ವೃತ್ತಿಯಲ್ಲಿ ನಿಷ್ಠುರದಿಂದಲೇ ಇರಬೇಕಾಗುತ್ತದೆ. ಟಿಕೆಟ್ ಇಲ್ಲದೆ ಪ್ರಯಾಣ ಮಾಡುವವರೊಂದಿಗೆ ನಿರ್ದಯದಿಂದ ವರ್ತಿಸಬೇಕಾಗುತ್ತದೆ. ಅದು ನಮ್ಮ ವೃತ್ತಿ ಧರ್ಮ. ಆದರೂ ಪ್ರತಿಯೊಂದು ನಿಯಮಕ್ಕೂ ಒಂದು ಅಪವಾದವಿರುವಂತೆ ಒಂದೊಂದು ಸಲ ನಿಯಮವನ್ನು ಮೀರಬೇಕಾದ ಸಂದರ್ಭ ಬರುತ್ತದೆ. ಒಂದು ಸಲ ಒಬ್ಬ ವೃದ್ಧೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಳು. ಅವಳ ಹತ್ತಿರ ಟಿಕೆಟ್ ಇರಲಿಲ್ಲ. ಆಕೆಯ ಕೃಷ್ಣಾಜಿನ ಪೆಟ್ಟಿಗೆ, ಹಣೆಯ ಅಂಗಾರ ಇವನ್ನು ನೋಡಿದಾಗ ಇವರೊಬ್ಬರು ಸಂಪ್ರದಾಯಶೀಲೆ ಎಂಬುದು ಸ್ಪಷ್ಟವಾಗುತ್ತಿತ್ತು. ನಾನು ಆಕೆಯ ಟಿಕೆಟ್ಟನ್ನು ಕೇಳಿದಾಗ ಅವಳು ಕೊಟ್ಟ ಉತ್ತರ



ಆಶ್ಚರ್ಯವನ್ನು ತಂದಿತು. ಅವಳ ನೆಂಟರು ಮೂವರು ರೈಲ್ವೇ ಇಲಾಖೆಯಲ್ಲಿದ್ದು ರಿಟೈರಾದವರೆಂದೂ ಆದ್ದರಿಂದ ಟಿಕೆಟ್ ಕೊಳ್ಳಬೇಕಾದ ಆವಶ್ಯಕತೆಯಿಲ್ಲವೆಂದೂ ಹೇಳಿದಾಗ ನನಗೆ ನಗು ಬಂದಿತು. ನಾನು,

"ಅಜ್ಜೀ ಟಿಕೆಟ್ ಇಲ್ಲದೇ ಪ್ರಯಾಣ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತೆ ಗೊತ್ತಾ?" ಎಂದೆ.

"ನೋಡು ಮಗು, ನಾನೇನೂ ಮೋಜು ಮಾಡುವುದಕ್ಕೆ ಹೋಗ್ತಾ ಇಲ್ಲ. ಈಗ ತುಲಾ ಮಾಸದಲ್ಲಿ ಕಾವೇರಿ ಸ್ನಾನ ಮಾಡಿದರೆ ಪುಣ್ಯ ಬರುತ್ತೆ. ಅದಕ್ಕೋಸ್ಕರ" ಎಂದರು. ಬೋಗಿಯಲ್ಲಿದ್ದವರೆಲ್ಲ ಮುಸಿ ಮುಸಿ ನಗುತ್ತಿದ್ದರು.

ನಾನು "ಇರಬಹುದು ಅಜ್ಜೀ, ಆದರೆ ಟಿಕೆಟ್ ಇಲ್ಲದೆ ಪ್ರಯಾಣ ಅಪರಾಧ" ಎಂದೆ.

ಆಕೆ "ಅಯ್ಯೋ ಈಪಾಟಿ ಭಾರ ಹೊರೋ ರೈಲಿಗೆ ನಾನೊಬ್ಬಳು ಭಾರವೇನೋ ಬಡ ಮುಂಡೆ?" ಎಂದರು.

ನಾನು ಅವರೊಡನೆ ಚರ್ಚೆ ಮಾಡುವುದು ನಿಷ್ಫಲವೆಂದು ಅರಿತು ನನ್ನ ರಶೀದಿ ಪುಸ್ತಕದಲ್ಲಿ ಅವರಿಂದ ಡಬಲ್ ಛಾರ್ಜು ವಸೂಲಾದ ಹಾಗೆ ತೋರಿಸಿ ಆ ದುಡ್ಡನ್ನು ನಾನೇ ಕಟ್ಟಿದೆ.

● ಡಿ. ಗುಂಡೂರಾವ್, ಮೈಸೂರು

* * *

ಭಾಷೆಯ ಅವಾಂತರ

ನಾನು ಆಗ ತಾನೇ ಕೆಲಸಕ್ಕೆ ಸೇರಿದ್ದೆ. ಒಂದು ದಿನ ಆಫೀಸಿನಲ್ಲಿ ಬರೆಯುತ್ತ ಕುಳಿತಿದ್ದೆ. "ಮೇಡಂ" ಎಂಬ ಕೂಗಿಗೆ ತಲೆಯೆತ್ತಿ ಏನೆಂಬಂತೆ ನೋಡಿದೆ. ಒಬ್ಬ ವ್ಯಕ್ತಿ ಕೇಳಿದರು "ಕತ್ತೆಯವರಿದಾರಾ?" ನನಗೆ ಒಂದು ಕ್ಷಣ ನಗೆ ಬಂತು. ಆದರೂ ತಡೆದುಕೊಂಡು ಹೇಳಿದೆ "ಆ ಹೆಸರಿನವರು ಇಲ್ಲಿ ಯಾರೂ ಇಲ್ವಲ್ಲಾ." ಒಂದು ಕ್ಷಣ ಯೋಚಿಸಿ ಅವರು ಹೇಳಿದರು "ಇದೇ ಆಫೀಸಿನಲ್ಲಿ ಇರುತ್ತೇನೆಂದು ಹೇಳಿದ್ದರು" ಎಂದಾಗ ನನಗೆ ಪೇಚಿಗಿಟ್ಟುಕೊಂಡಿತು. "ಹಾಗಾದರೆ ಅವರನ್ನು ಕೇಳಿ" ಎಂದು ನನ್ನ ಸಹೋದ್ಯೋಗಿ ಒಬ್ಬರ ಹತ್ತಿರ ಬೆರಳು ಮಾಡಿ ತೋರಿಸಿ ಬರೆಯುವದರಲ್ಲಿ ಮಗ್ನಳಾದೆ. 2 ನಿಮಿಷ ಕಳೆದಿರಲಿಲ್ಲ. ಮತ್ತೆ ನನ್ನ ಹತ್ತಿರವೇ ಬಂದು "ಅವರಿಗೆ ಗೊತ್ತಿಲ್ಲವಂತೆ ನಿಮ್ಮನ್ನೇ ಕೇಳಿ ಎಂದರು" ಎಂದಾಗ ಒಂದು ಕ್ಷಣ ಯೋಚಿಸಿ ಕೇಳಿದೆ. "ನಿಮ್ಮ ಹತ್ತಿರ ಅವರ ಅಡ್ರೆಸ್ ಇದೆಯಾ" ಎಂದಾಗ "ಹುಂ ಇದೆ" ಎನ್ನುತ್ತಾ ಒಂದು ವಿಜಿಟಿಂಗ್ ಕಾರ್ಡು ತೆಗೆದು ಕೊಟ್ಟರು. ಅದನ್ನು ನೋಡಿ ಉಕ್ಕಿ ಬರುತ್ತಿದ್ದ ನಗುವನ್ನು ಕಷ್ಟಪಟ್ಟು ತಡೆದೆ. ಕಾರಣ ಆ ಕಾರ್ಡಿನಲ್ಲಿ 'A. P. Katteraj' ಎಂದಿತ್ತು. ಅವರನ್ನು ಕಟ್ಟೆರಾಜ ಅವರತ್ತ ಸಾಗ ಹಾಕಿ ಬಿದ್ದು ಬಿದ್ದು ನಕ್ಕೆ. ಪಾಪ , ಕಟ್ಟೆಯವರು ಇಂಗ್ಲಿಷ್ ಬಾರದ ವ್ಯಕ್ತಿಯ ಬಾಯಲ್ಲಿ ಕತ್ತೆಯವರಾಗಿದ್ದರು.

ಅಂದಿನಿಂದ ಕಟ್ಟೆಯವರು ಭೇಟಿಯಾದಾಗಲೆಲ್ಲಾ "ಏನಂತೀರಾ ಕತ್ತೆಯವರೇ" ಎಂದರೆ, ಅವರು ಸಿಟ್ಟಿಗೇಳದೇ ನಮ್ಮೊಡನೆ ತಾವೂ ನಗುತ್ತಾರೆ.

● ಜಿ. ಆರ್. ಇನಾಮತಿ, ತಡಸ

ನನ್ನೂರು ನನ್ನ ಜನ

ಬಿಜಾಪುರ

ನನ್ನ ನೆನಪುಗಳು

● ವಿಜಯ ಸಾಸನೂರ

ತುಷಾರಕ್ಕಾಗಿ ಈ ಲೇಖನ ಬರೆದುಕೊಡಲು ಕೇಳಿದಾಗ ನಾನು ಅನುಮಾನಿಸಿದೆ. ಕಾರಣ, ನಾನು ಬಿಜಾಪುರ ಬಿಟ್ಟದ್ದು ಹದಿಮೂರು ವರ್ಷದ ಬಾಲಕನಾಗಿದ್ದಾಗ—ಒಂಬತ್ತನೆಯ ತರಗತಿಯ ವಿದ್ಯಾರ್ಥಿಯಾಗಿದ್ದಾಗ, ಅಲ್ಲದೆ ಸಾಹಿತ್ಯದ ಈ ಪ್ರಕಾರವೂ ನನಗೆ ಹೊಸತು. ನಿಮ್ಮ ವೈಯಕ್ತಿಕ ಅನಿಸಿಕೆಗಳಾದರೂ ಪರ ವಾಗಿಲ್ಲ ಎಂದು ಆಗ್ರಹಪಡಿಸಿದ್ದಕ್ಕೆ ತುಂಬಾ ಅನುಮಾನಪಟ್ಟುಕೊಂಡು ಬರೀತಾ ಇದ್ದೇನೆ.

ನಾನು ಅನುಭವಿಸಿದ ಬಿಜಾಪುರವನ್ನು ಸ್ಮರಿಸಿದರೆ 'ಅಗರ ಫಿರದೌಸ ಬರ್ ರೂಯೆ ಜಮೀನಸ್ತ್' ಎಂಬ ಶೇಖ್ ಸಾದಿಯ ಉವಾಚ ನೆನಪಾಗುವುದು. ಆಗ ನಮ್ಮ ತಂದೆ ಪ್ರೊ. ಬಿ. ಟಿ. ಸಾಸನೂರ ವಿಜಯ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರು. ತಾಯಿ ಸುಮಿತ್ರಾದೇವಿ

> ಬಿಜಾಪುರದವರೇ ಆದ, ಅನಂತರ ಭಾರತದ ಅನೇಕ ಕಡೆ ದುಡಿದು, ಈಗ ಬೆಂಗಳೂರಿಗರೇ ಆಗಿಬಿಟ್ಟಂತಿರುವ, ಸುಪ್ರಸಿದ್ಧ ಕಾದಂಬರಿಕಾರ ವಿಜಯ ಸಾಸನೂರ, ತಾವು ಕಂಡ ಬಿಜಾಪುರವನ್ನು ನೆನಪು ಮಾಡಿಕೊಂಡಿದ್ದಾರೆ.

ಬಾಲಕಿಯರ ಸರಕಾರಿ ಹೈಸ್ಕೂಲಿನಲ್ಲಿ ಅಧ್ಯಾಪಕಿ. ನಮ್ಮ ಮನೆ ಇದ್ದುದು ಗೋಡಬೋಲೆ ಮಾಳಾ ಎಂಬ ಬಡಾವಣೆಯಲ್ಲಿ. ಅಂದು ಬಿಜಾಪುರದ ತುಂಬಾ ಬೌದ್ಧಿಕವಾದ ಪರಿಸರವೆಂದು ಈ ಗೋಡಬೋಲೆ ಮಾಳಾ ಪ್ರಸಿದ್ಧವಾಗಿದ್ದಿತು. ವಿಶಾಲವಾದ ರಸ್ತೆ. ಟೆನಿಸ್ ಬಾಲ್‌ನಿಂದ ಕ್ರಿಕೆಟ್ ಆಡಲು ಸಾಕಾಗಿತ್ತು. ಕ್ರಿಕೆಟ್ ಆಡಿ ಅಕ್ಕಪಕ್ಕದ ಮನೆಯವರ ಕಿಟಕಿಗಳ ಗಾಜನ್ನು ನಾನು ಒಡೆದ ಘಟನೆಗಳನ್ನು ಅಲ್ಲಿರುವ ಹಿರಿಯರು ಇನ್ನೂ ಸ್ಮರಿಸುವರು. ನಮ್ಮ ಮನೆಯ ಮುಂದೆ ಇಂದು ಪತ್ರಕರ್ತರಾದ, ನಾವೆಲ್ಲಾ ಪ್ರೀತಿಯಿಂದ 'ಪಪ್ಪೀಕಾಕಾ' ಎನ್ನುವ ಶ್ರೀ ಪರ್ವತೀಕರರ ವಿಶಾಲವಾದ ಅಂಗಳ. ಈ ಅಂಗಳಕ್ಕೆ ಮೆರುಗು ಬರುವುದು ಗಣೇಶನ ಉತ್ಸವದಲ್ಲಿ. ನಮ್ಮ ಓಣಿಯವರೆಲ್ಲಾ ಗಣೇಶನನ್ನು ಈ ಅಂಗಳದಲ್ಲಿ ಪ್ರತಿಷ್ಠಾಪಿಸಿ ಐದು ದಿನಗಳ ಸಾಂಸ್ಕೃತಿಕ ಉತ್ಸವಗಳನ್ನು ನಡೆಸುವರು. ಅದರ ನೇತೃತ್ವ ವನ್ನು ವಹಿಸುವವರು ಇಂದು ನಾಟಕರಂಗದಲ್ಲಿ ಖ್ಯಾತರಾದ ಶ್ರೀ ಶ್ರೀನಿವಾಸ ತಾವರಗೇರಿ ಮತ್ತು ಗು. ಬಾ. ತಾಳಿಕೋಟಿಯವರು. ಅಂದಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಮಟ್ಟ ನೋಡಿ ದರೆ ತಾವರಗೇರಿ ಮತ್ತು ಕಂಪನಿಯವರು ಕಾಲಕ್ಕಿಂತ ಬಹಳ ಮುಂದೆ ಇದ್ದರು ಎಂದು ಭಾಸವಾಗುವುದು. ಇದೇ ಅಂಗಳದಲ್ಲಿ ತಮ್ಮ ಕಂಪೆನಿ ನಾಟಕದೊಂದಿಗೆ ಬಂದ ಶ್ರೀ ಜಿ. ವಿ. ಅಯ್ಯರ್, ಶ್ರೀ ಬಾಲಕೃಷ್ಣ, ವರನಟ ರಾಜಕುಮಾರ, ಹಾಸ್ಯನಟ ನರಸಿಂಹರಾಜುರವರನ್ನು ನಮ್ಮ ಗಜಾನನ ನಾಟಕ ಮಂಡಳಿಯವರು ಸತ್ಕರಿಸಿ



ವೈಶಿಷ್ಟ್ಯಪೂರ್ಣವಾದ ಗೋಲ್ ಗುಂಬಜ್ ಚಿತ್ರ: ಕೆ.ಜಿ. ಶಿವಯೋಗಿ

ದರು. ನಾನಿನ್ನೂ ಚಡ್ಡಿ ಹಾಕಿಕೊಂಡು ತಿರುಗಾಡುವವ; ನಮ್ಮ ಮೊದಲನೆಯ ಮಹಡಿಯ ಕಟಾಂಜನದಿಂದ ಇವರೆಲ್ಲರನ್ನೂ ನೋಡಿದ್ದು, ವಿಶೇಷವಾಗಿ ರಾಜಕುಮಾರರವರಿಂದ ಆಕರ್ಷಿತನಾದದ್ದು. ಮುಂದೆ ಇಪ್ಪತ್ತೈದು ವರ್ಷಗಳ ನಂತರ ಅವರಿಗಾಗಿಯೇ 'ಧ್ರುವತಾರೆ' ಬರೆದೆ ಎಂದರೆ ನನಗೇ ಆಶ್ಚರ್ಯ.

ನಮ್ಮ ಮನೆಯಿಂದ ನೈರುತ್ಯಕ್ಕೆ ಎರಡು ಫರ್ಲಾಂಗ ದೂರದಲ್ಲಿ ತಾಜಬಾವಡಿ. ಇಷ್ಟು ದೊಡ್ಡದಾದ ಹೊಕ್ಕುತುಂಬುವ ಬಾವಿಯನ್ನು ನಾನು ಇದುವರೆಗೂ ಎಲ್ಲಿಯೂ ನೋಡಿಲ್ಲ. ಅಂದು ರಸ್ತೆಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಇದರ ಹೊರಗಡೆಯೇ ಇದ್ದಿತು. ತಾಜಬಾವಡಿ ಆದಿಲ್‌ಶಾಹಿಯ ಆಡಳಿತದ ಒಂದು ಭವ್ಯ ಕುರುಹು. ಕೃಷ್ಣಾನದಿಯ ನೀರು ಗುಪ್ತ ಕಾಲುವೆಯಿಂದ ಮೂವತ್ತು ಮೈಲಿಯುದ್ದಕ್ಕೂ ಹರಿದು ಇಲ್ಲಿ ಬರುವುದು ಎಂದು ಒಂದು ಪ್ರತೀತಿಯಾದರೆ ಈ ಬಾವಿಯ ತಳ ಜೀವಂತವಿದ್ದವರಾರೂ (ವರ್ಷಕ್ಕೆ ನಾಲ್ಕಾರು ಬಲಿ ತೆಗೆದುಕೊಳ್ಳುವದು ಈ ಬಾವಿ) ನೋಡಿಲ್ಲ ಎಂಬುದು ಇನ್ನೊಂದು ಪ್ರತೀತಿ. ಸುಮಾರು ಐನೂರು ಜನ ಏಕಕಾಲಕ್ಕೆ ಆರಾಮಾಗಿ ಈಜಾಡಬಹುದಾದಂಥ ಬಾವಿ ಇದು. ಇಲ್ಲಿಯೇ ನನ್ನ ಸ್ನೇಹಿತ ಶಿವಾಜಿ ಜಾಧವನಿಂದ ಈಜುವುದನ್ನು ಕಲಿತಿದ್ದು. ಆಯುರ್ವೇದ ಶಾಸ್ತ್ರದಲ್ಲಿ ಡಾಕ್ಟರಾಗಿರುವ ನನ್ನ ಹಿರಿಯ ಸ್ನೇಹಿತ ರವಿ ಸಜ್ಜನ ತಾಜಬಾಡಿಯ ಕಮಾನದ ಮೇಲಿಂದ, ಅಂದರೆ ಬಹುಶಃ ನೂರು ಅಡಿ ಎತ್ತರದಿಂದ ಬಾವಿಯಲ್ಲಿ ಡೈವಿಂಗ್ ಮಾಡಿದ್ದೂ ಉಂಟು. ತಾಜಬಾವಡಿಯಲ್ಲಿ ಅಂದು ಈಜುವ ಎಳೆಯರಿಗೇನಾದರೂ ತರಬೇತಿ ಸಿಕ್ಕಿದ್ದರೆ ಎಂದೋ ಏಶಿಯಾಡ್, ಓಲಿಂಪಿಕ್ಸ್‌ಗಳಲ್ಲಿ ಭಾಗವಹಿಸುತ್ತಿದ್ದರೇನೋ. ತಾಜಬಾವಡಿಯಲ್ಲಿಯ ನೀರಿನಾಳದಲ್ಲಿ ಸುರಂಗಗಳಿವೆ ಎನ್ನುವ ಪ್ರತೀತಿಯೂ ಇತ್ತು. ಇವು ಚಕ್ರವ್ಯೂಹವನ್ನು ಮೀರಿಸುವಂಥ ವಿನ್ಯಾಸ ಹೊಂದಿದೆ ಎಂದು ಕೆಲವು ಎದೆಗಾರ ಈಜುಗಾರರು ಹೇಳುತ್ತಿದ್ದುದುಂಟು.

ನಮ್ಮ ಮನೆಯಿಂದ ಪೂರ್ವಕ್ಕೆ ಒಂದು ಫರ್ಲಾಂಗ್ ದೂರದಲ್ಲಿದ್ದದ್ದು ಸರಕಾರೀ ಬಾಲಕರ ಶಾಲೆ. ಇಲ್ಲಿಯೇ ನಾನು ಮಿಡಲ್‌ಸ್ಕೂಲು ಓದಿದ್ದು. ಈ ಶಾಲೆಯ ಕ್ರೀಡಾಂಗಣ ಬಿಜಾಪುರದವರಿಗೆ ಲಾರ್ಡ್ಸ್ ಅಥವಾ ಬ್ರೆಬೋರ್ನ್ ಸ್ಟೇಡಿಯಮ್ ಇದ್ದಂತೆ. ಬಿಜಾಪುರದಲ್ಲಿ ಅಂದು ಹತ್ತಕ್ಕೂ ಮಿಕ್ಕಿ ಉತ್ತಮ ಕ್ರಿಕೆಟ್ ತಂಡಗಳಿದ್ದವು. ಈಗಿನ ವರ್ಲ್ಡ್ ಕಪ್‌ನಲ್ಲಿರುವಂಥ ಸ್ಪರ್ಧಾತ್ಮಕ ಆಟ ಅಂದು ಸೋಲಾಪುರಕತ್ ಟೂರ್ನಮೆಂಟ್ ನಡೆಯುವಾಗ ಇರುತ್ತಿತ್ತು. ಪ್ರತಿ ಮ್ಯಾಚ್ ಎರಡು ದಿನದ್ದು—ವಾರಾಂತ್ಯದ ಶನಿವಾರ ಪ್ರಾರಂಭವಾಗುವಂಥದ್ದು. ಒಳ್ಳೆಯ ಟೀಮುಗಳ ನಡುವೆ ಮ್ಯಾಚು ಎಂದರೆ ಶನಿವಾರದ ಒಪ್ಪತ್ತಿನ ಕೊನೆಯ ಪೀರಿಯಡ್ ಚಕ್ಕರ್ ಹೊಡೆದು ಆಟ ನೋಡಲು ಗೆಳೆಯರ ಒಂದು ಗುಂಪು ಕೂಡುವದು. ಐತ್ತರ ದಶಕದ ಕೊನೆಯ ಭಾಗದಲ್ಲಿ ಆಗಿನ ಕ್ರಿಕೆಟ್‌ನ ಮಾಂತ್ರಿಕರಾದ ಪಲ್ಲಿ ಕಂಬಾಗಿ, ಎಮ್. ಎಸ್. ಪಾಟೀಲ, ಕೃಷ್ಣಾ ದೇಸಾಯಿ ಬಾರಿಸಿದ ಸೆಂಚುರಿಗಳೆಷ್ಟೋ. ನಮ್ಮ ತಂದೆಯ ಸಮಕಾಲೀನರಾದ ಮತ್ತು ರಸ್ತೆಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವ ಶ್ರೀ ಗುಲಬರ್ಗಾ ಮತ್ತು ಶ್ರೀ ಜಗದಾಳೆಯವರ ಕ್ರಿಕೆಟ್ ಆಟವೂ ಅಷ್ಟೇ ಅದ್ಭುತ. ಮುಂಬಯಿ ಪುಣೆಯಂಥ ನಗರಗಳಲ್ಲಿದ್ದಿದ್ದರೆ ಇವರೆಲ್ಲಾ ಎಂದೋ ಟೆಸ್ಟ್ ಆಟಗಾರರಾಗಿ ಹೋಗುತ್ತಿದ್ದರು. 1966ರಲ್ಲಿ ನಾನು ಬಿಜಾಪುರದಲ್ಲಿ ಬಿ.ಎಸ್ಸಿ ದ್ವಿತೀಯ ವರ್ಷದ ವ್ಯಾಸಂಗ ಮಾಡುತ್ತಿದ್ದಾಗ ಇದೇ ಟೂರ್ನಮೆಂಟ್‌ನಲ್ಲಿ ಆಡಿದೆ. ನಾನು ಒಂದು ಚೆಂಡನ್ನು ಬೌಂಡರಿಗೆ ಅಟ್ಟಿದಾಗ ಈ ಆಟ ನೋಡುತ್ತಿದ್ದ ಹಳಬ ಕ್ರಿಕೆಟಿಗರಾದ ಗುರು ಹಳಕಟ್ಟಿ ಇನ್ನೊಬ್ಬ ಮಿತ್ರ ವಸಂತ ಕೆಂಭಾವಿಯವರಿಗೆ ಹೇಳಿದ್ದು 'ಇಂಥಾ ಕವರ್ ಡ್ರೈವ್ ಹೊಡೆಯಾಂವಂದರ 25 ವರ್ಷದ ಹಿಂದೆ ಬಿ.ಟಿ. ಸಾಸನೂರ ಒಬ್ಬನ ನೋಡು." ವಸಂತ ಕೆಂಭಾವಿ ಹೇಳಿದರಂತೆ—'ಇಂವಾ ಯಾರಂತ ತಿಳದೀ. ಅಂವನ ಮಗಾನs ನೋಡೋ'.

ಬೆಂಗಳೂರಿನಂಥ ಮಹಾನಗರದಲ್ಲಿ ಜಗತ್ತಿನ ವೇಳೆಯೆಲ್ಲವೂ ತಮ್ಮ ಬಳಿಯೇ ಇದೆ ಎನ್ನುವವರ ಗಾಲ್ಫ್ ಆಟ ನೋಡಿದಾಗ ನಮ್ಮ ಓಣಿಯಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿರುವ ಗೋಳಗುಮ್ಮಟದ ವರೆಗೆ ಇಂತಿಷ್ಟು 'ಕೈ'ಗಳಲ್ಲಿ ನಿಂಬೆಹಣ್ಣು ಎಸೆಯುವ ನಮ್ಮ ಸ್ಪರ್ಧೆ ನೆನಪಾಗುತ್ತದೆ. ಈ ಎಸೆತ

ಬಹುಶಃ ಮುಂದೆ ಕ್ರಿಕೆಟ್‌ನಲ್ಲಿ ಸಹಾಯಕ ವಾಯಿತು. ಗವರ್ನ್‌ಮೆಂಟ್ ಹೈಸ್ಕೂಲ್ ಮೈದಾನದಲ್ಲಿ ಹಾಕಿ, ಫುಟ್‌ಬಾಲ್ ಆಟಗಳ ಟೂರ್ನಮೆಂಟ್ ಕೂಡಾ ನಡೆಯುವದು. ರಾಜಕಪೂರ್‌ನ ತದ್ರೂಪಿಯಾದ ಜಾಗಿರದಾರ್, ನನ್ನ ಬಾಲ್ಯ ಸ್ನೇಹಿತ ಅಂಬೂಲಾಲ್ ಅತ್ತಾರ ರಂಥವರು ಹಾಕಿ ಆಡುವದನ್ನು ನೋಡುವದು ಕಣ್ಣಿಗೊಂದು ಹಬ್ಬ.

ನಮ್ಮ ಮನೆಯಿಂದ ಈಶಾನ್ಯಕ್ಕೆ ಎರಡು ಫರ್ಲಾಂಗ್‌ದಲ್ಲಿರುವದು ಯೂನಿಯನ್ ಕ್ಲಬ್ ವಯಸ್ಸಾದವರು ಇಸ್ಪೀಟ್ ಆಡುವರು, ಕಾಡುಹರಟೆ ಹೊಡೆಯುವರು. ತರುಣರು ಟೆನಿಸ್ ಆಡುವರು. ಕ್ರಿಕೆಟ್ ಮಾಂತ್ರಿಕ್ ಪಲ್ಲಿ ಕಂಬಾಗಿ ಹಾಕಿ, ಟೆನಿಸ್‌ಗಳ ಚಾಂಪಿಯನ್ ಇದ್ದುದೂ ನನಗೆ ನೆನಪಿದೆ. ಇದರ ಎದುರಿಗೇ ಇರುವಂಥದ್ದು 'ತ್ರಿಪುರ ಸುಂದರಿ' ಸಿನೆಮಾ ಥಿಯೇಟರ್. ಇಂದಿನ ಟೆಂಟ್ ಸಿನೆಮಾಗಳಿಗಿಂತ ಕೊಂಚ ಉತ್ತಮಮಟ್ಟದಲ್ಲಿದ್ದ ಈ ಥಿಯೇಟರ್‌ಗೆ ಯಾವ ಕನಸುಗಾರ 'ತ್ರಿಪುರಸುಂದರಿ' ಎಂದು ಹೆಸರಿಟ್ಟನೋ. ರಾತ್ರಿ ಒಂಬತ್ತು ಗಂಟೆಯ ಆಟದ ವೇಳೆ ಸೆಕೆಗಾಲದಲ್ಲಿ ಥಿಯೇಟರ್‌ನ ಕಿಟಕಿಗಳನ್ನು ತೆಗೆಯುವರು. ನನಗಿನ್ನೂ ಅಲ್ಲಿಂದ ತೂರಿ ಬಂದು ಕಿವಿಗೆ ಇಂಪಾಗಿ ಕೇಳುವ ಹಾಡುಗಳು 'ಜರಾ ಸಾಮನೆ ತೊ ಆವೋ ಛಲಿಯೇ' ಮತ್ತು 'ಕುಹೂ ಕುಹೂ ಬೋಲೇ ಕೋಯಲಿಯಾ.' ತ್ರಿಪುರಸಂದರಿ ನನ್ನ ಸಂಗೀತ (ಕೊನೆಯ ಪಕ್ಷ ಸಿನೆಮಾ ಸಂಗೀತ)ದ ಗೀಳು ಹಚ್ಚಿಸಿದ್ದು ಹೀಗೆ.

ಮಾಧ್ಯಮಿಕ ಶಾಲೆಗೆ ನಾನು ಹೋಗಲು ಪ್ರಾರಂಭಿಸಿದ್ದು ಪಿ.ಡಿ.ಜೆ ಹಾಯಸ್ಕೂಲಿಗೆ. ಸಿದ್ದೇಶ್ವರ ಹೈಸ್ಕೂಲಿನ ಅಧ್ಯಾಪಕರು ನಮ್ಮ ತಂದೆಯವರ ಮುಂದೆ ಪ್ರತಿಭಟಿಸಿದರು—'ನೀವು ಓದಿದ್ದು ಈ ಸ್ಕೂಲಲ್ಲಿ, ಮಗನನ್ನು ಅಲ್ಲಿ ಕಳಿಸುತ್ತಾ ಇದ್ದೀರಲ್ಲಾ' ಎಂದು. ತಂದೆಯವರು ನಕ್ಕು 'ಅಂದು ನಿಮ್ಮ ಸ್ಕೂಲು ಚೆನ್ನಾಗಿತ್ತು. ಇಂದು ಈ ಸ್ಕೂಲ್ ಚೆನ್ನಾಗಿದೆ' ಎಂದರು. ಒಳ್ಳೆಯ ಶಿಕ್ಷಣ ಕೊಡುವದು ನಮ್ಮ ಧರ್ಮ ಎನ್ನುವ ಬದ್ಧತೆಯಿಂದ ಶಿಕ್ಷಕರು ಈ ಸ್ಕೂಲಲ್ಲಿ ದ್ದರು. ಅವರ ನೇತೃತ್ವ ವಹಿಸಿದ ದಿವಂಗತ ರಾದ ವಿ.ಎಚ್. ನಾಗರಹಳ್ಳಿಯವರನ್ನು ಸ್ಮರಿಸ ಬಯಸುವೆ. ಅಲ್ಲಿನ ಇನ್ನೊಬ್ಬ ಅದ್ಭುತ ಶಿಕ್ಷಕ ಶ್ರೀ ವಿ.ಎನ್. ಕಟ್ಟಿ, ವಾಗ್ಮಿ, ಸಂಸ್ಕೃತ ಮಂತ್ರಗಳು ನಾಲಿಗೆಯಿಂದ ಜಲಪಾತದಂತೆ ಉದುರುವವು. ಚರ್ಚ ಹಾಗೂ ಮಸೀದಿಗಳಿಗೂ ಹೋಗುವ ಔಟ್ ಆಫ್ ದ ವರ್ಲ್ಡ್ ವ್ಯಕ್ತಿ. ಅಂದಿನ ನನ್ನ ಸಹಪಾಠಿಗಳಲ್ಲಿ ಅತ್ಯಂತ ಪ್ರತಿಭಾವಂತ ಮತ್ತು ಹೃದಯವೈಶಾಲ್ಯತೆಯಲ್ಲಿ ಇಂದು ಕೂಡಾ ಎಲ್ಲರನ್ನೂ ಮೀರಿಸಿದ ವ್ಯಕ್ತಿ. ರವಿ ರೋಹಿಡೇಕರ. ಇಂದು ಬೆಂಗಳೂರಿನ ಸ್ಮಯೋರ್ ಕಾರ್ಪೊರೇಟ್ ಕಚೇರಿಯಲ್ಲಿ ಜನರಲ್ ಮ್ಯಾನೇಜರ್ ಆಗಿರುವರು.

ಅಂದಿನ ಕಾಲಕ್ಕೆ ಟ್ಯೂಶನ್ ಅನ್ನುವ ಪಿಡುಗು ಇರಲಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಲು ಶಿಕ್ಷಕರ ಮನೆಗೆ ಹೋಗುತ್ತಿದ್ದುದುಂಟು. ಹಾಗೆ ನಮ್ಮ ತಂದೆಯವರ ಬಳಿ ಮನೆಗೆ ಇನ್ನೂ ಹೆಚ್ಚಿಗೆ ಪಾಠ ಹೇಳಿಸಿಕೊಳ್ಳಲು ಬರುವ ಪ್ರತಿಭಾವಂತ ವಿದ್ಯಾರ್ಥಿ ಗಳಲ್ಲಿ ಇಂದಿನ ಖ್ಯಾತ ಸಂಶೋಧಕರಾದ ಡಾ। ಎಮ್. ಎಮ್. ಕಲಬುರ್ಗಿ, ಡಾ। ಮ. ಗು. ಬಿರಾದರ ಪ್ರಮುಖರು. ಕಲಬುರ್ಗಿಯವರ ಸುಂದರವಾದ ಕೈಬರಹ ಇನ್ನೂ ನನ್ನ ಮನದಲ್ಲಿ ಅಚ್ಚಳಿಯದಂತಿದೆ.

ಇಂಗ್ಲೀಷ್ ಪಾಂಡಿತ್ಯದಲ್ಲಿ ಪ್ರೊ. ರೂಬೆನ್, ಅಧ್ಯಾತ್ಮದಲ್ಲಿ ನನ್ನ ದೊಡ್ಡಪ್ಪ ಡಾ। ಎಚ್. ಟಿ. ಸಾಸನೂರ, ಅರ್ಥಶಾಸ್ತ್ರಜ್ಞರಾಗಿಯೂ ಸಂಗೀತ ದಲ್ಲಿ ಪರಿಣತಿ ಹೊಂದಿದ ಪ್ರೊ. ರಾಮಾಚಾರ್, ವಿದ್ಯಾರ್ಥಿಗಳಲ್ಲಿ ನನ್ನ ತಂದೆಯಂತೆಯೇ ಜನಪ್ರಿಯರಾದ ಪ್ರೊ. ಲಗಳಿ, ಇಂದಿಗೂ ಖ್ಯಾತ ಶಿಕ್ಷಣತಜ್ಞರಲ್ಲೊಬ್ಬರೆಂದು ಪರಿಗಣಿ ಸಲ್ಪಡುವ ಪ್ರೊ. ರೋಹಿಡೇಕರ್ (ನನ್ನ ಸ್ನೇ ಹಿತ ರವಿಯ ತಂದೆ), ಜನಪ್ರಿಯ ಕಲೆಕ್ಟರ್ (ಇಂದಿನ ಡೆಪ್ಯೂಟಿ ಕಮೀಶನರ್) ಮತ್ತು ಉತ್ತಮ ಕ್ರಿಕೆಟ್ ಆಟಗಾರ ಶ್ರೀ ಎಸ್. ರಾಮನಾಥನ್ (ಕೇಂದ್ರ ಸರಕಾರದ ಕಾರ್ಯದರ್ಶಿಯಾಗಿ ಇತ್ತೀಚೆಗೆ ನಿವೃತ್ತರಾದವರು) 'ಧಾಡಸೀ' ಎಸ್. ಪಿ. ಪಿ. ಜೆ. ಲುಯಿಸ್ (ಕರ್ನಾಟಕದ ಐ.ಜಿ.ಪಿ. ಆಗಿ ನಿವೃತ್ತರಾದವರು), ಸಾಹಸಿ ಪೊಲೀಸ್ ಅಧಿಕಾರಿ ಶ್ರೀ ಕಲ್ಲೂರ್... ಮತ್ತು ನಾನು ಈ ಮೊದಲೇ ಹೆಸರಿಸಿದ ಎಲ್ಲ ವ್ಯಕ್ತಿಗಳೂ

ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ನೆನಪನ್ನು ಬಿಟ್ಟಿದ್ದಾರೆ.

ಅಂದಿನ ಬಿಜಾಪುರದ ವೈಶಿಷ್ಟ್ಯ—ಟಾಂಗಾಗಳು. ಪ್ರತಿ ವರ್ಷ ನಗರಸಭೆಯವರು ಟಾಂಗಾಗಳ ರೇಸ್ ಜರುಗಿಸಿ ನಂಬರ್ ಕೊಡುವರು. ಪ್ರತಿಸಲ ಒಂದನೆಯ ನಂಬರ್ ಟಾಂಗಾ ಆಗುವದು ಜೋತಿಬಾನದು. ಅವನ ಬಳಿ ಇರುವ ಬಿಳಿಯ ಕುದುರೆ ಶಿವಾಜಿ ಮಹಾರಾಜನ ಕುದುರೆಯ ಸಂತತಿ ಎಂದೂ ಅನೇಕರು ಆಡಿಕೊಳ್ಳುವರು. 'ನಯಾ ದೌರ್'ನಲ್ಲಿ ದಿಲೀಪ್ ಕುಮಾರನ ಟಾಂಗಾ ಜೀವನನ ಬಸ್ ಜೊತೆ

ನನ್ನೂರು ನಾಡು

ಇಲ್‌ಕಲ್ ಸೀರೆಯ ಸೊಗಸು

ಇಲ್ಕ್‌ಲ್ ಸೀರೆಯ ವರ್ಣನೆ ಇರದೇ ವಿಜಾಪುರ ಜಿಲ್ಲೆಯ ಚಿತ್ರ ಪೂರ್ಣವಾಗದು. ಫ್ಯಾಶನ್ ಎಂಬುದು ತೀವ್ರಗತಿಯಲ್ಲಿ ಬದಲಾಗುತ್ತಿದೆ. ವಸ್ತ್ರ ವಿನ್ಯಾಸದಲ್ಲಂತೂ ನಿನ್ನೆಯದು ಇಂದಿಗೆ, ಇಂದಿನದು ನಾಳೆಗೆ ಹಳತೆನಿಸತೊಡಗಿವೆ. ಆದರೆ ಪ್ರಾದೇಶಿಕ ವೈಶಿಷ್ಟ್ಯ ಉಳ್ಳ "ಇಲ್ಕಲ್ ಸೀರೆ"ಮಾತ್ರ ತನ್ನ ಎಂದಿನ ಓರಿಮೆ—ಗರಿಮೆ ಕಾಯ್ದುಕೊಂಡು "ನಿತ್ಯನೂತನ"ವೆಂಬಂತೆ ಕಂಗೊಳಿಸತೊಡಗಿದೆ. ಒಂದಾದರೂ ಇಲ್ಕಲ್ ಸೀರೆ ಇರದೇ ಒಬ್ಬ ಗೃಹಣಿಯ ಸೀರೆ ಸಂಗ್ರಹ ಪೂರ್ಣವೆನಿಸಲು ಸಾಧ್ಯವೇ ಇಲ್ಲ ಎಂಬ ಮಾತು ಸಮಂಜಸವಾಗಿದೆ. ಆ ಸೊಗಸು ಆ ಬಿನ್ನಾಣ ಅಂಥಾದ್ದು!

ಸುಮಾರು ನೂರು ವರ್ಷದ ಇತಿಹಾಸ ಹೊಂದಿರುವ ಇಲ್ಕಲ್ ಸೀರೆ ಕೂಲಿಕಾರರಿಗೆ, ಶ್ರಮಿಕರಿಗೆ ಹೇಳಿ ಮಾಡಿಸಿದಂತಿದೆ. ಇಲ್ಲಿಯ ನೇಕಾರರು ಆರು ವಾರಿ ಅಂದರೆ ಹನ್ನೆರಡು ಮೊಳಾ ಉದ್ದದ ಸೀರೆ ನೇಯುತ್ತಾರೆ. ಆದರೆ ಹದಿನಾರು ಮೊಳ ಅಂದರೆ ಒಂಭತ್ತು ವಾರಿ ಸೀರೆಗೆ ವ್ಯಾಪಕ ಬೇಡಿಕೆ ಇದೆ. ಇದಕ್ಕೆ ಕಾರಣವೂ ಉಂಟು. ಒಂಭತ್ತು ವಾರಿ ಸೀರೆಯಾದರೆ ಅದರ ಸೆರಗನ್ನೇ "ಸಿಂಬಿ" ಮಾಡಿಕೊಳ್ಳಲು, ಕಚ್ಚೆ ಹಾಕಿಕೊಂಡು ಹೊಲದಲ್ಲಿ ದುಡಿಯಲು ತುಂಬಾ ಅನುಕೂಲವೆನಿಸುತ್ತದೆ. "ರಫ್ ಆ್ಯಂಡ್ ಟಫ್" ಉಪಯೋಗಕ್ಕೆ ಇಲ್ಕ್‌ಲ್ ಸೀರೆ ಹೆಸರುವಾಸಿಯಾಗಿದೆ. ಹಲವು ವರ್ಷಗಳ ದೀರ್ಘ ಬಾಳಿಕೆ ಹಾಗೂ ಬಣ್ಣ ಮಾಸದೇ ಇರುವುದು ಇಲ್ಕ್‌ಲ್ ಸೀರೆಯ ಪ್ಲಸ್ ಪಾಯಿಂಟುಗಳು!

ಕೈಮಗ್ಗವಾದರೆ ಒಂದು ಸೀರೆ, ವಿದ್ಯುತ್ ಮಗ್ಗವಾದರೆ ದಿನಕ್ಕೆ ಎರಡು ಸೀರೆಯನ್ನು ನೇಯಬಹುದು. ಒಂದು ಸೀರೆ ನೇಯ್ದರೆ ಕೂಲಿಕಾರರಿಗೆ ಸಿಗುವ ಸಂಬಳ ಒಂಭತ್ತು ರೂಪಾಯಿ. ಒಬ್ಬ ಕೂಲಿಕಾರ ಎಷ್ಟೇ ಶ್ರಮ ವಹಿಸಿ ದುಡಿದರೂ ಎರಡು ಸೀರೆಗಿಂತ ಹೆಚ್ಚು ನೇಯ್ಗೆ ಸಾಧ್ಯವೇ ಇಲ್ಲ ಎಂಬುದು ಗಮನಾರ್ಹ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದವರು ಇವರ ಉತ್ಪತ್ತಿಗಳನ್ನು ಖರೀದಿಸುತ್ತಿದ್ದರೂ ನೇಕಾರರ ಜೀವನಮಟ್ಟ ದಿನದಿಂದ ದಿನಕ್ಕೆ ಕುಸಿಯತೊಡಗಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಸೀರೆ ನೇಯ್ಗೆಗೆ ಅತಿ ಮುಖ್ಯವಾಗಿರುವ "ನೂಲು" ವ್ಯಾಪಕ ಪ್ರಮಾಣದಲ್ಲಿ ಬೆಲೆ ಏರಿಸಿಕೊಂಡಿದೆ. ಉತ್ತಮ ದರ್ಜೆಯ ನೂಲನ್ನು ಸರಕಾರವೇ ಯೋಗ್ಯ ಬೆಲೆಗೆ ವಿತರಿಸಬೇಕೆಂದು ಇಲ್ಲಿಯ ನೇಕಾರರು ಕೇಳುತ್ತಾರೆ. ಸರಕಾರ ಇತ್ತ ಗಮನಹರಿಸುವುದಗತ್ಯ.

ಇಲ್ಕ್‌ಲ್ ಸೀರೆಯ ಮತ್ತೊಂದು ಗುಣ ವಿಶೇಷವೆಂದರೆ ಯಾವುದೇ ವಯಸ್ಸಿನ, ಯಾವುದೇ ಬಣ್ಣವಿರುವ ಮಹಿಳೆಗೂ ಇದು ಚೆನ್ನಾಗಿ ಹೊಂದಿಕೆಯಾಗುತ್ತದೆ. ರೇಷ್ಮೆ ಸೀರೆಯ ನೇಯ್ಗೆಯಲ್ಲೂ ಇಲ್ಲಿನ ನೇಕಾರರು ಸಿದ್ಧಹಸ್ತರು. ಇದರ ಬೆಲೆ ಹೆಚ್ಚಿರುವುದರಿಂದ ಶ್ರೀಮಂತರು ಮಾತ್ರ ಕೊಳ್ಳುವಂತಾಗಿದೆ. ಆದರೆ ಎರಡೂ ಬದಿಗೆ ರೇಷ್ಮೆ ಬಾರ್ಡರ್ ಇರುವ ಸೀರೆ ವ್ಯಾಪಕ ಬೇಡಿಕೆ ಕುದುರಿಸಿಕೊಂಡಿದೆ. ಮುಖ್ಯವಾಗಿ ಜಾಂಬಳಿ, ಕಪ್ಪು ಹಾಗೂ ದಟ್ಟ ಹಸಿರು ಬಣ್ಣದಲ್ಲಿ ಲಭ್ಯವಾಗುವ ಈ ಸೀರೆ ತೊಟ್ಟಾಗ ಮಹಿಳೆಯರು ಮತ್ತಷ್ಟೂ ಮೋಹಕವಾಗಿ ಕಾಣಿಸುತ್ತಾರೆ. ನಾಚಿಕೆ ಏಕೆ? ಪ್ರತಿಯೊಬ್ಬ ಗಂಡನೂ ತನ್ನ ಹೆಂಡತಿಯನ್ನು ಒಮ್ಮೆ ಯಾದರೂ ಇಲ್ಕ್‌ಲ್ ಸೀರೆಯಲ್ಲಿ ಕಾಣಲು ತವಕಿಸುತ್ತಾನೆ! ಇಲ್ಕ್‌ಲ್ ಸೀರೆಯ ಸೊಬಗಿಗೆ ಬೇರೊಂದು ಉದಾಹರಣೆ ಬೇಕೆ?

● **ರಮೇಶ ದೇಶಪಾಂಡೆ**

ಸ್ಪರ್ಧಿಸುವಂತೆ ಇಲ್ಲಿಯೂ ಕೂಡಾ ಜೋತಿಬಾನ ಟಾಂಗದ ಬಿಳಿಕುದುರೆ ರೇಲ್ವೇ ನಿಲ್ದಾಣದಿಂದ ಗಾಂಧೀ ಚೌಕದ ವರೆಗೆ ಸಿಟಿ ಬಸ್ಸನ್ನು ಹಿಂದೆ ಹಾಕಿತ್ತಂತೆ. ಜೋತಿಬಾನ ಟಾಂಗಾ ನಮಗೆ ಬೆಂಝು ಕಾರ್ ಇದ್ದಂತೆ. ಅದರಲ್ಲಿ ಹೋಗುವಾಗ ದಾರಿಹೋಕರೆಲ್ಲ ನಮ್ಮನ್ನೇ ನೋಡುತ್ತಿದ್ದಾರೆ ಎಂಬಂತೆ ಗತ್ತಿನಿಂದ ಕೂಡುತ್ತಿದ್ದೆವು.

ನಮ್ಮ ಮನೆಗೆ ಆಗ್ನೇಯಕ್ಕೆ ಮೂರು ಫರ್ಲಾಂಗ್ ದೂರದಲ್ಲಿರುವಂಥದ್ದು ಜೋಡ ಗುಮ್ಮಟ. ಇಲ್ಲಿ ಭೂತ ಪಿಶಾಚಿ ಹಿಡಿದವರನ್ನು ಮುಸಲ್ಮಾನ ಸ್ವಾಮಿಗಳು ನವಿಲುಗರಿಯ ಗುಚ್ಛದಿಂದ ಬಡಿದು ಬಿಡಿಸುವದನ್ನು ನಾನು ಎಷ್ಟೋ ಸಲ ನೋಡಿದ್ದುಂಟು. ಇಪ್ಪತ್ತು ವರ್ಷಗಳ ನಂತರ ನಾನು ಗುಲಬರ್ಗಾ ಜಿಲ್ಲಾ ಎಸ್.ಪಿ. ಆಗಿ ಭಾನಾಮತಿ ಎಂಬ ವಾಮಾಚಾರದ ಪ್ರಯೋಗಕ್ಕೆ ಒಳಗಾದ ದುರ್ದೈವಿಗಳನ್ನು ನೋಡಿದಾಗ ಜೋಡ ಗುಮ್ಮಟದ ದೃಶ್ಯ ನೆನಪಾಗುತ್ತಿತ್ತು.

ಬಿಜಾಪುರದ ಮತೀಯ ಸೌಹಾರ್ದಕ್ಕೆ ನಿದರ್ಶನ ಅಲ್ಲಿಯ ಮೊಹರಮ್. ಪ್ರತಿಯೊಂದು ಓಣಿಯ ತಿರುವಿನಲ್ಲಿ 'ಅಲಾಬ್' ಅಥವಾ 'ತಾಬೂತ್' ಕೂಡಿಸುವರು. ಹಿಂದೂಗಳಲ್ಲಿ ನಾವೂ ಅನೇಕರು ಮನೆಯಲ್ಲಿ 'ಚೋಂಗೇ' ಮಾಡಿ ಈ 'ಅಲಾಬ್'ಗೆ ನೈವೇದ್ಯ ತೋರಿಸಿ ಖುಶಿಯಿಂದ ತಿನ್ನುತ್ತಿದ್ದೆವು. ವಿವಿಧ ರೀತಿಯ ಸುಂದರವಾದ 'ಮೇಣೆಗಳು' ಕವಳೀ ಗೇಟ್‌ನಿಂದ ತಾಜಬಾವಡಿವರೆಗೆ ಮೆರವಣಿಗೆ ಹೋಗುತ್ತಿದ್ದುದನ್ನು ಐವತ್ತು ಸಾವಿರಕ್ಕೂ ಮಿಕ್ಕಿ ವಿವಿಧ ಧರ್ಮಗಳ ಜನ ಶಾಂತವಾಗಿ ನೋಡುತ್ತಿದ್ದರು. ನಾನಿದ್ದ ಹದಿಮೂರು ವರ್ಷಗಳ ಕಾಲವೂ (1948-1961) ಬಿಜಾಪುರದಲ್ಲಿ ಮತೀಯ ಗಲಭೆ ಆದದ್ದು ಕೇಳಿ ನೆನಪಿಲ್ಲ. ನನ್ನ ಮಿತ್ರ ಅಂಬೂಲಾಲ್ ಅತ್ತಾರನ ಅಜ್ಜಿ ಮನೆಯಲ್ಲಿ ಹಿಂದೂ ದೇವರುಗಳ ವಿವಿಧ ವಿಗ್ರಹಗಳ ವಿಧಿವತ್ತಾದ ಪೂಜೆ ಮಾಡುವುದನ್ನು ನೋಡಿ ಯಾವುದೇ ಆಸ್ತಿಕ ಹಿಂದೂ ನಾಚಬೇಕು.

ಬಿಜಾಪುರದ ಇನ್ನೊಂದು ವೈಶಿಷ್ಟ್ಯ ಸಿದ್ದೇಶ್ವರ ಜಾತ್ರೆ ಮತ್ತು ಮದ್ದು ಹಾರಿಸುವದು. ಸಂಕ್ರಮಣದ ವೇಳೆ ಬರುವ ಈ ಜಾತ್ರೆಯಲಿ ಬರುವ ಕಿಲಾರಿ ಜಾತಿಯ ಹೋರಿಗಳ ಸೊಬಗು ನೋಡುವದೇ ಒಂದು ಅಂದ. 'ಖಣಿ'ಯಲ್ಲಿ ಮದ್ದು ಹಾರಿಸುವುದರ ಸೊಬಗು ಇನ್ನೊಂದು ಅಂದ. ಬಿಜಾಪುರದಲ್ಲಿ ಇನ್ನೂ ನೆನೆಯುವದು ಕಾರ ಹುಣ್ಣಿಮೆಯಲ್ಲಿ ಬಣ್ಣಬಣ್ಣದ ಸಿಂಗರಿಸಿದ ಎತ್ತುಗಳ ಓಟ, ಬೀಜವಿಲ್ಲದ ದೊಡ್ಡ ಗಾತ್ರದ ದ್ರಾಕ್ಷಿ ಮತ್ತು ನಮ್ಮ ಮನೆಯಲ್ಲಿ ಅಡಿಗೆ ಮಾಡುವ ತುಳಾಸಾಬಾಯಿಯ ಊರ ಹೊರಗಿನ ಚಿಕ್ಕ ಹೊಲದಲ್ಲಿಯ ಸೀ ತೆನೆ. ಈ ಸಮಯದಲ್ಲಿಯ ವೈಶಿಷ್ಟ್ಯವೆಂದರೆ ಸೆಜ್ಜೆರೊಟ್ಟಿ, ಎಣಗಾಯಿ ಬದನೆಕಾಯಿ, ಗುರೆಳ್ಳು ಚಟ್ನಿ, ಕೆನೆಮೊಸರು.

ಇದು ನಾನು ನೆನಪಿನಲ್ಲಿಟ್ಟ ಬಿಜಾಪುರ, ಲೇಖನವೇ ವಿಚಿತ್ರವೆನ್ನಿಸಿತೇ? ಗೋಲಗುಮ್ಮಟ, ಇಬ್ರಾಹಿಂ ರೋಜಾ, ಮಲಿಕ್-ಇ-ಮೈದಾನ ತೋಪು... ಯಾವ ಸ್ಮಾರಕಗಳ ಪ್ರಸ್ತಾಪವೂ ಇಲ್ಲ ಎಂದು. ಬಿಜಾಪುರದವರೂ ಬೈದುಕೊಳ್ಳುತ್ತಿರಬಹುದು. ಅದು ಹೇಗೆ ಇವನು ನಮ್ಮ ಪ್ರಸ್ತಾಪ ಮಾಡಲೇ ಇಲ್ಲ ಎಂದು. ಶಪಿಸುವದಾದರೆ ಈ ಲೇಖನ ಬರೆಯಲು ಒತ್ತಾಯಿಸಿದವರನ್ನು... ●



ಕಾವೇರಿ ಜಲವಿವಾದ ಎಂದು ಮುಗಿಯುತ್ತೋ ಅಂದು ನಿನಗೆ ಶಾಪವಿಮೋಚನೆಯಾಗುತ್ತೆ ನಡೆ...

ಸಹಸ್ರ ಫಣಿ ಪಾರ್ಶ್ವನಾಥ ತೀರ್ಥಂಕರ



ವಿಜಾಪುರ ನಗರದಿಂದ 5 ಕಿ.ಮೀ. ದೂರದ ದರ್ಗಾ ಗ್ರಾಮದಲ್ಲಿರುವ "ಪ್ರಾಚೀನ ಪಾರ್ಶ್ವನಾಥ ತೀರ್ಥಂಕರ" ವಿಗ್ರಹಕ್ಕೆ ಒಂದು ವಿಶೇಷವಾದ ಆಕರ್ಷಣೆ ಇದೆ. ಅಲ್ಲಿನ ದಿಗಂಬರ, ಜೈನ ಮಂದಿರದಲ್ಲಿಯ ಈ ವಿಗ್ರಹಕ್ಕೆ "ಶ್ರೀ ೧೦೦೮ ಹೆಡೆಯ ಸಹಸ್ರ ಫಣಿ ಪಾರ್ಶ್ವನಾಥ ತೀರ್ಥಂಕರ" ಎಂದು ಕರೆಯಲಾಗುತ್ತದೆ. ಕಪ್ಪು ಬಣ್ಣದ ನುಣುಪಾದ ಶಿಲೆಯ ಈ ವಿಗ್ರಹ ಸುಮಾರು ನಾಲ್ಕುವರೆ ಅಡಿ ಎತ್ತರವಿದೆ.

ಕ್ರಿ.ಶ. 563ರ ಸುಮಾರಿಗೆ ಈ ವಿಗ್ರಹ ದೊರೆತ ಬಗ್ಗೆ ಮಾಹಿತಿಯಿಂದ ತಿಳಿದು ಬರುತ್ತದೆ. ಅದೂ ಸಹ ಖಚಿತವಾದ ಇಸ್ವಿ ಯೆಂದು ಹೇಳಬರುವುದಿಲ್ಲ. ಒಂದು ವೇಳೆ ಅದು ನಿಖರವೇ ಆಗಿದ್ದರೆ ವಿಗ್ರಹ ಸುಮಾರು 1,500 ವರ್ಷಗಳ ಹಿಂದಿನದೆಂದು ಊಹಿಸಬಹುದು.

ಸುಂದರವಾಗಿ, ಕಲಾತ್ಮಕವಾಗಿ ಕೆತ್ತಿದ ಈ ೧೦೦೮ ಹೆಡೆಗಳುಳ್ಳ ತೀರ್ಥಂಕರ ವಿಗ್ರಹದ ವಿಶೇಷವೆಂದರೆ, ಮೇಲ್ಭಾಗದ ಒಂದು ಹೆಡೆ ಯಿಂದ ಅಭಿಷೇಕ ಮಾಡಿದರೆ ಉಳಿದೆಲ್ಲಾ ಸಹಸ್ರ ಹೆಡೆಗಳಿಂದಲೂ ಅಭಿಷೇಕವಾಗುವುದು. ಇಲ್ಲಿದೆ ಈ ವಿಗ್ರಹ ಕಲಾಕಾರನ ನೈಪುಣ್ಯತೆ. ಈ ವಿಗ್ರಹದ ಬಗೆಗಾಗಲೀ, ಕಲಾವಿದನ ಬಗೆ ಯಾಗಲಿ ಇನ್ನೂವರೆಗೂ ಖಚಿತ ಮಾಹಿತಿ ದೊರೆತಿಲ್ಲ. ಈ ವಿಗ್ರಹದ ಅಕ್ಕಪಕ್ಕದಲ್ಲಿ ಒಂದೊಂದು ಮಹಾವೀರರ ಬಿಳಿ ಶಿಲೆಯ ವಿಗ್ರಹಗಳಿವೆ.

ಈ ಮಂದಿರದ ಗರ್ಭಗೃಹದ ಪಕ್ಕದಲ್ಲಿಯೇ ಇನ್ನೊಂದು ವಿಶಾಲವಾದ ಗುಡಿ ಇದ್ದು, ಅಲ್ಲಿ ಒಂದು ಮಹಾವೀರ ಇನ್ನೊಂದು ತೀರ್ಥಂಕರ ವಿಗ್ರಹಗಳು ರಾರಾಜಿಸುತ್ತವೆ.

ಪ್ರತಿವರ್ಷದ ಪೌಶ್ಯ ವದ್ಯ ಏಕಾದಶಿ ದಿನ ಇಲ್ಲಿ ನಡೆಯುವ ಉತ್ಸವದಲ್ಲಿ ಬೇರೆ ಬೇರೆ ರಾಜ್ಯಗಳಿಂದ ಅಸಂಖ್ಯಾತ ಭಕ್ತರು ಆಗಮಿಸಿ ತೀರ್ಥಂಕರ ದರ್ಶನ ಪಡೆಯುತ್ತಾರೆ. ಅಲ್ಲದೇ ಭಾದ್ರಪದ ಮಾಸದ ಹುಣ್ಣಿಮೆಯಿಂದ ಅನಂತ ಚತುರ್ದಶಿವರೆಗೆ 15 ದಿನಗಳ ಕಾಲ ಈ ತೀರ್ಥಂಕರರಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ ಎಂದು ಕಳೆದ ಮೂರು ತಲೆಮಾರುಗಳಿಂದ ಇದರ ಪೂಜಾಕಾರ್ಯ ಮಾಡುತ್ತ ಬಂದಿರುವ ಪಂಡಿತ ಅಶೋಕ ಅಗರಬೀಡ ಹೇಳುತ್ತಾರೆ. ದಿನಂಪ್ರತಿ ಮುಂಜಾನೆ 7ರಿಂದ 10ರವರೆಗೆ ಜಲಾಭಿಷೇಕ, ಪಂಚಾಮೃತ ಅಭಿಷೇಕ ಕಾರ್ಯ ಗಳು ವಿಧಿವತ್ತಾಗಿ ನಡೆಯುತ್ತಿವೆ.

ವಿಶಾಲವಾದ ಈ ಮಂದಿರ ಪ್ರಶಾಂತ ವಾತಾವರಣದಿಂದೊಡಗೂಡಿದ್ದು ಇದರ ನಿರ್ಮಾಣದ ಕಾಲದ ಬಗ್ಗೆಯೂ ಸಹ ಖಚಿತ ವಾದ ಮಾಹಿತಿ ದೊರಕುತ್ತಿಲ್ಲ. ಈ ಮಂದಿರದ ಉಸ್ತುವಾರಿ ನೋಡಿಕೊಳ್ಳಲು ಸಮಿತಿಯೊಂದು ಕಾರ್ಯನಿರ್ವಹಿಸುತ್ತಲಿದೆ.

ಪ್ರಾಚೀನ ಕಾಲದ ಕುರುಹಾಗಿರುವ ದರ್ಗಾದ ಗ್ರಾಮದ ದಿಗಂಬರ ಜೈನ ಮಂದಿರದ ಈ ತೀರ್ಥಂಕರ ವಿಗ್ರಹದ ಬಗ್ಗೆ ಸಂಶೋಧಕರು ಹೆಚ್ಚಿನ ಶೋಧನೆ ಕೈಗೊಳ್ಳಲು ವಿಪುಲ ಅವಕಾಶ ಗಳಿವೆ.

● **ತುಂಗಾತನಯ**

ನನ್ನೂರು ನನ್ನ ಜನ

ಮಾದರಿ ಊರು–

ಕನ್ನೂರು

ಬಿಜಾಪುರ–ಸೊಲ್ಲಾಪುರ ರಸ್ತೆಯಲ್ಲಿ ಬಿಜಾಪುರದಿಂದ 27 ಕಿ. ಮೀ. (ಮುಖ್ಯರಸ್ತೆಯಿಂದ 7 ಕಿ.ಮೀ. ಒಳಗಡೆ) ದೂರವಲ್ಲಿರುವ ಕನ್ನೂರಿನಲ್ಲಿ ಸಾಧಾರಣ ಜನಸಂಖ್ಯೆ ಹತ್ತುಸಾವಿರ. ಇವರಲ್ಲಿ ಎಷ್ಟು ಮಂದಿ ಹಿಂದುಗಳಿದ್ದಾರೋ ಅಷ್ಟೇ ಸಂಖ್ಯೆಯಲ್ಲಿ ಮುಸ್ಲಿಂರಿದ್ದಾರೆ. ಹಿಂದುಗಳಲ್ಲಿ ಅರ್ಧದಷ್ಟು ಲಿಂಗಾಯತರು ಮತ್ತು ಶೇ. 5ರಷ್ಟು ಬ್ರಾಹ್ಮಣರಿದ್ದಾರೆ. ರಾಜ್ಯದ/ದೇಶದ ಹಲವು ಭಾಗಗಳಲ್ಲಿ ಮತೀಯ/ಕೋಮು ಗಲಭೆ ಮಾಡುತ್ತಿರುವ ಜನರು ಈ ಊರಿನಲ್ಲಿ ಕೆಲವು ದಿನ ಇದ್ದು ಹೋಗಬೇಕು. ಇಲ್ಲಿಯ ಹಿಂದೂ–ಮುಸ್ಲಿಂ ಬಾಂಧವರಲ್ಲಿ ಯಾವುದೇ ಭೇದ ಭಾವವಿಲ್ಲ. ಮತೀಯ ಗಲಭೆಗಳಿಲ್ಲ. ಇವರ ವೇಷ ಭೂಷಣಗಳಿಂದ ಹಿಂದೂ/ಮುಸ್ಲಿಂ ಎಂದು ಗುರುತಿಸುವುದು ಸಾಧ್ಯವಿಲ್ಲ. ಇಬ್ಬರೂ ರುಮಾಲು ಹೆಚ್ಚಾಗಿ ಹಳದಿ ಬಣ್ಣದ್ದು ಅಥವಾ ಬಿಳಿ ಟೋಪಿ ಹಾಕಿಕೊಳ್ಳುತ್ತಾರೆ.

ಇಲ್ಲಿಯವರ ಐಕ್ಯತಾಭಾವಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಬ್ಯಾಂಕಿನಲ್ಲಿ ಸಾಲದ ಖಾತೆ ಅಥವಾ ಕಾಗದ ಪತ್ರ ತಯಾರಿಸುವಾಗ "ಜಾತಿ" ಯಾವುದೆಂದು ಬರೆಯಬೇಕಾಗುತ್ತದೆ. ಈ ಕಾಗದ ಪತ್ರ ತುಂಬುವಾಗ ಜಾತಿ ಯಾವುದೆಂದು ಕೇಳಿದರೆ ಬರುವ ಉತ್ತರ "ಹಿಂದೂ ಮುಸ್ಲಿಂ" (ಇಲ್ಲಿಯ ಮುಸ್ಲಿಂ ಬಾಂಧವರು ಹೇಳುವ ರೀತಿ). ಊರಿನಲ್ಲಿ ನಡೆಯುವ ಯಾವುದೇ ಉತ್ಸವಕ್ಕೆ ಹಿಂದೂ–ಮುಸ್ಲಿಂರು ಸಹಭಾಗಿಗಳಾಗಿ ಭಾಗವಹಿಸುತ್ತಾರೆ. ಉದಾಹರಣೆಗೆ: ಮುಸ್ಲಿಂ ಹಬ್ಬವಾದ 'ಮೋಹರಂ'ನಲ್ಲಿ ಬೆಳಗ್ಗೆ ಮಸೀದಿಗೆ ಹೋಗಿ ಬಾನ್ ಕೊಡುವ (ನೈವೇದ್ಯದ ತರಹ) ಪದ್ಧತಿ ಇದೆ. ಆ ಬಾನ್ ಕೊಡಲು ಹೆಚ್ಚಿನ ಎಲ್ಲಾ ಹಿಂದುಗಳೂ ಹೋಗುತ್ತಾರೆ. ಇನ್ನು ಆ ದಿನ ಸಂಜೆ ನಡೆಯುವ ಅಲಾಬಿನಲ್ಲಿ ಮುಸ್ಲಿಂರಿಗಿಂತ ಹಿಂದೂಗಳೇ ಉತ್ಸಾಹಿಗಳಾಗಿ ಕಾರ್ಯಕ್ರಮದ ರಂಗೇರಿಸುತ್ತಾರೆ.

ಊರಿಗೆ ಏನಾದರು ಕೆಲಸವಾಗಬೇಕಾದರೆ ಎಲ್ಲರೂ ಕೂಡಿಯೇ ಹೋಗುತ್ತಾರೆ. 1986ರಲ್ಲಿ ಇಲ್ಲಿ ಘೋರ ಬರ ಬಂದು ಕುಡಿಯುವ ನೀರಿಗೆ ಪರದಾಡಬೇಕಾದ ಸ್ಥಿತಿ ಒದಗಿದಾಗ ಮೊದಲು ಊರಿನ ಜನರೆಲ್ಲ ಒಟ್ಟಾಗಿ ವಂತಿಗೆ ಹಾಕಿ ಸಾರ್ವಜನಿಕ ಬಾವಿ ತೋಡಿಸಿದರು. ಅದರಲ್ಲಿಯ ನೀರೂ ಸ್ವಲ್ಪ ದಿನದಲ್ಲಿ ಬರಿದಾದಾಗ ಊರಿನ ಜನರೆಲ್ಲ ಒಗ್ಗಟ್ಟಾಗಿ ಹಣ ಮಂಜೂರಿ ಮಾಡಿಸಿಕೊಂಡು 7 ಕಿ.ಮೀ. ದೂರದ ತಿಡಗುಂದಿಯಿಂದ 'ಬೋರ್‌ವೆಲ್' ನೀರನ್ನು ಪೈಪ್‌ಲೈನ್ ಮುಖಾಂತರ ಕೆಲವೇ ದಿನಗಳಲ್ಲಿ ತರಿಸಿಕೊಂಡಿದ್ದಾರೆ. ಈ ಸಂದರ್ಭವಲ್ಲಿ 12–15 ವರ್ಷದ ಬಾಲಕರಿಂದ ಹಿಡಿದು 65–70 ವಯಸ್ಸಿನ ಮುದುಕರೂ ಸಹಿತ ಗುದ್ದಲಿ ಹಿಡಿದಿದ್ದಾರೆ. ಇದು ಅತಿಶಯೋಕ್ತಿಯಲ್ಲ. ಆ ವರ್ಷ ಅನಾವಶ್ಯಕ ಖರ್ಚನ್ನು ನಿಲ್ಲಿಸುವ ಉದ್ದೇಶದಿಂದ ಊರಿನ ಮಾಧ್ಯಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನವನ್ನೂ ಮಾಡಲಿಲ್ಲ. ಅಂದರೆ ಯಾವದೇ ಭೇದ–ಭಾವವಿಲ್ಲದೆ ಒಗ್ಗಟ್ಟಾಗಿ ಸ್ನೇಹ ಮನೋಭಾವದಿಂದ ನಡೆಯುವ ಜನ ಇಲ್ಲಿಯವರು.

ಇಷ್ಟು ಜನಸಂಖ್ಯೆ ಇದ್ದರೂ ಒಂದು 'ಪೋಲಿಸ ಚೌಕಿ' (ಪೋಲಿಸ ಠಾಣೆ) ಈ ಊರಿನಲ್ಲಿಲ್ಲ! ಜನರೆಲ್ಲಾ ಶಾಂತಿಯಿಂದ ಇದ್ದರೆ ಪೋಲಿಸರ ಆವಶ್ಯಕತೆಯಾದರೂ ಏನು?

● ಸದಾನಂದ ಆರ್. ಶ್ಯಾನುಭಾಗ

ಹೊಟ್ಟೀ ಸಾಹೇಬ್ರು

ಹೊಟ್ಟೀ ಸಾಹೆಬ್ರು ಭೋಜನಪ್ರಿಯರು ಮಾತ್ರವಲ್ಲ ಅತಿಥಿ ಸತ್ಕಾರ ಪ್ರಿಯರೂ ಆಗಿದ್ದದ್ದು ಎಲ್ಲರೂ ಅವರನ್ನು ಗೌರವಿಸುವಂತಾಗಿತ್ತು.

● ಪ್ರೊ। ಜಿ. ಎಚ್. ಹನ್ನೆರಡುಮಠ


ಹೊಟ್ಟೀ ಓರೇಮಠ ಸಾಹೇಬರೆಂದರೆ ನಮ್ಮ ಜಿಲ್ಲೆಯಲ್ಲಿ ತುಂಬಾ ಪ್ರಸಿದ್ಧಿ. ಊಟ ಅಂದರೆ ಅವರಿಗೆ ಶಿವಾ ಪ್ರತ್ಯಕ್ಷವಾದರೂ ಮುಳುಮುಳು. ಗೋದಿಹುಗ್ಗಿ, ಗುಳಿಗಿಹುಗ್ಗಿ ಅಮೃತಕ್ಕಿಂತ ಆರು ಪಟ್ಟು ಶ್ರೇಷ್ಠ. ಎಲ್ಲರೂ ಪ್ರೀತಿಯಿಂದ ಇವರನ್ನು ಕರೆಯುವದು ಹೊಟ್ಟೀ ಸಾಹೇಬರೆಂದೇ. ಒಂದು ವಿಶೇಷವೆಂದರೆ ಇವರಿಗೆ ತಾವು ಉಣ್ಣುವದು ಎಷ್ಟೊಂದು ಪ್ರೀತಿಯೋ ಇತರರನ್ನು ಉಣ್ಣಿಸುವದೂ ಅಷ್ಟೇ ಪ್ರೀತಿ. ಮನೆಗೆ ಯಾರೇ ಅತಿಥಿ ಬಂದರೂ ಹೂರಣ ಹೋಳಿಗಿ, ಹೆರತುಪ್ಪಾ, ಕೋಸಂಬ್ರಿ, ರೊಟ್ಟಿಸ್ಯಾಂಡಿಗಿ, ಯಣಗಾಯಿ, ಕಟ್ಟಿನ ಸಾರು, ಮೆಣಸಿನಕಾಯಿ ಭಜಿ ಆಗಲೇ ಬೇಕು. ಇನ್ನೊಂದು ವಿಚಿತ್ರವೆಂದರೆ ಈ ಹೊಟ್ಟೀ ಸಾಹೇಬರ ಹೆಂಡತಿ ಅಂದರೆ ಮುತ್ತೈದಿ ಸಾವಿತ್ರಿ. ಸಾಹೇಬರ ಮನಸ್ಸು ತಿಳಿದುಕೊಂಡ ಪಾರೋದ್ದೇವಿ. ಇವಳು ಗುಲಗಂಜಿಯಷ್ಟೂ ಭೋಜನಪ್ರಿಯ ಳಲ್ಲದಿದ್ದರೂ ಗಂಡನ ನಾಲಿಗೆಚಟ ಯಾವ ಸಮಯಕ್ಕೆ ಯಾವ ದಿಕ್ಕಿಗೆ ಹೊರಳುತ್ತದೆ ಯೆಂಬುದನ್ನು ಬಲ್ಲವಳು. ಮಧ್ಯಾಹ್ನ ಸೇಂಗಾ ಹಾಕಿದ ಕಾರಚುಮ್ಮರಿ, ಸಂಜೆ ಜಬರದಸ್ತ ಸೂಸಲ, ರಾತ್ರಿ ತುಪ್ಪೀಕಾಯಿ ಭಜಿ, ಬೆಳಗ್ಗೆ ಕುಂಬಳ ಗಾರಿಗಿ ಇವು ಆಗಾಗ ಸಾಹೇಬರಲ್ಲಿ ಏಳುವ ಭೂತಗಳು. ಯಾರಾದರೂ ಮನೆಯವರ ಊಟದ ಆಮಂತ್ರಣ ಬಂತೆಂದರೆ ಹಿಂದಿನ ರಾತ್ರಿಯೇ ಉಪವಾಸ ಮಾಡಿ, ಹೊಟ್ಟೆಗೆ ಟ್ರೇನಿಂಗ ಕೊಟ್ಟು ಟ್ರಿಮ್ಮಾಗಿ ಹೋಗುತ್ತಿದ್ದರು. ಗಂಡ ಯಾರದಾದರೂ ಮನೆಗೆ ಊಟಕ್ಕೆ ಹೋದರೆ ಹಿಂದಿನವರಿಗೆ ಏನೂ ಉಳಿಯದಂತೆ ತಿಂದು ಬರುತ್ತಾನೆಂಬ ಗ್ಯಾರಂಟಿ ಇದ್ದ ಹೆಂಡತಿ ಮುದ್ದಾಂ ಆ ದಿನ ಬೆಳಗ್ಗೆ "ಹರಕಹುಗ್ಗಿ" ಮಾಡುತ್ತಿದ್ದಳು. ಈ ಹರಕಹುಗ್ಗಿಗೆ ಸುಧಾರಿಸಿದ ಪಟ್ಟಣದವರು "ಚಕ್ಕೋಲಿ" ಎಂದು ಕರೆದರೂ ಹೊಟ್ಟೀ ಸಾಹೇಬರಿಗೆ ಹರಕಹುಗ್ಗಿ ಎಂದು ಹೇಳಿದಾಗಲೇ ರುಚಿ ಜಾಸ್ತಿ. ಒಂದು ಸಲ ಒಂದು ಡಬರಿ ಹರಕಹುಗ್ಗಿ, ಒಂದು ಚಟಿಗಿ ಹೆರತುಪ್ಪ ಬಿಗತಾ ಬಿಗಿದು ಹೊಟ್ಟೀ ಸಾಹೇಬರು ಮುಗಿಸಿದಾಗ ಬಿನ್ನಾಯ ಬಂತು. ಬಿನ್ನಾಯ ಅಂದರೆ ಸ್ವಾಮಿಗಳಿಗೆ ಭಕ್ತರು ಕರೆಯುವ ಪುಗಸೆಟ್ಟಿ ಊಟದ ಆಮಂತ್ರಣ. ಆ ಬಿನ್ನಾಯದ ಊಟ ಗಂಡಹೆಂಡಿರಿಬ್ಬರಿಗೂ ಬಂದಿತ್ತು. ಹರಕಹುಗ್ಗಿ ಉಂಡಿದ್ದ ಗಂಡ ಬಿನ್ನಾಯದ ಮನೆಯಲ್ಲಿ ಕಡಿಮೆ ತಿನ್ನುತ್ತಾನೆಂದು ತಿಳಿದಿದ್ದ ಹೆಂಡತಿಯ ಎಣಿಕೆ ತಪ್ಪಾಗಿ ಹೋಯಿತು. ಅಲ್ಲಿಯೂ ನಾಲ್ಕು ಸಜ್ಜಿರೊಟ್ಟಿ-ಕೆನಿಮೊಸರು-ಕಡ್ಲಿಹಿಂಡಿ ತಿಂದು ಮೇಲೆ ಒಂದು ಡಬರಿ ಸವತೀಬೀಜದ ಹುಗ್ಗಿ ಉಂಡಾಗ ಹೆಂಡತಿ ಆ ಪರಮಂದಿ ಮನೆಯಲ್ಲೇ ಹಣೆಹಣೆ ಬಡಿದುಕೊಂಡಳು. ಮನೆಗೆ ಬಂದು ಗಂಡನಿಗೆ ಸ್ವಾಟಿ ತಿವಿದು ಹೇಳಿದಳು..... "ನಿಮಗೆ ಬುದ್ಧಿಲ್ಲಾ". ಸಾಹೇಬ ಹೇಳಿದ... "ಬುದ್ಧಿ ಇಲ್ಲಾರದ್ದs ನೆಟ್ಟಗ ಆಗ್ಯೈತಿ....".

ಹೊಟ್ಟೀ ಸಾಹೇಬರ ಮನೆಗೆ ಅಷ್ಟೇ ಅಲ್ಲ, ಅವರ ಮನೆ ಮುಂದಿನ ಕಟ್ಟೆಗೆ ಯಾರಾದರೂ ದೂರ ಹಳ್ಳಿಯವರು ಬಂದು ಬುತ್ತೀ ಬಿಚ್ಚಿದರೆ ಸಾಕು, ಸಾಹೇಬರು ಅವರಿಗೆ ಕೇಳದಿದ್ದರೂ ಬಿಸೆಪಲ್ಲೆ, ಬಿಸೆಸಾರು, ಮೊಸರು, ಚಟ್ನಿ, ಕಾರಬ್ಯಾಳಿ ನೀಡುತ್ತಿದ್ದರು. ಉಂಡ ಹಳ್ಳಿ ಹೆಣ್ಣು

ಮಕ್ಕಳು—"ಮುಂದಿನ ಜನ್ಮದಾಗ ನಾನಿನ್ನ ಮಗಾ ಆಗಿ ಹುಟ್ಲೇಯಪ್ಪಾ" ಎಂದು ಹರಸಿ ಹೋಗುತ್ತಿದ್ದರು. ಇವರ ಊಟ ಉಂಡ ಕೂಲಿನಾಲಿ ಕೆಲಸದವರು "ನಿಮ್ಮ ಮನಿ ಬಂಗಾರಾಗ್ಲಿ" ಎಂದು ಹಾರೈಸುತ್ತಿದ್ದರು. ಹೊಟ್ಟೀ ಸಾಹೇಬರಿಗೆ ಪರಊರಿನವರಿಗೆ, ಅವರು ಗೊತ್ತಿರಲಿ ಗೊತ್ತಿರದಿರಲಿ ಉಣ್ಣಿಸಿದಷ್ಟೂ ಹಿಗ್ಗು. ತಾವು ಪಡೆಯುವ ಊಟದ ಸ್ವರ್ಗಸುಖ ಎಲ್ಲಾರಿಗೂ ಸಿಗಲೆಂದೇ ಅವರ ಹೆಗ್ಗುರಿ.

ದುರ್ದೈವದಿಂದ ಹೊಟ್ಟೀ ಸಾಹೇಬರಿಗೆ ಸರಕಾರದವರು ಹಳ್ಳಿಹಳ್ಳಿಗೆ ಫಿರ್ತಿ ತಿರುಗುವ ಡ್ಯೂಟಿ ಹಾಕಿದರು. ಅಂದಿನಿಂದ ಅವರ ಹೊಟ್ಟೆಯ ದುರಂತ ಕಥೆ ಸುರುವಾಯಿತು. ಹೋದ ಹೋದಲ್ಲಿ ಕೂಳು ಅಷ್ಟೇ ಏಕೆ ನೀರಿಗೂ ಬರ. ಹೊಟೇಲಿನ ಸಪ್ಪೆ ಅಡಿಗೆ ಅಂದರೆ ಅವರಿಗೆ ಸವಳು ನೀರಿನಿಂದ ಮಾಡಿದ ಗಜ್ಜರೀಪಲ್ಲೆ ತಿಂದಂತೆ ಬೇಸರ. ತಿಂಗಳದಲ್ಲಿ ಇಪ್ಪತ್ತು ದಿವಸ ಉಪವಾಸ ವನವಾಸ. ಮೇಲಾಗಿ ಅವರಿಗೆ ಪುಡಿಗಾಸು ಬೆಳೆಯಿಲ್ಲದ ಗುಡ್ಡಗಾಡಿನ ಬರಗಾಲ ಭೂಮಿಗೆ ವರ್ಗ ಮಾಡಬೇಕೆ ಸರಕಾರದವರು !

ಒಂದು ದಿನ ರಾತ್ರಿ ಅವರು ದೂರದ ಗುಡ್ಡಗಾಡಿನ ಹಳ್ಳಿಯೊಂದಕ್ಕೆ ವ್ಹಿಜಿಟ್ ಕೊಟ್ಟರು. ಅಲ್ಲಿಂದ ಮತ್ತೊಂದು ಹಳ್ಳಿ. ಅಲ್ಲಿಂದ ಇನ್ನೊಂದು ಹಳ್ಳಿ. ಇವರ ಹೊಟ್ಟೆ ಇಳಿಬೀಳತೊಡಗಿತು.



ಬಾಯ್ತುಂಬಾ ತೇಕು. ನಡುಬೇಸಗೆಯ ರಾತ್ರಿ. ಮೇಲಾಗಿ ಸುತ್ತೆಲ್ಲಾ ಬರಗಾಲ. ಆ ಕುಗ್ರಾಮ ದಿಂದ ಹೊರಡುವ ಕಡೇ ಬಸ್ಸು ತಪ್ಪಿತು. ಅಲ್ಲಿಂದ ನಡೆಯುತ್ತ ಎಂಟು ಮೈಲು ಹೋದರೆ ಅಲ್ಲಿ ಹಾಯ್‌ವೇ ಹತ್ತುತ್ತದೆಯೆಂದೂ ರಾತ್ರಿ ಎರಡು ಗಂಟೆಗೆ ಹೈದರಾಬಾದದಿಂದ ಬರುವ ಬಸ್ಸು ಸಿಗುತ್ತದೆಯೆಂದೂ ಗೊತ್ತಾಯಿತು. "ಸಾಹೇಬ್ರ... ಆ ದಾರಿಮ್ಯಾಲ ಹೋಗಬ್ಯಾಡ್ರಿ... ಅದು ಬ್ಯಾಳ ಹಲಕಟ್ ದಾರಿ" ಎಂದು ಕೆಲವರು ಹೇಳಿದರು. "ದೆವ್ವ ಭೂತ ಪಿಶಾಚಿಗಳ ಕಾಟ" ಎಂದು ಮತ್ತೆ ಕೆಲವರು ಹೇಳಿದರು. ಸಾಹೇಬರ ಹೊಟ್ಟೆಯಲ್ಲಿ ಇಡೀ ದಿನ ಊಟವಿಲ್ಲದ್ದರಿಂದ ಹಸಿವೆಯ ಭೂತ ಪಿಶಾಚಿಗಳು ಅಬ್ಬರಿಸುತ್ತಿದ್ದವು. ಚಹಾದಂಗಡಿಯ ಆರಿದ ಪುಗ್ಗೆ, ಮುಗ್ಗಿದ ಚುಮ್ಮರಿ ತಿಂದು ಅವರ ಹೊಟ್ಟೆ ಹಾಗಲ ಕಾಯಾಗಿತ್ತು. ಸಂಕಟ ತಾಳದೇ ಶಿವಾ ಎಂದು ಹೊರಟೇ ಬಿಟ್ಟರು. ಆರು ಮೈಲು ನಡೆದು ಹೋದಾಗ ಆಗಲೇ ರಾತ್ರಿ ಒಂದು ಗಂಟೆ. ಬೆಕೋ ಭರಮಪ್ಪ ಆಗಿ ಕತ್ತಲು ಕವಿದಿತ್ತು. ಚಿಕ್ಕ ಬೆಳಕಿನಲ್ಲಿ ದಾರಿ ಕುಡ್ಡು ಕುಡ್ಡಾಗಿ ಕಾಣುತ್ತಿತ್ತು. ಸಾಹೇಬರಿಗೆ ತಮ್ಮ ಮೈ ತಮಗೇ ಸರಿಯಾಗಿ ಕಾಣುತ್ತಿರಲಿಲ್ಲ. ಅವರ ಕರಿಯ ಕೋಟು ಇನ್ನೂ ಕರಿದಾಗಿತ್ತು. ತಾವು ಇಂಥಾ ಭಯಾನಕ ರಾತ್ರಿಯಲ್ಲಿ ಬರಬಾರದಿತ್ತೆನಿಸಿತು. ಗಂಟಲು ನೀರಡಿಸಿ ಸೇದತೊಡಗಿತು. ಹೊಟ್ಟಿ ಹಾವ್ರಾಣಿ ಆಯಿತು. ಇನ್ನೇನು ಮೂರ್ಛೆ ಹೋಗಿ ಕುಳಿತುಕೋ ಬೇಕು... ಮೂರು ನಾಲ್ಕು ಕರಾಳ ಭೂತಗಳು ಎದುರು ಬಂದು ನಿಂತವು! ಆ ದರಿದ್ರ ರಾತ್ರಿಯಲ್ಲಿ ಹರಕಾ ಮುರಕಾ ಆಕೃತಿಗಳು ಕಂಡವು. ಆ ಭೂತಾಕಾರಗಳಲ್ಲಿ ಒಂದು ಭೂತ ಮುಂದೆ ಬಂದು ಗದರಿಸಿತು—"ಹುಂ ನಿಲ್ಲು... ತೆಗೀ ತೆಗೀ". ಏನ ತೆಗೀ? ಏನೂ ಗೊತ್ತಾಗಲಿಲ್ಲ! ಅಷ್ಟರಲ್ಲಿ ಇನ್ನೊಂದು ಭೂತ ಒಂದು ದೊಡ್ಡ ಬಡಿಗಿ ಇವರ ತಲೇ ಮೇಲೆ ಇಟ್ಟು.... "ತೆಗೀ ಗಡಾನ" ಅಂದಿತು. ಏನ ತೆಗಿ?... ತಿಳಿಯದೇ ಗಡಾಗಡಾ ನಡುಗಿದರು. "ತೆಗೀ ರೂಪಾಯಿ" ಶಬ್ದ ಬಂತು. ಆಗಲೇ ತಮ್ಮ ಕಿಸೆಯಲ್ಲಿ ಎಂಟು ನೂರು ರೂಪಾಯಿ ಇದ್ದುದರ ಅರಿವಾಯಿತು. ಸುಮ್ಮನೆ ತೆಗೆದುಕೊಟ್ಟರು. "ಕೊಡೂ ಉಂಗ್ರಾ" ಎಂದಿತು ಇನ್ನೊಂದು ದೆವ್ವ. ಚಿನ್ನದ ಹರಳುಂಗುರ

ಥೇಟಾರು



ತಿಳಿದು ನೋಡಿದರೆ ದೇಶವೆಂಬುದು
      ನಾಟಕವಾಡುವ ಥೇಟಾರು ।
ಬಣ್ಣದ ಕೋಣೆಯೊಳಿದ್ದವರೆಲ್ಲ
      ಗೆದ್ದ ಹೋಟಿನ ಶಾಸಕರು
ರಂಗಭೂಮಿಯಾಯಿತ್ತು ಲೋಕಸಭೆ
      ಬಿದ್ದವರೆದ್ದವರೆಲ್ಲಾರು ।
ವೋಟುಕೊಟ್ಟು ಹುಸಿಯಾಟ ನೋಡುವ
      ನಿದ್ದೆಗೆಟ್ಟ ಆ ಪ್ರೇಕ್ಷಕರು
ನುಡಿದ ಭಂಟರೊ ಕಡಿದ ಭಂಟರೊ
      ಕೊಂಡ ಧಾರಣೆಗೆ ಬಂದವರು
ಶಾಸಕರೆಂದರೆ ಶ್ವಾಸಕರೆಂಬೆ
      ಹುಡದಿಯಲ್ಲಿ ಸವಿಗಂಡವರು
ಸಂಗ ಬಿಟ್ಟು ನಿಸ್ಸಂಗರಾದ ಆ
      ಸಂಗಮೇಶ ಪ್ರಾಸಾದಿಕರು
ಕಬಳಿಸುವುದೇ ಪ್ರಾಸಾದಿಕವಂತೆ
      ತಿದ್ದಿ ತೀಡಿ ಹಣೆಗಿಡುವವರು
ಕವಟು ಕೊಬ್ಬರಿಗೆ ಜಿಗಟು ಬೆಲ್ಲ ಹಚ್ಚಿ
      ತಿನ್ನುವುದೊಂದೇ ಸ್ವರ್ಗದ ಸೊಗಡು
ಮೂರು ದಿನದ ಈ ಸಂತೆಯ ಸುದ್ದಿ
      ಧೂಳಿಯಲ್ಲಿ ಮುಖವಾಯಿತು

● ಸಿಂಪಿ ಲಿಂಗಣ್ಣ ಚಡಚಣ



ರಂಬೆ ಊರ್ವಶಿ ಬದಲು ನೀನೇ ಬರ್ತಾ ಇದ್ದೆ ಅಂತ ಮೊದಲೇ ಗೊತ್ತಿದ್ರೆ ನಾನು ತಪಸ್ಸಿಗೆ ಕೂರ್ತಾನೇ ಇರಲಿಲ್ಲ...!

ಹಗುರಾಗಿ ಬಿಚ್ಚಿಕೊಟ್ಟರು. "ಕೊಡು ಚೇನು" ಎಂದಿತು ಇನ್ನೊಂದು. ಹೆಣ್ಣು ಕೊಟ್ಟ ಮಾವ ಪ್ರೀತಿಯಿಂದ ಕೊಟ್ಟಿದ್ದ ಒಂಟೆಳೆ ಚೇನು ಭೂತದ ಕೈಗೆ ಹೋಯಿತು. "ತೆಗೀ ವಾಚು" ಎಂದಿತು ಮತ್ತೊಂದು. ವಾಚನ್ನೂ ತೆಗೆದುಕೊಟ್ಟರು. "ಮತ್ತೇನೈತಿ ತೆಗಿ" ಎಂದಿತು ದೊಣ್ಣೆ ಹಿಡಿದ ದೆವ್ವ. ಸಾಹೇಬರು ಅವರ ಕಾಲಿಗೆ ಬಿದ್ದು.... "ಉಳಿದದ್ದು ನನ್ನ ಜೀವಾ ಒಂದು.. ಬಿಟ್ಟಬಿಡ್ರಿ" ಎಂದು ಕೈಮುಗಿದು ಮಗುವಿನಂತೆ ಅಳತೊಡಗಿದರು. ಅವರಲ್ಲೊಬ್ಬ ಇನ್ನೊಬ್ಬನಿಗೆ ಹೇಳಿದ... "ಲೇ ದುರ್ಗ್ಯಾ.... ಕಡ್ಡೀಕೊರಿ.... ಬೆಳಕ ಮಾಡು... ಇವನ ಕಿಸೇಗಿಸೇ ತಪಾಸ ತಗೀ". ಆಗ ಎರಡು ಮೂರು ಭೂತಗಳು ಒಮ್ಮೆಲೇ ಕಡ್ಡಿಕೊರೆದು ಸಾಹೇಬರ ಮುಖ ಮಕಮಕ ನೋಡಿದವು. ತಕ್ಷಣ ಒಂದು ಭೂತ ಕೇಳಿತು... "ಯಾರು... ಯಾರು... ಹೊಟ್ಟೀ ಸಾಹೇಬ್ರೇನು?" ಇವರು..."ಹೌದು" ಅಂದರು! ಆ ಕ್ಷಣವೇ ಅವರೆಲ್ಲ ಏಕಕಾಲಕ್ಕೆ "ಹೊಟ್ಟಿ ಸಾಹೇಬ್ರು!" ಎಂದು ಉಚ್ಚರಿಸಿ ದೊಪ್ಪನೇ ಸಾಹೇಬರ ಪಾದಕ್ಕೆ ಬಿದ್ದು... "ಕ್ಷಮಿಸೀ ಧಣಿ... ಕ್ಷಮಿಸ್ರೀಯಪ್ಪಾ..." ಎಂದರು. ತಾವು ಲೂಟಿ ಮಾಡಿದ ರೂಪಾಯಿ-ಉಂಗುರ-ಚೇನು-ವಾಚು ಸಾಹೇಬರಿಗೆ ಹೊರಳಿಕೊಡುತ್ತ... "ಕ್ಷಮಿಸ್ರಿ ಯಪ್ಪಾ.. ನೀವು ಹೊಟ್ಟೀ ಸಾಹೇಬ್ರು.... ದೇವ್ರಂತಾ ಹೊಟ್ಟೀ ಸಾಹೇಬ್ರು" ಎಂದು ನೆಲದ ಮೇಲೆ ಅಡ್ಡಬಿದ್ದರು!

ಅವರೆಲ್ಲಾ ಸಾಹೇಬರನ್ನು ಕೈಹಿಡಿದುಕೊಂಡು ತಮ್ಮ ಅಡವಿ ಗುಡಿಸಲಕ್ಕೆ ಒಯ್ದರು. ಗುಡಿಸಲಲ್ಲಿ ಸಣ್ಣಕ್ಕಿ ಅನ್ನ ಹುಳಿಸಾರು ಮಾಡಿಸಿ ಸಾಹೇಬರಿಗೆ ಹೊಟ್ಟೆ ಹರಿಯುವಂತೆ ಉಣ್ಣಿಸಿದರು. ಗುಡಿಸಲಿನ ಹೊರಗೆ ಹೊರಸಿನ ಮೇಲೆ ಕಂಬಳಿ ಹಾಸಿ ಸಾಹೇಬರನ್ನು ಮಲಗಿಸಿದರು. ಮೇಲೆ ಬೆಚ್ಚನ್ನ ಕೌದಿ ಹೊಚ್ಚಿದರು. ಹೆಂಗಸರು ಸಾಹೇಬರಿಗೆ ಖುಶಿಯಾಗಲೆಂದು ದೇವರ ಸೋಬಾನಿ ಹಾಡು ಹಾಡತೊಡಗಿದರು. ಪೂರ್ವ ದಿಗಂತದಲ್ಲಿ ಭೀಕರ ಕತ್ತಲೆ ಸೀಳಿ ಅರ್ಧಚಂದ್ರ ಲಕಲಕ ಮೇಲೆ ಏಳತೊಡಗಿದೆ. ಸಾಹೇಬರಿಗೆ ಇನ್ನೂ ಖುಶಿಯಾಗಲೆಂದು ಆ ಮುಗ್ಧ ಹೆಂಗಸರು ಬಳ್ಳಿಕಟ್ಟಿ ನಿಂತು ಜಾನಪದ ನೃತ್ಯಮಾಡಿದರು. ಏನೂ ಅರ್ಥವಾಗದ ಹೊಟ್ಟಿ ಸಾಹೇಬರು ಕೊನೆಗೆ ಅವರಿಗೆ ಕೇಳಿಯೇ ಬಿಟ್ಟರು... "ನೀವೆಲ್ಲಾ ನನಗೆ ಹೀಗೇಕೆ ಉಪಚಾರಾ ಮಾಡಾಕತ್ತೀರಿ.... ?"

ಆಗ ಆ ಹಿರಿಯ ಕರಿಯ ಹೇಳಿದ–

"ಯಪ್ಪಾ.... ಧಣಿ.... ಸಾಹೇಬ್ರ... ನಾವು ದಾರೀಕಳ್ರು ನಿಜಾ.....ಕೆಟ್ಟ ಬರಗಾಲಾ... ಹಲಕಟ್ ಹೊಟ್ಟಿ....ಆಗಾಗ ದಾರಿ ಸುಲಿಗೆ ಮಾಡ್ತೇವಿ ನಿಜಾ.....ಆದ್ರ ನಾವು ಕಡ್ಡೀ ಕೊರೆದು ನೋಡಿದಾಗ ನಿಮ್ಮ ಮುಖಾ ಕಂಡ್ತು... ಹೊಟ್ಟೀ ಸಾಹೇಬ್ರಂಬೂದು ಗೊತ್ತಾತು... ಅದಕ್ಕೆ ನಿಮ್ಮ ಕೈಕಾಲ ಬಿದ್ದು ನಿಮ್ಮ ರೂಪಾಯಾ ಬಂಗಾರಾ ಹೊಳ್ಳಿ ಕೊಟ್ವಿ."

ಸಾಹೇಬರು ಏನೂ ತಿಳಿಯದೇ... "ಏಕೆ ಕೊಟ್ಟಿರಿ?" ಎಂದು ಪ್ರಶ್ನೆಮಾಡಿದರು. ಆಗ ಆ ಕರಿಯನ ಪಕ್ಕದ ಮುದಿಯ ಹೇಳಿದ–

"ಯಪ್ಪಾ... ಹೋದ ತಿಂಗ್ಳಾ ಸಂತಿದಿನಾ ನಿಮ್ಮೂರಿಗೆ ಬಂದು ನಿಮ್ಮ ಮನಿ ಕಟ್ಟಿಮ್ಯಾಲೆ ಕೂತು ತಂಗಳ ರೊಟ್ಟಿ ತಿನ್ನಾಕತ್ತಿದ್ವಿ. ರೊಟ್ಯಾಗ ಮೆಣಸಿಂಡಿಪುಡಿ ಹೊರ್ತು ಇನ್ನೇನೂ ಇದ್ದಿಲ್ಲಾ. ನೀವು ನಮಗೆ ಬಿಸೀಪಲ್ಲೆ ಕೊಟ್ರಿ. ಬಿಸೀಸಾರ ಕೊಟ್ರಿ. ಹೊಟ್ಟಿತುಂಬ ಕುಡ್ಯಾಕ ತಣ್ಣೀರ ಕೊಟ್ರಿ. ನಿಮ್ಮನ್ನ ನಾವು ಲೂಟಿ ಮಾಡೀದ್ರ ಶಿವಾ ಮೆಚ್ಚತಾನೇನ್ರೀ ಧಣಿ? ನಾವು ಕಳ್ರ ಇರಬೌದು... ಒಪ್ಪತೇವಿ... ಆದ್ರ ನಮಗೂ ದೇವ್ರು ಧರ್ಮಾ ಅಂಬೂದು ಐತ್ರಿ ಧಣಿ....ನಾವೂ ಮನಶ್ಯಾರ್ರೀಯಪ್ಪಾ"

ಮುಗಿಲಿನಲ್ಲಿ ಚಂದ್ರ ಮಂದಹಾಸ ಬೀರಿದ!

ಸಾಹೇಬರಿಗೆ ಜೇನುತುಪ್ಪದ ನಿದ್ರೆ ಹತ್ತಿತು!! ●

ಬಿಜಾಪುರ

ಹಣ್ಣುಗಳ ಜಿಲ್ಲೆ?

● ಸೋಮಶೇಖರ ಎಸ್. ರುಳಿ

ಐದು ಜೀವನದಿಗಳು (ಭೀಮಾ, ಕೃಷ್ಣಾ, ಘಟಪ್ರಭಾ, ಮಲಪ್ರಭಾ ಮತ್ತು ದೋಣಿ) ಹರಿದರೂ ಕೂಡ 'ಬರಗಾಲ ಜಿಲ್ಲೆ' ಎಂದೇ ಹಣೆ ಪಟ್ಟಿ ಅಂಟಿಸಿಕೊಂಡಿರುವ ಬಿಜಾಪುರ ತನ್ನ ಫಲವತ್ತಾದ ಎರೆಮಣ್ಣಿಗೆ ತುಂಬಾ ಪ್ರಸಿದ್ಧ. ಒಂದು ಸಲ ಮಳೆಯಾದರೆ ಸಾಕು, ಹತ್ತು ಸಲ ಸಮೃದ್ಧ ಬೆಳೆ ಕೊಡುವ ಸಾಮರ್ಥ್ಯ ಇಲ್ಲಿಯ ಕಪ್ಪು ಮಣ್ಣಿಗೆ ಇದೆ ಎಂದು ಕಾಲಾಂತರದಿಂದ ಒಕ್ಕಲುತನ ಮಾಡುತ್ತ ಬಂದವರು ಹೇಳುತ್ತಾರೆ.

ಇಲ್ಲಿಯ ಜನರ ಪ್ರಮುಖ ಆಹಾರ ಜೋಳ. ಹಿಂಗಾರಿ ಜೋಳ. 'ಬಿಜಾಪುರದ ಜೋಳ' ಎಂದು ನಾಡಿನಲ್ಲೆಲ್ಲ ಪ್ರಖ್ಯಾತವಾಗಿರುವ ದೊಡ್ಡ-ದೊಡ್ಡ ಬೆಳ್ಳನೆಯ ಕಾಳುಗಳ ಮುತ್ತಿನಂಥ ಜೋಳ. ಈ ಜೋಳಕ್ಕೆ 'ಮೂಗುತಿ', 'ಮಾಲ್ದಂಡಗಿ' ಎಂಬ ಅನ್ವರ್ಥ ಹೆಸರುಗಳು ಬಂದಿರುವುದು ಕಾಳುಗಳು ಸೂಸುವ ಮುತ್ತಿನಂಥ ಸೌಂದರ್ಯಕ್ಕೇ ಇರಬೇಕು. ಇಂಥ ಬಿಳಿ ಜೋಳದಿಂದ ಮಾಡಿದ ರೊಟ್ಟಿಗಳು ಎಷ್ಟು ರುಚಿ! ಅದೂ ಅವು ತಣ್ಣಗಾಗಿ 'ಖಟಿ' (ಕಡಕ್) ಆದಮೇಲೆ ಒಂದಿಷ್ಟು ಗುರೆಳ್ಳು ಹಿಂಡಿ, ಉಂಬಾ ಎಣ್ಣೆ (ಕುಸುಬೆ ಅಥವಾ ಶೇಂಗಾದಿಂದ ತಯಾರಿಸಿದ ಒಳ್ಳೆಣ್ಣೆ. ಈ ಕಡೆಯೆಲ್ಲ ಕುಸುಬೆ ಎಣ್ಣೆಯನ್ನು ಉಪಯೋಗಿಸುವುದು ಮಾಮೂಲು.) ಹಾಕಿಕೊಂಡು, ಒಂದೆರಡು 'ಹಸಿ ಉಳ್ಳಾಗಡ್ಡಿ' ಗೆಡ್ಡೆಗಳನ್ನು ನೆಂಜಿಕೊಂಡು ಉಂಡರೆ ಸ್ವರ್ಗ ಮೂರೇ ಗೇಣು. 'ಅಕ್ಕಿ ತಿಂದವ ಹಕ್ಕಿ; ಜೋಳ ತಿಂದವ ತೋಳ' ಎನ್ನುವ ಗಾದೆ ಹುಟ್ಟಿದ್ದು ಜೋಳದ ಗಡಸುತನದಿಂದಲೇ ಇರಬೇಕು.

'ಮಕರ ಸಂಕ್ರಾಂತಿ'ಯ ವೇಳೆಗೆ ಬಿಳಿ ಎಳ್ಳು ಹಾಕಿ ಮಾಡಿ, ಒಣಗಿಸಿ, 'ಖಟಿ' ಮಾಡಲಾದ 'ಸಜ್ಜೆ'ಯ ರೊಟ್ಟಿಗಳು ಎಲ್ಲರ ಮನೆಯಲ್ಲೂ ಇರಲೇಬೇಕು. ಸಜ್ಜೆಯ ರೊಟ್ಟಿಗಳೊಂದಿಗೆ ಬದನೆಕಾಯಿಯ 'ವಣಗಿ' (ಪಲ್ಯ)ಯೇ ಆಗಬೇಕೆಂದಿಲ್ಲ. ಕೆನೆ-ಕೆನೆ ಮೊಸರು, ಗುರೆಳ್ಳು ಅಥವಾ ಶೇಂಗಾ ಹಿಂಡಿ ಹಾಕಿಕೊಂಡು ಹೊಡೆದರೆ ಇದರ ಮುಂದೆ ಬೇರೆ ಮೃಷ್ಟಾನ್ನ ಯಾವುದಿದೆ...?


ಬಿಜಾಪುರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು- (ಕನಮಡಿ, ತಿಕೋಟಾ ಮುಂ.) 'ದ್ರಾಕ್ಷಿ' ಬೆಳೆಯ ಬಟ್ಟಲುಗಳು. 'ಥಾಮಸನ್ ಸೀಡ್‌ಲೆಸ್', 'ಅನಾಬ್-ಎ-ಷಾಹಿ'ಯಂಥ ಉತ್ತಮ ತಳಿಗಳ ದ್ರಾಕ್ಷಿ ರಫ್ತುಕೂಡ ಆಗುತ್ತದೆ. ದೊಡ್ಡ-ದೊಡ್ಡ ಗೊಂಚಲುಗಳ ಒಂದೊಂದು ಹಣ್ಣೂ ಕೂಡ ಒಂದೊಂದು ಸಕ್ಕರೆಯ ಕಲ್ಲು. ಮಳೆಯಿಲ್ಲದೆ ಬಸವಳಿದ ರೈತನಿಗೆ ಇರುವ ಬಾವಿಯ ನೀರಿನಲ್ಲೇ ಬೆಳೆದು ಹಣದ ಥೈಲಿ ತುಂಬಿಸುವ ಶಕ್ತಿ 'ದ್ರಾಕ್ಷಿ'ಗೆ ಇದೆ.

ಕಲಾದಗಿ, ಲೋಕಾಪುರಗಳಲ್ಲಿ 'ಚಿಕ್ಕು' (ಸಪೋಟಾ) ಹಾಗೂ 'ದಾಳಿಂಬೆ'ಗಳದ್ದೇ ಸಾಮ್ರಾಜ್ಯ. ಆಕಸ್ಮಾತ್ ನೀವು ಬಸ್‌ಸ್ಟ್ಯಾಂಡಿನಲ್ಲಿ ಇಳಿದರೆ ಈ ಹಣ್ಣುಗಳನ್ನು ಮಾರುವ ಹುಡುಗರು ಮುತ್ತಿಕೊಂಡು ಬಿಡುತ್ತಾರೆ. ಚೆಲುವೆಯ ದಂತಪಂಕ್ತಿಗಳಂತೆ ಸುಂದರವಾಗಿ ಜೋಡಿಸಲ್ಪಟ್ಟು, ರಸ-ರಸವಾಗಿರುವ ದಾಳಿಂಬೆ ಬೀಜಗಳನ್ನು ನೋಡಿ ಆಕರ್ಷಿತರಾಗದೇ ಇರುವವರೇ ವಿರಳ. ಒಂದೊಂದು 'ಗಣೇಶ' ದಾಳಿಂಬೆ ಸುಮಾರು ಕಾಲು ಕೆ.ಜಿ.ಯವರೆಗೂ ತೂಗುವಷ್ಟು ದೊಡ್ಡದಿರಬಹುದು. ಬೇಡಿಕೆ ಬಂತೆಂದರೆ ಒಂದು ಡಝನ್‌ಗೆ ಮುನ್ನೂರಕ್ಕಿಂತಲೂ ಹೆಚ್ಚು ಗಳಿಸಬಹುದು. ಕಲಮು ಮಾಡಿದ 'ಕ್ರಿಕೆಟ್ ಬಾಲ್' ಚಿಕ್ಕು ಹಣ್ಣುಗಳೋ 'ಕಂದುಬಣ್ಣ'ದ ಬೂಂದಿ ಲಾಡು ಎಂದೇ ಹೇಳಬಹುದು.

ಇಂಡಿ ತಾಲ್ಲೂಕಿನ ಅಥರ್ಗಾದ 'ಲಿಂಬೆ'ಹಣ್ಣಿನ ವೈಶಿಷ್ಟ್ಯವೇ ಬೇರೆ. ಮಾಗಿದಾಗ ಅಚ್ಚ ಹಳದಿ ಬಣ್ಣದಿಂದ ಕಂಗೊಳಿಸುವ ಬಾಲ್ ಬ್ಯಾಡ್ಮಿಂಟನ್ ಚೆಂಡಿನಾಕಾರದ ಹಣ್ಣುಗಳನ್ನು ಅರಿಷಿಣದಿಂದ ಓತಪ್ರೊತವಾದ ನವವಧುವಿನ ಕೆನ್ನೆಗಳಿಗೆ ಹೋಲಿಸಿದರೆ ತಪ್ಪೇನೂ ಇಲ್ಲ.

ಒಣಹವೆಗೆ ಒಗ್ಗಿಕೊಂಡು ಜಬರ್‌ದಸ್ತಾಗಿ ಬೆಳೆಯುವ 'ಬೋರೆ' ಹಣ್ಣಿನ ಸಾಮರ್ಥ್ಯವನ್ನು ಈಗೀಗ ಕಂಡುಕೊಳ್ಳಲಾಗುತ್ತಿದೆ. ಮೊಟ್ಟೆಯಾಕಾರದ ದೊಡ್ಡ-ದೊಡ್ಡ ಹಳದಿ ಬಣ್ಣದ 'ಉಮರಾನ್' ತಳಿಯ ಹಣ್ಣುಗಳು ಜನವರಿ—ಫೆಬ್ರವರಿಯಲ್ಲಿ ಪೇಟೆಯನ್ನಲಂಕರಿಸುವುದನ್ನು ನೋಡುವುದೇ ಒಂದು ಹಬ್ಬ.





ಬಿಜಾಪುರ ಜಿಲ್ಲೆ

ಪ್ರವಾಸೀ ವೈಭವ

● ಹಣಮಂತ ತಾಸಗಾಂವಕರ

ಬಿಜಾಪುರ ಎಂದೊಡನೆಯೇ ಸುಡುಸುಡು ಬಿಸಿಲು. ಕಾಯ್ದ ನೆಲ. ಹನಿ ನೀರಿಗೂ ತಪಿಸುವ ಬರ. ಜೊತೆಗೇ ವಿಸ್ಮಯ ಹುಟ್ಟಿಸುವ ಗೋಳ ಗುಮ್ಮಟ. ಸುಂದರವಾದ ಇಬ್ರಾಹಿಂ ರೋಜಾ, ಜುಮ್ಮಾ ಮಸೀದಿ, ವಿಜಯನಗರ ಸಾಮ್ರಾಜ್ಯದ ಪತನಗೈದ ಬಹುಭಾರದ ಮಲಿಕ ಮೈದಾನ ತೋಫು ಇತ್ಯಾದಿಗಳು ಕಣ್ಮುಂದೆ ಸರಿಯುತ್ತವೆ.

ಇನ್ನೂ ದಕ್ಷಿಣದಲ್ಲಿ ಇನ್ನೊಂದು ಮಹಾ ಸಾಮ್ರಾಜ್ಯದ ರಾಜಧಾನಿ ವಾತಾಪಿಪುರ–ಬದಾಮಿ. ಕ್ರಿ.ಶ. ಐದನೆ ಶತಮಾನದಿಂದ ಎಂಟನೆ ಶತಮಾನದ ವರೆಗೂ ಶೌರ್ಯದಿಂದ ಭವ್ಯ ರಾಜ್ಯವಾಳಿದ ಚಾಲುಕ್ಯರು. ಕನ್ನಡಿಗರ ಧೈರ್ಯ, ಶೌರ್ಯಗಳ ಬಣ್ಣನೆಯ ಕಪ್ಪೆ ಅರಭಟ್ಟನ ಶಿಲಾಶಾಸನದ ಬದಾಮಿ. ಅಲ್ಲಿಯ ಗುಹಾಲಯಗಳು ಸುಂದರ ಕೆತ್ತನೆಯ ಕೌಶಲ್ಯದ ಮೆರುಗನ್ನು ಪಡೆದಿವೆ. ಭವ್ಯವಾದ ಕೋಟೆ–ಬಾಗಿಲುಗಳು, ಕೊತ್ತಲು–ಬುರುಜು ಅಗಸಿಗಳು ತಮ್ಮ ಒಡೆಯರ ಸಾಹಸದ ಕಥೆಗಳನ್ನು ಶತಮಾನಗಳಿಂದಲೂ ಹೇಳುತ್ತಿವೆ.

ಮಲಪ್ರಭೆಯ ದಡದ ಐಹೊಳೆ, ಪಟ್ಟದ ಕಲ್ಲಿನಲ್ಲಿ ಚಾಲುಕ್ಯ ಶಿಲ್ಪಿಗಳಿಂದ ವಿವಿಧ ಮಾದರಿ ದೇವಾಲಯಗಳ ಪ್ರಯೋಗಗಳಾಗಿವೆ! ವಾಸ್ತು ಶಿಲ್ಪದ ತೊಟ್ಟಿಲು.

ಮುಹಮ್ಮದ ಆದಿಲಶಹನ ಕಾಲದಲ್ಲಿ ಬಿಜಾಪುರದ ಜನಸಂಖ್ಯೆ ಇಪ್ಪತ್ತು ಲಕ್ಷದಷ್ಟಿತ್ತು. ಮುಂದೆ ಅದು 1881ರ ಜನಗಣತಿಯಲ್ಲಿ 11,424ಕ್ಕೆ ಇಳಿದಿತ್ತು. ಹೀಗೆ ಅನೇಕ ರಾಜಕೀಯ–ನೈಸರ್ಗಿಕ ಏಳು-ಬೀಳು.

ಎರಡು ಮಹಾನ್ ಸಾಮ್ರಾಜ್ಯಗಳ ಬೀಡಾಗಿದ್ದ ಈ ಜಿಲ್ಲೆಯಲ್ಲಿ ಹಿಂದೂ ಹಾಗೂ ಅರಬ್ಬೀ ಸಂಸ್ಕೃತಿಯ ಕಲೆಯ ಸಂಮಿಲನವನ್ನು ಕಾಣಬಹುದು. ಹೀಗಾಗಿ ಮೊದಲಿನಿಂದಲೂ ಇದು ದೇಶ–ವಿದೇಶಗಳ ಪ್ರವಾಸಿಗಳ ಆಕರ್ಷಕ ಕೇಂದ್ರವಾಗಿದೆ.

ಕ್ರಿ.ಶ. 130ರಲ್ಲಿಯೇ ಗ್ರೀಕ್ ಭೂಗೋಳಜ್ಞ ಟೊಲೆಮಿ, ಮುಂತಾದ ಪ್ರವಾಸಿಗರು–ರಾಯಭಾರಿಗಳು, ಆರನೆಯ ಶತಮಾನದಲ್ಲಿ ಚೀನೀ ಪ್ರವಾಸಿಗಳು, ಐಹೊಳೆ, ಪಟ್ಟದಕಲ್ಲು; ಬದಾಮಿ, ಬಿಜಾಪುರಗಳನ್ನು ಸಂದರ್ಶಿಸಿ ಇಲ್ಲಿಯ ವೈಭವಗಳನ್ನು ಬಣ್ಣಿಸಿದ್ದಾರೆ.

ಬದಾಮಿ

ಐತಿಹಾಸಿಕ ಅವಶೇಷಗಳುಳ್ಳ ಪ್ರಮುಖ ಪ್ರೇಕ್ಷಣೀಯ ಸ್ಥಳ. ಚಾಲುಕ್ಯ ಚಕ್ರವರ್ತಿಗಳ ಕಾಲದಲ್ಲಿ ವೈಭವದ ಶಿಖರದಲ್ಲಿತ್ತು. ಇದನ್ನು ಮೊದಲು ವಾತಾಪಿಪುರ ಎನ್ನುತ್ತಿದ್ದರು. ಇಲ್ಲಿ ವಾತಾಪಿ–ಇಲ್ವಲರೆಂಬ ಪ್ರಬಲ ರಾಕ್ಷಸರು ಮುನಿಗಳಿಗೆ ಕಂಟಕರಾಗಿದ್ದರು. ಅಗಸ್ತ್ಯ

ಬಿಜಾಪುರದಲ್ಲಿ ಐತಿಹಾಸಿಕ ಪಳೆಯುಳಿಕೆಗಳು ಇರುವಂತೆ ಅದ್ಭುತ ಕಲಾವೈಭವವೂ ಮೆರೆಯುತ್ತಿದೆ. ಇಲ್ಲಿನ ಪ್ರವಾಸೀ ತಾಣಗಳೆಲ್ಲ ಲೋಕಪ್ರಸಿದ್ಧ.

ಋಷಿಗಳು ಈ ವಾತಾಪಿಯನ್ನು ನುಂಗಿ ಜೀರ್ಣಿಸಿಕೊಂಡರು. ಆಗ ರಕ್ಕಸರ ಬಾಧೆ ದೂರಾಯಿತು. ಅಂತಲೇ "ಅಗಸ್ತ್ಯ ಕ್ಷೇತ್ರ"ವೆಂದೂ ಕರೆಯುವರು. ಈಗ ಇಲ್ಲಿ ಅಗಸ್ತ್ಯತೀರ್ಥ ಹೆಸರಿನ ಹೊಂಡವಿದೆ.

ಇಲ್ಲಿಯ ಚಾಲುಕ್ಯರ ಶಿಲ್ಪ ವೈಭವ ಮಾತ್ರ ಅಮರವಾಗಿದೆ. ಗುಹಾಲಯಗಳು ಸುಂದರವಾಗಿವೆ. ಇವನ್ನು ಮೇಣಬಸ್ತಿಗಳೆಂದೂ ಕರೆಯುವರು.

ಇಲ್ಲಿಯ ನಾಲ್ಕು ಗುಹಾಲಯಗಳಲ್ಲಿ ಒಂದನೆಯ ಹಾಗೂ ಎರಡನೆಯ ಶೈವ ಸಂಪ್ರದಾಯದ ಶಿವಾಲಯಗಳು. ನಟರಾಜನ ಮೂರ್ತಿ ಅಂದವಾಗಿದೆ. ಮೇಲ್ಛಾವಣಿಯಲ್ಲಿ ಕುಸುರಿ ಕೆಲಸವಿದೆ. ಅಂದಿನ ಪೇಂಟಿಂಗ್ ಕುರುಹುಗಳು ಅಲ್ಲಲ್ಲಿ ಉಳಿದಿವೆ.

ಎರಡನೆಯ ಗವಿಯಲ್ಲಿಯ ಶಿವನ ಪಿಂಡಿಕೆಯು ಸುಂದರವಾಗಿದ್ದು ಮೂರ್ತಿಶಿಲ್ಪಕ್ಕೆ ಹೆಸರಾಗಿದೆ. ಭಿತ್ತಿಚಿತ್ರಗಳು ಮಸುಕಾಗಿದ್ದರೂ ಅಂದವಾಗಿವೆ.

ಚಾಳುಕ್ಯ ಚಕ್ರವರ್ತಿ ಮಂಗಳೇಶನು ಕೊರೆಯಿಸಿದ ಮೂರನೆಯ ಗವಿಗೆ ವೈಷ್ಣವ ಗವಿ ಎಂದೆನ್ನುತ್ತಾರೆ. ವಿಷ್ಣುವಿನ ಅವತಾರಗಳಾದ ನರಸಿಂಹ ಹಾಗೂ ವರಾಹ ಮೂರ್ತಿಗಳಿವೆ. ಕಲಾಕೌಶಲ್ಯತೆ, ಭವ್ಯತೆಗಳಿಂದ ಕೂಡಿದ್ದ ಇವು ಶ್ರೇಷ್ಠ ಕಲಾಕೃತಿಗಳು.

ಜೈನ ತೀರ್ಥಂಕರರ ವಿಗ್ರಹಗಳಿರುವ ನಾಲ್ಕನೆಯ ಗವಿಯು ಚಿಕ್ಕದಾಗಿದ್ದು, ಇದನ್ನು ಬಸದಿ ಎಂದೇ ಕರೆಯುವರು. ಅಗಸ್ತ್ಯ ಹೊಂಡದ ಎಡದಂಡೆಯ ಭೂತನಾಥನ ಗುಡಿ ವಾಸ್ತುಶಿಲ್ಪಕ್ಕೆ ಹೆಸರಾಗಿದ್ದು, ಇಲ್ಲಿ ಚಾಲುಕ್ಯರ ಅನೇಕ ಶಾಸನಗಳಿವೆ. ಇಲ್ಲಿಂದ ಎತ್ತರದ ಕೋಟೆಗೆ ಹೋಗಲು ದಾರಿಯಿದೆ. ಕನ್ನಡಿಗರ ಸ್ವಭಾವದ ಬಣ್ಣನೆಯ ಕಪ್ಪೆ ಅರಭಟ್ಟನ ಶಿಲಾಶಾಸನವೂ ಇಲ್ಲಿಯ ಬಂಡೆ ಮೇಲಿದೆ.

ಅನತಿ ದೂರದಲ್ಲೇ ಮಹಾಕೂಟ ಕ್ಷೇತ್ರವಿದೆ. ಇದನ್ನು ದಕ್ಷಿಣದ ಕಾಶಿ ಎಂದೆನ್ನುವರು. ಪುರಾತನ ಸ್ಥಳ, ಬನಸಿರಿಯ ಬೆಡಗಿನಲ್ಲಿ ವನದೇವತೆ, ಬನಶಂಕರಿ ಕ್ಷೇತ್ರ. ಸನಿಹದಲ್ಲೆ ತಪೋಭೂಮಿ ಶಿವಯೋಗ ಮಂದಿರವಿದೆ.

ಪಟ್ಟದಕಲ್ಲು

ಇದೊಂದು ಶೈವ ಕ್ಷೇತ್ರ. ಕಲಾಪ್ರಿಯರನ್ನು ಆಕರ್ಷಿಸುವ ಶಿಲ್ಪಕಲೆಗಳ ಬೀಡು. ಚಾಲುಕ್ಯ ವಾಸ್ತುಶಿಲ್ಪದ ವಿಕಸನ ಕೇಂದ್ರಗಳಲ್ಲಿಯ ಎರಡನೆ ಘಟ್ಟವೆಂದೂ ಗುರುತಿಸುವರು.

ಇದಕ್ಕೆ ಮೊದಲು "ಕಿಸುವೊಳಲ್" ಹೆಸರಿತ್ತು. ಅಂದು ಚಾಲುಕ್ಯ ಸಾಮ್ರಾಟರಿಗೆ ಪಟ್ಟಾಭಿಷೇಕ ನಡೆಯುತ್ತಿತ್ತು. ಹೀಗಾಗಿ ಪಟ್ಟದ ಕಿಸುವೊಳಲ್—ಪಟ್ಟದಕಲ್ಲು ಆಯ್ತು. ಮಲಪ್ರಭೆಯ ದಡದ ಮೇಲಿರುವ ಶಿವಾಲಯ, ಜಿನಾಲಯಗಳು ರೇಖಾನಾಗರ ಹಾಗೂ ದ್ರಾವಿಡ ಶೈಲಿಯಲ್ಲಿವೆ.

ಪಾಪನಾಥ, ಗಳಗನಾಥ, ವಿರೂಪಾಕ್ಷ, (ಲೋಕೇಶ್ವರ) ತ್ರೈಲೋಕೇಶ್ವರ, ಸಂಗಮೇಶ್ವರ, ಜಂಬುಲಿಂಗೇಶ್ವರ, ಕಾಡಸಿದ್ದೇಶ್ವರ, ಕಾಶಿ ವಿಶ್ವೇಶ್ವರ, ಚಂದ್ರಶೇಖರ ಮುಂತಾದ ವಾಸ್ತುಶಿಲ್ಪ, ಮೂರ್ತಿಶಿಲ್ಪ, ನಾಟ್ಯಶಿಲ್ಪ ಹಾಗೂ ಧಾರ್ಮಿಕ ಚಿತ್ರಣಗಳನ್ನೊಳಗೊಂಡ ಸುಂದರ ದೇವಾಲಯಗಳಿವೆ.

ಈ ದೇವಾಲಯಗಳಲ್ಲಿ ಅನೇಕ ಸುಂದರ ನರ್ತಕಿಯರ ಶಿಲ್ಪಗಳು, ವಿವಿಧ ತಂತಿವಾದ್ಯ—ತಾಳವಾದ್ಯ, ನಾಟ್ಯಶಾಸ್ತ್ರ, ಆನೆಗಳು, ಮಿಥುನ ಶಿಲ್ಪಗಳು, ಜಾಲಂಧರಗಳು, ಶಿವನ—ವಿವಿಧ ನಾಟ್ಯ ಭಂಗಿಯ ಸುಂದರ ಶಿಲ್ಪಗಳಿವೆ. ಕಂಬಗಳೆಲ್ಲ ಅಲಂಕಾರಿಕ ವಿನ್ಯಾಸಗಳಿಂದ, ಪೌರಾಣಿಕ ಘಟನೆಗಳಿಂದ, ನಯವಾಗಿ ಕೆತ್ತಲ್ಪಟ್ಟಿವೆ. ಅಂದು ರಂಗಮಂಟಪಗಳಲ್ಲಿ ನೃತ್ಯ—ಸಂಗೀತ ಏರ್ಪಟ್ಟಂತೆ, ಇಂದೂ ಇಲ್ಲೀಗ ಕರ್ನಾಟಕ ಸಂಗೀತ—ಮತ್ತು ನೃತ್ಯ ಅಕಾಡೆಮಿ ವತಿಯಿಂದ ಪಟ್ಟದಕಲ್ಲು ನೃತ್ಯೋತ್ಸವ ಪ್ರತಿ ವರ್ಷ ನಡೆಯುತ್ತಿದೆ. ಕಲಾರಸಿಕರಿಗೆ, ಪ್ರವಾಸಿಗರಿಗೆ ಇದೊಂದು ಆಕರ್ಷಣೀಯ ಸ್ಥಳವೆನ್ನಿಸಿದೆ.

ಐಹೊಳೆ

ಪರಶುರಾಮನು ತನ್ನ ತಂದೆಯ ವಚನ ಈಡೇರಿಸಿ ಕಾರ್ತವೀರ್ಯನನ್ನು ಕೊಂದು ರಕ್ತರಂಜಿತ ಕೊಡಲಿಯನ್ನು ಇಲ್ಲಿಯ ಹೊಳೆಯಲ್ಲಿ ತೊಳೆಯುವಾಗ್ಗೆ ಐ... ಐ... ಹೊಳೆ ಎಂದನಂತೆ. ಅದೇ ಐಹೊಳೆಯಾಯಿತಂತೆ.

ಚಾಲುಕ್ಯರು ಇಲ್ಲಿ ದೇವಾಲಯಗಳ ವಾಸ್ತು

ಶಿಲ್ಪದ ಪ್ರಯೋಗ ಮಾಡಿದರೆಂದು ಕಂಡು ಬರುತ್ತದೆ. ಇಲ್ಲಿಯ ಪ್ರಾಚೀನ ದೇವಾಲಯಗಳು ಅಪೂರ್ವವಾಗಿದ್ದು, ಸುಂದರವಾಗಿವೆ.

ಇಲ್ಲಿ ಲಾಡಖಾನ ಹಾಗೂ ಸೂರ್ಯನಾರಾಯಣ ದೇವಾಲಯ, ಗೌಡರ ದೇವಾಲಯ, ದುರ್ಗಾ ದೇವಾಲಯ, ಚಕ್ರಗುಡಿ ಹುಚ್ಚಿಮಲ್ಲಿ ದೇವಾಲಯ, ರಾವಳಫಡಿ ದೇವಾಲಯ, ಚಿಕ್ಕಿ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಕೊಂತ ದೇವಾಲಯ, ಮೇಗುತಿ–ಜಿನಾಲಯ, ಹುಚ್ಚಪ್ಪಯ್ಯ ದೇವಾಲಯ, ಜ್ಯೋತಿರ್ಲಿಂಗಗಳು, ಗಳಗನಾಥ ದೇವಾಲಯ, ರಾಮಲಿಂಗೇಶ್ವರ ದೇವಾಲಯ, ಜೈನ ಗುಹೆಗಳಿವೆ.

ಉತ್ತರೀಯ ವಾಸ್ತಕಲೆ ಹಾಗೂ ದ್ರವಿಡ ಶಿಲ್ಪಕಲೆಗಳ ಸಮ್ಮಿಶ್ರ ಶೈಲಿಯ ಶಿಲ್ಪಗಳ ಕಲಾಪ್ರಯೋಗ ಮೆಚ್ಚುವಂಥದ್ದು.

ವೈಷ್ಣವ ಹಾಗೂ ಶೈವ ದೇವತೆಗಳೆರಡೂ ಇಲ್ಲಿಯ ದೇವಾಲಯಗಳಲ್ಲಿವೆ. ಬೌದ್ಧರ ಚೈತ್ಯಾಲಯ, ಜಿನನ ಪವಿತ್ರ ಮಂದಿರ ಮುಂತಾದೆಡೆ ವಾಸ್ತುಶಿಲ್ಪದ ಮೂಲ ಸ್ವರೂಪಗಳನ್ನೂ ಕಾಣಬಹುದು.

ಬಿಜಾಪುರ

ಆದಿಲಶಾಹಿ ದೊರೆಗಳ ವೈಭವದ ರಾಜಧಾನಿ. ಸುತ್ತಲೂ ಕೋಟೆ–ಬುರುಜುಗಳು, ಮಹಾದ್ವಾರಗಳು. ನಾಲ್ಕೂ ನಿಟ್ಟಿನಿಂದ ಕೈಬೀಸಿ ಕರೆವ ಭವ್ಯ ಗೋಳಗುಮ್ಮಟ. ಉಪ್ಪಲಿ ಬುರುಜ, ಇಬ್ರಾಹಿಂ ರೋಜಾ, ಫಾರುಕ್ ಮಹಲ್–ಅರಮನೆ, ಆನಂದ ಮಹಲ್, ಜಲಮಂದಿರ, ಆಸಾರ ಮಹಲ್, ಬಾರಾ ಕಮಾನ, ಜುಮ್ಮಾ ಮಸೀದಿ, ಗಗನ ಮಹಲ್, ಮೆಹತರ ಮಹಲ್, ಜೋಡ ಗುಮ್ಮಟ, ತಾಸಬಾವಡಿ, ಮಲಿಕ ಮೈದಾನ ತೋಫ, ಮೋತಿ ಗುಮ್ಮಟ,

ಗೋಳಗುಮ್ಮಟ — ಫೋಟೋ: ಕೆ.ಜಿ. ಶಿವಯೋಗಿ



ಅರುವತ್ಮೂರು ಗೋರಿಗಳು, ನರಸಿಂಹ ದೇವಾಲಯ, ತೊರವಿ–ನವರಸಪುರ ಇವೆಲ್ಲ ನೋಡತಕ್ಕವುಗಳು.

ಗೋಳಗುಮ್ಮಟ

ಇದು ರೈಲು ನಿಲ್ದಾಣದ ಹತ್ತಿರವಿದೆ. ಇದನ್ನು ಮಹಮ್ಮದ ಆದಿಲಶಹನು (1626-1656) ಕಟ್ಟಿಸಿದನು. ಇದರಲ್ಲಿ ಸುಲ್ತಾನ ಮುಹಮ್ಮದ, ಅವನ ರಾಣಿ ಮಗಳು ಹಾಗೂ ಪ್ರೀತಿಯ ರಂಭಾ ಇವರ ಗೋರಿಗಳಿವೆ. ಕೆಳಗಿನ ನೆಲ ಹಾಗೂ ಮೇಲಿನ ಗುಮ್ಮಟದ ಪರಿಮಾಣಗಳನ್ನು ನೋಡಲಾಗಿ ಇದು ಅತ್ಯಂತ ವಿಸ್ಮಯಕಾರಿಯಾಗಿ ಕಾಣುತ್ತದೆ. ಇದರ ಅಸ್ತಿಭಾರ ಸಮತಲವಾದ ಒಂದು ಶಿಲೆಯ ಮೇಲೆ ನಿಂತಿದೆ. ಈ ಮಂಟ

ನನ್ನೂರು ನನ್ನ ಜನ ಬಾದಾಮಿಯ ಬಿಳಿ ಜೋಳದ ರೊಟ್ಟಿ ಬೇಕೇ?

ಬಿಳಿ ಜೋಳದ ರೊಟ್ಟಿ ಬೇಕೆ?... ಹಾಗಾದರೆ ತಾವು ಬಿಜಾಪುರ ಜಿಲ್ಲೆಯ ಬಾದಾಮಿಗೆ ಬನ್ನಿ. ನೀವು ವಿಜಾಪುರ ಜಿಲ್ಲೆಯನ್ನು ಬಿಟ್ಟು ಬೇರೆ ಜಿಲ್ಲೆಯ ಖಾನವಳಿಯಲ್ಲಿ ಊಟ ಮಾಡಿರ ಬಹುದು ಹಾಗೂ ರುಚಿಯನ್ನು ಸವಿದಿರ ಬಹುದು. ಅಲ್ಲವೇ? ನನ್ನ ಬಾದಾಮಿಯ ಭೋಜನಾಲಯದಲ್ಲಾಗಲಿ ಹಾಗೂ ಮನೆಯಲ್ಲಿ ಆಗಲಿ ಊಟ ಮಾಡಿರಿ. ಅದರಲ್ಲೂ ರೊಟ್ಟಿಯ ರುಚಿಯನ್ನು ಸವಿಯಿರಿ. ನಾನು ನನ್ನ ಸ್ನೇಹಿತರು ಕೂಡಿಕೊಂಡು ಪ್ರವಾಸಕ್ಕೆಂದು ಮುಂಬೈಗೆ ಹೋದಾಗ ನಡೆದ ಘಟನೆ ಇದು: ಊಟಕ್ಕೆಂದು ಬಿಸ್ಮಿಲ್ಲಾ ಹೊಟೇಲ್ ಎಂದು ನಾಮಫಲಕ ತೂಗುಹಾಕಿದ ಹೊಟೇಲ್‌ಗೆ ಹೋದೆವು. ಅಲ್ಲಿ ಕನ್ನಡದಲ್ಲಿ (ಮರಾಠಿ ಹಾಗೂ ಹಿಂದಿ) ಬಿಜಾಪುರ ಜಿಲ್ಲೆಯ ಬಿಳಿ ಜೋಳದ ರೊಟ್ಟಿ ಸಿಗುತ್ತದೆ ಎಂಬ ನಾಮಫಲಕ ನಮ್ಮ ಕಣ್ಣಿಗೆ ಕಂಡು ಬಂದಿತು. ಐದಾರು ದಿನಗಳಿಂದಲೂ ರೊಟ್ಟಿ ತಿನ್ನದ ನಾವು ಮರುಭೂಮಿಯಲ್ಲಿ ಓಯಸಿಸ್ ಕಂಡಂತಾಯಿತು.

ಬಿಳಿ ಜೋಳವನ್ನು ಬಿತ್ತಿದವರ ಹೊಲದಲ್ಲಿ ಎಳ್ಳಮಾವಾಸ್ಯೆಯ ದಿನ ಅತಿ ಸಡಗರ ಸಂಭ್ರಮ ದಿಂದ ಎತ್ತುಗಳನ್ನು ಮೈ ತೊಳೆಸಿಕೊಂಡು (ಸ್ನಾನ ಮಾಡಿಸಿಕೊಂಡು), ಕೋಡಿಗೆ ಬಣ್ಣ ಲೇಪಿಸಿ ಎತ್ತಿನ ಮೈಮೇಲೆ ಉತ್ತಮವಾದ ಸೀರೆಯನ್ನು ಹಾಕಿ, ಎತ್ತಿನಗಾಡಿಗೆ ತಳಿರು ತೋರಣದಿಂದ ಶೃಂಗರಿಸಿ ಜಿಲಕ್... ಜಿಲಕ್... ಎಂದು ನಾದ ಬರುವ ಗೆಜ್ಜೆಯನ್ನು ಕಟ್ಟಿಕೊಂಡು ನಡೆದರೆ ನಮ್ಮ ಎರಡು ಕಣ್ಣು ಗಳು ಸಾಲುವದಿಲ್ಲ, ಇನ್ನು ಎತ್ತಿನ ಗಾಡಿಯಲ್ಲಿ ತರ–ತರಹದ ಅಡಿಗೆಯನ್ನು ಮಾಡಿಕೊಂಡು. ಪೂಜಾ ಪುನಸ್ಕಾರ, ಚರಗಾ, ಎಲ್ಲವೂ ಮುಗಿದ ನಂತರ ಪಕ್ಕದ ಹೊಲದ ರೈತರನ್ನು ಕರೆದು ಊಟ ಮಾಡಿಸುವದು ಇದೊಂದು ವಾಡಿಕೆ, ಶಿಸ್ತು.

ಬಿಳಿ ಜೋಳದ ರೊಟ್ಟಿ ಇಲ್ಲಿಯವರ ಮುಖ್ಯ ಆಹಾರ. ಒಂದು ಕೆ.ಜಿ. ಹಿಟ್ಟಿಗೆ ಹದಿನಾರರಿಂದ ಇಪ್ಪತ್ತು ರೊಟ್ಟಿಗಳನ್ನು ತಯಾರಿಸುತ್ತಾರೆ. ರೊಟ್ಟಿಯಲ್ಲಿ ತೊಗರಿಬೇಳೆ ಪಲ್ಲೆ ಸೇರಿಸಿ ತಿಂದವನ ಮುಂದೆ ಅಮೃತ ತಂದಿರಿಸಿದರೂ ಆಶೆಪಡಲಾರ.

ಬನಶಂಕರಿ ಜಾತ್ರೆ

ಬಾದಾಮಿಯ ಶ್ರೀ ಬನಶಂಕರಿ ದೇವಿಯ ಜಾತ್ರೆ ಕರ್ನಾಟಕದಲ್ಲೆ ಪ್ರಸಿದ್ಧವಾದದ್ದು ಸತತ ವಾಗಿ ಒಂದು ತಿಂಗಳು ಎಡೆಬಿಡದೆ ನಿರಂತರ ವಾಗಿ ನಡೆಯುವುದು. ಜಾತ್ರೆಯಲ್ಲಿ ಎಂಟು-ಒಂಬತ್ತು ಚಿತ್ರ ಮಂದಿರಗಳು, ಎರಡು, ಮೂರು ನಾಟಕಗಳು, ಸರ್ಕಸ್ ಮನರಂಜನೆಗೆ ಯಾವುದೆ ಕೊರತೆಯಾಗುವುದಿಲ್ಲ. ಅಲ್ಲದೆ ಇಲ್ಲಿ ಇನ್ನೊಂದು ವಿಶೇಷವೆಂದರೆ ಪುಟ್ಟಿಯಲ್ಲಿ ರೊಟ್ಟಿ ಯನ್ನು ಇಟ್ಟುಕೊಂಡು ಯಾತ್ರಿಕರಿಗೆ ರೊಟ್ಟಿ ಯನ್ನು ಕೊಟ್ಟು ಅವರ ಹಸಿವನ್ನು ಇಂಗಿಸುವುದ ರಲ್ಲಿ ಯಶಸ್ವಿಯಾಗುವರು. ಒಂದು ರೂಪಾಯಿಗೆ ಆರರಿಂದ ಎಂಟು ರೊಟ್ಟಿಯನ್ನು ಪಲ್ಲೆ, ಕಾರ, ಹಾಕಿಕೊಟ್ಟು ರೊಟ್ಟಿಯ ರುಚಿ ಯನ್ನು ಹಂಚುವರು. ಕೆಲವು ಯಾತ್ರಿಕರು ರೊಟ್ಟಿಯನ್ನು ತಿನ್ನಲು ಬರುವರು ಅಂದರೆ ತಪ್ಪಾಗಲಾರದು. ನೀವು ಸಹ ಬಂದು ರೊಟ್ಟಿಯ ರುಚಿಯನ್ನು ಸವಿಯಬಾರದೇಕೆ?

● ರಾಚಣ್ಣ, ಹುಂಡೇಕಾರ

ಪವು ತಲಪೀಠದಿಂದ ಅಷ್ಟಕೋನಾಕೃತಿಯಾಗಿ ಎದ್ದು ಮೇಲೆ ಬೆಟ್ಟದಂತಹ ಗುಮ್ಮಟವನ್ನು ಹೊತ್ತಿದೆ.

ಈ ಕಟ್ಟಡದ ಒಟ್ಟು ಕ್ಷೇತ್ರ 1703.56 ಚೌರಸ ಮೀಟರ್. ಮಂಟಪದ ಕೆಳ ನೆಲದಿಂದ 33.22 ಮೀಟರ್ ಎತ್ತರದಲ್ಲಿ ಗುಮ್ಮಟದ ಅಂಚುಗುಂಟ ಒಂದು ಗ್ಯಾಲರಿಯಿದೆ. ಈ ಗುಮ್ಮಟವು ಅರ್ಧ ಗೋಲಾಕೃತಿಯಾಗಿದ್ದು, ಅದರ ಒಳಗಿನ ವ್ಯಾಸ 37.92 ಮೀಟರ್ ಇರುತ್ತದೆ.

ಈ ಗುಮ್ಮಟದ ಒಳ ಚಾಚಿದ ವಿಸ್ಮಯಕಾರಿ ಗ್ಯಾಲರಿಗೆ ವಿಸ್ಪರಿಂಗ್ ಗ್ಯಾಲರಿ—ಪಿಸುಮಾತಿನ ಗ್ಯಾಲರಿ ಎನ್ನುತ್ತಾರೆ. ಅತಿ ಸೂಕ್ಷ್ಮ ಮಾತೂ—ಎದುರಿನ ಆಸನದವರಿಗೆ ಕಿವಿಯಲ್ಲಿ ಮಾತಾಡಿದಂತಾಗುತ್ತದೆ. ಒಂದು ಸಲ ಚಪ್ಪಾಳೆ ತಟ್ಟಿದರೆ ಅದು ಹತ್ತು ಸಲ ಮರುಧ್ವನಿ ಕೊಡುತ್ತದೆ. ಜಗತ್ತಿನಲ್ಲೇ ಭವ್ಯ, ಅದ್ಭುತ, ಆಶ್ಚರ್ಯ ಮತ್ತು ಚಮತ್ಕಾರಿಕ ಗುಮ್ಮಟ.

ಜುಮ್ಮಾ ಮಸೀದಿ

ಮೊದಲನೆಯ ಅಲಿ ಆದಿಲಶಹನಿಂದ ಕ್ರಿ.ಶ. 1565ರಲ್ಲಿ ನಿರ್ಮಾಣಗೊಂಡ ಪ್ರಾರ್ಥನಾ ಮಂದಿರ. ಇದು ದಕ್ಷಿಣದ ಮಸೀದಿಗಳಲ್ಲೇ ಅತ್ಯಂತ ವಿಶಾಲವಾಗಿದೆ. ಇದರ ಅಂತಸ್ತಿನ ಮೇಲೆ ವಿಶಾಲ ಹಾಗೂ ದುಂಡನೆಯ ಗುಮ್ಮಟ ರಾಜಮುಕುಟದಂತೆ ಕಂಗೊಳಿಸುತ್ತಿದೆ. ಸಾವಿರಾರು ಜನರು ಏಕಕಾಲದಲ್ಲಿ ನಮಾಜು ಮಾಡಲು ಅನುಕೂಲವುಳ್ಳ ಕಮಾನು ಗುರುತುಗಳಿವೆ. ಮೆಹರಬ್ ಬಂಗಾರ ಹಾಗೂ ಬಣ್ಣಗಳಿಂದ ರೇಖಾಕೃತಿ, ಪುಷ್ಪಾಕೃತಿಗಳ ಸಾಲುಗಳಿಂದ ಅಲಂಕರಿಸುವುದನ್ನು ಮಲಕ್ ಯಾಕೂತನೆಂಬ ಚಿತ್ರಕಾರ 1636ರಲ್ಲಿ ಮಾಡಿದನು. "ಜೀವನದಲ್ಲಿ ಅತ್ಯಾಸಕ್ತಿ ಬೇಡ. ಅದು ಕ್ಷಣಿಕವಾಗಿದೆ. ಈ ಅನ್ಯರ ಜಗತ್ತಿನಲ್ಲಿ ಮಾನಸಿಕ ನೆಮ್ಮದಿಯೆಂಬುದಿಲ್ಲ" ಸುಂದರ ಬರಹವಿದೆ.

ಮೊಗಲ ಬಾದಶಹ ಔರಂಗಜೇಬನು

ಇಬ್ರಾಹಿಂ ರೋಜಾ



1686ರಲ್ಲಿ ಬಿಜಾಪುರವನ್ನು ಜಯಿಸಿದಾಗ, ಪೂರ್ವ ದಿಶೆಯ ಮಹಾದ್ವಾರವನ್ನು ಕಟ್ಟಿಸಿದ.

ಮೆಹತರ ಮಹಲ್

ಇಲ್ಲಿ ಕಲ್ಲನ್ನು ಮೇಣದಂತೆ ಉಪಯೋಗಿಸಿ, ಕುಸುರಿ ಕೆಲಸ ಮಾಡಿದ್ದಾರೆ. ಇದೊಂದು ಸುಂದರ ಮಹಾದ್ವಾರ. ಜಾಲಂದರ–ಕಿಟಕಿಗಳ ನಯವಾದ ಕೆಲಸ ಆಕರ್ಷಕವಾಗಿದ್ದು ಕಲಾತ್ಮಕವಾಗಿದೆ.

ಆಸಾರ ಮಹಲ್

ಸುಲ್ತಾನ ಮಹಮ್ಮದನು 1640ರಲ್ಲಿ ನ್ಯಾಯಾಸ್ಥಾನವೆಂದು ಕಟ್ಟಿದ ವಿಶಾಲ ಸಭಾಂಗಣ. ದಾದ ಮಹಲ್ ಎಂದೂ ಇದನ್ನು ಕರೆಯುತ್ತಾರೆ. ಮೊಗಸಾಲೆ ಭವ್ಯ, ಎತ್ತರವಾದ ಕಟ್ಟಿಗೆಯ ಕಂಬಗಳ ಮೇಲೆ ನಿಂತಿದೆ. ಮೇಲ್ಭಾವಣಿಯನ್ನು ಬಣ್ಣದ ನಕ್ಷೆಗಳಿಂದ, ಬಂಗಾರದ ಮೆರುಗಿನಿಂದ ಅಲಂಕರಿಸಲಾಗಿದೆ. ಮೇಲಂತಸ್ತಿನ ಕೋಣೆಯ ಗೋಡೆಗಳಲ್ಲಿ ನಾಲ್ಕೂ ಋತುಗಳ ನಿಸರ್ಗದ ಸುಂದರತೆ ಚಿತ್ರಿಸಿರುವರು. ಬಾಗಿಲುಗಳು ಹಸ್ತಿ ದಂತದಿಂದ ಕೆತ್ತಲಾಗಿದೆ. ಇಲ್ಲಿಯ ಕೋಣೆಯಲ್ಲಿ ಮೀರ ಮಹಮ್ಮದ್ ಎಂಬವನು ಮಕ್ಕಾದಿಂದ ತಂದ ಪೈಗಂಬರರ ಗಡ್ಡದ ಎರಡು ಕೂದಲೆಳೆಗಳನ್ನು ಪವಿತ್ರ ಸ್ಮಾರಕವಾಗಿ ಕಾಯ್ದಿರಿಸಿದ್ದಾರೆ.

ಬಾರಾ ಕಮಾನ

ಎರಡನೆಯ ಅಲಿ ಆದಿಲಶಹನು (1656-1672) ನಿರ್ಮಿಸಿದ್ದರಿಂದ ಇದನ್ನು ಅಲಿ ರೋಜಾ ಎಂದು ಅನ್ನುತ್ತಾರೆ. ತನ್ನ ಪೂರ್ವಜರಿಗಿಂತಲೂ ಭವ್ಯ–ಸುಂದರ ಸಮಾಧಿ ಕಟ್ಟಬಯಸಿ ದೊಡ್ಡ ಯೋಜನೆ ತಯಾರಿಸಿದ್ದ. 12 ಕಮಾನುಗಳನ್ನು 20 ಅಡಿ ಎತ್ತರದ ಕಟ್ಟೆ ಮೇಲೆ ಕಟ್ಟಿಸಿ ಇದರ ನೆರಳು ಗೋಳಗುಮ್ಮಟದ ಮೇಲೆ ಬೀಳುವಂತೆ ಯೋಜಿಸಿದ್ದ. ಆದರೆ ಈತ ಪಾರ್ಶ್ವವಾಯುವಿನಿಂದ ಮರಣ ಹೊಂದಿದ್ದರಿಂದ ಇದು ಪೂರ್ಣವಾಗದೇ ಗತವೈಭವ ಸಾರುತ್ತ ನಿಂತಿದೆ.

ನನ್ನೂರು

ಹಂಸನೂರ ಕಲೆ

ಹಂಸನೂರ ಎಂದಾಕ್ಷಣ ಬಿಜಾಪುರ ಜಿಲ್ಲೆಯ ಪ್ರತಿಯೊಬ್ಬ ವ್ಯಕ್ತಿಯೂ ಕಿವಿ ಆಲಿಸಿ ಕೇಳುತ್ತಾನೆ. ಚಾಲುಕ್ಯರ ಕಾಲದಿಂದಲೂ ನಾಟ್ಯ ವಿದ್ಯೆಯಲ್ಲಿ ಸೊಬಗನ್ನು ಮೆರೆಯುತ್ತಾ ಬಂದ ಕಲಾಕುಸುಮಗಳು ಇಂದಿಗೂ ಆ ಕಾರ್ಯವನ್ನು ನಿರ್ವಹಿಸುತ್ತಾ ನಾಟಕ ಕಲೆಯ ಸೇವೆಯನ್ನು ಅಮೋಘವಾಗಿ ಮಾಡುತ್ತಾ ಹೋಗುತ್ತಿದ್ದಾರೆ.

ಪ್ರತಿಯೊಂದು ಸುತ್ತಮುತ್ತಲಿನ (ಬಿಜಾಪೂರ, ರಾಯಚೂರ, ಧಾರವಾಡ, ಗುಲಬರ್ಗಾ ಜಿಲ್ಲೆಗಳ) ಹಳ್ಳಿಗಳಿಗೆ ಹೋಗಿ ತಮ್ಮ ಕಲೆಯ ಮೆರಗನ್ನು ಮೆರೆಯುತ್ತಾರೆ.

ಓ ಈ ವರ್ಷ ಕಮಲಾಕ್ಷಿಯನ್ನು ಕರೆಯಿಸಬೇಕು. ಅಬ್ಬಾ ಎಷ್ಟೊಂದು ಹಾಸ್ಯ, ಅವಳು ಇಲ್ಲದಿದ್ದರೆ ನಾಟಕಕ್ಕೆ ಶೋಭೆಯೇ ಬರದು... ತಾರಾ ಏನು ಕಡಿಮೆಯೇ ಅವಳ ಸಾಧ್ವಿ ಪಾತ್ರವನ್ನು ಅಭಿನಯಿಸುವದನ್ನು ನೋಡಬೇಕಾಗಿತ್ತು ನೀನು. ಮುಂದೆ ಕುಳಿತು ಆಲಿಸುತ್ತಿದ್ದ ಹೆಣ್ಣು ಮಕ್ಕಳ ಕಣ್ಣಲ್ಲಿಯೂ ನೀರು ಕೋಡಿಯಾಗಿ ಹರಿಯುತ್ತಿತ್ತು. ರೇಣುಕಾಳ ಖಳನಾಯಕಿಯ ಪಾತ್ರವೇನೂ ಕಡಿಮೆಯಲ್ಲ, ಬಂದು ನಿಂತು ಮಾತು ಹೇಳಿದರೆ ಮಗ್ಗುಲದಲ್ಲಿಯ ಗಂಡುಗಳು ಗಡಗಡ ನಡುಗುತ್ತಾರೆ.

ಬೇರೆ ಬೇರೆ ಊರಿನ ಜನರಲ್ಲಿಯ ಮೆಚ್ಚುಗೆಯ ಮಾತುಗಳಿವು. ಉಮಾಶ್ರೀ, ಮಾಲಾಶ್ರೀಯರು ಪ್ರಸಿದ್ಧರಾದಂತೆ, ನಾಟಕರಂಗದಲ್ಲಿ ಇಲ್ಲಿ ರೇಣುಕಾ, ತಾರಾ, ಕಮಲಾಕ್ಷಿ, ದ್ರಾಕ್ಷಾಯಿಣಿ ಮುಂತಾದವರು ಮೆರೆಯುತ್ತಿದ್ದಾರೆ. ನಾಟಕದ ಮಾತೆತ್ತಿದರೆ ಸಾಕು ಹಂಸನೂರ ದಾಸರ ನೆನಪು ಬರಲೇಬೇಕು.

● ಶಿವಾನಂದ ಭೀ. ಮುಗಜೋಳ

ಇಬ್ರಾಹಿಂ ರೋಜಾ

ಎರಡನೆಯ ಇಬ್ರಾಹಿಮ ಆದಿಲಶಾಹಿಯ ಕಲಾಪೂರ್ಣ ವೈಭವಶಾಲಿ, ಶಿಲ್ಪಕಲೆಯ ಈ ಕಟ್ಟಡವು 1626ರಲ್ಲಿ ನಿರ್ಮಾಣಗೊಂಡಿದೆ. ನಾಲ್ಕೂ ಬದಿಯ ಮೀನಾರಗಳು ಆಕರ್ಷಕವಾಗಿವೆ.

ಈ ಸುಂದರ ಕಟ್ಟಡಗಳು 400 ಚದರ ಅಡಿ ಆವರಣದ ಎತ್ತರ ಕಟ್ಟೆ ಮೇಲೆ ನಿಂತಿದೆ. ಇದರ ಹೊರಗೋಡೆಗಳಲ್ಲಿ ಕುರಾನಿನ ಆಯ್ತ ಸೂಕ್ತಿಗಳನ್ನು ಕೆತ್ತಿದ್ದು, ಇವು ಬಂಗಾರದ ಲೇಪವನ್ನು ಹೊಂದಿದ್ದವು. ಇವರು ಚಿತ್ರಕಲೆಗಿಂತ ಲಿಪಿಕಲೆಯಲ್ಲಿ ಪರಿಣತರು. ಇದನ್ನು ಪ್ರಸಿದ್ಧ ಶಿಲ್ಪಿ ಮಲಿಕ್ ಸಂದಲ್ ಕಟ್ಟಿದ. ಇದಕ್ಕೆ 150900 ಸುವರ್ಣ ನಾಣ್ಯಗಳು ಖರ್ಚಾಗಿವೆಯಂತೆ. ಭಾರತೀಯ ಹಾಗೂ ಮುಸ್ಲಿಂ ಶಿಲ್ಪಕಲೆಗಳೆರಡರ ಸಮಾಗಮವಾಗಿದೆ.

ಇದರ ಸುತ್ತಲೂ ಸುಂದರ ಹೂದೋಟವಿತ್ತಂತೆ. ಅಂತೇ ಇದನ್ನು ದಕ್ಷಿಣದ ತಾಜಮಹಲು ಎನ್ನುತ್ತಿದ್ದರು. ಇದರಂಥ ಸುಂದರ–ವೈಜ್ಞಾನಿಕ ಕಟ್ಟಡ ಬೇರೆಲ್ಲೂ ಸಿಗದು ಎನ್ನುವರು.

ಮಲಿಕ ಮೈದಾನ ತೋಫ

ಇದನ್ನು 1549ರಲ್ಲಿ ಹಸನ ರುಮಿ ಎಂಬವನು ಅಹಮ್ಮದ ನಗರದಲ್ಲಿ ತಯಾರಿಸಿದ. ಪಂಚಧಾತುವಿನಿಂದ ಮಾಡಿದ ಇದರ ಉದ್ದಳತೆ: 14.4 ಅಡಿ ಮತ್ತು ವ್ಯಾಸ 5 ಅಡಿಯಿದೆ. ಇದರ ಭಾರ 55 ಟನ್ನುಗಳಷ್ಟಿದೆ. ಇಂಥ ದೊಡ್ಡ ಗಾತ್ರದ ತೋಫನ್ನು ಕ್ರಿ.ಶ. 1632ರಲ್ಲಿ ಈ ಬುರುಜಿನ ಮೇಲೆ ಪ್ರಯಾಸದಿಂದ ಏರಿಸಿಟ್ಟಿದ್ದಾರೆ. ಕ್ರಿ.ಶ. 1565ರಲ್ಲಿ ವಿಜಯನಗರದ ಕಾಳಗದಲ್ಲಿ ಉಪಯೋಗಿಸಿದ್ದರು.

ಬ್ರಿಟಿಷರು ತಮ್ಮ ಮ್ಯೂಜಿಯಂಗೆ ಒಯ್ಯಲು ಯೋಜಿಸಿ ವಿಫಲರಾಗಿದ್ದರು.

ಗಗನ ಮಹಲ್

ರಾಜ ದರ್ಬಾರು ನಡೆಸುವುದಕ್ಕಾಗಿ ಕ್ರಿ.ಶ.

ಮಮದಾಪೂರ

ಬಿಜಾಪುರ ಜಿಲ್ಲೆಯ ಮಹಮ್ಮದ್‌ಪುರವೆಂದು ಪ್ರಸಿದ್ಧವಾಗಿದ್ದ ಈಗಿನ ನನ್ನೂರು ಕೆರೆ ಮಮದಾಪೂರ. ಮಲೆನಾಡು ನೋಡಬೇಕೆಂಬ ಮಗಳ ಆಶೆ ಪೂರೈಸಲು ದೊಡ್ಡದಾದ ಎರಡು ಕೆರೆಗಳನ್ನು ಕಟ್ಟಿಸಿದ ಮಹಮ್ಮದ ಎಂಬ ಅರಸ. ಈ ಕೆರೆಗಳಿಗೆ ಇನ್ನೂ ಚಿರಯೌವನ. ನೋಡುವ ಕಂಗಳಿಗೆ ರಸದೌತಣ. ಕೆರೆ ತುಂಬಿದಾಗ ತುಂಬು ಯೌವನದ ಚೆಲುವೆಯಂತೆ ಕಂಗೊಳಿಸುವ ನನ್ನೂರು ಪ್ರಕೃತಿಮಾತೆಯ ವಿಕೋಪಕ್ಕೆ ಬಲಿಯಾಗಿ ನೀರಿಲ್ಲದೆ ವಯಸ್ಸಿಗೆ ಮೀರಿದ ವೃದ್ಧೆಯಂತೆ ಕೆಲವೊಮ್ಮೆ ಕಾಣಿಸುತ್ತದೆ. ಊರಿನ ಸನಿಹ ಬಂದರೆ ಸಾಕು ಅರಮನೆಯ ಕಾವಲು ಭಟರಂತೆ ಸುತ್ತಲೂ ಕೆಂಪು ಕಲ್ಲಿನ ಖಣಿ ದಿಢೀರ್ ಎಂದು ಪ್ರತ್ಯಕ್ಷವಾಗುತ್ತದೆ.

ನನ್ನೂರಿನ ಜನತೆಗೆ ಲಕ್ಷ್ಮಿಯ ಶಾಪ ಸ್ವಲ್ಪ ಮಟ್ಟಿಗಿದ್ದರೂ ಸರಸ್ವತಿಯ ಕೃಪಾಕಟಾಕ್ಷ ಮಾತ್ರ ಅಚ್ಚಳಿಯದಂತಿದೆ. ಸುಮಾರು ಆರುಸಾವಿರ ಜನಸಂಖ್ಯೆಯುಳ್ಳ ನನ್ನೂರು ಕಲಾದೇವತೆಯ ಚೊಚ್ಚಿಲ ಮಗಳಂತಿದೆ. ಆವಶ್ಯಕತೆಗಳಿಗೆ ಮೀರಿದ ಸೌಲಭ್ಯಗಳೂ ಸಹ ನನ್ನೂರಿನಲ್ಲಿವೆ. ಹಲವು ಧರ್ಮೀಯರು ನಮ್ಮಲ್ಲಿದ್ದರೂ ಸಹ ಎಲ್ಲರೂ ಸಹೋದರ ಭಾವನೆಯಿಂದ ಇದ್ದಾರೆ.

ನನ್ನೂರಿನ ಕೆರೆಯ ನೀರು ಸುಮಾರು ಏಳರಿಂದ ಎಂಟು ಹಳ್ಳಿಗಳಿಗೆ ಸರಬರಾಜಾಗುತ್ತಿದ್ದು, ಸುತ್ತಲಿನ ಹಳ್ಳಿಗಳಿಗೆಲ್ಲ ಒಂದು ವರದಾನವಾಗಿ ಪರಿಣಮಿಸಿದೆ.

ನಾಸ್ತಿಕರೇ ತುಂಬಿದ ಇವತ್ತಿನ ಕಾಲದಲ್ಲಿ ಧರ್ಮಜಾಗೃತಿ. ಭಕ್ತಿಯ ಕಾರ್ಯಕ್ರಮಗಳು ವರ್ಷವಿಡೀ ನನ್ನೂರಿನಲ್ಲಿ ನಡೆಯುವುದು ಒಂದು ವಿಶೇಷ. ಧರ್ಮಜಾಗೃತಿಗಾಗಿ ನನ್ನೂರಿನ "ಬಸವ–ಸಮಿತಿ" ದಾಪುಗಾಲು ಹಾಕುತ್ತಿದೆ.

● ಜಯದೇವ ಪಂಚಯ್ಯ ಹಂಚಿನಾಳಮಠ

1561ರಲ್ಲಿ ಮೊದಲನೆಯ ಅಲಿ ಆದಿಲಶಹನು ನಿರ್ಮಿಸಿದ. ಈಗ ಇದು 60 ಅಡಿ ಎತ್ತರದ ಭವ್ಯ ಕಮಾನಾಗಿ ಉಳಿದಿದೆ.

ಔರಂಗಜೇಬನು ಇಲ್ಲಿಯೇ 1686ರಲ್ಲಿ ಸಿಕಂದರಶಾಹಿಯನ್ನು ಬಂಗಾರದ ಬೇಡಿಗಳಿಂದ ಬಂಧಿಸಿ ಶಾಹಿ ಸಾಮ್ರಾಜ್ಯದ ಅಂತ್ಯ ಮಾಡಿದ. ಎರಡನೆಯ ಇಬ್ರಾಹಿಂ ಆದಿಲಶಾಹಿಯು ತೊರವೆ–ನವರಸಪುರದಲ್ಲಿ ಹೊಸ ರಾಜಧಾನಿ ಕಟ್ಟ ಬಯಸಿ, ಸಂಗೀತ ಮಹಲ್, ನಾರೀ ಮಹಲ್ ಭವ್ಯ ಕಟ್ಟಡಗಳನ್ನು ನಿರ್ಮಿಸತೊಡಗಿದ್ದ. ಅವೂ ಅಪೂರ್ಣವಾಗಿವೆ.

ಇಂದು ಅಲ್ಲಿ ನವರಸಪುರ–ಸಂಗೀತೋತ್ಸವ ರಸಿಕರನ್ನು ಆಕರ್ಷಿಸತೊಡಗಿದೆ.

ಇವಲ್ಲದೆ ಬಸವಣ್ಣನವರ ಜನ್ಮ ಸ್ಥಳ ಬಾಗೇವಾಡಿ, ಇಂಗಳೇಶ್ವರ, ಐಕ್ಯ ಸ್ಥಳ–ಕೂಡಲಸಂಗಮಗಳು ಪವಿತ್ರ ಯಾತ್ರಾಸ್ಥಳಗಳು.

ಮಹೀಪತಿ ದಾಸರ ಕಾಖಂಡಕಿ, ಗಾಲವ ಕ್ಷೇತ್ರ–ಗಲಗಲಿ, ನರಸಿಂಹ ದೇವಾಲಯಗಳು–ಶೂರ್ಪಾಲಿ, ತೊರವಿ, ಕಲ್ಲೊಳ್ಳಿಯ ವೆಂಕಟೇಶ, ಸಿಂದಗಿ ತೇರದಾಳ ಮಹಾಲಿಂಗಪುರ, ನಿಂಬಾಳ ಇಂಚಗೇರಿ, ಇಳಕಲ್ಲ ಸಿದ್ದನಕೊಳ್ಳ, ನಂದಿಕೇಶ್ವರ, ಬೇಲೂರು, ದೇವರ ಹಿಪ್ಪರಗಿ ಆಲಮಟ್ಟಿ ಇವೆಲ್ಲ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಪ್ರವಾಸೀ ಕ್ಷೇತ್ರಗಳು. ●

ನಮ್ಮೂರು ನಮ್ಮ ಧಾರ್ಮಿಕ ನೆಲೆಯ ಊರು-ಯಂಡಿಗೇರಿ

ಐತಿಹಾಸಿಕ ಬಾದಾಮಿಯಿಂದ ಉತ್ತರಾಭಿಮುಖವಾಗಿ ಸುಮಾರು 30 ಕಿ.ಮೀ. ಕ್ರಮಿಸಿದರೆ ಸಿಗುವದೆ ನಮ್ಮೂರು, ಯಂಡಿಗೇರಿ. ನಮ್ಮೂರಿನ ಸುತ್ತಮುತ್ತಲೂ ಸೂರ್ಯಕಾಂತಿ ಬೆಳೆಯುವದರಿಂದ ಹಳದಿ ವರ್ಣದ ಮನಮೋಹಕ ಸೂರ್ಯಕಾಂತಿಯು ನಸುನಗೆಯಿಂದ, ನಸುನಾಚಿ ಬಾಗಿ ಬನ್ನಿರೆಂದು ನಿಮಗೆ ಆದರ ಸ್ವಾಗತಗೈಯುತ್ತದೆ.

ನಮ್ಮೂರಿನ ಉತ್ತರದ ಅಂಚಿನಲ್ಲಿ ಬಹಳ ಪ್ರಾಚೀನವೆನ್ನಬಹುದಾದ "ಇಂಡೇಶ್ವರ"ವೆಂಬ ದೇವಾಲಯವಿದ್ದು, ಆ ಹೆಸರಿನಿಂದಲೂ ನಮ್ಮೂರಿಗೆ 'ಯಂಡಿಗೇರಿ' ಎಂಬ ನಾಮ ಪ್ರಾಪ್ತವಾಗಿಹುದೆಂಬ ಹಿರಿಯರ ಅಂಬೋಣ. 'ಇಂಡೇಶ್ವರನೆಂಬ ದೇವರು ಯಂಡಿಗೇರಿ ಎಂಬ ಗ್ರಾಮ ಭಾರತದಲ್ಲಿಯೇ ಇಲ್ಲ' ಎಂಬ ನಾಣ್ಣುಡಿಯೇ ಇದೆ. ಈ ದೇಗುಲದ 1 ಕಿ.ಮೀ ಅಂತರದಲ್ಲಿ ಬೃಹತ್ ಕೆರೆ ಇದೆ. ಮಳೆಗಾಲದಲ್ಲಂತೂ ಪೂರ್ತಿ ತುಂಬಿದಾಗ ಅದರ ಸುರಮ್ಯ ವಿಹಂಗಮ ನೋಟ, ಕೆರೆಯ ಪಕ್ಕದಲ್ಲಿರುವ ದೊಡ್ಡ ಗುಡ್ಡದ ಮೇಲೆ ಹಸಿರು ಸೀರೆಯನ್ನು ಉಟ್ಟಂತೆ ಎಲ್ಲಮ್ಮ ದೇವಾಲಯದ ನಯನ ಮನೋಹರ ಚೆಲುವು ವರ್ಣಿಸಲಸದಳ. ಊರಿನ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಬೇರೆ ಬೇರೆ ದೇವಾಲಯಗಳು, ಊರು ಮಧ್ಯ ಮಾರುತಿ ಮಂದಿರ ಊರನ್ನು, ಊರಿನ ಜನತೆಯನ್ನು ಸರ್ಪಕಾವಲಿನಂತೆ ಕಾಯುತ್ತವೆ..

ನಮ್ಮೂರಿನ ಜನತೆಯ ಧಾರ್ಮಿಕ ಭಾವನೆ, ಸಹಕಾರ, ಪ್ರೀತಿ-ವಿಶ್ವಾಸಗಳ ತ್ರಿವೇಣಿ ಸಂಗಮ. ಜಾತಿಭೇದವಿಲ್ಲದೆ ಮುಸ್ಲಿಂ ಬಾಂಧವರು ಹಿಂದುಗಳ ಹಬ್ಬ-ಹರಿದಿನಗಳಲ್ಲಿ, ಮೋಹರಂದಲ್ಲಿ ಮುಸ್ಲಿಂ ಬಾಂಧವರ ಜೊತೆ ಹಿಂದು ಯುವಕರ ಹೆಜ್ಜೆ ಕುಣಿತ ನಿಜಕ್ಕೂ ಸ್ತುತ್ಯಾರ್ಹ. ಮುಸ್ಲಿಂ ದೇವರಾದ 'ಅಜ್ಜನ'ನ ಗದ್ದುಗೆಗೆ ಜಾತಿ-ಭೇದವಿಲ್ಲದೆ ಭಯಭಕ್ತಿಯಿಂದ ನಡೆಯುವ ರೀತಿ ಕೋಮು ಸೌಹಾರ್ದತೆಯ ಸಂಕೇತವಾಗಿದೆ. ನಮ್ಮೂರಿನಲ್ಲಿ ದೊರೆಯುವ ವಿಶಿಷ್ಟ ಮಣ್ಣಿನ (ಉಪ್ಪಿನಂಶ ಹೆಚ್ಚಿರುವ) ಸಹಾಯದಿಂದ ಮದ್ದು, ಪಟಾಕಿಗಳಲ್ಲಿ ಉಪಯೋಗಿಸುವ ಹಳದಿ ವರ್ಣದ "ಮದ್ದುಪ್ಪು" ತಯಾರಿಸುವುದು ನಮ್ಮೂರಿನ ವೈಶಿಷ್ಟತೆಯ ಪ್ಲಸ್ ಪಾಯಿಂಟ್. ಮಣ್ಣು ತುಂಬಾ ನುಣುಪು. ಜಿಗುಟಾಗಿರುವದರಿಂದ ಬಡವರ ಸಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ದೂರದ ಊರಿಗೆ ಒಯ್ಯಲ್ಪಡುತ್ತದೆ. ಇತ್ತೀಚಿಗಂತೂ ಶೇಂಗಾ ಹೆಚ್ಚು ಬೆಳೆಯುವದರಿಂದ ಬರುವ ಅತಿಥಿಗಳಿಗೆ ಶೇಂಗಾ ಜೊತೆ ಬೆಲ್ಲದ ಆತಿಥ್ಯ ಗ್ಯಾರಂಟಿ. ನೀವು ಕೂಡಾ ನಮ್ಮೂರಿಗೆ ಬಂದರೆ ನಮ್ಮ ಆದರಪೂರ್ವದ ಆತಿಥ್ಯವಿದೆ.

● **ಮಲ್ಲಿಕಾರ್ಜುನ ಪ. ಶೆಲ್ಲಿಕೇರಿ**

ಬಿಜಾಪುರ ಜಿಲ್ಲೆ

ದಶ ವಿಶೇಷಗಳು

● ತಿಂಡಿ ತಿನಸುಗಳು...

ಅಮೀನಗಡ–ಕರದಂಟು, ಕೊಲ್ಹಾರ-ಮೊಸರು ಅವಲಕ್ಕಿ, ಗಲಗಲಿ-ಫೇಡೆ, ಕಲಾದಗಿ-ಡಾಳಿಂಬರ, ಅಥರ್ಗಾ-ಲಿಂಬಿಹಣ್ಣು, ಬಾಬಾನಗರ ದ್ರಾಕ್ಷ, ದೇವರ ಹಿಪ್ಪರಗಿ ಬಾಳೆಹಣ್ಣು, ದೇವರಗಣ್ಣೂರ-ಬಾರಿಕಾಯಿ, ಕೂಡಗಿ-ವಿಳೆದಲಿ, ದರ್ಗಾ-ಮಾವಿನಹಣ್ಣು ಕೃಷ್ಣಾ, ಘೋಮಾ, ಡೋಣಿ ನದಿ ದಡ್ಡದ–ಜೋಳದ ರೊಟ್ಟಿ–ಬಳ್ಳುಳ್ಳಿ ಖಾರ, ಶೆಂಗಾದ ಹೊಳಗಿ.

● ಬಟ್ಟೆ–ವಸ್ತ್ರಗಳು...

ಇಲಕಲ್ ಸೀರೆ, ಗುಳೇದಗುಡ್ಡ–ಖಣ, ಕಮತಗಿ-ರೇಶ್ಮೆ ಪಟಗಾ, ಕೆರೂರ ಕೌದಿ, ಕುಂದರಗಿ-ಕಂಬಳಿ, ರಬಕವಿ ಬನಹಟ್ಟಿ-ನೂಲು,

● ವಸ್ತು–ಸಾಮಗ್ರಿಗಳು...

ಬಾದಾಮಿ-ಬಾಗಿಲ ಚೌಕಟ್ಟು, ಬಾಗಲಕೋಟ–ಸಿಮೆಂಟು, ಶೆಲ್ಲಿಕೇರಿ ಕಲ್ಲು, ತಾಳಿಕೋಟ-ಬಾಸುಕಲ್ಲು, ಮಿಣಜಗಿ-ಫರಸಿಕಲ್ಲು, ಗದ್ದನಕಾರಿ-ಇಟ್ಟಂಗಿ, ಗುಡೂರ-ಬಳಿ, ತಾಂಬಾ-ಬಂಡಿ.

● ಜಾನುವಾರುಗಳು...

ಕೃಷ್ಣಾ ತೀರದ-ದನಗಳು, ಮುಧೋಳ-ನಾಯಿ.

● ಜಾನಪದ ತಂಡಗಳು...

ಬಾಗಲಕೋಟ-ಹಲಗಿಮಾಳ, ಮಹಾಲಿಂಗಪುರ-ಕರಡಿಮಜಲು, ಚಡಚಣ-ಹೆಜ್ಜ ಮೇಳ, ಲೋಕಾಪುರ-ಶ್ರೀಕೃಷ್ಣ ಪಾರಿಜಾತ ಅಲ್ಲದೇ, ಕಡ್ಲಿಮಟ್ಟಿ ಕಾಶಿಬಾಯಿ ಡಪ್ಪಿನಾಟ. ಶ್ರೀಕೃಷ್ಣ ಪಾರಿಜಾತ ಸಣ್ಣಾಟ, ಭೀಮ ವಿಲಾಸ ದೊಡ್ಡಾಟ, ಗೀ. ಗೀ ಪದ. ಲಾವಣಿ ಪದ ಭಜನಾ ಮಂಡಳಿ, ತೊಗಲುಗೊಂಬೆ ಆಟ. ಸಂಗ್ಯಾ-ಬಾಳ್ಯಾನ ಆಟ, ನಂಬಾಳವಾದನ, ಕಣಿವಾದನ.

● ಆಟ–ನೋಟಗಳು

ಕುಂಬಾರ ಹಳ್ಳ-ಸೈಕಲ್ ವೀರರು, ಜಮಖಂಡಿ-ಕುಸ್ತಿಪಟುಗಳು.

● ಐತಿಹಾಸಿಕ ಸ್ಥಳಗಳು...

ಬಿಜಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಶಿವಯೋಗಿ ಮಂದಿರ, ಕೂಡಲಸಂಗಮ, ಮಹಾಕೂಟ, ತಾಳಿಕೋಟೆ, ರಾಮತೀರ್ಥ, ಕೂರ್ಪಾಲ, ಮಲಗೂರ, ಬಾಗೇವಾಡಿ, ಕುಮಟಗಿ, ಇಂಗಳೇಶ್ವರ, ತೊರವಿ.

● ಮಹನೀಯರು...

ಫಗು ಹಳಕಟ್ಟಿಯವರು, ಮಾಹರೆ ಹಣಮಂತರಾಯರು, ಕೌಜಲಗಿ ಹಣಮಂತ ರಾಯರು, ಕಂದಗಲ್ ಹಣಮಂತರಾಯರು, ಹಂದಿಗನೂರು ಸಿದ್ರಾಮಪ್ಪನವರು. ಬಂದನಾಳ ಶಿವಯೋಗಿಗಳು, ಮಲ್ಲಿಕಾರ್ಜುನ ಮಹಾಸ್ವಾಮಿಗಳು, ರಾಜಾರಾಮ ದುಧೆಮವರು. ಮುರಿಗೆಪ್ಪ ಸುಗಂಧಿಯವರು, ಕಾಕಾ ಕಾರಖಾನಿಸರು, ಪ್ಪಿ. ಬಿ. ನಾಯಕರು, ಹ. ರಾ. ಪುರೋಹಿತರು, ಬಿ. ಎಂ. ಪಾಟೀಲರು, ಹರ್ಡೇಕರ ಮಂಜಪ್ಪನವರು, ಮೈಲಾರ ಮಹಾದೇವಪ್ಪ, ಧನಶೆಟ್ಟಿ ಮಲ್ಲಪ್ಪ, ಕೌಜಲಗಿ ಶ್ರೀನಿವಾಸ ರಾವ್, ಮಂಗಳವಡೆ ಶ್ರೀನಿವಾಸ ರಾವ್, ಅದ್ಯ ಅನಂತಾಚಾರ್ಯ, ಕೆರೂರ ವಾಸುದೇವಾಚಾರ್ಯ.

●

● ಸಾಧು ಸಂತರು...

ಶ್ರೀ ರುಕ್ಮಾಂಗದ ಪಂಡಿತರು, ಶ್ರೀ ಮಹಿಪತಿ ರಾಯರು, ಶ್ರೀ ಭೀಮಾಶಂಕರರು, ಶ್ರೀ ಗುರುದೇವ ರಾನಡೆಯವರು, ಶ್ರೀ ಬಸವೇಶ್ವರರು, ಶ್ರೀ ಜಕ್ಕಪ್ಪಯ್ಯನವರು.

● ಕವಿಪುಂಗವರು...

ರನ್ನ ಕವಿ, ನಾಗಚಂದ್ರ ಕವಿ, ಕುಮಾರ ವಾಲ್ಮೀಕಿ, ಕೊಂಡಗೂಳಿ ಕೇಶಿರಾಜ, ಮಡಿವಾಳ ಮಾಚಿದೇವ, ಅಗ್ಗಳಕವಿ, ದುರ್ಗಸಿಂಹ, ಚೌಮರಸಕವಿ, ಕೃಷ್ಣ ದ್ವೈಪಾಯನಾಚಾರ್ಯ, ಮಧುರ ಚೆನ್ನರು, ಚಿತ್ತರಗಿ ಗಂಗಾಧರ ಶಾಸ್ತ್ರಿಗಳು, ನುಲಿಯ ಚಂದಯ್ಯ, ಹಾವಿನಾಳ ಕಲ್ಲಯ್ಯ.

● 'ತುಂಗಾತನಯ', ಬಿಜಾಪುರ

'ಯುವ ಮಿಡಿತ'ಕ್ಕೆ ಆಹ್ವಾನ

ಯುವ ಮಿಡಿತ ಎನ್ನುವುದನ್ನು ಆ ಘಟ್ಟ ದಾಟಿದವರು ಅರ್ಥ ಮಾಡಿಕೊಳ್ಳುವುದಿಲ್ಲವೇನೊ? ಯೌವನಾವಸ್ಥೆಯದೇ ಒಂದು ಪ್ರಪಂಚ. ಅವರದೇ ಆಶೋತ್ತರಗಳು, ನಿರ್ಧಾರಗಳು–ನಿರಾಸೆಗಳು.

ಇಂಥ ಯುವ ಮಿಡಿತದ ಬಗ್ಗೆ 'ತುಷಾರ'ದ ಎಲ್ಲ ಓದುಗರಿಗೆ ತಿಳಿಸಬಾರದೇಕೆ?

ಕಥೆ ಆಗಬಹುದು, ಕವನ ಆಗಬಹುದು, ಅನುಭವ–ಆಸೆ–ಕನಸುಗಳಾಗಬಹುದು: 25 ವರ್ಷದೊಳಗಿನ ಯುವಕ–ಯುವತಿಯರಿಗೆ ಮಾತ್ರ ಆಹ್ವಾನ.

ತೀವ್ರ ಮಿಡಿತಗಳಿಗೆ ಸ್ವಾಗತ:

ಕೂಡಲೇ ಕಳುಹಿಸಿ –

ತುಷಾರ (ಯುವ ಮಿಡಿತ),
ಎನ್ 201, ನಾರ್ಥ್ ಬ್ಲಾಕ್, ಫ್ರಂಟ್ ವಿಂಗ್,
ಮಣಿಪಾಲ ಸೆಂಟರ್,
47 ಡಿಕನ್‌ಸನ್ ರಸ್ತೆ,
ಬೆಂಗಳೂರು – 560 042.

ನಗೆ ಸೀರಿಯಲ್

5. ಪ್ರಸನ್ನವದನೆ

ಕಂಡಕ್ಟರ್ ಕರಿಯಪ್ಪ ಜೂನಿಯರ್

● ಎಂ. ಎಸ್. ನರಸಿಂಹಮೂರ್ತಿ

ಫೋಟೋ: ವಿ. ಗೋಪಾಲ್

ಡ್ರೈವರ್ ಬಡಿಯಪ್ಪ ಹೊಟೇಲ್‌ಗೆ ಬಂದ ಕೂಡಲೇ ಸೋಪು ಹಾಕಿ ಕೈ ತೊಳೆದನೆಂದರೆ ಬಿಲ್ಲು ಇಪ್ಪತ್ತು ರೂಪಾಯಿ ದಾಟುತ್ತದೆ ಎಂದೇ ಅರ್ಥ. ಬಡಿಯಪ್ಪ ಕೈ ಒರೆಸಿಕೊಳ್ಳುತ್ತಾ ಬಂದು ಕರಿಯಪ್ಪನ ಎದುರು ಕುಳಿತ. ಹೊಟೇಲಲ್ಲಿ ದೋಸೆಯ ಪರಿಮಳ ಹರಡಿದೆ. ಕಾದ ಹೆಂಚಿಗೆ ನೀರು ಚಿಮುಕಿಸುವ 'ಸೊಂಯ್' ಶಬ್ದ. ಪೊರಕೆ ಯಿಂದ ಹೆಂಚಿನ ಮುಖ ಒರೆಸಿದ 'ಸರ್‌ರ್' ಶಬ್ದ.

ಇದೇನು ಮಾಣಿ ಬಂದೇ ಇಲ್ಲವಲ್ಲ ತನ್ನ ಟೇಬಲ್ ಬಳಿಗೆ ಎಂದು ಬಡಿಯಪ್ಪ ಬೇಸರಿಸುವ ವೇಳೆಗೆ ಅವನು ಪ್ರತ್ಯಕ್ಷನಾದ. ಟ್ರೇಯಲ್ಲಿ ಎರಡು ಪ್ಲೇಟ್ ದೋಸೆ. ಕೆಂಪಗೆ ಮಿರಿಮಿರಿ ಮಿಂಚು ತ್ತಿದೆ. ದೋಸೆಯ 'ರೋಲ್' ಬಹಳ ಸ್ಟಿಫ್ಫಾಗಿ ಕೊಳವೆಯಂತಿದೆ. ಅದರೊಳಗೆ ಹಬೆಯಾಡು ತ್ತಿದೆ ಪಲ್ಯ.

'ನಾವು ದೋಸೆ ತಿಂತೀವಿ ಅಂತ ನಿಂಗೆ ಹೇಗೆ ತಿಳೀತು?' ಕರಿಯಪ್ಪ ಮಾಣಿಯನ್ನು ಕೇಳಿದ.

'ಅವರು ಕೈಗೆ ಸೋಪು ಹಾಕ್ತಾ ಇದ್ರಲ್ಲ ಸಾರ್?' ಎಂದ ಮಾಣಿ ಡ್ರೈವರ್ ಮುಖ ನೋಡಿ ನಕ್ಕ.

ಒಂದು ತುಂಡು ದೋಸೆ ಮುರಿದು ಬಾಯಲ್ಲಿ ಟ್ಟುಕೊಂಡ ಬಡಿಯಪ್ಪ 'ಆಹಾ!' ಎಂದು ಆನಂದ ವ್ಯಕ್ತಪಡಿಸಿದ. 'ಎಂಗೈತೆ ಕಣ್ಲೇ?' ಎಂದು ಕರಿಯಪ್ಪನನ್ನು ಕೇಳಿದ.

'ಬೆಂಗಳೂರು ದೋಸೆ ಮುಂದೆ ಬೇರೆ ಯಾವ್ದೂ ಇಲ್ಲ ಬಿಡು. ಉಡುಪಿಗೆ ಹೋದಾಗ ಎಲ್ಲಾ ಹೊಟೇಲ್ ಅಲ್ದೆ. ಆದ್ರೆ ಇಂಥ ರುಚಿ ಎಲ್ಲೂ ಸಿಗಲಿಲ್ಲ' ಎಂದು ಕರಿಯಪ್ಪ ದೋಸೆಯ ಗುಣಗಾನ ಮಾಡಿದ. 'ಉಡುಪಿ ಕೃಷ್ಣಭವನ್' ದೋಸೆಯ ರುಚಿ ನೆನೆದರೆ ಸಾಕು, ನಾಲಿಗೆ ತೊಟ್ಟಿಕ್ಕುತ್ತದೆ. ಆದರೆ ಉಡುಪಿಯಲ್ಲಿ ಯಾಕೆ ಈ ದೋಸೆ ಇಲ್ಲ ಎಂಬ ಯೋಚನೆಯೂ ಬರುತ್ತದೆ ಕರಿಯಪ್ಪನಿಗೆ.

'ಇನ್ನೂ ಒಂದು ತರ್ತಾ' ಎಂದ ಬಡಿಯಪ್ಪ. ಆದರೆ ಕರಿಯಪ್ಪ ಒಂದಕ್ಕೇ ಸುಸ್ತು!

'ನಮ್ಮ ಸರ್ಕಾರ ಹೊಟೇಲ್‌ಗಳ್ನ ರಾಷ್ಟ್ರೀಕರಣ ಮಾಡ್ಲಿಲ್ಲ. ಆ ರೀತಿ ಆಗಿದ್ರೆ ಬಹಳ ತಾಪತ್ರಯ ಆಗ್ತಿತ್ತು' ಎಂದ ಕರಿಯಪ್ಪ.

'ಏನಾಗ್ತಾ ಇತ್ತು?'

'ದೋಸೆ ಹಾಕೋವನು ಬಂದಿರ್ತಾನೆ. ಆದ್ರೆ ಪಲ್ಯ ಮಾಡೋವನು ರಜಾ. ಚಟ್ನಿ ರುಬ್ಬೋವನಿಗೆ ಓವರ್ ಟೈಂ ಕೊಡಲಿಲ್ಲ ಅಂದ್ರೆ ಅವನು ಅರ್ಧಂಬರ್ಧ ತಿರುವಿ ಎದ್ಬಿಟ್ಟಿದ್ದ. ಆಗ ಇಂಥ ಮಸಾಲೆ ಎಲ್ಲಿ ಸಿಗ್ತಾ ಇತ್ತು? ರಾಷ್ಟ್ರೀಕರಣ ಆಗ್ದೇ ಇರೋದು ನಮ್ಮ ಪುಣ್ಯ' ಎಂದ ಕರಿಯಪ್ಪ.

'ದೋಸೇನ ನೆಪ ಮಾಡ್ಕೊಂಡು ನಮ್ಮ ಬಸ್ ಮ್ಯಾಗೆ ದೂರಬೇಡ' ಎಂದು ಬಡಿಯಪ್ಪ ರೇಗಿದ.

'ನಾ ಹೇಳಿದ್ದು ಹೋಟೇಲ್ ವಿಷ್ಯ'–ಎಂದು ಕರಿಯಪ್ಪ ಸ್ಪಷ್ಟಪಡಿಸಿದ.



ಕಾಫಿ ಮುಗಿದ ಮೇಲೆ ಇಬ್ಬರೂ ಎದ್ದು ಆಚೆ ಬಂದರು.

ಕೋಲಾರದಲ್ಲಿ ನಡೆದ 'ರಸ್ತೆ ಬಂದ್' ಚಳವಳಿ ಬಗ್ಗೆ ಜನ ಮಾತಾಡುತ್ತಿದ್ದರು. ಕೆ.ಇ.ಬಿ.ಯವರು ಕರೆಂಟ್ ಸರಿಯಾಗಿ ಬಿಡ್ತಾ ಇಲ್ಲ ಅಂತ ಸರ್ಕಾರಿ ಬಸ್ಸುಗಳಿಗೆ ತಡೆ! ಯಾರು ಎಲ್ಲಿ ಗಲಾಟೆ ಮಾಡಬೇಕಾದರೂ ಅವರ ಕಣ್ಣಿಗೆ ಮೊದಲು ಬೀಳುವುದು ಕೆಂಪು ಬಸ್ಸು. ಯಾವ ಜನ್ಮದಲ್ಲಿ ಏನು ಪಾಪ ಮಾಡಿತ್ತೋ ಇದು ಎಂದು ಪಶ್ಚಾತ್ತಾಪ ಪಡುವಂತಾಯ್ತು ಕರಿಯಪ್ಪನಿಗೆ. ಬಸ್ ಏರುವ ವೇಳೆಗೆ ಸಾಕಷ್ಟು ಜನ ತುಂಬಿದ್ದರು. ವ್ಯಕ್ತಿಯೊಬ್ಬ ಮೂಸಂಬಿ ತಿನ್ನುತ್ತಾ ಕುಳಿತಿದ್ದ, ಸಿಪ್ಪೆಯನ್ನು ಸೀಟಿನ ಕೆಳಗೆ ಎಸೆಯುತ್ತಿದ್ದ. ಇದನ್ನು ಕಂಡ ಕರಿಯಪ್ಪನಿಗೆ ರೇಗಿತು.



ಇಷ್ಟಪಟ್ಟು ಕಂಡಕ್ಟರ್ ಆದ ಜೂನಿಯರ್‌ಗೆ ಪ್ರತಿದಿನದ 'ಡ್ಯೂಟಿ'ಯೂ ಒಂದು ಹೊಸ ಅನುಭವ. ಪ್ಯಾಸೆಂಜರ್‌ಗಳೊಂದಿಗೆ 'ಚಕ್ಕಂದ' ಆಡುವಾಗ ಏನೋ ಖುಷಿ. ಇದರಲ್ಲಿ—ಲೈಲಾ 'ಸ್ಪೆಷಲ್ ಪ್ಯಾಸೆಂಜರ್'.

'ಯಾರ್ರೀ ಅದು ಸಿಪ್ಪೆ ಬಿಸಾಡೋವ್ರು' ಎಂದು ಕೂಗಿದ.

'ಇನ್ನೇನು ಬಿಸಾಡದೆ ತಿನ್ನೋಕೆ ಬರುತ್ತೇನ್ರೀ ಈ ಸಿಪ್ಪೆ?' ರಪ್ಪನೆ ಉತ್ತರ ಬಂತು ವ್ಯಕ್ತಿಯಿಂದ.

'ಇನ್ನೊಂದು ವಾರಪೂರ್ತಿ ಆ ಸಿಪ್ಪೆ ಬಸ್ಸೊಳಗೇ ಇರುತ್ತೆ' ಎಂದ ಪ್ರಯಾಣಿಕನೊಬ್ಬ. ಕ್ಲೀನಿಂಗ್ ವಿಷಯ ಅವನಿಗೆ ಗೊತ್ತು.

'ಕಿಟಕಿಯಾಚೆ ಹಾಕೋಕೆ ಏನು?' ಕರಿಯಪ್ಪ ಕೇಳಿದ.

'ಬೆಂಗಳೂರ್ನ ಸಿಂಗಪೂರ್ ಮಾಡ್ತೀವಿ ಅಂತ ಹೇಳ್ತಿದ್ದಾರೆ ಮಾನ್ಯ ಬಸವಲಿಂಗಪ್ಪನವರು. ಸಿಂಗಪೂರದಲ್ಲಿ ಸಿಪ್ಪೆ ಬಿಸಾಡೋಕೆ ಆಗುತ್ತೇನ್ರಿ?'

'ಅಷ್ಟೇ ಅಲ್ಲಪ್ಪ' ಮತ್ತೊಬ್ಬ ಪ್ರಯಾಣಿಕ ಶುರುಮಾಡಿದ. 'ಈಗ ಎಲ್ಲೆಂದರಲ್ಲಿ ಮೂತ್ರ ಮಾಡಿದರೆ ಪೊಲೀಸರು ಒಡ್ಕೊಂಡ್ ಹೋಗ್ತಾರೆ'.

'ಏನು ಬಾಟಲ್‌ನಲ್ಲಾ? ಛೀ ಛೀ!' ಎಂದವನು ಹೇಳಿದಾಗ ಬಸ್ಸಲ್ಲಿ ನಗೆಯ ಬುಗ್ಗೆ.

'ಸೋರ್ತಾ ಇರೋ ಸರ್ಕಾರಿ ಸಂಸ್ಥೆಗಳ್ನ ಬಿಗಿ ಮಾಡೋ ಬದಲು ಮತ್ತೇನೇನೋ ಮಾಡುತ್ತೆ ಈ ಸರಕಾರ' ಎಂದು ಮುದುಕರೊಬ್ಬರು ತೀರ್ಪು ಕೊಟ್ಟರು.

ಒಬ್ಬ ವಿದ್ಯಾರ್ಥಿ ಬಸ್ಸಲ್ಲಿ ಬರೆದಿದ್ದ ಅಕ್ಷರಗಳನ್ನು ಗಮನಿಸುತ್ತಿದ್ದ. ಕಡೆಗೆ ಕೇಳಿದ.

'ಓಡುತ್ತಿರುವ ಬಸ್ಸಿನ ಕಿಟಕಿಯಿಂದ ಆಚೆಗೆ ತಲೆ ಮತ್ತು ಕೈಗಳನ್ನು ಹಾಕಬೇಡಿ—ಅಂತ ಬರೆದಿದ್ದಾರಲ್ಲ. ಹಾಗಂದ್ರ ಏನು?'

'ಹೌದ್ರಿಯಪ್ಪ. ಅವು ಯಾರ ಮೇಲಾದ್ರೂ

ಬಿದ್ರೆ ಅವರಿಗೆ ಗಾಯ ಆಗೊಲ್ವ?' ಎಂದೊಬ್ಬ ಉತ್ತರ ಹೇಳಿದ್ದ.

ಬಸ್ಸಲ್ಲಿ ಈ ಬಗೆಯ ತರಲೆ ಮಾತುಗಳು ಮಾಮೂಲು. ಕರಿಯಪ್ಪ ಅನಗತ್ಯವಾಗಿ ಮಾತಾಡಲು ಹೋಗುವುದಿಲ್ಲ. ಬಸ್ಸಲ್ಲಿ ಅರ್ಧ ಗಂಟೆ ಇರುವ ಪ್ಯಾಸೆಂಜರ್ ತಲೆಕೆಡಿಸಿ ಕೆಳಗಿಳಿದು ಹೋಗುತ್ತಾನೆ. ಆದರೆ ಎಂಟು ಗಂಟೆಗಳು ತಾನು ಬಸ್ಸಲ್ಲೇ ಇದ್ದು ನಿಭಾಯಿಸಬೇಕಲ್ಲ? ಮಾತಾಡದೆ ಟಿಕೆಟ್‌ಗಳು ಇಶ್ಯೂ ಮಾಡುತ್ತಾ ಬಂದ. ಮುದುಕರೊಬ್ಬರು 'ಹಾಫ್ ಟಿಕೆಟ್' ಎಂದರು.

'ಅರ್ಧ ಟಿಕೆಟ್ ಕಾಲ ಮುಗೀತು. ಈಗ ಮುದುಕರೂ ಪೂರ್ತಿ ಟಿಕೆಟೇ' ಎಂದ ಕರಿಯಪ್ಪ.

'ಅದು ಯಾವಾಗ ಬಂತು ಈ ಕಾನೂನು?'

'ಬಂದು ಬಹಳ ದಿನವಾಯ್ತು. ನೀವು ಈಚೆಗೆ ಬಸ್ಸಲ್ಲಿ ಓಡಾಡಿಲ್ಲ ಅನ್ಸುತ್ತೆ.'

'ಮುದುಕರಿಗೆ ಅನ್ಯಾಯ ಅಲ್ವ?'

'ಮುದುಕರು ಆಗಿದ್ದೇ ತಪ್ಪು' ಎಂದು ನಕ್ಕ ಕರಿಯಪ್ಪ ಅವರಿಗೆ ಫುಲ್ ಟಿಕೆಟ್ ನೀಡಿದ.

'ಯಾಕೆ ಹೀಗೆ ಮಾಡ್ತು ಸರಕಾರ?'.

'ಲಾಸ್ ಆಗ್ತಾ ಇದೆಯಂತಲ್ಲ ಸ್ವಾಮಿ' ಎಂದ ಪ್ರಯಾಣಿಕನೊಬ್ಬ.

'ನಮ್ಮಂಥ ಮುದುಕರಿಗೆ ತೋರಿಸೋ ಅರ್ಧ ಟಿಕೆಟ್ ರಿಯಾಯಿತೀಲಿ ಎಷ್ಟು ಮಹಾ ನಷ್ಟ ಆಗುತ್ತೆ'.

'ಹನಿ ಒಣಗಿದರೆ ಹಳ್ಳ ಸ್ವಾಮಿ. ಕೂಡಿದರೆ ಅಲ್ಲ, ಕೂಡೋಕೆ ಏನೂ ಇಲ್ಲ. ಕಳೆಯೋದೇ ನಮ್ಮೆಲ್ಲರ ಕೆಲ್ಸ' ಎಂದ ಒಬ್ಬ ಆಸಾಮಿ.

'ಮುದುಕರಿಗೆ ಫುಲ್ ಟಿಕೆಟ್ ಮಾಡಿದ ಕೂಡ್ಲೇ ಸಂಸ್ಥೆಗೆ ಲಾಭ ಬಂದು ಬಿಡುತ್ತಾ?' ಮುದುಕರು ಕೇಳಿದರು.

'ಲಾಭ ಬರೋ ಸಂಸ್ಥೆ ಅಲ್ಲ ಇದು. ಸೇವಾ ಸಂಸ್ಥೆ. ಲಾಸ್ ಆಗೋದು ಸಹಜ' ಎಂದ ಆಸಾಮಿ.

ಬಸ್ಸು ಓಡಿತು. ಮುದುಕರು ಗೊಣಗುತ್ತಲೇ ಇದ್ದರು. ಕರಿಯಪ್ಪ ಯಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

ಸ್ಟಾಪೊಂದರಲ್ಲಿ ಬಸ್ ನಿಂತಾಗ ಲೈಲಾ ಬಸ್ ಹತ್ತಿದಳು. ಅವಳನ್ನು ಕಂಡು ಕರಿಯಪ್ಪನ ಮುಖ ಅರಳಿತು. ಅವಳೇ ಮಾತಾಡಿಸಿದಳು.

'ಬಹಳ ದಿನ ಕಾಣಲಿಲ್ಲ?'

'ಕೊಲ್ಲೂರಿಗೆ ಹೋಗಿದ್ದೆ'

'ದರ್ಶನ ಚೆನ್ನಾಗಾಯ್ತಾ?'

'ಆಗ್ತಾ ಇದೆ' ಎಂದು ಕರಿಯಪ್ಪ ಅವಳ ಮುಖ ನೋಡಿ ನಕ್ಕ.

'ಆನೆ ದೇವರಿಗೆ ನಮಸ್ಕಾರ ಮಾಡೋದು ನೋಡಿದ್ರಾ?'

'ಹೌದು. ಅದಕ್ಕೆ ಬಹಳ ಬುದ್ಧಿ' ಎಂದ ಕರಿಯಪ್ಪ ಅವಳ ಕೈಗೆ ಟಿಕೆಟ್ ಹಾಕಿದ. ಲೈಲಾ ಹಣ ನೀಡಿದಳು.

'ನೀವೇನು ಈಚೆಗೆ ಸಣ್ಣ ಆಗ್ಬಿಟ್ಟಿದ್ದೀರ?' ಎಂದು ಕರಿಯಪ್ಪ ಕೇಳಿದ.

'ನಿಮ್ಮ ಬಸ್ಸಲ್ಲಿ ಓಡಾಡಿ' ಎಂದವಳು ಕಿಸಕ್ಕನೆ ನಕ್ಕಳು. ಮುಖದಲ್ಲಿ ಪ್ರಸನ್ನತೆ ತುಂಬಿತ್ತು.

'ನಮ್ಮ ಬಸ್ಸಲ್ಲಿ ಓಡಾಡಿದರೆ ವ್ಯಾಯಾಮಾನೂ ಆಗುತ್ತೆ ಅಲ್ವ?' ಎಂದು ಕರಿಯಪ್ಪ ನಗುತ್ತಾ ಪ್ರಶ್ನಿಸಿದ.

'ಅದಕ್ಕೆ ಬೇರೆ ದುಡ್ಡು ಕೊಡೋಹಾಗಿಲ್ಲ. ನಮ್ಮ ಪುಣ್ಯ' ಎಂದ ಲೈಲಾ ಕಿಟಕಿಯಾಚೆ ನೋಡಿದಳು.

ಇದೇ ರೀತಿ ನಾಲ್ಕಾರು ಮಾತುಗಳು ನಡೆದು ಕಾಲ ಕಳೆದಿದ್ದೇ ತಿಳಿಯಲಿಲ್ಲ. ಕರಿಯಪ್ಪ ಟಿಕೆಟ್‌ಗಳನ್ನು ಇಶ್ಯೂ ಮಾಡಿ ಅವಳ ಬಳಿ ಬಂದು ನಿಂತು ಮಾತು ಮುಂದುವರೆಸುತ್ತಿದ್ದ. ಅಷ್ಟರಲ್ಲಿ ಅವಳು ಇಳಿಯಬೇಕಾದ ಸ್ಟಾಪು ಮುಗಿದು ಒಂದು ಕಿಲೋ ಮೀಟರ್ ಆಚೆಗೆ ಓಡಿತ್ತು ಬಸ್ಸು.

'ಅರೆ! ನಾನು 'ಪ್ರಸನ್ನ' ಇಳೀಬೇಕಿತ್ತು' ಎಂದವಳು ಚಡಪಡಿಸಿದಳು.

'ಈಗೇನಂತೆ ವಾಪಸ್ ಬರ್ತಾ ನಿಮ್ಮನ್ನು ಅಲ್ಲೇ ಇಳಿಸ್ತೀನಿ ಬಿಡಿ' ಎಂದು ಕರಿಯಪ್ಪ ಸಮಾಧಾನ ಮಾಡಿದ.

'ನನಗೆ ತಡವಾಗುತ್ತೆ. ಏನು ಮಾಡ್ಲಿ ಈಗ?' ಲೈಲಾ ಕೈಕೈ ಹಿಸುಕಿಕೊಂಡಳು.

'ಇಳಿದು ಆಟೋದಲ್ಲಿ ಹೋಗೋದು ಒಂದೇ ದಾರಿ.'

'ಈ ಕೆಲಸ ನಾನು ಮೊದಲೇ ಮಾಡಿದ್ರೆ ಬಸ್‌ಚಾರ್ಜು ಉಳೀತಿತ್ತು' ಎನ್ನುತ್ತಾ ಅವಳು ಇಳಿದಳು.

ಮಾತಲ್ಲಿ ಮೈಮರೆತಿದ್ದು ತಾನೋ ಅವಳೋ ಎಂದು ತಿಳಿಯದ ಕರಿಯಪ್ಪ 'ರೈಟ್' ಎಂದ. ●

ಚಿತ್ರಕವನ ಸ್ಪರ್ಧೆ—106



ಫೋಟೋ: ಅಶ್ವತ್ಥನಾರಾಯಣ

ಕವನಗಳನ್ನು ಸ್ವೀಕರಿಸುವ
ಕೊನೆಯ ದಿನಾಂಕ: 5-5-1992

ತುಷಾರ

ವೆಲ್‌ಕಮ್ '92: ರಂಗುರಂಗಿನ ಫ್ಯಾಶನ್ ಶೋ

● ಕೆ. ಟಿ. ವೇಣುಗೋಪಾಲ್

ಮಾನವ ಮೊತ್ತ ಮೊದಲ ಬಾರಿ ಸೊಂಟದ ಸುತ್ತ ಎಲೆಗಳನ್ನು ಸುತ್ತಿ ಮಾನ ಮುಚ್ಚುವ ಪ್ರಯತ್ನ ನಡೆಸಿದಂದಿನಿಂದ ತನ್ನ ಉಡುಗೆ ತೊಡುಗೆಗಳಲ್ಲಿ ನಾವೀನ್ಯ ತರಲು ಪ್ರಯತ್ನಿಸುತ್ತಿದ್ದಾನೆ. ನಾಗರಿಕತೆ ಬೆಳೆದುದರೊಂದಿಗೆ ವಸ್ತ್ರದ ನಿರ್ಮಾಣ ಆರಂಭವಾಯಿತು. ದರ್ಜಿಗಳು ಬಂದರು. ವ್ಯಕ್ತಿತ್ವವನ್ನು ರೂಪಿಸುವಲ್ಲಿ, ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ಉಡುಪುಗಳ ಮಹತ್ವದ ಅರಿವಾದೊಡನೆ ಡ್ರೆಸ್ ಡಿಸ್ಯಾನಿಂಗ್ ಒಂದು ವೃತ್ತಿಯಾಗಿ ಬೆಳೆದುಬಂದಿತು. ಫ್ಯಾಶನ್ ಅನ್ನುವ ಪದದ ಬಳಕೆ ಈ ಕಾಲದಿಂದಲೆ ಆರಂಭವಾಗಿರಬೇಕು.

ಫ್ಯಾಶನ್ ಓರ್ವ ವ್ಯಕ್ತಿಯ ಇಮೇಜು ಹೆಚ್ಚಿಸಲು ಸಹಕಾರಿಯಾಗಬೇಕಾದಾಗ ಫ್ಯಾಶನ್ ಡಿಸ್ಯಾನರ್ ಅಂತಹ ಫ್ಯಾಶನನ್ನೇ ಸೃಷ್ಟಿಸುತ್ತಾರೆ. ಬೆಳ್ಳಿತೆರೆಯಲ್ಲಿ ತಮ್ಮ ನೆಚ್ಚಿನ ನಾಯಕ, ನಾಯಕಿಯರು ಧರಿಸಿದ ಉಡುಗೆತೊಡುಗೆಗಳನ್ನು ನೋಡಿ ತಮ್ಮ ದರ್ಜಿಯ ಬಳಿ ಅಂತಹದೇ ಉಡುಪು ಹೊಲಿಸುತ್ತಿದ್ದ ಕಾಲ ಮುಗಿಯಿತು. ಈಗ ರೆಡಿಮೇಡ್ ಉಡುಪುಗಳ ಯುಗ. ವಿಶೇಷ ತಜ್ಞರು ರೆಡಿಮೇಡ್ ಗಾರ್ಮೆಂಟ್ ಕಂಪನಿಗಳಿಗಾಗಿ ಈಗ ಉಡುಗೆ ತೊಡುಗೆಗಳ ಡಿಸ್ಯಾನ್ ಮಾಡುತ್ತಿದ್ದಾರೆ. ಹೆಚ್ಚು ಬೆಲೆಯನ್ನು ಕೊಡಲು ಸಿದ್ಧರಿರುವವರಿಗಾಗಿ ವಿಶೇಷ ವಿನ್ಯಾಸಗಳಿಂದ ಕೂಡಿದ ಉಡುಪುಗಳನ್ನು ಸಿದ್ಧಪಡಿಸಿಕೊಡುವ ಬೂಟಿಕ್‌ಗಳೂ ಈಗ ಮುಂಬಯಿಯಂತಹ ನಗರಗಳಲ್ಲಿ ಅಲ್ಲಲ್ಲಿ ತಲೆಯೆತ್ತುತ್ತಿವೆ. ಕಲಾ ಪ್ರದರ್ಶನಗಳನ್ನು ನಡೆಸುತ್ತಿರುವ ಗ್ಯಾಲರಿಗಳಲ್ಲಿ ಇಂತಹ ಡಿಸ್ಯಾನರ್‌ಗಳು ತಯಾರಿಸಿದ ಉಡುಪುಗಳ ಪ್ರದರ್ಶನಕ್ಕೂ ಅನುಮತಿ ನೀಡಹತ್ತಿರುವುದು ಡ್ರೆಸ್ ಡಿಸ್ಯಾನರ್‌ಗಳ ಮಹತ್ವವನ್ನು ಹೆಚ್ಚಿಸಿದೆ.

ಭಾರತದ ರೆಡಿಮೇಡ್ ಉಡುಪುಗಳು ಇದೀಗ



ಆಫೀಸಿಗೆ ಹೋಗಲು ಈ ಉಡುಗೆ ಖಂಡಿತಾ ಹಿಡಿಸದು. ಆದರೆ ವಿಹಾರ ಕೇಂದ್ರಗಳಿಗೆ? ಸಮುದ್ರ ತೀರಕ್ಕೆ...

ಭಾರತೀಯರನ್ನು ಮಾತ್ರ ಉದ್ದೇಶಿಸಿ ನಿರ್ಮಾಣವಾಗುತ್ತಿಲ್ಲ. ಇಲ್ಲಿನ ಫ್ಯಾಶನ್ ಉಡುಪುಗಳಿಗೆ ಯುರೋಪ್, ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ, ಕೊಲ್ಲಿರಾಷ್ಟ್ರಗಳು, ಮತ್ತೀಗ ಜಪಾನ್‌ನಲ್ಲಿಯೂ ಬೇಡಿಕೆ ಬಂದಿದೆ. ಭಾರತೀಯ ಸಾಂಪ್ರದಾಯಿಕ ಉಡುಪುಗಳಿಗೆ ಹೊಸರೂಪ ಕೊಟ್ಟು ಸಿದ್ಧಗೊಳಿಸುತ್ತಿರುವ ಇಂತಹ ಉಡುಪುಗಳಲ್ಲಿ ಒಂದು ಬಗೆಯ ಪೂರ್ವಪಶ್ಚಿಮಗಳ ಸಂಗಮವನ್ನು ಕಾಣುತ್ತಿದ್ದೇವೆ. ವರ್ಷಂಪ್ರತಿ ಭಾರತದಿಂದ 5000 ಕೋಟಿ ರೂಪಾಯಿಗಳ ಮೌಲ್ಯದ ಉಡುಪುಗಳು ರಫ್ತು ಆಗುತ್ತಿವೆ ಯೆಂದಾಗ ಈ ಉದ್ಯಮದ ಸಾಧನೆಯನ್ನು ಊಹಿಸಬಹುದು.

ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯಲ್ಲಿ ಹುಟ್ಟಿನಿಂದಲೆ ಕಲಾವಿದನಾಗಿರುತ್ತಾನೆ ಎನ್ನುತ್ತಾರೆ. ಹುಟ್ಟಿನಿಂದ ಬಂದ ತನ್ನ ಈ



ಸಾಲ್ವಾರ್ ಕಮೀಜಿನ ಆಧುನಿಕ ರೂಪ

ಕೌಶಲ್ಯವನ್ನು ರೂಢಿಸಿ ಬೆಳೆಸಿಕೊಳ್ಳಲು ಮಾರ್ಗ ದರ್ಶನ ಖಂಡಿತಾ ಬೇಕು. ಡ್ರೆಸ್ ಡಿಸೈನಿಂಗ್‌ನ್ನೇ ಪರಿಶೀಲಿಸೋಣ. ಉಡುಪು ತಯಾರಿಕೆಗೆ ಡಿಸೈನ್ ಎಷ್ಟು ಮುಖ್ಯವೋ, ಅದಕ್ಕೆ ಅನುಗುಣ ವಾದ ಬಟ್ಟೆಯೂ ಅಷ್ಟೇ ಮುಖ್ಯ. ಒಂದು ರೀತಿಯಲ್ಲಿ ನೋಡಿದರೆ ಡ್ರೆಸ್ ಡಿಸೈನಿಂಗ್‌ನಲ್ಲಿ ಫ್ಯಾಶನ್ ಮತ್ತು ಬಟ್ಟೆ ಒಂದಕ್ಕೊಂದು ಪೂರಕ ವಾಗಿರಬೇಕು. ಈ ಎಲ್ಲಾ ಸೂತ್ರಗಳನ್ನು ಕಲಿಸಲು ಹಲವು ಸಂಸ್ಥೆಗಳು ಹುಟ್ಟಿಕೊಂಡಿವೆ. ಇತರ ವೃತ್ತಿಪರ ಶಿಕ್ಷಣಗಳನ್ನು ಕೊಡುತ್ತಿರುವ ಸಂಸ್ಥೆಗಳಲ್ಲೂ ಡ್ರೆಸ್ ಡಿಸೈನಿಂಗ್ ಕೋರ್ಸ್‌ನ್ನು ಸೇರಿಸಿಕೊಳ್ಳಲಾಗಿದೆ.

ಮುಂಬಯಿಯ ಇಂಡಿಯಾ ಇಂಟರ್ ನೇಶನಲ್ ಟ್ರೇಡಿಂಗ್ ಸೆಂಟರ್ (ಐ.ಐ.ಟಿ.ಸಿ.) ಇಂತಹ ಒಂದು ಸಂಸ್ಥೆ. ಈ ಸಂಸ್ಥೆ ಕನ್ನಡಿಗರದ್ದು ಎನ್ನುವುದು ಇನ್ನೊಂದು ವಿಶೇಷ. ನಿರ್ದೇಶಕ ಶ್ರೀ ಎಸ್. ಕೆ. ಉರ್ವಾಳ ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ಎಕ್ಸ್‌ಪೋರ್ಟ್/ಇಂಪೋರ್ಟ್ ಮೆನೇಜ್‌ಮೆಂಟ್, ಕಂಪ್ಯೂಟರ್ ಸಯನ್ಸ್, ಮಾರ್ಕೆಟಿಂಗ್ ಮತ್ತು ಬ್ಯುಸಿನೆಸ್ ಮೆನೇಜ್ ಮೆಂಟ್, ಟ್ರಾವಲ್ ಮತ್ತು ಟೂರಿಸಂ ಮೆನೇಜ್ ಮೆಂಟ್ ಮತ್ತಿತರ ವೃತ್ತಿಪರ ತರಬೇತಿಯನ್ನು ನೀಡುತ್ತಿರುವ ಈ ಸಂಸ್ಥೆಯಲ್ಲಿ ಫ್ಯಾಶನ್ ಡಿಸೈನಿಂಗ್ ಬಗೆಗೂ ಕ್ಲಾಸುಗಳು ನಡೆಯುತ್ತಿವೆ. 25 ವರ್ಷಗಳ ಹಿಂದೆ ಆರಂಭವಾದ ಈ ಸಂಸ್ಥೆ ವಿವಿಧ ನಗರಗಳಲ್ಲಿ 24 ಶಾಖೆಗಳನ್ನು ಹೊಂದಿದೆ. ಇದೀಗ ತನ್ನ ಬೆಳ್ಳಿಹಬ್ಬದ ಸಂದರ್ಭದಲ್ಲಿ 'ವೆಲ್‌ಕಮ್ 92' ಎಂಬ ಫ್ಯಾಶನ್ ಶೋ ಒಂದನ್ನು ಮುಂಬಯಿಯಲ್ಲಿ ಯಶಸ್ವಿಯಾಗಿ ಏರ್ಪಡಿಸಿತು.

ಫ್ಯಾಶನ್ ಪರೇಡ್‌ಗಳು, ಫ್ಯಾಶನ್ ಶೋಗಳು ಫ್ಯಾಶನ್‌ನ ಮಾಯಾಲೋಕಕ್ಕೆ ಒಂದು ಬೆಳಕಿಂಡಿ ಇದ್ದಂತೆ. ಬೂಟಿಕ್‌ಗಳು, ಡ್ರೆಸ್ ಡಿಸೈನರ್ ಗಳು, ಬಟ್ಟೆ ನಿರ್ಮಾಣ ಸಂಸ್ಥೆಗಳು ತಮ್ಮ ಪ್ರೊಡಕ್ಟ್‌ಗಳನ್ನು ಜನರ ಮುಂದಿರಿಸುವುದು ಇಂತಹ ಶೋಗಳ ಮೂಲಕ.

ಐ.ಐ.ಟಿ.ಸಿ. ಯ ಫ್ಯಾಶನ್ ಶೋದಲ್ಲಿ ವಿದ್ಯಾರ್ಥಿಗಳು ತಾವು ಡಿಸೈನ್ ಮಾಡಿದ ಉಡುಪುಗಳನ್ನು ಪ್ರದರ್ಶಿಸಿದರು. ಪ್ರಸಿದ್ಧ ಶೋ ಸಂಯೋಜಕ ಬಾದ್‌ಶಾಖಾನ್ ನಿರ್ದೇಶಿಸಿದ ಈ ಫ್ಯಾಶನ್ ಶೋದಲ್ಲಿ, ಆಕರ್ಷಕ ಮಾಡೆಲ್ ಗಳು ಹೊಸಬಗೆಯ ಉಡುಗೆತೊಡುಗೆಗಳನ್ನು ಜನರಿಗೆ ತಲಪಿಸುವ ಪ್ರಯತ್ನ ನಡೆಸಿದರು. ಭಾರತದ ಸಾಂಪ್ರದಾಯಿಕ ಸಾಲ್ವಾರ್‌ಕಮೀಜ್ ಗಳು ಇಲ್ಲಿ ಹೊಸರೂಪ ತಳೆದು ಬಂದರೆ, ಪ್ಯಾಂಟು, ಶರಟುಗಳಲ್ಲಿ ಬಗೆ, ಬಗೆಯ ನಾವೀನ್ಯ ಕಾಣಿಸಿತು. ವಿದೇಶಿಯರಿಗೆಂದೇ ರೂಪಿಸಲ್ಪಟ್ಟ ಉಡುಗೆಗಳೂ ಪ್ರದರ್ಶನದಲ್ಲಿ ಇದ್ದರೆ, ಭಾರತೀಯ ಯುವಕ, ಯುವತಿಯರನ್ನು ಆಕರ್ಷಿಸಬಲ್ಲ ವಿದೇಶಿ ಉಡುಗೆಗಳೂ ಪ್ರದರ್ಶಿಸಲ್ಪಟ್ಟವು. ಇಲ್ಲಿ ಮುದ್ರಿಸಿರುವ ಚಿತ್ರಗಳಿಂದ ಫ್ಯಾಶನ್ ಜಗತ್ತಿಗೆ ಐ.ಐ.ಟಿ.ಸಿ ವಿದ್ಯಾರ್ಥಿಗಳ ಕೊಡುಗೆ ಯನ್ನು ಊಹಿಸಬಹುದು.

ಅಹಮದಾಬಾದಿನ ಅಡ್ವಾನ್ಸ್ ಮಿಲ್‌ನ ಸಹಕಾರದೊಂದಿಗೆ ಸಂಯೋಜಿಸಿದ ಈ ಫ್ಯಾಶನ್ ಶೋಗೆ ಜಸ್ಟಿಸ್ ಎಚ್. ಸುರೇಶ್ ಮುಖ್ಯ ಅತಿಥಿಯಾಗಿ ಬಂದು ಐ.ಐ.ಟಿ.ಸಿ.ಯ 25 ವರ್ಷಗಳ ಸಾಧನೆಯನ್ನು ಪ್ರಶಂಶಿಸಿದರು.

●

ಬಾಲ ಪ್ರಪಂಚ

ಬಿಡುವಿನ ಬೆಡಗು

ಸೂಟಿಯ ಸಮಯವ
ಸೊಗಸಿಲೆ ಕಳೆಯಲು
ಅಜ್ಜನ ಗ್ರಾಮಕೆ ಹೋಗುವೆನು

ಹೊಸಹೊಸ ಗೆಳೆಯರ
ಪರಿಚಯ ಪಡೆಯುತ
ಹಳ್ಳಿಯ ಆಟಗಳ ಆಡುವೆನು

ಮಾಮನ ಜೊತೆಯಲಿ
ತೋಟಕೆ ಹೋಗುತ
ದಿನವೂ ಈಜಾಡಿ ನಲಿಯುವೆನು

ಬನಬನ ಸುತ್ತುವ
ಬಣ್ಣದ ಚಿಟ್ಟೆಯ
ಹಿಡಿಯುತ ತಂಗಿಗೆ ತೋರುವೆನು

ಕೆನೆಕೆನೆ ಮೊಸರಿಗೆ
ಚಟ್ನಿಯ ಬೆರೆಸುತ
ನೆರಳಲಿ ಊಟವ ಮಾಡುವೆನು

ಹಕ್ಕಿಯ ಕಲರವ
ಹಸುರಿನ ಸೊಬಗನು
ಬಣ್ಣಿಸಿ ಪದ್ಯವ ಬರೆಯುವೆನು

ಅಜ್ಜಿಯು ಕಲಿಸುವ
ಅಜ್ಜನು ಹೇಳುವ
ಹಾಡನು ಕಥೆಯನು ಕಲಿಯುವೆನು

ಬಿಡುವನು ಮುಗಿಸಿದ
ರೀತಿಯ ತಿಳಿಸಲು
ಪುಟ್ಟದು ನಿಬಂಧ ಬರೆಯುವೆನು

● **ಸಂಗಮೇಶ ಗುಜಗೊಂಡ, ಮೂಡಲಗಿ**

ನಾನು ಯಾರು?

ಅಲ್ಲಿರುವೆ ಇಲ್ಲಿರುವೆ
ಎಲ್ಲೆಲ್ಲು ನಾನಿರುವೆ
ನಿಮ್ಮೊಳಗೆ ಅಡಗಿರುವ
ಪ್ರಾಣವಾಗಿರುವೆ

ನಾನಿರುವೆ ಬಲುಜಾಣೆ
ಕಣ್ಗಳಿಗೆ ನಾ ಕಾಣೆ
ನಾನಿಲ್ಲದೇನಿಲ್ಲ
ಆ ದೇವರಾಣೆ

ಸೂಸಿದರೆ ಸುಳಿಗಾಳಿ
ಬೀಸಿದರೆ ಬಿರುಗಾಳಿ
ಕಡಲಿನಲಿ ಕುಣಿದಾಡೆ
ನಾ ರುದ್ರಕಾಳಿ

ಚಂದ್ರನಲಿ ನಾನಿಲ್ಲ
ಗ್ರಹತಾರೆಗಳಲಿಲ್ಲ
ಬುವಿಯಲ್ಲಿ ನನ್ನಿಂದ
ಜೀವಿಗಳ ಸೊಲ್ಲ

ಜೀವಿಗಳಿಗಾನುಸಿರು
ನನ್ನಿಂದ ಜಗಹಸಿರು
ನೀ ತಿಳಿದು ಹೇಳಯ್ಯ
ನನಗಿರುವ ಹೆಸರು

● **ಶಂ. ಗು. ಬಿರಾದಾರ**



ಪಂಚತಂತ್ರದ ಕಥೆಗಳು

ಮಿತ್ರಭೇದದ ಕತೆಗಳು

● ಪ್ರೊ| ಜಿ. ವೆಂಕಟಸುಬ್ಬಯ್ಯ

> ಪ್ರಿಯ ಮಕ್ಕಳೇ, 'ಮಿತ್ರಭೇದ' ಸ್ನೇಹಿತರ ಹಾಗೆಯೇ ಮಾತನಾಡುತ್ತ ಆಮೇಲೆ ಮೋಸಮಾಡುವ ಜನರ ಕಥೆಗಳು. ನಾವು ಪ್ರತಿಯೊಬ್ಬರೊಂದಿಗೆ ಸ್ನೇಹಮಾಡಿಕೊಂಡಾಗ, ಅವರ ಮಾತುಗಳನ್ನು ನಂಬಬೇಕಾಗಿ ಬಂದಾಗ, ಹೇಗೆ ಯೋಚಿಸಬೇಕು, ನಡೆದುಕೊಳ್ಳಬೇಕು ಎಂದು 'ಮಿತ್ರಭೇದ'ದ ಕಥೆಗಳು ತಿಳಿಸುತ್ತವೆ.

ಕಾಗೆ ನಾಗರಹಾವನ್ನು ಕೊಂದ ಕಥೆ

ಒಂದು ದೊಡ್ಡ ನದಿಯ ದಡದಲ್ಲಿ ಹರಡಿಕೊಂಡು ಬೆಳೆದಿದ್ದ ಒಂದು ಆಲದ ಮರವಿತ್ತು. ಅದರ ಮೇಲೆ ಗೂಡುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದ ಕಾಗೆಯ ಗುಂಪು ಇತ್ತು. ಒಂದು ಗೂಡಿನಲ್ಲಿ ವಾಸವಾಗಿದ್ದ ಕಾಗೆಗಳ ಮೊಟ್ಟೆಗಳನ್ನು ಆ ಮರದ ಬುಡದ ಹುತ್ತದಲ್ಲಿ ವಾಸಿಸುತ್ತಿದ್ದ ನಾಗರಹಾವು ಆಗಾಗ ಬಂದು ತಿಂದು ಬಿಡುತ್ತಿತ್ತು. ಏನಾದರೂ ಮಾಡಿ ಈ ಹಾವಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಆ ಗಂಡು ಹೆಣ್ಣು ಕಾಗೆಗಳು ಮಾತನಾಡಿಕೊಂಡುವು. ಆ ಗಂಡು ಕಾಗೆಗೆ ಒಂದು ನರಿಯು ಸ್ನೇಹವಿತ್ತು. ಆ ಕಾಗೆಯು ನರಿಯ ಬಳಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಂಡಿತು. ನರಿಯು ಕಾಗೆಗೆ ಸಹಾಯ ಮಾಡಲು ಒಂದು ಉಪಾಯವನ್ನು ಹುಡುಕಿತು. ನರಿ ಹೇಳಿತು: 'ನೀನು ಎಲ್ಲಿಯಾದರೂ ಚಿನ್ನದ ಹಾರವನ್ನು ಹುಡುಕಿ ತಂದು ಆ ಹಾವಿನ ಹುತ್ತದ ಒಳಕ್ಕೆ ಹಾಕಿಬಿಡು. ನಿನಗೆ ಎಲ್ಲ ಕಷ್ಟವೂ ತಪ್ಪುತ್ತದೆ.'



ಈ ಮಾತು ಕಾಗೆಯ ಮನಸ್ಸಿಗೆ ಬಂತು. ಹಾಗೆ ಮಾಡುವುದೇ ಸರಿ ಎಂದು ಮನೆಗೆ ಬಂದು ತನ್ನ ಹೆಂಡತಿಗೆ ಈ ಉಪಾಯವನ್ನು ತಿಳಿಸಿತು. ಆಗ ಹೆಣ್ಣು ಕಾಗೆ: 'ಇಲ್ಲಿಂದ ಸ್ವಲ್ಪ ದೂರ ದಲ್ಲಿರುವ ಸರೋವರಕ್ಕೆ ಜಲಕ್ರೀಡೆಯಾಡಲು ರಾಜನ ಅಂತಃಪುರದವರು ಬರುತ್ತಾರೆ. ಸ್ನಾನ ಮಾಡುವಾಗ ಅವರು ತಮ್ಮ ಒಡವೆಗಳನ್ನು ಮೆಟ್ಟಿಲುಗಳ ಮೇಲೆ ಇಟ್ಟಿರುತ್ತಾರೆ. ನಾನು ಆಗ ಒಂದು ಚಿನ್ನದ ಹಾರವನ್ನು ಕಚ್ಚಿಕೊಂಡು ಬರುತ್ತೇನೆ.'

ಗಂಡು ಕಾಗೆ: 'ಹಾಗಾದರೆ ನಾವಿಬ್ಬರೂ ಸೇರಿ ಈ ಹಾವನ್ನು ಸಾಯಿಸಬಹುದು. ನೀನು ಚಿನ್ನದ ಸರವನ್ನು ಕಚ್ಚಿಕೊಂಡು ಬರುವುದನ್ನು ಅಲ್ಲಿರುವ ಆಳುಗಳು ಕಾಣುವಂತೆ ಮಾಡು. ಆಗ ಅವರು ನಿನ್ನನ್ನು ಅಟ್ಟಿಸಿಕೊಂಡು ಬರುತ್ತಾರೆ. ನೀನು ಮರದಿಂದ ಮರಕ್ಕೆ ಹಾರುತ್ತಾ ಕೊನೆಗೆ ನಮ್ಮ ಆಲದ ಮರದ ಕೊಂಬೆಗೆ ಬಂದು ಕುಳಿತುಕೋ. ನಾನು ಆ ಹಾವಿನ ಹುತ್ತದ ಹತ್ತಿರ ಇರುತ್ತೇನೆ. ರಾಜನ ಆಳುಗಳು ನಿನ್ನನ್ನು ಹಿಂಬಾಲಿಸಿದಾಗ ನೀನು ನಾನಿರುವ ಬಳಿ ಬಂದುಬಿಡು.'

ಹೀಗೆ ಆಲೋಚನೆ ಮಾಡಿ ಆ ಕಾಗೆಗಳು ಸರಿಯಾದ ಸಮಯಕ್ಕೆ ಕಾದು ಕುಳಿತವು. ರಾಜನ ಅರಮನೆಯ ಹೆಂಗಸರು ಜಲಕ್ರೀಡೆಗೆ ಬಂದರು. ಅವರು ತಮ್ಮ ಒಡವೆಗಳನ್ನು ಬಿಚ್ಚಿ ಮೆಟ್ಟಿಲುಗಳ ಮೇಲೆ ಇಟ್ಟರು; ನೀರಿನಲ್ಲಿ ಆಟವಾಡಲು ನೀರಿಗೆ ಇಳಿದರು. ಈ ಸಮಯಕ್ಕೆ ಕಾದಿದ್ದ ಹೆಣ್ಣು ಕಾಗೆ ಹಾರಿಬಂದು ಒಂದು ಒಳ್ಳೆಯ ಚಿನ್ನದ ಹಾರ ವನ್ನು ಕಚ್ಚಿಕೊಂಡು ಮೇಲಕ್ಕೆ ಹಾರಿತು. ಅದನ್ನು ಕಂಡ ಸ್ತ್ರೀಯರು ಗಟ್ಟಿಯಾಗಿ ಕೂಗಿಕೊಂಡರು. ಆಗ ಹತ್ತಿರದಲ್ಲಿದ್ದ ಹೆಣ್ಣಾಳುಗಳು ಕಾಗೆಯನ್ನು ಅಟ್ಟಿಸಿಕೊಂಡು ಬಂದರು. ಕಾಗೆ ದೂರ ಹಾರಿದಾಗ ರಾಜನ ಭಟರು ಓಡಿ ಬಂದರು. ಆಗ ಹೆಣ್ಣು ಕಾಗೆಯು ಗಂಡು ಕಾಗೆಯಿದ್ದ ಸ್ಥಳಕ್ಕೆ ಬಂದುಬಿಟ್ಟಿತು. ಗಂಡು ಕಾಗೆ ಹೇಳಿದಂತೆ ಹೆಣ್ಣು ಕಾಗೆಯು ಚಿನ್ನದ ಸರವನ್ನು ಹುತ್ತದ ತೂತಿನ ಒಳಕ್ಕೆ ಹಾಕಿಬಿಟ್ಟಿತು.

ಕೂಡಲೆ ರಾಜಭಟರು ಗುದ್ದಲಿ ಹಾರೆಗಳನ್ನು ತಂದು ಹುತ್ತವನ್ನು ಅಗೆದರು. ಹಾವು ಬುಸು ಗುಟ್ಟುತ್ತಾ ಈಚೆಗೆ ಬಂತು. ಭಟರು ಬಲವಾಗಿ ಪೆಟ್ಟು ಹಾಕಿ ಅದನ್ನು ಸಾಯಿಸಿಬಿಟ್ಟರು. ಅಂದಿನಿಂದ ಮುಂದೆ ಕಾಗೆಯ ಸಂಸಾರಕ್ಕೆ ಯಾವ ತೊಂದರೆಯೂ ಇಲ್ಲದಂತಾಯಿತು.

(ಉಪಾಯದಿಂದ ಅಪಾಯವನ್ನು ಹೇಗೆ ಎದುರಿಸಬಹುದು ಎಂದು ಈ ಕಥೆ ತಿಳಿಸಿ ಕೊಡುತ್ತದೆ.)

ಬಕಪಕ್ಷಿ ಮತ್ತು ಏಡಿ



ಒಂದು ದೊಡ್ಡ ಕಾಡಿನ ಮಧ್ಯದಲ್ಲಿ ಒಂದು ದೊಡ್ಡ ಸರೋವರವಿದ್ದಿತು. ಅದರಲ್ಲಿ ಅನೇಕ ಮೀನುಗಳೂ ಏಡಿಗಳೂ ವಾಸವಾಗಿದ್ದುವು. ಒಂದು ಬಕಪಕ್ಷಿಯು ಅಲ್ಲೇ ಹತ್ತಿರದಲ್ಲಿ

ವಾಸಿಸುತ್ತಿತ್ತು. ಅನೇಕ ಸಣ್ಣಸಣ್ಣ ಮೀನುಗಳನ್ನು ತಿಂದು ಮುಗಿಸಿದ್ದ ಈ ಬಕಪಕ್ಷಿಗೆ ದೊಡ್ಡ ಮೀನುಗಳು ಸಿಕ್ಕುತ್ತಿರಲಿಲ್ಲ. ಆಗ ಆ ಬಕವು ಒಂದು ಉಪಾಯವನ್ನು ಹುಡುಕಿತು.

ಆ ಸರೋವರದ ದಡದಲ್ಲಿ ನಿಂತು ಮೌನ ವಾಗಿ ತಪಸ್ಸು ಮಾಡುವಂತೆ ನಟಿಸಿತು. ಆಗ ಸರೋವರದ ದೊಡ್ಡ ಮೀನುಗಳೆಲ್ಲ 'ಏನೋ ಒಂದು ಚಿಂತೆ ಬಕಪಕ್ಷಿಗೆ ಬಂದಿರಬೇಕು. ನಾವು ವಿಚಾರಿಸೋಣ' ಎಂದುಕೊಂಡವು. ಬಕವು ನಿಂತಿದ್ದ ದಡದ ಹತ್ತಿರಕ್ಕೆ ಬಂದ ಮೀನುಗಳು ಕೇಳಿದುವು: ಎಲೈ, ಬಕಪಕ್ಷಿಯೇ! ಹೀಗೇಕೆ ಯೋಚಿಸುತ್ತ ಇದ್ದೀಯೆ?

ಆಗ ಬಕ ಹೇಳಿತು: 'ಇಲ್ಲಿಯ ತನಕ ನಾನೂ ನೀವೂ ಈ ಸರೋವರದಲ್ಲಿ ಸುಖವಾಗಿ ಜೀವನ ಮಾಡುತ್ತಿದ್ದೆವು. ಈಗ ಇನ್ನು ಕೆಲವು ದಿನಕ್ಕೆ ನಾನೇನೋ ಇಲ್ಲಿಂದ ದೂರದ ಬೇರೆಯ ಸರೋವರದ ಬಳಿಗೆ ಹೋಗುತ್ತೇನೆ. ಆ ಬಳಿಕ ನಿಮಗೆಲ್ಲ ಸಾವು ಹತ್ತಿರವಾಗುವುದಲ್ಲಾ ಎಂದು ಚಿಂತಿಸುತ್ತಿದ್ದೇನೆ. ನಿಮ್ಮನ್ನು ಅಗಲಿ ಹೋಗು ವುದು ಹೇಗೆ? ನಿಮ್ಮನ್ನು ಕಾಪಾಡುವುದು ಹೇಗೆ ಎಂದು ಚಿಂತಿಸುತ್ತಿದ್ದೇನೆ.'

ಮೀನುಗಳ ಪರವಾಗಿ ಒಂದು ದೊಡ್ಡ ಮೀನು ಕೇಳಿತು: 'ನಮಗೇಕೆ ಸಾವು ಬರುತ್ತದೆ? ನಿನಗೆ ಗೊತ್ತಿದ್ದರೆ ತಿಳಿಸು'..

ಈ ಮಾತನ್ನು ಕೇಳಿ ಬಕಪಕ್ಷಿಗೆ ಸಂತೋಷ ವಾಯಿತು. ಮೀನುಗಳನ್ನು ನಂಬಿಸಿ ಅವುಗಳನ್ನು ತಾನೇ ತಿನ್ನುವ ಯೋಚನೆ ಮಾಡಿತು. ಬಕ ಹೇಳಿತು: 'ಈ ದೇಶದ ರಾಜನು ಸದಾಚಾರ ಗಳನ್ನು ಮಾಡದೆ, ಹಿರಿಯರಿಗೆ ತಕ್ಕ ಗೌರವ ಕೊಡದೆ ಇದ್ದಾನೆ. ಆದುದರಿಂದ ಇಲ್ಲಿ ಸ್ವಲ್ಪ ಕಾಲದಲ್ಲಿಯೇ ಬರ ಬರುತ್ತದೆ. ಈ ಕೊಳ ಇಂಗಿ ಹೋಗುತ್ತದೆ. ನಿಮಗೆಲ್ಲ ಅಪಾಯ ಒದಗುತ್ತದೆ'.

ದೊಡ್ಡಮೀನು: 'ನೀವು ಈ ಸ್ಥಳದಿಂದ ನಮ್ಮನ್ನು ಬೇರೆಡೆಗೆ ಕರೆದುಕೊಂಡು ಹೋಗುವ ಉಪಾಯವನ್ನು ಮಾಡಿದರೆ ನಾವಿಬ್ಬರೂ ಸುಖವಾಗಿರಬಹುದು. ಅಲ್ಲವೆ?'

ಬಕ: 'ಒಳ್ಳೆಯದು. ಇಲ್ಲಿಗೆ ಒಂದಿಷ್ಟು ದೂರದಲ್ಲಿ ಒಂದು ಮಹಾ ನದಿಯಿದೆ. ಅಲ್ಲಿಗೆ ನಿಮ್ಮನ್ನು ಪ್ರತಿನಿತ್ಯ ಒಂದೊಂದು ಮೀನಿನಂತೆ ಕರೆದುಕೊಂಡು ಹೋಗಿ ಬಿಡುತ್ತೇನೆ.'

ದೊಡ್ಡ ಮೀನು: 'ನೀವು ಮಹಾ ತಪಸ್ವಿಗಳು. ನೀವು ಹೇಳಿದಂತೆಯೆ ಆಗಲಿ.'

ಹೀಗೆ ಒಪ್ಪಿಗೆಯಾಗಿ ಬಕವು ಪ್ರತಿನಿತ್ಯವೂ ಒಂದೊಂದು ದೊಡ್ಡ ಮೀನನ್ನು ಕಚ್ಚಿಕೊಂಡು ದೂರ ಹೋಗಿ ಯಾವುದೋ ಬಂಡೆಯ ಮೇಲೆ ಅದನ್ನು ಕಚ್ಚಿಕಚ್ಚಿ ತಿಂದು ಮಾರನೆಯ ದಿನ ಹಸಿವಾದಾಗ ಇನ್ನೊಂದು ಮೀನಿಗಾಗಿ ಬರು ತ್ತಿತ್ತು. ಹೀಗೆ ಎಲ್ಲಾ ಮೀನುಗಳು ಒಂದೊಂದಾಗಿ ಸತ್ತವು.

ಬಕಕ್ಕೆ ಈಗ ಕಾಣಸಿಕ್ಕಿದುದು ದೊಡ್ಡ ಏಡಿಗಳು ಮಾತ್ರ. ಈಗ ಬಕವು ಒಂದು ಏಡಿಯನ್ನು ಹತ್ತಿರಕ್ಕೆ ಕರೆದು ಹೇಳಿತು:

"ಎಲೈ ಏಡಿಯೇ! ನೀನು ಸುಖವಾಗಿ ಬಾಳಿದವನು. ಬೇಗ ಬಾ. ನಿನ್ನನ್ನು ಮೊದಲು ಮಹಾನದಿಯಲ್ಲಿ ಬಿಟ್ಟು ಆಮೇಲೆ ಮೀನು ಗಳನ್ನು ಬಿಡುತ್ತೇನೆ."

ಈ ಮಾತನ್ನು ಕೇಳಿ ಏಡಿಯು ತಾನು ಬದುಕುವ ಉಪಾಯ ಸಿಕ್ಕಿತೆಂದು ಸಂತೋಷ ಪಟ್ಟಿತು. ಅದು ಬಕಪಕ್ಷಿಯ ಕೊರಳನ್ನು ತನ್ನ ತೋಳುಗಳಿಂದ ಹಿಡಿದುಕೊಂಡು ಅದರ ಬೆನ್ನಿನ ಮೇಲೆ ಕುಳಿತು ಪ್ರಯಾಣಕ್ಕೆ ಹೊರಟಿತು. ದೂರ ಸಾಗಿದ ಮೇಲೆ ಕೆಳಗೆ ಮೀನಿನ ಮೂಳೆಗಳು ಮಾತ್ರ ಕಾಣುತ್ತಿತ್ತಲ್ಲದೆ ಯಾವ ನೀರಿನ ಸ್ಥಳವೂ ಕಾಣಲಿಲ್ಲ. ಏಡಿಗೆ ಅನುಮಾನ ಬಂತು. ಈ ಬಕವು ತನ್ನನ್ನ ತಿಂದು ಬಿಟ್ಟೀತೆಂಬ ಹೆದರಿಕೆ ಯಾಯಿತು. ಕೂಡಲೆ ತನ್ನ ಹರಿತವಾದ ತೋಳುಗಳಿಂದ ಬಕದ ಕೊರಳನ್ನು ಗಟ್ಟಿಯಾಗಿ ಅದುಮಿ ಬಿಟ್ಟಿತು. ಎಳೆಯ ಬಾಳೆಯ ಗಿಡವು ಕತ್ತರಿಸುವಂತೆ ಬಕನ ಕೊರಳು ಎರಡು ಭಾಗ ವಾಗಿ ಅದರ ದೇಹ ಕೆಳಕ್ಕೆ ಬಿತ್ತು. ಏಡಿ ಮಾತ್ರ ಬದುಕಿಕೊಂಡಿತು. ಹೀಗೆ ಏಡಿ ಬಕನ ನಾಶಕ್ಕೆ ಕಾರಣವಾಯಿತು.

(ಬದುಕಲು ಒಬ್ಬೊಬ್ಬರು ಒಂದೊಂದು ದಾರಿ ಹುಡುಕುತ್ತಾರೆ. ಇದರಿಂದ ಬೇರೆಯವರಿಗೆ ಅಪಾಯ ವಾಗುವುದನ್ನೂ ಲೆಕ್ಕಿಸುವುದಿಲ್ಲ ಇಂಥವರು ಹತ್ತಿರ ಬಂದು ಸಿಹಿಸಿಹಿಯಾಗಿ ಮಾತನಾಡಿ, ಏನೇನೊ ಆಸೆಗಳನ್ನು ತೋರಿಸಿದಾಗ—ನಾವು ಎಚ್ಚರಿಕೆಯಿಂದ ಮುಂದುವರಿಯಬೇಕು, ಕೆಟ್ಟವರ ಉಪಾಯಕ್ಕೆ ಬಲಿಯಾಗಿ ಬಿಡಬಾರದು ಎಂದು ಈ ಕಥೆ ಕಾಣಿಸು ತ್ತದೆ) ●

ಸಾಹಿತಿ ಅಜ್ಜಂದಿರು – ಅಜ್ಜಿಯರು

● ಶೇಷನಾರಾಯಣ

ಕರ್ನಾಟಕದಲ್ಲಿ ಸಾಹಿತಿ ಅಜ್ಜಂದಿರು–ಅಜ್ಜಿಯರು ಯಾರು ಯಾರು ಇದ್ದಾರೆ? ಅವರು ಯಾವ ಊರಿನವರು? ಈಗ ಎಲ್ಲಿ ವಾಸವಾಗಿದ್ದಾರೆ?–ಎನ್ನುವ ಪ್ರಶ್ನೆಯನ್ನು ಕಳೆದ ಸಂಚಿಕೆಯಲ್ಲಿ ತುಷಾರಣ್ಣ ನಿಮಗೆ ಹಾಕಿದ್ದನಲ್ಲವೆ??

ಅದಕ್ಕೆ ನೀವು ಕೆಲವರ ಹೆಸರುಗಳನ್ನು ಬರೆದಿರಬಹುದು. ಮತ್ತೆ ಕೆಲವರಿಗೆ ಗೊತ್ತಾಗದೆ ಪೇಚಾಡಿರಬಹುದು. ಅದಕ್ಕೇ ಈಗ ನಾನು ಇಂಥ ಅಜ್ಜಂದಿರು–ಅಜ್ಜಿಯರ ಬಗ್ಗೆ ವಿವರವಾಗಿ ತಿಳಿಸಲು ಪ್ರಯತ್ನಿಸಿದ್ದೇನೆ. ಹಾಗೂ ಕೆಲವರ ಹೆಸರು ಬಿಟ್ಟು ಹೋಗಿದೆಯೋ ಏನೋ?– ಇರಲಿ.

ಇವರಲ್ಲಿ ಅನೇಕರು ಈಗ ನಾವು ಅಜ್ಜ–ಅಜ್ಜಿಯರಾದೆವು ಎಂದು ಸುಮ್ಮನೇ ಕುಳಿತಿಲ್ಲ. ಈಗಲೂ ನಿಮಗಾಗಿ ಎಂದರೆ ಮಕ್ಕಳ ಸಾಹಿತ್ಯಕ್ಕಾಗಿ ತಮ್ಮ ಬರವಣಿಗೆಯನ್ನು ಮುಂದುವರಿಸಿಕೊಂಡೇ ಇದ್ದಾರೆ. ಇಂಥವರಲ್ಲಿ ಕಾರಂತಜ್ಜ ಪ್ರಮುಖರು.


'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಕಥೆಯನ್ನು ನೀವು ಕೇಳಿದ್ದೀರಲ್ಲವೆ? ಅದರಲ್ಲಿ ಎಷ್ಟು ಬಗೆಯ ಇಲಿಗಳು ಬರುತ್ತವೆ? ಆ ಇಲಿ ಈ ಇಲಿ–ಹೀಗೆ. ನಿಮ್ಮ ಶಾಲೆಗಳಲ್ಲಿ ನೀವು ಅಂಥ ಇಲಿಗಳ ಪಾರ್ಟಿ ಮಾಡಿರಲಿಕ್ಕೂ ಸಾಕು.

ಅದು ಸರಿ. ಸೊಗಸಾದ ಇಂಥ ಮಕ್ಕಳ ಕವಿತೆಯನ್ನು ಬರೆದವರು ಯಾರು? ಸರಿಯಾಗಿ ನೆನಪಿಸಿಕೊಳ್ಳಿ. ನಮ್ಮ ನಾಡಿನ ಹಿರಿಯ ಕವಿ ಕುವೆಂಪು ಅಲ್ಲವೆ? ಕುವೆಂಪಜ್ಜ ಎಂದರೆ ಚೆನ್ನಾಗಿರುವುದಿಲ್ಲ. ಕಾರಂತಜ್ಜನಿಗೆ ಅಜ್ಜ ಚೆನ್ನಾಗಿ ಮಿಶ್ರಣ ಆಗಿಬಿಟ್ಟಿದೆ. ಇದು ಏನೋ ತೊಡಕು. ಆದುದರಿಂದ ಕುವೆಂಪು ಎಂದೇ ಹೇಳೋಣ.

ಹೀಗೆಯೇ ಕುವೆಂಪು ಕಾರಂತರ ಹಾಗೆ, ಎಂಬತ್ತರ ಪ್ರಾಯ ದಾಟಿರುವವರು ಅಥವಾ ಆ ಗಡಿಗೆ ಸಮೀಪಿಸಿರುವವರು, ಇಂಥ ಸಾಹಿತಿ ಅಜ್ಜಂದಿರು–ಅಜ್ಜಿಯರ ಒಂದು ಪಟ್ಟಿ ತಯಾರಿಸೋಣವೆ? ನಿಮಗೆ ಕುತೂಹಲ ಅರಳುತ್ತದಲ್ಲವೆ?

ಗೋಕಾಕ್, ರಂ. ಶ್ರೀ. ಮುಗಳಿ, ಎನ್ಕೆ, ಜಿ. ವೆಂಕಟಸುಬ್ಬಯ್ಯ, ಪುತಿನ., ಕೆ. ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ತ. ಸು. ಶಾಮರಾಯ, ಅಶ್ವತ್ಥ, ಶಾಂತರಸ, ಸೇಡಿಯಾಪು ಕೃಷ್ಣ ಭಟ್ಟ, ಕಯ್ಯಾರ ಕಿಞ್ಞಣ್ಣ ರೈ, ಪಾ. ವೆಂ. ಆಚಾರ್ಯ, ಟಿ. ಸುನಂದಮ್ಮ, ಪರ್ವತವಾಣಿ, ಎಂ. ಕೆ. ಇಂದಿರಾ, ಎ. ಎನ್. ಮೂರ್ತಿರಾವ್, ನವಗಿರಿನಂದ, ಎಸ್. ವಿ. ಪರಮೇಶ್ವರ ಭಟ್ಟ, ಸಿ. ಕೆ. ನಾಗರಾಜ ರಾವ್.

ಅಬ್ಬಬ್ಬಾ, ನಮಗೆ ತುಂಬಾ ಸಾಹಿತಿ ಅಜ್ಜಂದಿರು–ಅಜ್ಜಿಯರು ಎಂದು ಹೆಮ್ಮೆಪಟ್ಟುಕೊಳ್ಳುತ್ತೀರಿ ಅಲ್ಲವೆ?









ಈ ಹಿರಿಯರಲ್ಲಿ ಅನೇಕರು ನಿಮಗಾಗಿ ತುಂಬಾ ಕೆಲಸ ಮಾಡಿದ್ದಾರೆ. ಉದಾಹರಣೆಗೆ ನವಗಿರಿನಂದ ಮುಂತಾದವರು. ಈ ಪಟ್ಟಿಯಲ್ಲಿ ಕವಿಗಳೂ ಕಥೆಗಾರರೂ ವಿದ್ವಾಂಸರೂ ಹೀಗೆ ಎಲ್ಲರೂ ಇದ್ದಾರೆ. ಪುತಿನ., ಕೆಎಸ್‌ನ., ಅಡಿಗ, ಪರಮೇಶ್ವರ ಭಟ್ಟ, ಮುಂತಾದವರು ಕವಿಗಳು. ಪರ್ವತವಾಣಿ ನಾಟಕಕಾರ. ಇಂದಿರಾ, ಅಶ್ವತ್ಥ ಕಥೆಗಾರ–ಕಾದಂಬರಿಕಾರರು. ಉಳಿದವರು ವಿದ್ವಾಂಸರು; ಸಂಶೋಧಕರು. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೆಲಸ ಮಾಡಿರುವವರು; ಮಾಡುತ್ತ ಇರುವವರು.

ಇನ್ನು ಇವರೆಲ್ಲರೂ ಎಲ್ಲಿ ವಾಸವಾಗಿದ್ದಾರೆ ಎನ್ನುವ ಕುತೂಹಲ ನಿಮಗಿದೆ ಅಲ್ಲವೆ?


ಇವರಲ್ಲಿ ಹೆಚ್ಚಿನವರು ಬೆಂಗಳೂರಿನಲ್ಲಿಯೇ ವಾಸವಾಗಿದ್ದಾರೆ. ಬೆಂಗಳೂರು ಉದ್ಯಾನವನದ ನಗರ, ಹವೆ ತಂಪು, ಎಂದು ಎಲ್ಲರೂ ಬಯಸಿರಬೇಕು ಎಂದು ಕಾಣುತ್ತದೆ. ಹಾಗಲ್ಲದೆ ಬಾಲರಾದ ನಿಮ್ಮನ್ನು ಎಂದರೆ ಮೊಮ್ಮಗ–ಮೊಮ್ಮಗಳನ್ನು ಕೈ ಹಿಡಿದು ಕರೆದೊಯ್ಯಲು ಇಲ್ಲಿ ಲಾಲ್‌ಬಾಗ್, ಕಬ್ಬನ್ ಪಾರ್ಕುಗಳೂ ಇವೆಯಲ್ಲ.

ಬೆಂಗಳೂರಿನಲ್ಲಿ ನೆಲೆಸಿರುವವರು: ಮುಗಳಿ, ಜಿ. ವೆಂಕಟಸುಬ್ಬಯ್ಯ, ಪುತಿನ., ಕೆಎಸ್‌ನ., ಅಡಿಗ, ಸುನಂದಮ್ಮ, ಪರ್ವತವಾಣಿ, ಇಂದಿರಾ, ಮೂರ್ತಿರಾವ್ ಮತ್ತು ನಾಗರಾಜ ರಾವ್.

ಮೈಸೂರು: ಕುವೆಂಪು, ಪರಮೇಶ್ವರ ಭಟ್ಟ, ತ. ಸು. ಶಾಮರಾಯ ಮತ್ತು ಅಶ್ವತ್ಥ.

ಕಾರಂತ, ಕಿಞ್ಞಣ್ಣ ರೈ, ಸೇಡಿಯಾಪು, ತುಷಾರಣ್ಣನ ಜಿಲ್ಲೆಯಲ್ಲಿಯೇ ಇದ್ದಾರೆ. ಎಂದರೆ ದಕ್ಷಿಣ ಕನ್ನಡ ಜಿಲ್ಲೆ. ಪಾ. ವೆಂ. ಅಜ್ಜನಿಗೆ ಹುಬ್ಬಳ್ಳಿಯೇ ಚಲೋ ಅಂತೆ. ಎನ್ಕೆ ಅಜ್ಜನಿಗೆ ಧಾರವಾಡದ ಗಾಳಿ ತುಂಬಾ ಹಿತ. ಗೋಕಾಕರಿಗೆ ಮುಂಬಯಿ. ನವಗಿರಿನಂದರಿಗೆ ಮದರಾಸು, ಶಾಂತರಸರಿಗೆ ರಾಯಚೂರು.

ಕರ್ನಾಟಕದ ಎಲ್ಲ ಜಿಲ್ಲೆಗಳ ಹೆಸರೂ ಬರಲಿಲ್ಲ ಎಂದು ಪಿಟಿ ಪಿಟಿ ಎನ್ನುತ್ತೀರಲ್ಲವೆ? ಏನು ಮಾಡುವುದು ? ನಮ್ಮ ಸಾಹಿತಿ ಅಜ್ಜಂದಿರು–ಅಜ್ಜಿಯರು ವಾಸವಾಗಿರುವುದು ಕೆಲವೇ ಜಿಲ್ಲೆಗಳಲ್ಲಿ ಹಾಗೂ ನಗರಗಳಲ್ಲಿ ಮಾತ್ರ. ಅದೂ ಬೆಂಗಳೂರು, ಮೈಸೂರು ನಗರಗಳಲ್ಲಿಯೇ ಜಾಸ್ತಿ. ●

ತುಷಾರಣ್ಣನ ಪತ್ರ

ಪ್ರೀತಿಯ ಚಿಲ್ಟಾರಿಗಳೇ, ಪರೀಕ್ಷೆ ಮುಗಿಸಿ ಖುಶಿಯಿಂದ ಇದ್ದೀರಲ್ಲವೇ? ರಜಾ ಬಂತು ಎಂದು ಆ ಊರು–ಈ ಊರು, ಅಜ್ಜಿ ಮನೆ ಎಂದು ಹೊರಟುಬಿಟ್ಟಿದ್ದೀರೇನೊ? ಅಜ್ಜಿ ಎಂದ ಕೂಡಲೇ ನೆನಪಿಗೆ ಬಂತು–ಹೋದ ತಿಂಗಳ ಸ್ಪರ್ಧೆ: 'ಕಾರಂತಜ್ಜನ ಹಾಗೆ ಕರ್ನಾಟಕದಲ್ಲಿ ಸಾಹಿತಿ ಅಜ್ಜಂದಿರು, ಅಜ್ಜಿಯರು ಯಾರ್‍ಯಾರಿದ್ದಾರೆ?' ತುಂಬಾ ಮಕ್ಕಳು ಉತ್ಸಾಹದಿಂದ ಉತ್ತರಿಸಲು ಪ್ರಯತ್ನಿಸಿದ್ದಾರೆ. ಈ ಸಂಚಿಕೆಯಲ್ಲೆ, ಪಂಚತಂತ್ರದ ಕಥೆಗಳು ಆದ ಮೇಲೆ, ದೊಡ್ಡ ಕಥೆ–ಕಾದಂಬರಿಕಾರರಾದ ಶೇಷನಾರಾಯಣ ಅವರು–'ಕರ್ನಾಟಕದ ಅಜ್ಜ–ಅಜ್ಜಿಯರ' ಬಗ್ಗೆ ಬರೆದಿದ್ದಾರೆ. ನೋಡಿದಿರಲ್ಲವೇ? ಕೆಲವರದು ಫೋಟೋಗಳೂ ಇವೆ. ಈ ಅಜ್ಜ–ಅಜ್ಜಿಯರೆಲ್ಲ ಕರ್ನಾಟಕದ ಹೆಮ್ಮೆ. ದೊಡ್ಡವರಾದ ಮೇಲೆ ಇವರು ಬರೆದಿರುವ ಪುಸ್ತಕಗಳನ್ನು ನೀವೆಲ್ಲ ಓದಬೇಕು.

ಮತ್ತೆ–ಅಜ್ಜ ಅಜ್ಜಿಯರ ಪಟ್ಟಿಮಾಡಲು ನೀವೆಲ್ಲ ತುಂಬ ಪ್ರಯತ್ನಿಸಿದ್ದೀರಿ. ಕೆಲವರು ಒಂದೇ ಹೆಸರು ಬರೆದು ಕಳುಹಿಸಿದ್ದಾರೆ. ಕೆಲವರು ತುಂಬಾ ಹೆಸರುಗಳನ್ನು ಬರೆದಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸಿದವರು ಯಾರು ಯಾರು ಗೊತ್ತೇ?

ಕೊಪ್ಪಳದಿಂದ ವಿಜಯಗೌಡ ಪೊಲೀಸ್ ಪಾಟೀಲ್, ಸೊರಬದಿಂದ ಎನ್. ಕೃಷ್ಣಮೂರ್ತಿ ಆಚಾರ್ಯ, ತಲವಾಟ (ಸಾಗರ)ದಿಂದ ಎಚ್. ಎಸ್. ಚಿದಂಬರ, ಮಂಡ್ಯದಿಂದ ವಿನಯಕೃಷ್ಣ ಕೊಕ್ಕಡ, ಉಡುಪಿಯಿಂದ ಕೆ. ಸಂದೇಶ್, ಕೊಕ್ಕರ್ಣೆಯಿಂದ ಸುರೇಖಾ ನಾಯಕ್, ಕಡೆಂಗೋಡ್ಲು ಕೆ. ಮಂಜುಳಾ, ಶಿವಮೊಗ್ಗದಿಂದ ಕೆ. ಎಸ್. ಶುಭ್ರತ, ಶಿವಮೊಗ್ಗದಿಂದ ಪಿ. ಪದ್ಮಿನಿ, ಬೆಂಗಳೂರಿನಿಂದ ವಿಜಯಶ್ರೀ ಅಡ್ಡಂಗಡಿ, ಮಂಡ್ಯದಿಂದ ಎಂ. ಗೌತಮ್ ಶತಶೃಂಗನಂದನ್, ದಾಂಡೆಲಿಯಿಂದ ಸುಜಾತಾ ನಾಯ್ಕ, ದಾವಣಗೆರೆಯಿಂದ ನವೀನ್, ಬಿ. ಎಸ್. ಮಡಿಕೇರಿಯಿಂದ ಸತೀಶ್‌ಕುಮಾರ್, ಸಿ. ಎಸ್., ಬೆಂಗಳೂರಿನಿಂದ ಚೈತ್ರ ಜಿ., ಮುಧೋಳದಿಂದ ಲೋಕೇಶ ಬನಸೋಡೆ, ಬಿಜಾಪುರ ಜಿಲ್ಲೆಯಿಂದ ಸಂದೀಪ ಹುರುಳಿಕೊಪ್ಪಿ, ಚಿತ್ರದುರ್ಗದಿಂದ ಬಿ. ಕೆ. ಷಡಾಕ್ಷರಿ, ಧಾರವಾಡದಿಂದ ಗಿರೀಶ್ ಕುರ್ತಕೋಟಿ, ಸೊರಬದಿಂದ ಅಶ್ವಿನಿ. ಆರ್. ಕಾರಂತ.

ಪ್ರಿಯ ಪುಟಾಣಿಗಳೇ, ಕಾರಂತಜ್ಜನಿಗೆ ತೊಂಬತ್ತು ವರ್ಷ ವಯಸ್ಸು, ಅವರೊಂದಿಗೆ ಪಟ್ಟಿ ಮಾಡುವ ಅಜ್ಜ–ಅಜ್ಜಿಯರಿಗೆ ಎಪ್ಪತ್ತೈದು ವರ್ಷಕ್ಕಿಂತಲಾದರೂ ಹೆಚ್ಚಾಗಿರಬೇಕು ಅಲ್ಲವೇ? ಶೇಷನಾರಾಯಣ ಅವರು ಪಟ್ಟಿಮಾಡಿರುವವರೆಲ್ಲ ಇಂಥ ಅಜ್ಜ–ಅಜ್ಜಿಯರು. ಅವರು ಮರೆತ ಹೆಸರುಗಳನ್ನು ಪುಟಾಣಿಗಳಾದ ನೀವು ಸೇರಿಸಿದ್ದೀರಿ. ಹೌದು. ಬೆಂಗಳೂರಿನಲ್ಲಿ ವಾಸವಾಗಿರುವ ಹಿರಿಯಜ್ಜ ಬಿ. ಶ್ರೀ ಪಾಂಡುರಂಗ ರಾವ್ ಮಕ್ಕಳಿಗಾಗಿ ಶಾಲೆ ನಡೆಸಿ, ಬೇಕಾದಷ್ಟು ಕಥೆಗಳನ್ನೂ ನಾಟಕಗಳನ್ನೂ ಬರೆದಿದ್ದಾರೆ. ಬಿಜಾಪುರ ಜಿಲ್ಲೆಯ ಕಲ್ಲಳ್ಳಿಯಲ್ಲಿ ಸತ್ಯಕಾಮ ಅಜ್ಜ ಇದ್ದಾರೆ. ಇದೇ ಜಿಲ್ಲೆಯ ಚಡಚಣದಲ್ಲಿ ಡಾ| ಸಿಂಪಿ ಲಿಂಗಣ್ಣ ಅಜ್ಜ ಇದ್ದಾರೆ. ಶಿವಮೊಗ್ಗ ಜಿಲ್ಲೆಯ ಉಳವಿ ಗ್ರಾಮದಲ್ಲಿ ಡಾಕ್ಟರ್ ಡಿ. ವಿ. ರಾವ್ ಅಜ್ಜ ಇದ್ದಾರೆ.

ಬಣ್ಣದ ಚಿತ್ರಗಳ ಪುಸ್ತಕ ಯಾರಿಗೆ ಕೊಡುವುದು? ಈ ಸಲ ಆರು ಪುಟಾಣಿಗಳಿಗೆ ಬಹುಮಾನ: ಕೊಕ್ಕರ್ಣೆಯ ಸುರೇಖಾ ನಾಯಕ್, ಶಿವಮೊಗ್ಗದ ಪಿ. ಪದ್ಮಿನಿ, ದಾವಣಗೆರೆಯ ನವೀನ್ ಬಿ. ಎಸ್., (ನಿನ್ನ ಪೂರ್ತಿ ವಿಳಾಸ ಕೂಡಲೇ ತಿಳಿಸು), ಮಡಿಕೇರಿಯಿಂದ ಸತೀಶ್ ಕುಮಾರ್ ಸಿ. ಎಸ್., ಬೆಂಗಳೂರಿನಿಂದ ವಿಜಯಶ್ರೀ ಅಡ್ಡಂಗಡಿ (ನಿನ್ನ ಎಪ್ರಿಲ್‌ಫೂಲ್ ಶುಭಾಶಯ ತಲ್ಪಿದೆ. ವಿಷ್ ಯೂ ದಿ ಸೇಮ್), ಮತ್ತು ಮಂಡ್ಯದಿಂದ ವಿನಯಕೃಷ್ಣ ಕೊಕ್ಕಡ. ನಿಮಗೆಲ್ಲ ಆದಷ್ಟು ಬೇಗ ಓದಲು ಮಕ್ಕಳ ಪುಸ್ತಕ ಒಂದು ಬರಲಿದೆ–ತುಷಾರಣ್ಣನಿಂದ.

ಮುಂದಿನ ತಿಂಗಳ ಸ್ಪರ್ಧೆ ಯಾವುದು?

'ತುಷಾರ'ದಲ್ಲಿ ಅರ್ಧಪುಟ ಆಗುವ ಒಂದು ಸ್ವಾರಸ್ಯ ಕಥೆ ಅಥವಾ ಹನ್ನೆರಡು ಸಾಲಿನ ಒಂದು ಪದ್ಯ ಬರೆದು ಕಳುಹಿಸಿ. ನೀವು ಬರೆದದ್ದು ಉಳಿದವರಿಗೂ ಇಷ್ಟವಾಗಬೇಕು. ಅಂಥದ್ದು ಬರೆದು ಕಳುಹಿಸಿ.

5 ಮೇ 1992 ತಾರೀಖಿನೊಳಗೆ ಈ ಕೆಳಕಾಣಿಸಿದ ವಿಳಾಸಕ್ಕೆ ಕಳುಹಿಸಿ ಕೊಡಿ–

ತುಷಾರಣ್ಣ (ಬಾಲ ಪ್ರಪಂಚ)

ತುಷಾರ ಮಾಸಪತ್ರಿಕೆ, ಪ್ರೆಸ್ ಕಾರ್ನರ್, ಮಣಿಪಾಲ – 576 119 ದ.ಕ.


ಮಣಿಪಾಲ ಮುದ್ರಣ ಪ್ರಕಾಶನ ಕಲಾವಿದರಾದ


ಶ್ಯಾಮ್–ಮೋನಪ್ಪ

ಚೊಚ್ಚಲು ಕಲಾ ಪ್ರದರ್ಶನ

ಉದಯವಾಣಿ–ತುಷಾರ–ರೂಪತಾರಾ–ತರಂಗ ಪತ್ರಿಕೆಗಳ ಕಲಾವಿದರಾಗಿ ಮಣಿಪಾಲ ಮುದ್ರಣ–ಪ್ರಕಾಶನ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಯುವ ಕಲಾವಿದರಾದ ಶ್ಯಾಮ್ ಮತ್ತು ಮೋನಪ್ಪ ಈ ವರೆಗೆ ಮುಖ್ಯವಾಗಿ ನಮ್ಮ ಪತ್ರಿಕೆಗಳಿಗೆ ರೇಖಾಚಿತ್ರಗಳನ್ನು, ವ್ಯಂಗ್ಯಚಿತ್ರಗಳನ್ನು ರಚಿಸುತ್ತಿರುವವರು.

ಮೋನಪ್ಪ ಕಥೆ–ಕಾದಂಬರಿಗಳಿಗೆ ರೇಖಾಚಿತ್ರ ಬರೆಯುತ್ತಿರುವವರು. ಕೆಲ ವರ್ಷಗಳ ಹಿಂದೆ ಕಲಾ ಶಿಕ್ಷಣ ಪ್ರಾರಂಭಿಸಿ, ಮುಂದುವರಿಸಲಾಗದೆ, ಸ್ವತಃ ಪ್ರಯತ್ನದಿಂದಲೇ ಕಲೆಗಾರಿಕೆಯನ್ನು ಕೈಗೆಟುಕಿಸಿಕೊಂಡವರು. ಈ ಹತ್ತು ವರ್ಷಗಳಲ್ಲಿ ಅವರ ಕೈ ಚೆನ್ನಾಗಿ ಪಳಗಿದೆ. ಭಿನ್ನವಾಗಿ ಗೆರೆಗಳೆಳೆಯುವ ಅಭ್ಯಾಸ ಆಗಿದೆ.






ಶ್ಯಾಮ್ ಮೂಲತಃ ವ್ಯಂಗ್ಯಚಿತ್ರಕಾರರು. ಸ್ವಂತ ಪ್ರಯತ್ನದಿಂದಲೇ ಗೆರೆ ಗೀಚಲು ಪ್ರಾರಂಭಿಸಿದವರು. ವ್ಯಂಗ್ಯಚಿತ್ರಗಳನ್ನು ರಚಿಸುತ್ತ ಕೈ ಪಳಗಿ, ಬೆಂಗಳೂರಿನ ಕೆಲ ಪತ್ರಿಕೆಗಳಲ್ಲೂ ದುಡಿದು ಇದೀಗ ಮಣಿಪಾಲ ಸಂಸ್ಥೆಯವರಾಗಿದ್ದಾರೆ.

ಶ್ಯಾಮ್–ಮೋನಪ್ಪ ಈಗ ಮಣಿಪಾಲ ಸಂಸ್ಥೆಯ ನಾಲ್ಕು ಹೆಮ್ಮೆಯ ಪ್ರಕಟಣೆಗಳಾದ ಉದಯವಾಣಿ, ತುಷಾರ, ರೂಪತಾರಾ ಮತ್ತು ತರಂಗ ಪತ್ರಿಕೆಗಳಿಗೆ ತಮ್ಮ ಕಲಾವಂತಿಕೆಯನ್ನು ಧಾರೆಯೆರೆಯುತ್ತಿದ್ದಾರೆ.

ಸುಮಾರು ಹತ್ತು–ಹನ್ನೆರಡು ವರ್ಷಗಳ ಪತ್ರಿಕಾಲಯ ದುಡಿತದ ಅನುಭವದಿಂದ ಇದೀಗ ಈ ಯುವ ಕಲಾವಿದರು–ತೈಲವರ್ಣ ಸಂಯೋ

'ಕಂಪನ'



– ಶ್ಯಾಮ್

ಜನೆಯ ಕಲಾಕೃತಿಗಳ ರಚನೆಯನ್ನೂ ಮಾಡಿದ್ದಾರೆ. ಇಬ್ಬರೂ ಬದುಕಿನ ಏರಿಳಿತಗಳನ್ನು ಕಂಡಿದ್ದರೂ, ಮೋನಪ್ಪ ಅವರದು ಮೃದು–ಮಧುರ ಅಭಿವ್ಯಕ್ತಿ. ತೆಳುವರ್ಣಗಳಲ್ಲಿ ಸಂಯೋಜನೆಗಳನ್ನು ಸೃಷ್ಟಿಸುತ್ತಾರೆ. ಶ್ಯಾಮ್ ಇನ್ನೂ ದಟ್ಟವಾದ–'ಬೋಲ್ಡ್' ಎನಿಸಿಕೊಳ್ಳುವ ವರ್ಣ ಸಂಯೋಜನೆ–ವಸ್ತುಗಳನ್ನು ಪ್ರಯತ್ನಿಸಿದ್ದಾರೆ.

ಶ್ಯಾಮ್–ಮೋನಪ್ಪ ಅವರ ಚೊಚ್ಚಲು ಕಲಾಪ್ರದರ್ಶನ ಬೆಂಗಳೂರಿನ ಚಿತ್ರಕಲಾ ಪರಿಷತ್ತು ಗ್ಯಾಲರಿಯಲ್ಲಿ ಇದೇ ಏಪ್ರಿಲ್ 2ರಿಂದ 8ರವರೆಗೆ ನಡೆಯಿತು. ಹಿರಿಯ ಕಲಾವಿದರೂ–ಕರ್ನಾಟಕ ಲಲಿತ ಕಲಾ ಅಕೆಡಮಿ ಅಧ್ಯಕ್ಷರೂ ಆಗಿರುವ ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಮತ್ತು ಹಿರಿಯ ಕಲಾವಿದರೂ ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿ–ಪ್ರಿನ್ಸಿಪಾಲ್ ಆಗಿರುವ ಶ್ರೀ ಎಂ. ಎಸ್. ನಂಜುಂಡ ರಾವ್ ಈ ಕಲಾ ಪ್ರದರ್ಶನದ ಉದ್ಘಾಟನೆಯಲ್ಲಿ ಭಾಗವಹಿಸಿ ಈ ಕಿರಿಯರಿಗೆ ಪ್ರೋತ್ಸಾಹದ ಪ್ರಾರಂಭ ನೀಡಿದರು.


ಶ್ಯಾಮ್–ಮೋನಪ್ಪ ಅವರ ಇದೇ ಕಲಾ ಪ್ರದರ್ಶನ ಉಡುಪಿಯಲ್ಲಿ ಮೇ ತಿಂಗಳಲ್ಲಿ 'ತರಂಗ' ದಶಮಾನೋತ್ಸವದ ಅಂಗವಾಗಿ ಇನ್ನೊಮ್ಮೆ ನಡೆಯಲಿದೆ. ಅನಂತರ ಕರ್ನಾಟಕದ ಇತರೆಡೆಯೂ ಆಹ್ವಾನಗಳು ಬಂದರೆ ಆಗ ಬಹುದು.

● ಗೋಪಿ

'ದಿ ವಾಚ್'



– ಮೋನಪ್ಪ





ಪುಸ್ತಕಗಳು ಪುಸ್ತಕಗಳು

ಪುಸ್ತಕಗಳು ಪುಸ್ತಕಗಳು

ಓರಿಯದು ಹರಿಸಿದ ಹೆದ್ದಾರಿ: (ವೈಚಾರಿಕ ಲೇಖನಗಳ ಸಂಗ್ರಹ) ಲೇ: ಕೆ. ಎಸ್. ನಿಸಾರ್ ಅಹಮದ್; ಸ್ವಾತಿ ಪ್ರಕಾಶನ, 117, 5ನೆ ಮೈನ್, ಚಾಮರಾಜಪೇಟೆ, ಬೆಂಗಳೂರು – 560 018. ಬೆಲೆ: ರೂ. 25/-, 152 ಪುಟಗಳು.

ಇದೀಗ ಮಾರಾಟವಾಗಿರುವ, ಬಹುಶಃ 1992ರ ಮುಖ್ಯ ಪ್ರಕಟಣೆಗಳಲ್ಲೊಂದಾಗಬಹುದಾದಂಥ ಕೃತಿ. ಕೆಲವೇ ತಿಂಗಳ ಹಿಂದೆ ಪ್ರಕಟವಾದ ಇದೇ ಲೇಖಕರ 'ಮನದೊಂದಿಗೆ ಮಾತುಕತೆ' ಕೃತಿಯ ಮುಂದಿನ ಬರೆಹಗಳ ಸಂಕಲನ: ವ್ಯಕ್ತಿಗಳು, ಸಾಧನೆಗಳು, ಧರ್ಮ-ಅಧ್ಯಾತ್ಮ, ವಿಜ್ಞಾನ ಸಂಸ್ಕೃತಿ, ಕಲೆಗಳ ಬಗ್ಗೆ ನಿಸಾರ್ ಅವರ ಗಹನವಾದ ಚಿಂತನೆಗಳು. ಎಲ್ಲರೂ ಓದಬೇಕಾದ ಕೃತಿ.





ಪ್ರೀತಿ ಪ್ರಗಾಥ (ಕವಿತೆಗಳು) ಲೇ: ದೊಡ್ಡರಂಗೇಗೌಡ; ಭರತ ಸ್ಮಿತಾ ಪ್ರಕಾಶನ, 'ಕಾವ್ಯಶ್ರೀ' ವಿಶ್ವೇಶ್ವರಯ್ಯ ಬಡಾವಣೆ, ಹೊಸಕೋಟೆ – 562 114. ಬೆಂಗಳೂರು ಜಿಲ್ಲೆ. ಬೆಲೆ: ರೂ. 12/-, 64 ಪುಟಗಳು.

ಬದುಕಿನಲ್ಲಿ ಪ್ರೀತಿ ಮೂಡಿ ಅರಳಿ ಬೆಳೆದು ಹೆಮ್ಮರವಾಗುವುದನ್ನು ಕಾಣುವುದೇ ಒಂದು ಸೊಗಸು. ಆಂಗ್ಲ ಕಾವ್ಯ ಪ್ರಪಂಚದಲ್ಲಿ 'ODE' ಕಾವ್ಯದ ಮಾದರಿಯಲ್ಲಿ ದೊರಂಗೌ ಪ್ರೀತಿಯ ವಿವಿಧ ಮಜಲುಗಳನ್ನು ಸೊಗಸಾಗಿ ಕಾಣಿಸಿದ್ದಾರೆ. ಕನ್ನಡ ಕಾವ್ಯ ಲೋಕಕ್ಕೊಂದು ಉತ್ತಮ ಸೇರ್ಪಡೆ.

ಅಮೀನಪುರದ ಸಂತೆ (ಕಥಾ ಸಂಕಲನ) ಲೇ: ಮಲ್ಲಿಕಾರ್ಜುನ ಹಿರೇಮಠ; ಚೈತನ್ಯ ಪ್ರಕಾಶನ, ವಿದ್ಯಾನಗರ, ಹುನಗುಂದ – 587 118. ಬೆಲೆ: ರೂ. 25/-, 94 ಪುಟಗಳು.

ಉತ್ತರ ಕರ್ನಾಟಕದ ಭಾಷೆ–ಬದುಕು ಕಾಣಿಸುವ, ಸುಂದರ ನೇರ ಶೈಲಿಯ ಹನ್ನೆರಡು ಕಥೆಗಳಿವೆ.



ಲಕ್ಷ್ಮಣರೇಖೆ ದಾಟಿದವರು (ಕವನ ಸಂಕಲನ) ಲೇ: ಡಾ। ವಿಜಯಶ್ರೀ ಸಬರದ; ಪಲ್ಲವಿ ಪ್ರಕಾಶನ, 9-1-245 ಕೆಇಬಿ ರಸ್ತೆ, ಬೀದರ – 585 401. ಬೆಲೆ: ರೂ. 15/-, 60 ಪುಟಗಳು.

ಬಂಡಾಯ ಪ್ರವೃತ್ತಿಯ, ಸ್ತ್ರೀ ಸಮಾಜದ ದಫಿಯ ಇಪ್ಪತ್ತೊಂಬತ್ತು ಕವಿತೆಗಳಿವೆ.

ಲಕ್ಷ್ಮಣರೇಖೆ ದಾಟ ಬಯಸುವ—ದಾಟಿದ ಮಹಿಳಾ ಅಭಿವ್ಯಕ್ತಿ ಸೊಗಸಾಗಿ ಮೂಡಿದೆ.

ಮುಖಾಬಿಲೆ (ಸಣ್ಣ ಕಥೆಗಳು) ಲೇ: ಎಂ.ಎಸ್.ಕೆ. ಪ್ರಭು; ಬೆಲೆ: ರೂ. 25/-, 188 ಪುಟಗಳು.

ಕನ್ನಡ ಕಥಾ ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳನ್ನಿತ್ತು ಪ್ರಸಿದ್ಧರಾಗಿರುವ ಎಂ.ಎಸ್.ಕೆ. ಪ್ರಭು ಅವರ ಆರು ದೊಡ್ಡ ಕಥೆಗಳು. ಪ್ರತಿಯೊಂದೂ ಒಂದು ವಿಶೇಷ ಅನುಭವ ಕೊಡುವಂಥದು.



ವಿಗ್ರಹಗಳು (ಪತ್ತೇದಾರಿ ಕಾದಂಬರಿ) ಲೇ: ಎಂ. ಪಿ. ಮನೋಹರಚಂದ್ರನ್; ಬೆಲೆ: ರೂ. 20/-, 170 ಪುಟಗಳು.

ಹಾಸ್ಯ ಲೇಖಕರಾಗಿ ಬರೆಹ ಕಿಡಿ ಮುಟ್ಟಿಸುವ ಮನೋಹರ ಚಂದ್ರನ್ ಅವರು ಕೆಲ ಕಾದಂಬರಿಗಳನ್ನು ಬರೆದಿದ್ದಾರೆ. ಇದು ಇತ್ತೀಚಿನದು. ಹಾಸ್ಯಮಿಶ್ರಿತ ಪತ್ತೇದಾರಿ: ಓದಿಸಿಕೊಂಡು ಹೋಗುತ್ತದೆ.

ದ. ಕೃ. ಭಾರದ್ವಾಜ (ಜೀವನ ಚರಿತ್ರೆ) ಲೇ: ಕೋ. ವಸಂತ ಲಕ್ಷ್ಮಿ, ಬೆಲೆ: ರೂ. 15/-, 100 ಪುಟಗಳು.

ಕನ್ನಡ ಸಾಹಿತ್ಯ, ವೈದ್ಯ ಲೋಕ, ವಿದ್ಯಾಲೋಕಗಳಿಗೆ ದೊಡ್ಡ ಕೊಡುಗೆಯನ್ನಿತ್ತಿರುವ ದ. ಕೃ. ಭಾರದ್ವಾಜರು ಬದುಕಿದ ಕಥೆ—ಅವರ ನೂರೊಂದನೆಯ ಜನ್ಮ ವರ್ಷದಲ್ಲಿ ಪ್ರಕಟವಾಗಿದೆ. ಉಪಯುಕ್ತ ಕೃತಿ.

– ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು: ಲಿಪಿ ಪ್ರಕಾಶನ, ಬ್ಯೂಗಲ್‌ರಾಕ್ ರಸ್ತೆ, ಬಸವನಗುಡಿ, ಬೆಂಗಳೂರು – 560 004.


ದೇವದಾಸಿ (ಕಾದಂಬರಿ) ಲೇ: ದು. ನಿಂ. ಬೆಳಗಲಿ; ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ–591 304 (ಬೆಳಗಾವಿ ಜಿಲ್ಲೆ). ಬೆಲೆ: ರೂ. 75/-, 450 ಪುಟಗಳು.

ಬಿಜಾಪುರ – ಬೆಳಗಾವಿ ಜಿಲ್ಲೆಗಳಲ್ಲಿ ಪ್ರಚಲಿತವಿರುವ ದೇವದಾಸಿ ಪದ್ಧತಿ ಕುರಿತು ಬರೆದ ಕಾದಂಬರಿ. ಈ ಬದುಕು – ಬೆಳವಣಿಗೆ – ಬದಲಾವಣೆಯ ಅಗತ್ಯ ಕಾಣಿಸುವ ಶಕ್ತಿಯುತ ಪಾತ್ರಗಳ ಸ್ವಾರಸ್ಯ ಕಾದಂಬರಿ.



ಮಾನವಿ (ಕವನಗಳು) ಲೇಖಕರು – ಪ್ರಕಾಶಕರು: ವೇಣುಗೋಪಾಲ ಸೊರಬ; 331 'ಸೀತಾ' ಮೊದಲನೆ 'ಡಿ' ಕ್ರಾಸ್, 6ನೆ ಬ್ಲಾಕ್, ಬನಶಂಕರಿ 3ನೆ ಸ್ಟೇಜ್, ಎರಡನೆ ಫೇಸ್, ಬೆಂಗಳೂರು – 560 085. ಬೆಲೆ: ರೂ. 20/-, 48 ಪುಟಗಳು.

ಪಕ್ವತೆಯನ್ನೆ ಬರೆಹವಾಗಿಸ ಬಯಸುವ ಕವಿ–ವಿಮರ್ಶಕ ವೇಣುಗೋಪಾಲ ಸೊರಬ ಅವರ ಈ ಕಾವ್ಯ ಸಂಪುಟದಲ್ಲಿ ಲೋಕ ಪ್ರಸಿದ್ಧ ಹತ್ತು ಲಾವಣ್ಯವತಿಯರ ಕುರಿತು ಬರೆದ ಕವಿತೆಗಳಿವೆ.




ಗೊಂಬೆಯಾಟವಯ್ಯ (ಜಾನಪದ ಗ್ರಂಥ) ಸಂಪಾದಕರು: ಕೆ. ವೆಂಕಟಸುಬ್ಬಯ್ಯ; ಪ್ರಕಾಶಕರು: ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ (ರಿ.), ಶ್ರೀರಾಮ ಪೇಟೆ, ಕಾಸರಗೋಡು, ದ. ಭಾರತ. ಬೆಲೆ: ರೂ. 45/-, 215 ಪುಟಗಳು.

ಕಾಸರಗೋಡಿನ ಜಾನಪದ ಕಲೆಗಳ ಕುರಿತಾಗಿಯೂ, ದೇಶ

ವಿದೇಶಗಳಲ್ಲಿ ಪ್ರಚಲಿತವಿದ್ದು, ವಿಶ್ವಕಲೆಯಾಗಿರುವ ಜಾಗತಿಕ ಗೊಂಬೆಯಾಟದ ವಿವಿಧ ರೂಪಗಳ ಕುರಿತು ಇಪ್ಪತ್ತೈದು ಪರಿಣತ ಲೇಖನಗಳಿವೆ. ಅತ್ಯುಪಯುಕ್ತ ಕೊಡುಗೆ.

ಹತ್ತೊಂಬತ್ತು ದೈವೀಕ ಕವಿತೆಗಳು: ಲೇ: ಷಹರ್ ಜಾದ್ ರಿಖಿ; ಕನ್ನಡಕ್ಕೆ: ಎಚ್. ಎಸ್. ಶಿವಪ್ರಕಾಶ್, ಮೂಲ ಲೇಖಕರೇ ಪ್ರಕಟಿಸಿದ್ದಾರೆ. 19, ಕರ್ಲೆ ಸ್ಟ್ರೀಟ್, ಬೆಂಗಳೂರು–560 025.

ಪ್ರವಾದಿ ಮೊಹಮ್ಮದ್‌ರ ಪ್ರೇಮದ ಬಗೆಗೆ ಕವಿತೆಗಳನ್ನು ಒಳಗೊಂಡ, ಶ್ರೀಮಂತವಾಗಿ ಸಿದ್ಧವಾಗಿರುವ ಕೃತಿ. ಕನ್ನಡ ಸಾಹಿತ್ಯಕ್ಕೆ ಹೊಸ ಸೇರ್ಪಡೆ.




ಮೌನ ಕಣಿವೆ ಸಾಹಸ ಯಾತ್ರೆ (ಸಾಹಸ ಪ್ರವಾಸ ಕಥನ) ಲೇ: ಎಂ. ಕೆ. ಶ್ರೀಧರ್; ಪ್ರಕಾಶಕರು: ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560 001. ಬೆಲೆ: ರೂ. 20/-, 128 ಪುಟಗಳು.

ಕೇರಳ ರಾಜ್ಯದಲ್ಲಿರುವ 'ಸೈಲೆಂಟ್ ವ್ಯಾಲಿ' (ಮೌನ ಕಣಿವೆ) ಪಶ್ಚಿಮ ಘಟ್ಟದ ಏರಿಳಿತದ ಸಾಹಸ ಯಾತ್ರೆಯ ಸ್ವಾರಸ್ಯ ಕಥನ. ತುಂಬಾ ವಿವರಗಳಿಂದ–ಮಾಹಿತಿಗಳಿಂದ ಕೂಡಿದೆ. ಕನ್ನಡ ಸಾಹಿತ್ಯಕ್ಕೆ ಉತ್ತಮ ಸೇರ್ಪಡೆ.

ಗಂಗೇ ಗಂಡನ ಪದಗಳು (ಕವನ ಸಂಕಲನ) ಲೇ: ಸ. ಜಗನ್ನಾಥ, ಪ್ರಿಯಾ ಪ್ರಕಾಶನ, 100, ಹನ್ನೊಂದನೆಯ ಅಡ್ಡ ರಸ್ತೆ, ಒಂದನೆ ಮೈನ್, ಬಾಪೂಜಿ ನಗರ, ಮೈಸೂರು ರಸ್ತೆ, ಬೆಂಗಳೂರು–560 026. ಬೆಲೆ: ರೂ. 15/- 80 ಪುಟಗಳು.

ಟಿ.ಪಿ. ಕೈಲಾಸಂ ಮತ್ತು ಜಿ. ಪಿ. ರಾಜರತ್ನಂ 'ಪದ'ಗಳಿಂದ ಪ್ರಭಾವಿತರಾದ ಅಂಥವೇ ರೀತಿಯಲ್ಲಿ ರಚಿತವಾದ ಇಪ್ಪತ್ತೇಳು, ಓದಲು ಸರಳ–ಸ್ವಾರಸ್ಯವಾದ ಪದಗಳಿವೆ.



ಕನ್ನಡ ಕ್ರೈಸ್ತ ಲೇಖಕರು ಬೆಲೆ: ರೂ. 30/-, 208 ಪುಟಗಳು.

ಕನ್ನಡ ನುಡಿಗೆ ಮೂಲಭೂತ ಸೇವೆ ನೀಡಿದ ಕ್ರೈಸ್ತ ಪಾದ್ರಿಗಳ ಕೊಡುಗೆ ಮಹತ್ವದ್ದು. ಮತ್ತೆ, ಉತ್ತಂಗಿ ಚೆನ್ನಪ್ಪನವರಿಂದ ಇತ್ತೀಚಿನವರೆಗಿನ ಕ್ರೈಸ್ತ ಲೇಖಕರು ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಇವರೆಲ್ಲರ ಆತ್ಮೀಯ ಪರಿಚಯ ಇಲ್ಲಿದೆ.

ಗುಂಗರು ಕಣಿವೆ (ಸೋಲಿಗರ ಕುರಿತ ಕಾದಂಬರಿ) ಬೆಲೆ: ರೂ. 14/-, 132 ಪುಟಗಳು.

ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ ಮತ್ತು ಹೆಗ್ಗಡದೇವನ ಕೋಟೆ ತಾಲೂಕುಗಳು, ಕೊಡಗು ಜಿಲ್ಲೆಯ ಹಲವೆಡೆ ಇರುವ ಸೋಲಿಗರೆಂಬ ಬುಡಕಟ್ಟಿನ ಜನರನ್ನು ಹತ್ತಿರದಿಂದ ಕಂಡು ಬರೆದ ಸ್ವಾರಸ್ಯ–ಅಪರೂಪ ಕಾದಂಬರಿ.

– ಮೇಲಿನ ಎರಡು ಪುಸ್ತಕಗಳ ಲೇಖಕರು: ಬಿ. ಎಸ್. ತಲ್ವಾಡಿ; ಪ್ರಕಾಶಕರು, ಕರ್ನಾಟಕ ಕ್ರೈಸ್ತ ಜಾನಪದ ಕೇಂದ್ರ, ನಂ. 91-ಬಿ, ಒಂದನೆ ಮೆಯಿನ್, 7ನೆ ಕ್ರಾಸ್, ಗಂಗೊಂಡನಹಳ್ಳಿ, ಬೆಂಗಳೂರು – 560 039.

ನಾವು ನಾಳೆಯ ರವಿಗಳು ಮತ್ತು ಆಸೆಬುರುಕಿ ಆಶಾ (ಎರಡು ಮಕ್ಕಳ ಪದ್ಯ ಮತ್ತು ಕಥೆ ಪುಸ್ತಕಗಳು) ಲೇ: 'ಸಿಸು' ಸಂಗಮೇಶ; ಪ್ರಕಾಶಕರು: ಭಾರತೀ ಸಾಹಿತ್ಯ ಭಂಡಾರ, ಕಾಬ್ರಾಜಿ ಬಜಾರ, ಬಿಜಾಪುರ. ಬೆಲೆ: ರೂ. 8/-, ಮತ್ತು ರೂ. 6/-.

ಓದಲು – ಹಾಡಿಕೊಳ್ಳಲು



ಚೆನ್ನಾಗಿರುವ ಪದ್ಯಗಳ ಪುಸ್ತಕ. ಆರು ಕಥೆಗಳ ಪುಸ್ತಕ. ಹೀಗೆ ಎರಡೂ ತುಂಬಾ ಚೆನ್ನಾಗಿವೆ. ತುಂಬಾ ಬಣ್ಣ ಬಣ್ಣದ ಚಿತ್ರಗಳಿವೆ. ಮಕ್ಕಳು ಓದಬೇಕು.

ಕಡೆಮುಗಿಲ್ ಮುತ್ತಿಗೆ ಕಳಚಿತು!!! (ಕಾದಂಬರಿ). ಲೇ: ಬಿ. ಬಿ. ಬೂದಿಹಾಳಮಠ; ಬೆಲೆ: ರೂ. 16/-, 168 ಪುಟಗಳು.

ಹಿಂದಿನ ಶತಮಾನದ ಸಮಕಾಲೀನ ಬದುಕು, ವಿದ್ಯಾಭ್ಯಾಸ, ವ್ಯಕ್ತಿಗಳು ಕಾಣಿಸುವ ಕಾದಂಬರಿ.


ಗೀತಾಂಜಲಿ (ರವೀಂದ್ರನಾಥ ಠಾಕೂರರ ಕವನ ಸಂಕಲನ). ಅನುವಾದ: ಎಂ. ಜಿ. ಬೂದಿಹಾಳಮಠ. ಬೆಲೆ: ರೂ.15/-, 60 ಪುಟಗಳು.

ಮೇಲಿನೆರಡು ಪುಸ್ತಕಗಳ ಪ್ರಕಾಶಕರು: ಪುಣ್ಯಭೂಮಿ ಪ್ರಕಾಶನ, 212 (ಇಡಬ್ಲ್ಯೂಎಸ್), 2ನೆ ಹಂತ, ಎ. ಡಿ. ಹಳ್ಳಿ, ಬಸವೇಶ್ವರನಗರ, ಬೆಂಗಳೂರು – 560 070.

(ಈಗಿನ ವಿಳಾಸ: C/o ಝಡ್. ಎನ್. ಸಂಗನಾಳಮಠ, ಗೌ. ಪಿಯೂಸಿ ಕಾಲೇಜ್, ಮಲೆಬೆನ್ನೂರು – 577 530.

ಪದರುಗಳು (ಕಾದಂಬರಿ). ಲೇ: ಜಿ. ಆರ್. ಸತ್ಯಲಿಂಗರಾಜು: ವನಶ್ರೀ ಪ್ರಕಾಶನ, ಟಿ.ಎನ್.ಪುರ ರಸ್ತೆ, ಮೈಸೂರು – 570 010. ಬೆಲೆ: 35/-, 220 ಪುಟಗಳು.

ಮಂಡ್ಯಜಿಲ್ಲೆಯ ಒಕ್ಕಲಿಗ ಮನೆತನವೊಂದರ ಏಳುಬೀಳುಗಳನ್ನು ಚಿತ್ರಿಸುವ ಪ್ರಾದೇಶಿಕ ಕಾದಂಬರಿ. ಶೈಲಿ, ಭಾಷೆ, ನೋಟ ಭಿನ್ನವಾಗಿದೆ.



ಓದು ಮಗು ಓದು (ಮಕ್ಕಳ ಪುಸ್ತಕ). ಲೇ: ಜಯವಂತ ಕಾಡದೇವರ; ಮಕ್ಕಳ ಸಂಗಮ ಪ್ರಕಾಶನ, ಬನಹಟ್ಟಿ – 587 311, ಬಿಜಾಪುರ ಜಿಲ್ಲೆ. ಬೆಲೆ: ರೂ.10/-, 48 ಪುಟಗಳು.

ಹನ್ನೆರಡು ಮಂದಿ ಅನುಭವಿ ಲೇಖಕರು ಮಕ್ಕಳಿಗಾಗಿ ವಿವಿಧ ವಿಷಯಗಳ ಬಗ್ಗೆ ಬರೆದಿರುವ ಲೇಖನಗಳಿವೆ. ಮಕ್ಕಳಿಗೆ ಮಾರ್ಗದರ್ಶಕ.

ಕಳೆದುಕೊಂಡದ್ದು (ಕಥಾ ಸಂಕಲನ). ಲೇ: ವಿಜಯಾ ಶ್ರೀಧರ್; ಹೂಸೂಡಿ ಪ್ರಕಾಶನ, ಹಳೇ ಅಂಚೆ ಕಚೇರಿ ರಸ್ತೆ, ಶಿವಮೊಗ್ಗ–2. ಬೆಲೆ: ರೂ. 20/-, 128 ಪುಟಗಳು.

ಸುಂದರ, ಸ್ವಾರಸ್ಯ ಹದಿನೈದು ಹೃದಯಸ್ಪರ್ಶಿ ಕಥೆಗಳಿವೆ. ಉತ್ತಮ ಪ್ರಯತ್ನ.

ವ್ಯವಸ್ಥೆ (ನಾಟಕ) ಲೇ: ಗೊರೂರು ಅನಂತರಾಜು; ಅನಂತಾನಂತ ಪ್ರಕಾಶನ, ಕೆನರಾಬ್ಯಾಂಕ್ ರಸ್ತೆ, ಗೊರೂರು – 573 120, ಹಾಸನಜಿಲ್ಲೆ.

ಸಮಾಜದ ಪ್ರಸ್ತುತ ಓರೆಕೋರೆಗಳಿಗೆ ಕನ್ನಡಿ ಹಿಡಿದಿರುವ ವಸ್ತು. ರಂಗಕ್ಕೆ ಹೊಂದುವ ನಾಟಕ.

ಹೇಗಾದರೂ ಬದುಕು (ವಿಚಾರ ಲಹರಿಗಳು). ಲೇ: ಬಸವರಾಜ್ ಮಠಪತಿ; ಬೆಲೆ: ರೂ.7/-, 50 ಪುಟಗಳು. ಆಗಾಗ ಸ್ಫುರಣಗೊಂಡ ವಿಚಾರ ಲಹರಿಗಳು.

ಅಭಿಮುಖಿ (ವಿವಿಧ ಲೇಖಕರ ಕವನ–ಕಥಾ ಸಂಕಲನ). ಪ್ರಕಾಶಕರು: ಸಿ. ಯನ್. ಶ್ರೀನಿವಾಸರಾವ್; ಶ್ರೀನಿವಾಸ ಏಜನ್ಸೀಸ್, ಗಾಂಧಿನಗರ, ಸುಳ್ಯ (ದ.ಕ.) ಬೆಲೆ: ರೂ. 7/-, 54 ಪುಟಗಳು.

ನರೇಂದ್ರ. ಸ್ವಾಮಿ ವಿವೇಕಾನಂದರ ಬಾಲ್ಯದ ದಿನಗಳನ್ನು ಇಪ್ಪತ್ತೈದು ಸನ್ನಿವೇಶಗಳಲ್ಲಿ ಕಾಣಿಸಿರುವ ಕಿರುಕೃತಿ. ಬೆಲೆ: ರೂ. 8/-, 32 ಪುಟಗಳು ಲೇ: ಮಲ್ಹಾರರಾವ್ ಕುಲಕರ್ಣಿ ಜಾಗಸೂರಕರ. ●

ಮಿನಿಕತೆ

ಒಂದು ಚೂರು ಬಿಸಿಲು

● ಎನ್. ಎಸ್. ರವೀಂದ್ರನಾಥ್

ಮನೆಯೊಂದರಲ್ಲಿ ಗಂಡಹೆಂಡಿರ ನಡುವೆ ಸಂಭಾಷಣೆ ನಡೆದಿತ್ತು:

"ಏನೇ, ರೆಡಿ ಆದ್ಯೇನೇ?"

"ಯಾಕ್ರೀ ಹಾಗೆ ಅವಸರ ಮಾಡ್ತೀರಾ?"

"ನೀನು ಕನ್ನಡಿ ಮುಂದೆ ಕೂತು ಗಂಟೆಗಟ್ಟಲೆ ಆಯ್ತು."

"ಧರ್ಮಾವರಂ ಸಿಲ್ಕ್ ಸೀರೆ ಉಟ್ಕೊಳ್ತಿದೀನ್ರಿ."

"ನಿನಗೇನು ಬಂತೆ ಧಾಡಿ. ಸಾದಾ ಸೀರೆ ಉಡೋದ್ಬಿಟ್ಟು."

"ಹಣೇಗೆ ಟಿಕಳಿ ಒತ್ತಿಕೊಳ್ತಾನೇ ಇದೀನಿ. ನಿಲ್ತಾ ಇಲ್ಲ."

"ಥತ್ ನಿನ್ನ. ದೊಡ್ಡದಾಗಿ ಕುಂಕುಮದ ಬಟ್ಟು ಇಟ್ಕೊಳ್ಳೆ ಸಾಕು."

"ನೆಕ್ಲೇಸ್ ಹಾಕ್ಕೋಳ್ಳಾಣಾಂತಿದ್ದೀನಿ. ಹುಕ್ ಸರಿಯಾಗಿ ಕೂರ್ತಾ ಇಲ್ಲ."

"ತಾಳೀನೇ ಸಾಕು."

"ಉದ್ದನೆ ಜಡೆ ಹೆಣೆಯೋಕೆ ಟೈಂ ಬೇಕಾಗುತ್ತೇರಿ."

"ನಿನಗೆ ಅಷ್ಟು ಕೂದಲೆಲ್ಲೇ ಇದೆ. ಲಕ್ಷಣವಾಗಿ ತುರುಬು ಕಟ್ಟಿಕೋ."

"ಕನಕಾಂಬರದ ದಂಡೆ ನೀವೇ ಮುಡಿಸ್ರೀ."

"ಹ್ಹ ಹ್ಹ... ನಿನ್ನ ಮಾತು ಕೇಳ್ತಾ ಇದ್ರೆ ನಾನೂ ಅಲಂಕಾರ ಮಾಡ್ಕೋಬೇಕು ಅನಿಸುತ್ತೆ."

"ಯಾಕ್ರೀ ಮಾಡ್ಕೋಬಾರದು. ಇಂಥ ಅವಕಾಶ ನಮಗೆಷ್ಟು ಬಾರಿ ಸಿಕ್ಕುತ್ತೆ. ಟೈ ಕಟ್ಕೊಳ್ರಿ."

"ಕುತ್ತಿಗೇಲಿ ಟೈ ಸರಿಯಾಗಿ ನಿಲ್ಲಲ್ವೆ."

"ಪಿನ್ ಹಾಕಿ ಕೂರಿಸಿದ್ರಾಯ್ತಪ್ಪ. ಆ ಲುಂಗಿ ಬಿಟ್ಟು ಇವತ್ತೊಂದು ದಿನ ಪ್ಯಾಂಟು ಶರ್ಟು ಹಾಕ್ಕೊಂಡು ಇನ್ ಮಾಡ್ಕೊಳ್ರಿ."

"ನೋಡಿದ ಜನ ನಗಬಹುದೇ."

"ಜನರ ವಿಷಯ ನಮಗ್ಯಾಕೆ. ನಮ್ಮಷ್ಟಕ್ಕೆ ನಾವು ಖುಷಿಯಾಗಿದ್ರೆ ಸಾಕಪ್ಪ."



"ರಿಕ್ಷಾ ತರಲೇ?"

"ಬೇಡಾರಿ. ಜೊತೆ ಜೊತೆಗೇ ನಡಕೊಂಡು ಹೋಗೋಣ. ಟಾಕೀಸು ಕೂಡಾ ದೂರದಲ್ಲಿಲ್ಲ."

"ಹೋಗಲಿ. ನೀನು ತಯಾರಾದೆಯೋ ಇಲ್ವೋ?"

"ರೆಡಿ. ಇನ್ನೊಂದು ಸ್ವಲ್ಪ ಪೌಡರ್ ಹಚ್ತಾ ಇದೇನೆ."

"ಲಿಪ್‌ಸ್ಟಿಕ್ ಮಾತ್ರ ಬೇಡ ನೋಡು."

"ನನಗಷ್ಟು ತಿಳಿಯೋಲ್ವೆ."

"ನೀನಂದಂತೆ ಟೈ ಕಟ್ಟಿಕೊಂಡು ರೆಡಿಯಾಗೇ ಬಿಟ್ಟೆ. ಇನ್ನು ಹೊರಡೋಣ."

ಮಕ್ಕಳು, ಸೊಸೆ, ಮೊಮ್ಮಕ್ಕಳು ಪ್ರವಾಸ ಹೋಗಿದ್ದರು. ಮನೆಯಲ್ಲಿ ಮುದುಕ ಮುದುಕಿ ಇಬ್ಬರೇ. ಮನೆಗೆ ಬೀಗ ಜಡಿದು ಬೊಚ್ಚುಬಾಯಿ ಬಿಟ್ಟುಕೊಂಡು ನಗುತ್ತಾ ಕೈಕೈ ಹಿಡಿದು ಮ್ಯಾಟನಿ ನೋಡಲು ರಸ್ತೆಗುಂಟ ಜಾಲಿಯಾಗಿ ಹೆಜ್ಜೆ ಹಾಕಿದರು. ●

ನಿಮ್ಮ ತಾರಾಫಲ

(ಜನ್ಮದಿನಕ್ಕನುಗುಣವಾಗಿ)

● ಟ್ರೈನಿ

ಮಾರ್ಚ್ 22ರಿಂದ ಎಪ್ರಿಲ್ 20:

ಶುಕ್ರ ಹಾಗೂ ಗುರು ಗ್ರಹಗಳು ನಿಮಗನುಕೂಲವಾಗಿ ಪರಿಭ್ರಮಿಸತೊಡಗಿವೆ. ಸಣ್ಣಪುಟ್ಟ ಪ್ರೇಮ-ಬಂಧಗಳು ಬಿಗಿಯಾಗಬಹುದು. ತಪ್ಪಭಿಪ್ರಾಯಗಳೂ ದೂರಾಗಬಹುದು. ಉದ್ಯೋಗ ರಂಗದಲ್ಲಿ ನಿರಾಳ ಮುನ್ನಡೆ ಸಾಧಿಸುವಿರಿ. ಕುಟುಂಬಕ್ಕೆ ಹೊಸಬರ ಸೇರ್ಪಡೆ ಮತ್ತು ಯೋಗ್ಯ ವಯಸ್ಕರ ಮದುವೆಯ ಯೋಜನೆಗಳೂ ನಿಷ್ಕರ್ಷೆಯಾಗಬಹುದು. ಯಾವುದೇ ಸಂದರ್ಭದಲ್ಲೂ ದುಡುಕದಿರಿ. ಆರ್ಥಿಕವಾಗಿಯು ಯಾವುದೇ ತಾಪತ್ರಯ ಕಾಡದು. 1, 3, 5, 17, 19, 21, 23 ಮತ್ತು 29—ಅದೃಷ್ಟದ ದಿನಗಳು.

ಎಪ್ರಿಲ್ 21ರಿಂದ ಮೇ 21:

ಎಲ್ಲ ಸಮಸ್ಯೆಗಳ ಇತ್ಯರ್ಥಕ್ಕೆ ಇದು ಯೋಗ್ಯ ಕಾಲ. ತಪ್ಪಭಿಪ್ರಾಯಗಳೂ ಕೌಟುಂಬಿಕ ಸಮಸ್ಯೆಗಳೂ ನಿವಾರಣೆಯಾಗಬಹುದು. ಸ್ವಲ್ಪ ಆತಂಕದ ಕ್ಷಣಗಳು ಎದುರಿಗಿರುವ ಉದ್ಯೋಗ ರಂಗ ಅಥವಾ ವ್ಯಾವಹಾರಿಕ ಕ್ಷೇತ್ರದತ್ತಲೇ ಗಮನ ಕೇಂದ್ರೀಕರಿಸುವುದು ಲೇಸು. ಆದರೆ ನಿಮ್ಮ ಕೈಯಳತೆಯಲ್ಲಿಯೇ ಪರಿಹಾರದ ಸಾಧ್ಯತೆಗಳೂ ಇವೆ. ಸಹವರ್ತಿಗಳು ನಿಮ್ಮ ದಾರಿ ತಪ್ಪಿಸುವ ಯತ್ನ ಮಾಡಬಹುದು. ಶುಭ ಸುದ್ದಿ ದಾರಿಯಲ್ಲಿದೆ, ದೂರ ಪ್ರವಾಸಕ್ಕೆ ತಯಾರಾಗಿರಿ. ಅದೃಷ್ಟದ ದಿನಗಳು—3, 6, 9, 10, 11, 21, 25, 26 ಮತ್ತು 30.

ಮೇ 22ರಿಂದ ಜೂನ್ 21:

ಹೊಸ ಭರವಸೆಯ ದಿನಗಳಿವು. ಕಳೆದ ದಿನಗಳಲ್ಲಿ ಕಳೆದುಕೊಂಡದ್ದನ್ನು ಇಂದು ಮರಳಿ ಪಡೆಯುವಿರಿ. ಕೆಲಸದ ಯೋಜನೆಯೊಂದರಲ್ಲಿ ನಿರೀಕ್ಷಿತ ಗತಿಯಲ್ಲಿ ಪ್ರಗತಿ ಸಾಧಿಸಲು ಸ್ವಲ್ಪ ಕಷ್ಟವಾಗಬಹುದು. ವ್ಯಾಪಾರದ ಬಗ್ಗೆ ಶುಭಸುದ್ದಿ ಕೇಳಬಹುದು. ಮನೆಯ ವಿಷಯಗಳಲ್ಲಿ ಸೌಹಾರ್ದಯುತ ವ್ಯವಹಾರ ಒಳ್ಳೆಯದು. ಹೊಸ ಮತ್ತು ಆಸಕ್ತಿಯ ಜನರನ್ನು ಭೇಟಿ ಮಾಡಲು ಮಾಸದ ಮೊದಲ ಇಪ್ಪತ್ತು ದಿನಗಳು ಭರವಸೆಯ ಸಮಯ. 1, 5, 7, 8, 10, 14, 24, 27, 28 ಮತ್ತು 30—ಅದೃಷ್ಟದ ದಿನಗಳು.

ಜೂನ್ 22ರಿಂದ ಜುಲೈ 23:

ವಿಶೇಷ ಕರೆಯೊಂದರಿಂದ ಸಂಬಂಧಗಳನ್ನು ಗಟ್ಟಿಗೊಳಿಸಲು ಇದು ಯೋಗ್ಯ ಸಮಯ. ಇಂದು ನಿಮ್ಮ ಬದುಕಿಗೆ ಭದ್ರತೆಯನ್ನು ಶುಕ್ರ ಮತ್ತು ಮಂಗಳ ಗ್ರಹಗಳು ಜತೆಯಾಗಿ ನೀಡಬಹುದು. ನೌಕರಿ, ಮನೆಯ ಪರಿಸರದಲ್ಲಿ ಜನಪ್ರಿಯತೆಯೊಂದಿಗೆ ಯಶಸ್ಸು ಸಾಧಿಸುವಿರಿ. ಆರ್ಥಿಕವಾಗಿಯೂ ಯಾವುದೇ ತಾಪತ್ರಯ ಕಾಡದು. ಸಮಯ-ಸಂದರ್ಭಗಳನ್ನು ಸದುಪಯೋಗಿಸಿಕೊಳ್ಳುವುದು ಜಾಣತನವೆನ್ನುವುದನ್ನು ಇಂದು ಮರೆಯದಿರಿ. ಆದರೆ ಮನೆಮಂದಿಯ ಆರೋಗ್ಯದ ಬಗ್ಗೆ ಎಚ್ಚರವಿರಿ. ಅದೃಷ್ಟದ ದಿನಗಳು—1, 3, 5, 6, 10, 14, 16, 20 ಮತ್ತು 30.

ಜುಲೈ 24ರಿಂದ ಆಗಸ್ಟ್ 21:

ಮೊದಲೆರಡು ವಾರಗಳ ಕಾಲ ಸ್ವಲ್ಪ ಕಷ್ಟದಾಯಕವೆನಿಸಬಹುದು. ಅನಾನುಕೂಲಗಳು, ಅಸೂಯಾಪರ ಮಾತುಗಳ ವಿನಿಮಯದ ಸಾಧ್ಯತೆಯೂ ಇದೆ. ಪ್ರಾಮಾಣಿಕ ಪ್ರಯತ್ನಗಳು ಮೊದಲಿಗೆ ಫಲ ನೀಡಲಾರವು. ಆದರೆ ಎರಡನೇ ವಾರದ ಕೊನೆವೇಳೆಗೆ ವಾತಾವರಣ ಬದಲಾಗಬಹುದು. ಸಂತಸದ ಛಾಯೆ ತೋರಬಹುದು. ಜೀವನ ಗತಿಯಲ್ಲೂ ನಿರಾಳ ನಡೆಯಾದರೂ ಅಲ್ಲಲ್ಲಿ ಸಣ್ಣಪುಟ್ಟ ತಡೆಗಳು ಎದುರಾಗುವ ಸಾಧ್ಯತೆ ಇದೆ. ಆರ್ಥಿಕವಾಗಿಯೂ ಹಿಂದೆಂದಿಗಿಂತಲೂ ಹೆಚ್ಚು ಬಳಲಬೇಕಾಗಬಹುದು. 1, 7, 8, 14, 20, 22, 26, ಮತ್ತು 31—ಅದೃಷ್ಟದ ದಿನಗಳು.

ಆಗಸ್ಟ್ 22ರಿಂದ ಸೆಪ್ಟಂಬರ್ 21:

ಮಹತ್ತರವಾದ ದಿನಗಳಿವು, ವಿಶೇಷ ಘಟನೆಗಳೂ ನಡೆಯಬಹುದು. ಬಂಧುತ್ವವನ್ನು ಗಟ್ಟಿ

ಗೊಳಿಸಲು, ಕನಸು ನನಸಾಗಿಸಲು ಈ ದಿನಗಳು ಹೆಚ್ಚು ಪ್ರೋತ್ಸಾಹ ಕೊಡಬಹುದು. ಜೀವನ ಗತಿಯಲ್ಲೂ ನಿಚ್ಚಳ ಚೇತರಿಕೆ, ಆರ್ಥಿಕವಾಗಿಯೂ ಅದೃಷ್ಟದ ಆಟ ನಿಮ್ಮ ಗಮನಕ್ಕೆ ಬರಬಹುದು. ಆಶಯಗಳ ಈಡೇರಿಕೆಯ ದಿಸೆಯಲ್ಲೂ ಜಾಣತನ ಹೆಚ್ಚು ಪರಿಣಾಮಕಾರಿ. ಈ ದಿನಗಳಲ್ಲಿ ನೀವು ವ್ಯಕ್ತಿಗಿಂತ ಹೆಚ್ಚಿನ ಶಕ್ತಿಯಾಗಿ ಬೆಳೆಯಬಹುದು. 1, 6, 7, 9, 10ರಿಂದ 14, 20, 25, 29, ಮತ್ತು 31—ಅದೃಷ್ಟದ ದಿನಗಳು.

ಸೆಪ್ಟಂಬರ್ 22ರಿಂದ ಅಕ್ಟೋಬರ್ 23:

ಉದ್ಯೋಗ ಮತ್ತು ವ್ಯಾವಹಾರಿಕ ರಂಗದಲ್ಲಿ ಅನಿರೀಕ್ಷಿತವಾಗಿ ಯಶಸ್ಸು ಸಾಧಿಸುವಿರಿ. ವಿಶೇಷ ವ್ಯಕ್ತಿತ್ವದ ಓರ್ವರ ಪರಿಚಯ ಲಾಭವೂ ನಿಮಗಾಗಬಹುದು. ಕೌಟುಂಬಿಕ ಸಮಸ್ಯೆಯೊಂದು ಇಡೀ ಕುಟುಂಬವನ್ನು ಒಂದುಗೂಡಿಸಬಹುದು. ಆರ್ಥಿಕವಾಗಿಯೂ ಭದ್ರ ಬದುಕು ನಿಮ್ಮದಾಗಬಹುದು. ವೈಯಕ್ತಿಕ ಆರೋಗ್ಯದ ಬಗ್ಗೆ ಜಾಗರೂಕರಾಗಿರಿ, ಸಣ್ಣಪುಟ್ಟ ನೋವುಗಳಿಂದ ಬಳಲುವ ಸಂಭವವೂ ಇದೆ. ಅದೃಷ್ಟದ ದಿನಗಳು—3, 6, 9, 10, 14ರಿಂದ 20, 27, 30 ಮತ್ತು 31.

ಅಕ್ಟೋಬರ್ 24ರಿಂದ ನವೆಂಬರ್ 21:

ಮಾಸದ ಮೊದಲಿಗೆ ನೌಕರಿ ಮತ್ತು ವ್ಯಾವಹಾರಿಕ ಬದುಕಿನ ಆಗುಹೋಗುಗಳಿಂದ ಮಾನಸಿಕವಾಗಿ ವ್ಯಥಿತರಾಗುವ ಸಂಭವ ಇದೆ. ದೃಢ ಚಿತ್ತದಿಂದ ನಿಧಾನವಾಗಿ ಮುನ್ನಡೆಯುವುದು ಇಂದು ಶ್ರೇಯಸ್ಕರ, ಯಾವ ಕ್ಷಣಕ್ಕೂ ಆವೇಶಕ್ಕೆ ಒಳಗಾಗದಿರಿ. ಈ ಆತಂಕಿತ ದಿನಗಳಲ್ಲಿ ಮಧ್ಯಮಾಸದ ವೇಳೆಗೆ ಬೆಳ್ಳಿ ರೇಖೆ ಗೋಚರಿಸಬಹುದು. ಖರ್ಚಿನ ವ್ಯವಹಾರಗಳಲ್ಲೂ ಹೆಚ್ಚಿನ ಎಚ್ಚರವಿರಲಿ. ಕೈಮೀರಿ ಹೋದ ಪರಿಣಾಮಗಳ ಬಗ್ಗೆ ಚಿಂತಿಸದಿರಿ, ಶೀಘ್ರವೇ ಎಲ್ಲವೂ ಸರಿಹೋಗಬಹುದು. 1, 5, 16, 20, 24, 29 ಮತ್ತು 31—ಅದೃಷ್ಟದ ದಿನಗಳು.

ನವೆಂಬರ್ 22ರಿಂದ ಡಿಸೆಂಬರ್ 21:

ಒಂದು ಬಗೆಯ ಚೇತೋಹಾರಿ, ಸಾಮರಸ್ಯದ ದಿನಗಳಿವು. ಒಳ್ಳೆಯತನದಿಂದಾಗಿ ನೌಕರಿ ರಂಗದಲ್ಲೂ ನಿರಾಳ ಬದುಕು. ಆರ್ಥಿಕ ಬೆಳವಣಿಗೆಗಳೂ ಪ್ರೋತ್ಸಾಹದಾಯಕ. ಕೌಟುಂಬಿಕ ಬದುಕಿನಲ್ಲೂ ಪರಸ್ಪರ ಸಹಕಾರದ ದಿನಗಳು, ಶುಭ ಸುದ್ದಿಯೂ ಬರಬಹುದು. ಪ್ರವಾಸ ಯೋಜನೆಗಳೂ ಯಶಸ್ವಿಯಾಗಬಹುದು. ಮನೆಮಂದಿಯ ಆರೋಗ್ಯದ ಬಗ್ಗೆ ಸ್ವಲ್ಪ ಜಾಗ್ರತೆ ವಹಿಸಿ. ಕಿರಿಯರಿಗೆ ನಿಮ್ಮ ನೆರವು ಅಗತ್ಯವಾಗಬಹುದು. ಅದೃಷ್ಟದ ದಿನಗಳು—1, 4, 8, 9, 10, 15, 20, 28, 29 ಮತ್ತು 31.

ಡಿಸೆಂಬರ್ 22ರಿಂದ ಜನವರಿ 20:

ನಿಚ್ಚಳ ಬೆಳವಣಿಗೆಗಳ ದಿನಗಳು ಎದುರಿಗಿವೆ. ಹೆಚ್ಚಿನೆಲ್ಲ 'ಸಂದರ್ಭಗಳಲ್ಲೂ ತಾಳ್ಮೆ - ತಪ್ಪದೆ, ಯಾವುದೇ ಮುಲಾಜಿಗೆ ಒಳಗಾಗದೆ ಧೈರ್ಯವಾಗಿ ಮುನ್ನಡೆಯಿರಿ. ಆರ್ಥಿಕ ವಿಷಯಗಳಲ್ಲಿ ಕೊಡು-ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಎಚ್ಚರವಿರಲಿ. ಪೂರ್ಣ ಪರಿಶೀಲಿಸಿ, ಹೆರವರ ಅಭಿಪ್ರಾಯ ಪಡೆದೇ ಮುನ್ನಡೆಯುವುದು ಶ್ರೇಯಸ್ಕರ. ಸಂದರ್ಭಗಳನ್ನು ಸದುಪಯೋಗಿಸಿಕೊಳ್ಳುವುದರಲ್ಲಿ ಜಾಣತನವಿದೆ ಎನ್ನುವುದನ್ನು ಮರೆಯದಿರಿ. 1, 3, 7, 8, 14, 15, 21, 25, 29 ಮತ್ತು 31—ಅದೃಷ್ಟದ ದಿನಗಳು.

ಜನವರಿ 21ರಿಂದ ಫೆಬ್ರುವರಿ 19:

ಖುಶಿ ಕೊಡುವ ದಿನಗಳು. ಉದ್ಯೋಗ ಮತ್ತು ವ್ಯಾವಹಾರಿಕ ವಿಷಯಗಳಲ್ಲಿ ಯಶಸ್ವಿಯಾಗಿ ಮುನ್ನಡೆಯಲು, 'ಸ್ನೇಹ ಬಂಧ'ವನ್ನು ಮತ್ತಷ್ಟು ನಿಕಟವಾಗಿಸಲು ಶುಕ್ರ ಮತ್ತು ಮಂಗಳ ಗ್ರಹಗಳು ಹೆಚ್ಚೆಚ್ಚು ಪ್ರೇರಣೆ ನೀಡಬಹುದು. ಆರ್ಥಿಕವಾಗಿ ಯಾವುದೇ ತಾಪತ್ರಯ ಕಾಡದು. ಕೌಟುಂಬಿಕವಾಗಿಯೂ ನೆಮ್ಮದಿಯ ಬದುಕು. ಯೋಗ್ಯ ವಯಸ್ಕರಿಗೆ ಈ ವರ್ಷ ವಿವಾಹ ಯೋಗ ಕೂಡಿ ಬರಬಹುದು. ಕೊನೆಯರ್ಧ ಮಾಸದಲ್ಲಿ ಆಘಾತದ, ಆಶ್ಚರ್ಯಕರ ಘಟನೆಗಳೂ ನಡೆಯಬಹುದು. ಅದೃಷ್ಟದ ದಿನಗಳು—1, 3, 6, 14, 15, 18, 23, 29 ಮತ್ತು 31.

ಫೆಬ್ರುವರಿ 20ರಿಂದ ಮಾರ್ಚ್ 21:

ಸಂಬಂಧಗಳನ್ನು ಬಿಗಿಗೊಳಿಸಲು, ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇದು ಯೋಗ್ಯ ಕಾಲ. ಖುಶಿಕೊಡುವ ರಜಾದಿನಗಳು ಎದುರಿಗಿವೆ. ಮೌಖಿಕ ಸಂದರ್ಶನಗಳಿಂದ ಶುಭ ಸುದ್ದಿ, ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸುವಿರಿ. ಮನೆಯಲ್ಲಿ ಸಂತಸದ ಸಮಾರಂಭವೂ ನಡೆಯಬಹುದು. ಮನೆಯಲ್ಲಿ ಚಿಣ್ಣರ ಬಗ್ಗೆ ಹೆಚ್ಚಿನ ಎಚ್ಚರವಿರಲಿ. ಮಾರ್ಚ್‌ನಲ್ಲಿ ಜನಿಸಿದವರಿಗೆ ಕೊನೆಯರ್ಧ ಮಾಸದಲ್ಲಿ ಅದೃಷ್ಟದ ಸ್ಪಷ್ಟ ಪರಿಚಯವಾಗಬಹುದು. 1, 3, 4, 6, 10, 14, 15, 20, 24, 30 ಮತ್ತು 31—ಅದೃಷ್ಟದ ದಿನಗಳು.

●

ಯಂಡಮೂರಿ ವೀರೇಂದ್ರನಾಥ್

ಮಯೂರಕ್ಕಾಗಿಯೇ ವಿಶೇಷವಾಗಿ ಬರೆದ ಕಾದಂಬರಿ



ಭಾಗ – 1

ಒಂಟಿತನದ ಕಿಡಿಗಳು

ಕನ್ನಡಕ್ಕೆ: ಬೇಲೂರು ಕೃಷ್ಣಕುಮಾರ್

ದೇವಾಲಯಕ್ಕೆ ಅತಿ ಭಕ್ತಿಯಿಂದ ಬರುವ ಮಂದಿ, ಯಾತ್ರೆಗಳೆಂದು ದೂರದೂರ ಹೋಗಿ ಬರುವವರು – ಇವರ ದೇವರ ದರ್ಶನದಿಂದ ಆಗುವುದಾದರೂ ಏನು? ಒಂದು ಕಡೆ ಪುಣ್ಯ ಸಂಪಾದನೆಯ ಪ್ರಯತ್ನ ಇನ್ನೊಂದು ಕಡೆ ಸುಖ ಜೀವನಕ್ಕಾಗಿ, ಅಂತಸ್ತು ಗಳಿಕೆ-ಉಳಿಕೆಗಾಗಿ ಏನು ಬೇಕಾದರೂ ಮಾಡುವ ಪ್ರಯತ್ನ...

ಸಮಾಜದ ಇಬ್ಬಂದಿ ಮುಖದ ದಾಕ್ಷಿಣ್ಯರಹಿತ ಕಟು ನೋಟ – ಈ ವಿಶಿಷ್ಟ ಕಾದಂಬರಿ.

ಸುಪ್ರಸಿದ್ಧ – ಅತಿ ಜನಪ್ರಿಯ ಕಾದಂಬರಿಕಾರ ಯಂಡಮೂರಿ ವೀರೇಂದ್ರನಾಥ್ 'ತುಷಾರ'ಕ್ಕಾಗಿಯೇ ವಿಶೇಷವಾಗಿ ಬರೆದು ಕೊಟ್ಟಿರುವ ಕಾದಂಬರಿ. ಇದು ಪ್ರಕಟವಾಗುತ್ತಿರುವುದು ಇದೇ ಮೊದಲು. 'ತುಷಾರ' ಓದುಗರು ಓದಿ ಆನಂದಿಸಿದ ಮೇಲೆ ಆಂಧ್ರದ ಓದುಗರಿಗೆ ಲಭಿಸಲಿದೆ.

ಅರುಣೋದಯದ ಸಮಯ. ಇನ್ನೂ ನಿದ್ರಿಸುತ್ತಿರುವ ಲೋಕವನ್ನು ರಾತ್ರಿಯೆಲ್ಲಾ ರೆಪ್ಪೆಯನ್ನೂ ಮಿಟುಕಿಸದೆ ಕಾವಲು ಕಾಯ್ದ ನಕ್ಷತ್ರಗಳು ತಾಳ್ಮೆಯನ್ನು ಕಳೆದುಕೊಂಡು, ಜೊಂಪು ಹತ್ತಿ ಕಣ್ಣನ್ನು ಅರೆಮುಚ್ಚುತ್ತಿವೆ. ಸೂರ್ಯಾಗಮನದ ಸೂಚಕವಾಗಿ ಪೂರ್ವ ಕೆಂಪು ಬಣ್ಣಕ್ಕೆ ತಿರುಗುತ್ತಲಿತ್ತು.

ಹೂವಿನ ಬುಟ್ಟಿಯನ್ನು ಹಿಡಿದು ತೋಟದೊಳಕ್ಕೆ ನಡೆದೆ. ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ನಾಲ್ಕು ವರ್ಷದ ದೀಪಿಕ ನನ್ನನ್ನು ಅನುಸರಿಸಿದ್ದಳು. ಕೆಲವು ಹೂವುಗಳಿಗಿನ್ನೂ ಎಚ್ಚರವಾಗಿರಲಿಲ್ಲ. ನಿಧಾನವಾಗಿ ಮೈಮುರಿಯುತ್ತಾ, ಒಂದೊಂದೆ ಎಸಳನ್ನು ಬಿಚ್ಚಕೊಳ್ಳುತ್ತಿದ್ದವು ಕೆಲವು. ರಾತ್ರಿಯೆಲ್ಲಾ ಬೆಳದಿಂಗಳ ಚೆಲುವನ್ನು ಆಸ್ವಾದಿಸಿ ನಗುತ್ತಿರುವ ನಂಜಬಟ್ಟಲು ಹೂಗಳು ಆಕಾಶದಲ್ಲಿನ ನಕ್ಷತ್ರದಂತೆ ಹೊಳೆಯುತ್ತಿವೆ. ಬದುಕಿರುವುದು ಕೆಲವೇ ಸಮಯವಾದರೂ ಪ್ರಕೃತಿಗೆ ಅಂದವನ್ನಿತ್ತೆನೆಂಬ ತೃಪ್ತಿಯಲ್ಲಿ ನೆಲಕ್ಕೆ ಬಿದ್ದೂ ನಗುತ್ತಿರುವ ಪಾರಿಜಾತಗಳು.

ಅಂದವಾಗಿ ಅರಳಿರುವ ಹೂವುಗಳನ್ನು ಕಿತ್ತು ಬುಟ್ಟಿಗೆ ಹಾಕಿಕೊಳ್ಳುತ್ತಾ ಸಾಗಿದ್ದೆ. ತನ್ನ ಪುಟ್ಟ ಕೈಗಳಿಂದ ದೀಪಿಕ ಸುಕುಮಾರ ಪಾರಿಜಾತವನ್ನು ಆರಿಸುತ್ತಿದ್ದಳು. ಮೊಲ್ಲೆ, ನಂಜಬಟ್ಟಲು ಹೂಗಳಿಂದ ಅರ್ಧದಷ್ಟು ತುಂಬಿಕೊಂಡು ಮತ್ತೊಂದು ಪಕ್ಕಕ್ಕೆ ತಿರುಗಿದವನು ಹಾಗೇ ನಿಂತುಬಿಟ್ಟೆ.

ಮಾರನೆ ದಿನಕ್ಕೆ ಅರಳಬಹುದಾದ, ಅರೆಬಿರಿದ ಕೆಂಪು ಗುಲಾಬಿಯ ಮೊಗ್ಗು ಅಂಗೈನ ದಪ್ಪಕ್ಕೆ ಅಂದವಾಗಿ, ಬಿದ್ದ ಮಂಜಿನಲ್ಲಿ ಸ್ನಾನ ಮಾಡಿ ಇನ್ನೂ ಆರದ ಮೈಯಲ್ಲಿ ನಗುತ್ತಾ ನಿಂತಿತ್ತು. ನನ್ನ ಆರಾಧ್ಯದೈವ ವೆಂಕಟೇಶ್ವರನನ್ನು ಆರಾಧಿಸಲು ಇದಕ್ಕಿಂತ ಅಂದವಾದದ್ದು ಈ ತೋಟದಲ್ಲೇ ಇರದು. ಜೇಬಿನಿಂದ ಕತ್ತರಿಯನ್ನು ತೆಗೆದು ಉದ್ದನೆ ತೊಟ್ಟಿರುವಂತೆ ಕತ್ತರಿಸಿದೆ.

"ಅಪ್ಪಾ, ಎಷ್ಟೊಂದು ಚೆನ್ನಾಗಿದೆಯಲ್ಲವೆ. ಇದನ್ನೂ ಆ ದೇವರೇ ಅಲ್ಲವೆ ಮಾಡಿರುವುದು?" ದೀಪಿಕ ಕೇಳಿದಳು. ದೇವರ ಕಥೆಗಳನ್ನು ದಿನಕ್ಕೊಂದು ಗಂಟೆಯ ಕಾಲ ನನ್ನಿಂದ ಕೇಳುವುದು ಅವಳಿಗೆ ಅಭ್ಯಾಸವಾಗಿ ಹೋಗಿದೆ.

"ಹೌದಮ್ಮಾ, ನಾವೆಲ್ಲಾ, ಈ ಗಿಡ, ಹೂವುಗಳು, ಎಲ್ಲಾ ಆ ದೇವರ ಸೃಷ್ಟಿಯಮ್ಮಾ" ಎಂದೆ.

"ಹಾಗಾದರೆ ಇವುಗಳನ್ನು ಹೀಗೆ ಕಿತ್ತರೆ ದೇವರಿಗೆ ಕೋಪ ಬರುವುದಿಲ್ಲವೆ ಅಪ್ಪಾ?" ಕೇಳಿದ ಅವಳ ಮುಗ್ಧ ಕಣ್ಣಿನಲ್ಲಿ ಭಯದ ಛಾಯೆ

ಸುಳಿದಾಡಿತು.

"ಬರುವುದಿಲ್ಲಾಮ್ಮಾ, ಇವುಗಳನ್ನು ಕಿತ್ತಿರುವುದು ಆ ದೇವರ ಪೂಜೆಗಾಗಿ ತಾನೆ. ಎಷ್ಟೇ ಪುಣ್ಯಗಳಿಸಿದರೂ ಆ ಭಗವಂತನ ಪಾದಾರವಿಂದವನ್ನು ಸೇರುವ ಸೌಭಾಗ್ಯ ಸಿಗುವುದಿಲ್ಲಾಮ್ಮಾ. ತೋಟದಲ್ಲಿ ಎಷ್ಟೊಂದು ಹೂಗಳಿದ್ದರೂ ದೇವರ ಪೂಜೆಗೆ ಆರಿಸಿಕೊಂಡಿರುವುದು ಕೆಲವನ್ನು ಮಾತ್ರ." ಆ ಪುಟ್ಟ ತಲೆಗೆ ಅರ್ಥವಾಯಿತೋ, ಇಲ್ಲವೊ. ಆದರೆ ಮುಖದಲ್ಲಿ ಮಾತ್ರ ಆಲೋಚನೆ ತುಂಬಿಕೊಂಡಿತು.

"ಅಪ್ಪಾ, ನನ್ನನ್ನು ಹೂವಿನಂತೆ ಚೆಂದಾಗಿದ್ದೀಯಾ ಅಂತಾರಲ್ಲ. ನನ್ನನ್ನೂ ಆ ದೇವರಿಗೆ ಅರ್ಪಿಸಿದರೆ ಸಂತೋಷಿಸುತ್ತಾನಲ್ಲವೆ?" ಎಂದಳು.

ಅವಳ ಮಾತಿಗೆ ಬೆಚ್ಚಿದೆ. ಕೈಯಲ್ಲಿದ್ದ ಕೆಂಪು ಗುಲಾಬಿಯ ಸ್ಥಾನದಲ್ಲಿ ರಕ್ತ ಜಿನುಗುತ್ತಿತ್ತು.

"ಪಾಪೂ..." ಜೋರಾಗಿ ಕೂಗಿಕೊಂಡೆ. ತಟಕ್ಕನೆ ಎಚ್ಚರವಾಯಿತು. ಅದೊಂದು ಕನಸು. ಸುಮಾರು ಇಪ್ಪತ್ತು ವರ್ಷಗಳಿಂದ ಕಾಡುತ್ತಿರುವ ಕನಸು. ಹಣೆಯ ಮೇಲೆ ಒಸೆದ ಬೆವರನ್ನು ಒರೆಸಿಕೊಂಡು ಗಡಿಯಾರದತ್ತ ನೋಡಿದೆ. ಮೂರು ಗಂಟೆಯಾಗಿತ್ತು.

ಇನ್ನು ನಿದ್ರಿಸುವ ಪ್ರಶ್ನೆಯೇ ಇರಲಿಲ್ಲ. ಎದ್ದು ಸ್ನಾನಾದಿಗಳನ್ನು ಮುಗಿಸಿ ಸಿದ್ಧನಾದೆ. ಸ್ವೆಟರ್ ತೊಟ್ಟು ಮೇಲೆ ಶಾಲನ್ನು ಹೊದ್ದುಕೊಂಡು ಹೊರಕ್ಕೆ ಬಂದು ಕೊಠಡಿಗೆ ಬೀಗವನ್ನು ಹಾಕಿದೆ.

ನವಮಿ ಚಂದ್ರ ಮೋಡದ ಮರೆಯ ಓರೆಯಿಂದ ನೋಡುತ್ತಿದ್ದಾನೆ. ಬೆಳದಿಂಗಳಲ್ಲಿ ಮಂಗಳಂಬಾವಿ ಕಾಟೇಜುಗಳು ತಪಸ್ಸಿನಲ್ಲಿ ಮುಳುಗಿದಂತೆ ಕಾಣಿಸುತ್ತಿವೆ. ನಿಶ್ಶಬ್ದ, ನಡುಗಿಸುತ್ತಿರುವ ಚಳಿಯಲ್ಲಿ ಬೆಚ್ಚನೆ ಉಡುಪು ತೊಟ್ಟು ಒಂಟಿಯಾಗಿ ಆ ನಿಶ್ಶಬ್ದದಲ್ಲಿ ನಡೆಯುತ್ತಿದ್ದರೆ ಎದೆಯ ಬಡಿತ, ಹೆಜ್ಜೆಯ ಸಪ್ಪಳ ಸೇರಿಕೊಂಡು ಯುಗಳಗೀತೆಯನ್ನು ಹಾಡುತ್ತಿರುವ ಭಾವನೆ. ಅಮೃತವರ್ಷಿಣಿಯ ರಾತ್ರಿ ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತಾ. ಮೌನವಾಗಿ ಭಾವನೆಗಳನ್ನು ಹಂಚಿಕೊಳ್ಳುವ ಉದ್ವೇಗ, ಕಾಲದೊಂದಿಗೆ ಒಂದೊಂದೇ ವಯಸ್ಸನ್ನು ದಾಟಿ ಮುಂದಕ್ಕೆ ಹೆಜ್ಜೆಯನ್ನಿಡುತ್ತಾ ಚಲಿಸುತ್ತಿದ್ದೇನೆ.

ತೋಟದ ತುಟ್ಟತುದಿಯನ್ನು ತಲುಪಲು ಹತ್ತು ನಿಮಿಷ ಹಿಡಿಯಿತು. ಮಂಜುಮಿಶ್ರಿತ ಗಾಳಿ ತೆಳುವಾದ ಪರದೆಯಂತೆ ಕಾಣಿಸುತ್ತಿದೆ. ಪರದೆಯ ನಡುವೆ ಅಸ್ಪಷ್ಟವಾಗಿ ಕಾಣಿಸುತ್ತಿರುವ ನಾನಾ ರೀತಿಯ ಗುಲಾಬಿ ಮೊಗ್ಗುಗಳು, ಕತ್ತಲೆಯ ಪರದೆಯನ್ನು ಸೀಳಿಕೊಂಡು ಹೊರ ಪ್ರಪಂಚವನ್ನು ನೋಡಲು ಕಾತರಿಸುತ್ತಾ, ಪೂರ್ವದಂಚಿನಿಂದ ಇಣುಕುವ ಹೊಂಗಿರಣಗಳಿಗೆ ಕಾಯುತ್ತಾ, ಕಚಗುಳಿಯಿಡುವ ಗಾಳಿಯಿಂದ ಪಕಪಕನೆ ನಗುತ್ತಾ, ತಲೆಯಾಡಿಸುತ್ತಾ... ಅಸ್ಪಷ್ಟವಾಗಿ ಕಾಣಿಸುತ್ತಿರುವ ಅವುಗಳ ಭಾವನೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾ ತೋಟದ ಕೊನೆಯಲ್ಲಿರುವ ವ್ಯೂ-ಪಾಯಿಂಟ್‌ನ್ನು ತಲುಪಿದೆ.

ಸುತ್ತಲೂ ಬೆಟ್ಟಗುಡ್ಡಗಳು. ಹಚ್ಚಹಸುರಿನ ಗಿಡಮರಗಳನ್ನು ಮೈದಳೆದ ಬೆಟ್ಟಗುಡ್ಡಗಳು ಕವಿದ ಮಂಜು ತೆರೆಯಿಂದ ಕಪ್ಪಗೆ ಮೆರೆದಿತ್ತು. ಅದರ ನಡುವೆ ಅಲ್ಲಾವುದ್ದೀನ್ ಸೃಷ್ಟಿಸಿದ ಅದ್ಭುತ ಅರಮನೆಯಂತೆ, ದೀಪದಿಂದ ಕಂಗೊಳಿಸುತ್ತಿರುವ ಎಕ್ಸಿಕ್ಯೂಟೀವ್ ಗೆಸ್ಟ್ ಹೌಸ್. ಆ ಪರಿಸರವನ್ನು ಎಲ್ಲಾ ಕೋನಗಳಿಂದಲೂ ನೋಡಿ ಆನಂದಿಸುತ್ತಾ, ನನ್ನ ಪ್ರಯಾಣಕ್ಕೆ ಸಾರ್ಥಕತೆಯನ್ನು ಹೊಂದುತ್ತಾ ಮೈಮರೆತು ಹಾಗೇ ನಿಂತುಬಿಟ್ಟೆ.

ಹಾಗೇ ಅದೆಷ್ಟು ಹೊತ್ತು ಕಳೆಯಿತೋ, ಹತ್ತಿರದಲ್ಲಿ ಆದ ಸಪ್ಪಳದಿಂದ ವಾಸ್ತವಕ್ಕೆ ಬಂದು ಅತ್ತ ನೋಡಿದೆ, ನನ್ನಂತಹ ನಿಶಾಚರ ಯಾರೆಂದು. ಉಟ್ಟಿರುವ ಧೋತಿಯ ಮೇಲೆ ಅಂಗವಸ್ತ್ರವನ್ನು ಹೊದ್ದಿರುವುದನ್ನು ಬಿಟ್ಟರೆ ಮೈಮೇಲೆ ಬೇರೇನು ಇಲ್ಲ. ನಾನು ನಿಂತಿರುವುದನ್ನು ಗಮನಿಸಿದನೋ, ಇಲ್ಲವೋ ತಿಳಿಯದು. ಒಂದು ಪಕ್ಕದಲ್ಲಿ ನಿಂತು ಧ್ಯಾನದಲ್ಲಿ ಮುಳುಗಿದ್ದ.

ಬ್ರಾಹ್ಮೀ ಮುಹೂರ್ತದಲ್ಲಿ ಎಂದರೆ ಸೂರ್ಯೋದಯಕ್ಕೆ ಒಂದೂವರೆ ಗಂಟೆ ಮುಂಚೆಯೇ ಎದ್ದು ಧರ್ಮಾರ್ಥಕ್ಕಾಗಿ, ಅಂದರೆ ಧರ್ಮಕ್ಕೆ ವಿರುದ್ಧವಾಗಿಲ್ಲದಂತಹ ಹಣವನ್ನು ಸಂಪಾದಿಸುವ ವಿಧಾನವನ್ನು ಆಲೋಚಿಸಿ, ಕಾಲಕೃತ್ಯಗಳನ್ನು ಮುಗಿಸಿ ಸ್ನಾನವನ್ನು ಮಾಡಬೇಕು. ಶುದ್ಧವಾದ ವಸ್ತ್ರಗಳನ್ನು ಧರಿಸಿ, ವಿಭೂತಿ-ನಾಮಾದಿಗಳನ್ನು ಧರಿಸಿ, ಸೂರ್ಯೋದಯಕ್ಕೆ ಅರ್ಧ ಗಂಟೆಗೆ ಮುಂಚೆ ಸಂಧ್ಯಾವಂದನೆಯನ್ನು ಪ್ರಾರಂಭಿಸ



ಹೋಗ್ತಿರೋದು ಆಫೀಸಿಗೆ ತಾನೇ? ಪಿಕ್‌ನಿಕ್‌ಗೆ ಅಂದ್ಕೊಂಡೆ...!

ಬೇಕು. ಅರ್ಘ್ಯ ಪ್ರದಾನ ಮಾಡಬೇಕು. ನಂತರ ಗಾಯತ್ರಿ ಮಂತ್ರವನ್ನು ಜಪಿಸಲು ಪ್ರಾರಂಭಿಸ ಬೇಕು.

'ಓಂ, ಭೂ... ಭೂವಸ್ಸುವಃ...'—ಎಂಬ ಪ್ರಣವನ್ಯಾಹೃತಿತ್ರಯದಲ್ಲಿ ಕೂಡಿದ ಗಾಯತ್ರಿ ಯನ್ನು ಜಪಿಸಬೇಕು. ಸ್ಮೃತಿಕಾರರು ಹೇಳಿರುವ ವಿಧಾನವನ್ನು ಇಷ್ಟು ನಿಷ್ಠೆಯಾಗಿ ಪರಿಪಾಲಿಸುವ ವರು ಈ ಕಾಲದಲ್ಲೂ ಇದ್ದಾರಲ್ಲಾ ಎಂದು ಕೊಂಡೆ. ಏಕೋ ಆತನಲ್ಲಿ ಗೌರವಭಾವ ಮೂಡಿತು. ಸಡಿಲಗೊಳ್ಳುತ್ತಿರುವ ಆಚಾರ ವ್ಯವಹಾರಗಳನ್ನು ಮಾಡುತ್ತಿದ್ದಾನೆಂದಲ್ಲ. ಭಗವಂತನ ಆರಾಧನೆಯನ್ನು ಸುಲಭೀಕರಿಸಿ ಕೊಂಡು, ಚುಟುಕವಾಗಿ ಮುಗಿಸಿ ತೃಪ್ತಿಪಡುತ್ತಿ ರುವ ಇಂದಿನ ಸಮಾಜದಲ್ಲಿ, ಪ್ರಾಚೀನ ಸಿದ್ಧಾಂತವನ್ನು ಕಷ್ಟವೆಂದೆನಿಸದೆ ಆಚರಿಸು ತ್ತಿರುವುದಕ್ಕೆ.

ಬಣ್ಣ, ರೂಪ ತಿಳಿಯದಲೆ ಅಸ್ಪಷ್ಟವಾಗಿದ್ದ ಹೂವು, ಗಿಡಗಳು ಬೆಳ್ಳಿ ಬೆಳಕು ಮೂಡುತ್ತಿರು ವಂತೆಯೆ ತಮ್ಮ ಅಸ್ತಿತ್ವವನ್ನು ಸ್ವಲ್ಪ ಸ್ವಲ್ಪವಾಗಿ ಬಹಿರಂಗಗೊಳಿಸುತ್ತಿವೆ. ಗಾಳಿ ಹೂಗಳೊಂದಿಗೆ ಆಟವಾಡುತ್ತಾ, ತುಂಟತನದಿಂದ ಹೂಪದರ ಗಳನ್ನು ಅಲ್ಲಾಡಿಸಿದರೆ, ಮುಸಿ ಮುಸಿ ನಗುತ್ತಾ ಮಂಜಿನ ಬಿಂದು ಕೆಳಕ್ಕೆ ಜಾರದಂತೆ ಸರಿದೂಗಿಸಿ ಕೊಂಡು ನಲಿಯುತ್ತಿರುವುದು ಕಂಡಾಗ ಕೃಷ್ಣ ಶಾಸ್ತ್ರಿಗಳು ಪಕ್ಕದಲ್ಲಿದ್ದಷ್ಟೇ ಆನಂದ.

ಮೂರು ಗಂಟೆಗಳು ಕೆಲವು ಕ್ಷಣಗಳಂತೆ ಕಳೆದ ಮೇಲೆ, ಬೆಳ್ಳಿಯ ರೇಕುಗಳು ಸಂಪೂರ್ಣ ವಾಗಿ ಬಿಚ್ಚಿಕೊಂಡ ನಂತರ, ಶಾಲನ್ನು ತೆಗೆದು, ಬೆಚ್ಚನೆ ಸೂರ್ಯ ಕಿರಣಗಳ ಸ್ಪರ್ಶದ ಆನಂದ ವನ್ನು ಅನುಭವಿಸುತ್ತಾ ಹಿಂದಿರುಗಿದ್ದೆ. ತೋಟ ದಲ್ಲಿ ಬೆಳಗಿನ ವಾಯು ಸೇವನೆಗೆ ಬರುವವರ ಸಂಖ್ಯೆ ಹೆಚ್ಚಾಗತೊಡಗಿತ್ತು. ಅಂತಹ ಜನ ಸಂದಣಿಯ ನಡುವೆಯೂ ಧ್ಯಾನಮುದ್ರೆಯಲ್ಲಿ ಮುಳುಗಿದ್ದ ಆ ವ್ಯಕ್ತಿಯನ್ನು ನೋಡಿ ಕೆಲವರು ಅಪಹಾಸ್ಯ ಮಾಡುವಂತೆ ನಗುತ್ತಾ ಸಾಗುವು ದನ್ನು ಕಂಡು ಬೇಸರವಾಯಿತು.

ಪ್ರಕೃತಿ ಮಾತೆಯ ಸುಂದರ ಮಡಿಲಿಂದ ನಾಗರಿಕ ಜನಾರಣ್ಯದೊಳಕ್ಕೆ ಅಡಿಯಿಟ್ಟೆ. ಉಡ್‌ಲ್ಯಾಂಡ್ಸ್ ಹೊಟೇಲ್‌ನಲ್ಲಿ ಬಿಸಿಬಿಸಿ ಇಡ್ಲಿ, ಕಾಫಿಯಿಂದ ಹೊಟ್ಟೆಯನ್ನು ತುಂಬಿಸುವು ದರ ಮೂಲಕ ಬೆಳಗಿನ ಕಾರ್ಯಕ್ರಮ ಮುಗಿಯು ತ್ತದೆ. ಅನಂತರ ಕಾಟೇಜಿಗೆ ಹೋಗಿ ವಿಶ್ರಾಂತಿ ಯನ್ನು ತೆಗೆದುಕೊಳ್ಳುವುದು.

ವಿಶ್ರಾಂತಿ! ನಗು ಬರುತ್ತದೆ. ಮೂರು ಗಂಟೆಯ ಕಾಲ ಕಲ್ಮಶರಹಿತವಾದ ಪ್ರಕೃತಿಯ ಸೌಂದರ್ಯಾರಾಧನೆಯಲ್ಲಿ ತಪಸ್ಸು ಮಾಡಿ ಶಕ್ತಿಯನ್ನು ಮೈಗೂಡಿಸಿಕೊಂಡವನಿಗೆ ದಿನವೆಲ್ಲಾ ಉತ್ಸಾಹದಿಂದ ಚುರುಕಾಗಿರುವ ಬಲ ಮೈಗೂಡಿರಬೇಕು. ಆದರೆ ಐವತ್ತು ವರ್ಷಕ್ಕೂ ಮಿಗಿಲಾದ ಶರೀರ ಈ ಪರವಶತ್ವಕ್ಕೆ ಅತೀತವಾಗಿ ತನ್ನ ದಾರಿಯನ್ನು ತಾನು ನೋಡಿಕೊಳ್ಳುತ್ತದೆ. ವಿಶ್ರಾಂತಿಯನ್ನು ಬಯಸುತ್ತದೆ.

ಕಾಟೇಜಿನಲ್ಲಿ, ರಸ್ತೆಯಲ್ಲಿ ಜನರ ತರಾತುರಿ. ಬೇಗ ಹೋದರೆ ಚೆನ್ನಾಗಿ ದರ್ಶನ ಆಗುತ್ತದೆಂದು ಅಂತಹ ಚಳಿಯಲ್ಲೂ ಸ್ನಾನಾದಿಯನ್ನು ಮುಗಿಸಿ ಮಕ್ಕಳು, ದೊಡ್ಡವರೂ ಆತುರಾತುರವಾಗಿ ವೈಕುಂಠದತ್ತ ಹೋಗುತ್ತಿದ್ದರು. ಎಲ್ಲರ ಕಣ್ಣಿನಲ್ಲೂ ಏನೋ ಕಾತರ, ಉದ್ವೇಗ. ಅದು ಭಗವಂತನನ್ನು ಪ್ರತ್ಯಕ್ಷವಾಗಿ ನೋಡಲಿರುವೆ ವೆಂಬ ಸಂತೋಷವೆ? ಅವರ ಮನಸ್ಸಿನಲ್ಲಿ ಎಂತಹ ಆಲೋಚನೆಗಳು ಮೂಡುತ್ತಿರ ಬಹುದು? ಎಂತಹ ಆಸೆ ಚಿಗುರಿರಬಹುದು? ದೇವರೆದುರಿಗಾದರೂ ಮನುಷ್ಯನಲ್ಲಿನ

ಅಂತರಾತ್ಮ ಆತ್ಮವಂಚನೆ ಮಾಡಿಕೊಳ್ಳದೆ ನಗ್ನವಾಗಿ ಹೊರ ತೆರೆದಿಡಲು ಪ್ರಯತ್ನಿಸುವರೆ? ಅವರ ಮೆದುಳಿನೊಳಕ್ಕೆ ಹೋಗಿ ಆಲೋಚನಾ ಗ್ರಂಥಿಗಳನ್ನು ವಶಪಡಿಸಿಕೊಂಡು, ಹಿಪೋಕ್ರಸಿ ಯಿಲ್ಲದ ಮನೋಭಾವವನ್ನು ಗ್ರಹಿಸಲು ಸಾಧ್ಯವಾಗುವುದಾದರೆ? ಇಪ್ಪತ್ತು ವರ್ಷದಿಂದ ಇರುವ ನನ್ನ ಆಲೋಚನೆಗೆ, ನನ್ನಲ್ಲಿ ಏಳು ತ್ತಿರುವ ಪ್ರಶ್ನೆಗಳಿಗೆ ಉತ್ತರ ಸಿಗಬಹುದೇನೋ?

ಆಲೋಚನೆಯಲ್ಲೇ ಹೊಟೇಲನ್ನು ತಲು ಪಿದ್ದೆ. ಮೆಟ್ಟಿಲನ್ನೇರುತ್ತಿರುವಂತೆ ದೂರದಲ್ಲಿ ಕಾರಿನಿಂದ ಇಳಿದು ಬರುತ್ತಿರುವ ವ್ಯಕ್ತಿಯ ಮೇಲೆ ನನ್ನ ದೃಷ್ಟಿ ಬಿದ್ದಿತು. ಆತನೂ ನಡೆಯುವುದನ್ನು ಮರೆತು ನನ್ನತ್ತಲೆ ನೋಡುತ್ತಿದ್ದಾನೆ. ಅವನ ಮುಖದಲ್ಲಿ ಆನಂದ, ಆಶ್ಚರ್ಯದ ಭಾವನೆ ಸ್ಪಷ್ಟವಾಗಿತ್ತು.

"ರಾಮೂ" ನಾನೇ ಮೊದಲು ಕೂಗಿದೆ.

"ಏಯ್ ವೆಂಕಟ್. ಎಷ್ಟು ದಿನವಾಯಿತು ನಿನ್ನನ್ನು ನೋಡಿ" ಹತ್ತಿರಕ್ಕೆ ಬಂದು ಅಪ್ಪಿಕೊಳ್ಳು ವಂತೆ ಒತ್ತಿಕೊಂಡು ಕೇಳಿದ.

"ಸುಮಾರು ಇಪ್ಪತ್ತೈದು ವರ್ಷ. ಕಾಲೇಜನ್ನು ಬಿಟ್ಟ ಮೇಲೆ ಇದೇ ಮೊದಲ ಬಾರಿಗೆ ಭೇಟಿ ಆಗುತ್ತಿರುವುದು" ಎಂದೆ. ನನ್ನಂತೆಯೆ ಆತ ನಲ್ಲೂ ಅಂದಿನ ಕಾಲೇಜಿನ ದಿನಗಳು ಜ್ಞಾಪ ಕಕ್ಕೆ ಬರುತ್ತಿರಬೇಕು. ಕಹಿ ಅನುಭವದೊಂದಿಗೆ ಬೆಂದ ಘಟ್ಟ ತಲುಪಿರುವ ಮನುಷ್ಯನಿಗೆ ನಗು ಕೂಡ ಕಲುಷಿತವಾದಂತೆ ಅಸಹಜತೆ ಮೈತಳೆ ದಿರುವಾಗ ಬಾಲ್ಯದ ನೆನಪು ಸುರುಳಿ ಬಿಚ್ಚಿ ಕೊಳ್ಳುತ್ತದೆ. ಆ ನಗು ಕ್ಷಣಿಕವಾಗಿರಬಹು ದಾದರೂ ಅದೆಷ್ಟು ಮಧುರ?

"ಏನೋ, ಏನ್ಮಾಡುತ್ತಿದ್ದೀಯ? ಎಲ್ಲಿ ದ್ದೀಯ? ಮಕ್ಕಳೆಷ್ಟು?" ಪ್ರಶ್ನೆಗಳ ಮಳೆ ಸುರಿಸಿದ.

"ಸದ್ಯಕ್ಕೆ ಹೈದ್ರಾಬಾದಿನಲ್ಲಿದ್ದೇನೆ. ಟ್ರಜರಿ ಯಲ್ಲಿ ಸೂಪರಿಂಟೆಂಡೆಂಟ್. ನಿನ್ನಂತೆಯೇ ನಾನಿನ್ನು ಒಂಟಿಯೇ" ಎಂದೆ.

"ಇದೇನು ಸುಜಾತಳನ್ನು ಮದುವೆಯಾದೆ ಯೆಂದು ಕೇಳಿದೆ. ಅಂದರೆ ಆಗಲಿಲ್ಲಾ ಎನ್ನು?" ಆಶ್ಚರ್ಯದಿಂದ ಕೇಳಿದೆ. ನಾನು ನಕ್ಕು ಸುಮ್ಮ ನಾದೆ. ಮೌನವೆ ಸಮ್ಮತಿಗೆ ಸೂಚನೆ. ನಾನು ಬಯಸಿದಂತೆ ಆತ ತನ್ನ ಪ್ರಶ್ನೆಯಲ್ಲೇ ಉತ್ತರ ವನ್ನು ಕಂಡುಕೊಂಡನೆಂದು ಕಾಣುತ್ತದೆ.

"ಆ ಮದುವೆಯಾಗಲಿಲ್ಲವೆಂದು ಬ್ರಹ್ಮಚಾರಿ ಯಾಗಿಯೇ ಉಳಿದುಬಿಟ್ಟೆಯಾ? ಒಳ್ಳೇ ಮನುಷ್ಯ ಕಣಯ್ಯಾ" ಎಂದ ರಾಮೂ. ಅವನ ಧೋರಣೆ ಯನ್ನು ತಡೆಯುವ ಪ್ರಯತ್ನ ಮಾಡಲಿಲ್ಲ. ಸ್ನೇಹಿತನನ್ನು ನೋಡಿದ ಆನಂದ ಕ್ಷಣಕಾಲ ಮಿಂಚಿದ ಕಣ್ಣಲ್ಲಿನ ಉತ್ಸಾಹ ನನ್ನ ಭಾವನೆ ಯನ್ನು ಹೊರ ತೋರಗೊಡದೆ ನಗುವುದು ಇಪ್ಪತ್ತು ವರ್ಷದಿಂದ ಅಭ್ಯಾಸವಾಗಿ ಹೋಗಿದೆ.

ಸಿನಿಮಾ, ನಾಟಕದಲ್ಲಿ ನಟಿಸುವವರೊಬ್ಬರೇ ನಟರಲ್ಲ. ಈ ಪ್ರಪಂಚದಲ್ಲಿನ ಪ್ರತಿಯೊಬ್ಬರೂ ನಟರೆ. ಆ ನಟರಂತೆ ಇತರೆ ಪಾತ್ರಗಳಲ್ಲಿ ನಟಿಸಲು ಎಲ್ಲರಿಗೂ ಸಾಧ್ಯವಿಲ್ಲ. ಅವರವರದೇ ಪಾತ್ರದಲ್ಲಿ ಅವರವರೇ ನಟಿಸಬೇಕಾದ ಅನಿವಾರ್ಯ.

"ನನ್ನದೇನಿದೆ ಬಿಡು. ಏರಿಳಿತವಿಲ್ಲದ ಜೀವನ. ನಿನ್ನ ವಿಷಯವನ್ನು ಹೇಳು" ಎಂದೆ. ಇದೂ ಮತ್ತೊಂದು ನಟನೆ. ಅವನ ಬಗ್ಗೆ ತಿಳಿದಿದ್ದರೂ ತಿಳಿಯದಂತೆ ಕೇಳುವುದು.

"ನಾನು ಸ್ವಲ್ಪ ದಿನ ಸರಕಾರಿ ಸೇವೆಯಲ್ಲಿದ್ದೆ. ಅದು ಬೇಸರವಾಗಿ, ಅದನ್ನು ಬಿಟ್ಟು ಅಣ್ಣ ನೊಂದಿಗೆ ಸೇರಿಕೊಂಡು ಕಂಟ್ರಾಕ್ಟ್ ಮಾಡ ತೊಡಗಿದೆ. ಬಹಳ ಬೇಗ ಕೈ ಕುದುರಿತು. ಈಗಿರುವ ಆರೋಗ್ಯ ಸಚಿವರು ನನಗೆ ಬಹಳ ಕಾಲದಿಂದಲೂ ಸ್ನೇಹಿತನಾಗಿದ್ದಾರೆ. ಚುನಾವಣೆ ಯಲ್ಲಿ ಆತನಿಗೆ ಬಹಳ ಸಹಾಯ ಮಾಡಿದೆನೆನ್ನು. ಈಗ ಪಕ್ಷದಲ್ಲಿ ಕೂಡ ನನಗೆ ಒಳ್ಳೆಯ ಸ್ಥಾನವಿದೆ. ಪತ್ರಿಕೆಯಲ್ಲಿ ನನ್ನ ಹೆಸರು ಬರುತ್ತಿರು ತ್ತದೆ ನೋಡಲಿಲ್ಲವೆ?" ತುಸು ಜಂಭದಿಂದ ಕೇಳಿದ.

"ಏನೋ ಗಮನಿಸಿಲ್ಲಾ ಕಣೋ" ಎಂದೆ.

"ಆಗಾಗ ಭಾವಚಿತ್ರವೂ ಬರುತ್ತಿರುತ್ತದೆ. ನೋಡಿರಬಹುದು. ಏನೇ ಆಗಲಿ, ಈಗ ನನ್ನ ಜೀವನ ಸುಖವಾಗಿ ಕಳೆಯುತ್ತಿದೆ. ಮೂವರು ಮಕ್ಕಳಲ್ಲಿ ದೊಡ್ಡವಳ ಮದುವೆಯಾಗಿದೆ. ಎರಡನೆಯವಳಿಗೆ ಮದುವೆ ಗೊತ್ತಾಗಿದೆ. ಮೂರನೆಯವನು ಮಗ, ಓದುತ್ತಿದ್ದಾನೆ"— ಎಂದ ಅವನು.

ಅವನ ಸುಖಮಯ ಜೀವನದ ಬಗ್ಗೆ ತಿಳಿಯ ದೇನಿಲ್ಲ. ಟ್ರೈಬಲ್ ವೆಲ್‌ಫೇರ್ ಇಲಾಖೆ

ಯಲ್ಲಿ ಮಾಮೂಲಿ ಗುಮಾಸ್ತನಾಗಿ ಸೇರಿದವನು. ಏನೇನು ಸ್ಮಗ್ಲಿಂಗ್ ಮಾಡಿದನೋ, ಸರಕಾರಿ ಹಣವನ್ನು ಅದೆಷ್ಟು ಗುಳಂ ಮಾಡಿದನೋ, ಕೊನೆಗೆ ಸಿಕ್ಕಿಬಿದ್ದು ಕೆಲಸದಿಂದ ತೆಗೆದುಹಾಕಿದ್ದನ್ನು ಕೂಡ ಕೇಳಿದೆ. ಬೇರೆ ದಾರಿಯಿಲ್ಲದೆ ಕಾಂಟ್ರಾಕ್ಟನ್ನು ಹಿಡಿದು, ರಾಜಕೀಯಕ್ಕೂ ಜಾರಿ ಯಾವ ಸ್ಥಿತಿಗಿಳಿದಿದ್ದಾನೆಂದು ನನಗೆ ತಿಳಿದಿದೆ. ಅವನ ಹಿರಿ ಮಗಳ ಮದುವೆ ಎಗ್ಸಿಬಿಷನ್ ಗ್ರೌಂಡ್‌ನಲ್ಲಿ ನಡೆಯಿತು. ಅದಕ್ಕೆ ಬಹಳಷ್ಟು ಮಂತ್ರಿಗಳು ಹಾಜರಾಗಿದ್ದರು. ಲಕ್ಷಗಟ್ಟಲೆ ಖರ್ಚು ಮಾಡಿದ. ಬಂದ ಅತಿಥಿಗಳಿಗೆ ಬೆಲೆಬಾಳುವ ಗೋಡೆ ಗಡಿಯಾರವನ್ನು ಫಲ ತಾಂಬೂಲದೊಂದಿಗೆ ಕೊಡಲಾಯಿತು.

ರಾಜಕೀಯ ಗೂಂಡಾಗಳ ಸ್ಥಿತಿ, ಅಂತಸ್ತು ಎಷ್ಟರಮಟ್ಟಿಗೆ ಬೆಳೆದಿದೆಯೆಂದು ತಿಳಿದುಕೊಳ್ಳಲು ಆ ಮದುವೆ ಒಂದು ಒಳ್ಳೆ ಉದಾಹರಣೆ.

"ಬಾರೋ, ಹೋಗಿ ತಿಂಡಿ ತಿನ್ನೋಣ. ತಿರುಪತಿಗೆ ಬಂದರೆ ಈ ಹೊಟೇಲ್‌ನಲ್ಲಿ ತಿಂಡಿ ತಿನ್ನದಿದ್ದರೆ ಸಮಾಧಾನವೆ ಆಗೋದಿಲ್ಲ" ಎಂದ.

"ನಿಮ್ಮವರ್ಯಾರನ್ನೂ ಕರೆದುಕೊಂಡು ಬಂದಿಲ್ಲವಾ?" ಎಂದು ಕೇಳಿದೆ.

"ಇಲ್ಲ. ಮಂತ್ರಿಗಳೊಂದಿಗೆ ಬಂದಿದ್ದೇನೆ. ಅವರಿಗೆ ಗಂಡು ಮಗು ಹುಟ್ಟಿದೆ. ಹರಕೆ ತೀರಿಸಲು ಬಂದಿದ್ದಾರೆ. ಈತನೆ ಮುಜರಾಯಿಯನ್ನು ನೋಡಿಕೊಳ್ಳುತ್ತಿರುವುದರಿಂದ ನಮಗಿಷ್ಟು ರಾಜವೈಭೋಗ. ನೀನೆಲ್ಲಿದ್ದೀಯ?"

"ಎಂ.ಬಿ.ಟಿ. ಕಾಟೇಜಲ್ಲಿ".

"ಅರರೆ! ಮೊದಲೆ ಗೊತ್ತಾಗಿದ್ದರೆ ಸುಪ್ರಭಾತ ಸೇವೆಗೆ ಕರೆದುಕೊಂಡು ಹೋಗ್ತಿದ್ದೆ. ಟಿಕೆಟ್ಟಿನ ಹಣ ಉಳಿಯುತ್ತಿತ್ತು."

"ಸುಪ್ರಭಾತ ಸೇವೆಯೆ? ಅಂದರೆ?"

"ಅದೂ ತಿಳಿದಿಲ್ಲವೆ? ನೂರು ರೂಪಾಯಿಯ ಟಿಕೆಟ್ಟನ್ನು ಕೊಂಡರೆ ಇಬ್ಬರು ಒಳಕ್ಕೆ ಹೋಗಬಹುದು. ರಾತ್ರಿ ಎರಡು ಗಂಟೆಗೆಲ್ಲಾ ಅಲ್ಲಿರಬೇಕು. ಮೂರು ಗಂಟೆಗೆ ಸ್ವಾಮಿಗೆ ಸುಪ್ರಭಾತ. ಅವನನ್ನು ಎಬ್ಬಿಸುತ್ತಾರೆ. ತೊಮಾಲ ಸೇವೆ, ಎಲ್ಲವನ್ನೂ ಹತ್ತಿರದಲ್ಲಿದ್ದುಕೊಂಡು ನೋಡಬಹುದು. ತುಂಬಾ ಚೆನ್ನಾಗಿರುತ್ತೆ. ಮುಖ್ಯವಾಗಿ ಮನಸ್ಸಿಗೆ ಹಿತ, ಒಂದು ರೀತಿಯಲ್ಲಿ ತೃಪ್ತಿಯಾಗುತ್ತದೆ. ಆ ವೈಭವವನ್ನು ನೋಡಲು ಎರಡು ಕಣ್ಣು ಸಾಲದು"–ರಾಮು ಕಣ್ಣನ್ನು ಮುಚ್ಚಿಕೊಂಡು ತನ್ಮಯನಾಗಿ ಹೇಳಿದ.

ಎಷ್ಟು ಸಲ ತಿರುಪತಿಗೆ ಬಂದರೂ ದೇವರನ್ನು ನೋಡಿದರೂ ಪ್ರಾಯಶಃ ಪ್ರತಿ ಸಲವೂ ಅವನಿಗೆ ಆ ಅನುಭವ ಹೊಸದಾಗಿರುವುದಾಗಲಿ, ಮೈ ಪುಳಕಿತಗೊಳಿಸುವುದಾಗಲಿ ಇರದು.

"ಏನೋ ಬರ್ತೀಯೋ ಅಥವಾ ಹಾಗೇ ಆಲೋಚಿಸುತ್ತಾ ನಿಂತಿರುತ್ತೀಯೋ?" ರಾಮೂ ಕೇಳುತ್ತಿದ್ದಾನೆ.

"ಸಾರಿ, ಕೇಳಿಸಲಿಲ್ಲ. ಎಲ್ಲಿಗೆ?" ಕೇಳಿದೆ.

"ಹನ್ನೊಂದು ಗಂಟೆಗೆ ಮಂತ್ರಿಗಳು ಕಲ್ಯಾಣೋತ್ಸವ ಮಾಡಿಸುತ್ತಿದ್ದಾರೆ. ಆಗ ಬಂದರೆ ದರ್ಶನ ಚೆನ್ನಾಗಿ ಆಗುತ್ತದೆ. ಅಷ್ಟೇ ಅಲ್ಲ, ಒಳಗಿರುವ ದೇವಸ್ಥಾನಗಳನ್ನೂ ತೋರಿಸುತ್ತೇನೆ. ಮಾಮೂಲಾಗಿ ಆದರೆ ಯಾರನ್ನೂ ಬಿಡುವುದಿಲ್ಲ" ಎಂದ. ಪ್ರೇಮದಿಂದ ವಂಚಿತನಾಗಿ ಹುಚ್ಚನಾಗಿರುವನೆಂದು ಅವನ ಆಲೋಚನೆ ಆಗಿರುವುದರಿಂದ ಅನುಕಂಪದಿಂದ ನೋಡುತ್ತಿದ್ದಾನೆ.

"ನಾನು ಬರುತ್ತೇನೆ."

"ಹದಿನೇಳನೆ ನಂಬರ್ ಕಾಟೇಜಿಗೆ ಬಂದುಬಿಡು. ನಮ್ಮವರೆಲ್ಲಾ ಅಲ್ಲೇ ಇರೋದು" ಎಂದ. ಕಾಫಿ, ತಿಂಡಿಯನ್ನು ಮುಗಿಸಿ ಅವನು ಹೊರಟುಹೋದ. ನನಗೇನು ತಲೆ ಹೋಗುವ ಕೆಲಸವಿಲ್ಲದ್ದರಿಂದ ಸಾವಧಾನವಾಗಿ ಕುಳಿತಿದ್ದೆ. ಪಕ್ಕದ ಮೇಜಿನ ಬಳಿ ನಡೆಯುತ್ತಿದ್ದ ಸಂಭಾಷಣೆ ಕುತೂಹಲವಾಗಿದೆಯೆನಿಸಿತು.

ಬೇಗ ಹೋಗಿ ದೇವರ ದರ್ಶನ ಮಾಡಿಕೊಂಡು ಬಂದ ಒಂದು ಸಂಸಾರ. ಗಂಡ, ಹೆಂಡತಿ, ಇಬ್ಬರು ಮಕ್ಕಳು.

"ಇಷ್ಟು ನಡೆಸಿಕೊಂಡು ಬರುವುದರ ಬದಲು ಅಲ್ಲೇ ಏನೋ ಒಂದನ್ನು ತಿಂದಿದ್ದರೆ ಆಗಿತ್ತು"– ಗಂಡ ರೇಗುತ್ತಿದ್ದ.

"ಇಲ್ಲಿ ಕಾಫಿ, ತಿಂಡಿ ಚೆನ್ನಾಗಿರುತ್ತದೆಂದು ಅಣ್ಣ ಹೇಳಿದ್ದ. ಇರೋದು ಒಂದು ಹೊತ್ತು. ಅದಕ್ಯಾಕೆ ಇಷ್ಟು ರೇಗೋದು? ಹತ್ತಿರವಿರುವ ಕಾಟೇಜ್ ಬೇಡವೆಂದು ಧರ್ಮಶಾಲೆಯಲ್ಲಿಳಿಸಿದರೂ ಬೇಡವೆಂದನೆ? ಕೊನೆ ಪಕ್ಷ ಹೊರಕ್ಕೆ ಬಂದಾಗಲಾದರೂ ಒಳ್ಳೆಯ ಹೊಟೇಲ್‌ನಲ್ಲಿ

ತಿನ್ನಬೇಕೆಂದುಕೊಳ್ಳುವುದು ತಪ್ಪೆ?''—ಆಕೆಯ ಗೊಣಗಾಟ.

"ತಪ್ಪಲ್ಲಾ ಕಣೇ. ನಿಮ್ಮ ಅಣ್ಣನಿಗಿರುವಂತೆ ಎರಡು ಸಂಬಳ ನನಗೆ ಬರುವುದಿಲ್ಲ. ಹೀಗೆ ದುಬಾರಿಯಾದ ಹೊಟೇಲ್‌ನಲ್ಲಿ ಕೊಡಿಸುವ ಶಕ್ತಿ ನನಗಿಲ್ಲ.''

"ಅನ್ನಿ, ಅನ್ನಿ. ಕೆಲಸವಿಲ್ಲದಿದ್ದರೇನು, ನಾನೂ ನಾಲ್ಕು ಹುಡುಗರಿಗೆ ಪಾಠ ಹೇಳಿ ಸಂಪಾದಿಸುತ್ತಿಲ್ಲವೆ. ಕೆಲಸಕ್ಕೆ ಆಳನ್ನೂ ಇಟ್ಟುಕೊಳ್ಳದೆ ಎಲ್ಲವನ್ನೂ ನಾನೇ ನಿಭಾಯಿಸಿಕೊಂಡು ಹೋಗುತ್ತಿಲ್ಲವೆ. ಮದುವೆಯಾದ ಮೇಲೆ ಹೊರಕ್ಕೆ ಬರುತ್ತಿರುವುದು ಇದೇ ಮೊದಲನೆ ಸಲ. ಸ್ವಲ್ಪ ಆರಾಮವಾಗಿರೋಣ ಎಂದುಕೊಳ್ಳುವುದೂ ತಪ್ಪೇ?'' ಎನ್ನುತ್ತಿರುವಂತೆ ಆಕೆಯ ಕಣ್ಣಲ್ಲಿ ನೀರಾಡಿತು.

"ಮಾತನಾಡಿದರೆ ಸಾಕು ಈ ಹೆಂಗಸರಿಗೆ ಇರುವುದೊಂದೇ ಅಸ್ತ್ರ. ಸರಿ, ಸರಿ. ನಿಲ್ಸು ಸಾಕು'' ಕೋಪದಿಂದಲೇ ತಿಂಡಿಗೆ ಆರ್ಡರ್ ಮಾಡಿದ.

ಬೇಗನೆ ಎದ್ದು ಹೋಗಿದ್ದರಿಂದ ಚೆನ್ನಾಗಿ ದರ್ಶನವಾಯಿತೆಂಬ ಸಂತೋಷದಲ್ಲಿ ಬಂದು ಕುಳಿತ ಅವರಲ್ಲಿ ಸ್ವಲ್ಪ ಹೊತ್ತಿನಲ್ಲೇ ಇಂತಹ ಆವೇಶಕ್ಕೊಳಗಾಗಿ ಮನಸ್ಸು ಮುದುಡಿ ಕುಳಿತಿತ್ತು! ಒಮ್ಮೆ ಮೃತ್ಯುವನ್ನು ನೋಡಿದ ಕೆಲವು ದಿನಗಳು ಸ್ಮಶಾನ ವೈರಾಗ್ಯ ಮೂಡುತ್ತದೆ. 'ಜೀವನವೆಂದರೇನು' ಎಂಬ ಆಲೋಚನೆ ಮೂಡುತ್ತದೆ. ಆದರೆ ಅದೇ ಪವಿತ್ರನಾದ ಭಗವಂತನನ್ನು ನೋಡಿದಾಗಲಾದರೂ ಅದು ಸ್ವಲ್ಪ ಸಮಯವಾದರೂ ಮನಸ್ಸನ್ನು ಆಧ್ಯಾತ್ಮಿಕದತ್ತ ಹೊರಳಿಸದಿರುವುದು ಎಂತಹ ವಿಚಿತ್ರ. ಇದು ಮನುಷ್ಯನಲ್ಲಿರುವ ಅಪಕ್ವತೆಯ ಚಿಹ್ನೆಯೆ?

ನನ್ನ ಆಲೋಚನೆಯಿಂದ ನನಗೇ ನಾಚಿಕೆಯಾಯಿತು. ಅವರ ವಯಸ್ಸಿನಲ್ಲಿದ್ದಾಗ ನಾನು ಹೇಗೆ ವರ್ತಿಸಿದ್ದೆ? ನಾನು ತುಂಬಾ ಮೇಲೇರಿದ್ದೇನೆಂಬುದು ಒಂದು ಭ್ರಮೆ. ಮನುಷ್ಯನ ಆಲೋಚನೆ ಕೊನೆಯ ನಿಮಿಷದವರೆಗೂ ಮೇಲೇರುತ್ತಲೇ ಇರುತ್ತದೆ. ಪ್ರಬುದ್ಧತೆಗೆ ಪರಾಕಾಷ್ಠತೆ ಇರದು.

ಒಂದು ಮಧ್ಯಮ ವರ್ಗದ ಕುಟುಂಬದವನಿಗೆ ಬರುವ ಸಂಬಳ—ಸಂಪಾದನೆಯೆ ಅವನನ್ನು



ಮನೆ ಖಾಲಿ ಇರೋದೇನೋ ನಿಜ, ಆದ್ರೆ ಮದ್ದೆ ಆಗದೋರಿಗೆ ಮಾತ್ರ ಕೊಡೋದು!

ಅಲ್ಲೇ ಉಳಿಸಿಕೊಂಡು, ಆ ಸಂಬಳಕ್ಕೆ ಅವನಿಗೆ ವಿವಾಹ ಜೀವನವೆ ದುರ್ಭರವೆನಿಸುತ್ತದೆ. ಅವರಿಗೆ ಅವರ ಪರಿಧಿಯಲ್ಲಿ ಸಾಗುವುದೇ ಕಷ್ಟವೆನಿಸುತ್ತದೆ. ಹಾಗಿರುವಾಗ ಅವರಿಗೆ ಮದುವೆಯಾದ ಹೊಸದರಲ್ಲಿ ಮಧುಚಂದ್ರಕ್ಕೆ ಹೋಗುವುದಾಗಲಿ, ರಜಾದಿನಗಳಲ್ಲಿ ಆನಂದಕ್ಕಾಗಿ ಊರೂರು ತಿರುಗಲು ಆಗದು. ಯಾವಾಗಲೊ ಏನೋ ಒಂದು ನೆಪದಲ್ಲಿ ಇಂತಹ ಸ್ಥಳಗಳಿಗೆ ಬರುವುದು, ಬಂದಾಗ ಆರಾಮವಾಗಿರಬೇಕೆಂದುಕೊಳ್ಳುವುದು ತಪ್ಪಲ್ಲ. ಆಕೆ ಹೇಳಿದಂತೆ ಗಂಡಸು ದುಡಿಯಲು ಹೊರಗೆ ಹೋದಾಗ ಸ್ನೇಹಿತರೊಡನೆ ಹೊಟೇಲಿಗೆ, ಸಿನಿಮಾಕ್ಕೆ ಹೋಗುವುದು ಸಾಮಾನ್ಯ. ತಾನು ಸಂಪಾದಿಸುವಾಗ ತನಗೆ ವಿನೋದ, ಮನರಂಜನೆ ಇರಬೇಕೆಂದುಕೊಳ್ಳುವುದು ತಪ್ಪಲ್ಲ. ಆದರೆ ಆ ವಿನೋದವನ್ನು ತನ್ನ ಕುಟುಂಬದೊಂದಿಗೆ ಹಂಚಿಕೊಂಡರೆ ಚೆನ್ನು ಎಂಬ ಆಲೋಚನೆ ಬಾರದಿರುವುದು ತಪ್ಪು.

ಮತ್ತೊಂದು ಪಕ್ಕದಲ್ಲಿ ಇನ್ನೊಂದು ರೀತಿಯ



"ತಿಳೀತು ಬಿಡಿ... ಬಾರಿನಿಂದ ತಾನೆ?"

ಸಂಭಾಷಣೆ—

"ನಮ್ಮ ಎಂ.ಎಲ್.ಎ.ರವರಿಂದ ವಶೀಲಿ ಪತ್ರ ತೆಗೆದುಕೊಂಡು ಬಂದಾಗಲೆಲ್ಲಾ ಕ್ಷಣವೆ ಕಾಟೇಜ್ ಸಿಗುತ್ತಿತ್ತು. ಗರ್ಭಗುಡಿಯವರೆಗೂ ನೇರವಾಗಿ ಹೋಗಬಹುದಿತ್ತು. ಈಗ ಎಲ್ಲ ದಕ್ಕೂ ಕ್ಯೂ, ಹಣದಲ್ಲೇ ಎಲ್ಲಾ ಕೆಲಸ. ಆ ರಾಮ ರಾವ್ ಬಂದು ಹೀಗೆಲ್ಲಾ ತರಲೆ ಮಾಡಿಟ್ಟು ಹೋದ. ಪ್ರಸಾದಕ್ಕೂ ಕ್ಯೂ. ಅದಕ್ಕೆ ಟಿಕೆಟ್. ಅದಕ್ಕೂ ಸಾಲುಗಟ್ಟಿ ನಿಲ್ಲಬೇಕು"—ದೊಡ್ಡ ಮನುಷ್ಯನೊಬ್ಬ ಹೇಳುತ್ತಿದ್ದ.

"ನನಗೇನೋ ಇದೇ ಒಳ್ಳೆಯದೆನಿಸುತ್ತದೆ. ಭಗವಂತನ ಸಾನ್ನಿಧ್ಯದಲ್ಲಿ ಅಡ್ಡ ದಾರಿ ಇಲ್ಲದೆ ಸಾಲುಗಟ್ಟಿ ನಿಂತರೆ ಕೆಲಸ ಅಚ್ಚುಕಟ್ಟಾಗಿ ಸಾಗುತ್ತದೆ. ಹೀಗಿರುವುದೇ ಒಳ್ಳೆಯದು" ಎಂದ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ.

"ಈಗ ಮಾತ್ರ ಅಂತಹುದೇನೂ ನಡೆಯು ತ್ತಿಲ್ಲವೆ? ಸುಪ್ರಭಾತ ಸೇವೆಗೆ ಟಿಕೆಟ್ ಕೇಳಿದರೆ ಇಲ್ಲವೆಂದರು. ಎಲ್ಲವನ್ನೂ ಮಂತ್ರಿಗಳ ನೆಂಟ ರಿಷ್ಟರಿಗೆ ಕೊಟ್ಟರಂತೆ. ನಡೆಯುವುದೆಲ್ಲಾ ನಡೆಯುತ್ತಲೇ ಇರುತ್ತದೆ. ಅದನ್ನು ತಡೆಯಲು ಯಾರಿಗೆ ತಾನೆ ಸಾಧ್ಯ?"

"ಅದೂ ನಿಜವೆನ್ನಿ. ಸ್ವಲ್ಪ ಮಟ್ಟಿಗಾದರೂ ಬದಲಾವಣೆಯಿದೆಯಲ್ಲವೆ. ಉಚಿತ ಭೋಜನ ವಿರುವುದರಿಂದ ಬಡವ ಭಕ್ತರಿಗೂ ದೈವ ದರ್ಶನಕ್ಕೆ ಅನುಕೂಲವಾಗಿದೆ. 'ವೈಕುಂಠ', ದೇವರ ದರ್ಶನಕ್ಕೆ ಹೋಗಲು ಕಾಯುವ ಸ್ಥಳವನ್ನು ಅಚ್ಚುಕಟ್ಟಾಗಿ ಮಾಡಿರುವುದರಿಂದ ಎಷ್ಟು ಹೊತ್ತು ಕಾದರೂ ಕಷ್ಟವೆನಿಸದು."

"ಮಾಡಿದ್ದಾರೆ. ಇದರಿಂದ ಎಷ್ಟು ಜನ ಯಾವ್ಯಾವ ರೀತಿಯಲ್ಲಿ ಲಾಭವನ್ನು ಹೊಂದು ತ್ತಿದ್ದಾರೋ".

"ನಿಜವೆ." ಅವರ ಸಂಭಾಷಣೆ ದೇವಾಲಯ ದಲ್ಲಿ ನಡೆಯಬಹುದಾದ ಅಪಚಾರದ ಬಗ್ಗೆ ಸಾಗಿತ್ತು. ಎಲ್ಲವನ್ನೂ ಕೇಳುತ್ತಾ ಬಹಳ ಹೊತ್ತು ಕುಳಿತಿದ್ದೆ.

ಬಿಲ್ಲಿನ ಹಣವನ್ನು ಕೊಟ್ಟು ಕಾಟೇಜನ್ನು ಸೇರಿದೆ. ಸಮಯ ಎಂಟಾಗುವುದರಲ್ಲಿತ್ತು. ಹತ್ತು ಗಂಟೆಗೆ ಅಲಾರಾಂ ಇಟ್ಟು ಮಲಗಿ ಕೊಂಡೆ. ಆಯಾಸವಾಗಿತ್ತೇನೋ ತಕ್ಷಣವೆ ನಿದ್ರೆ ಹತ್ತಿತು. ಬಹಳ ದಿನಗಳ ನಂತರ ಸುಜಾತಾ ಕನಸಿನಲ್ಲಿ ಕಾಣಿಸಿಕೊಂಡಳು.

ಆಯಾಸದಿಂದ ಏದುಸಿರು ಬಿಡುತ್ತಾ ಬೆಟ್ಟವನ್ನು ಹತ್ತುತ್ತಿದ್ದಾಳೆ. ಕೈಗೆಟುಕುವ ದೂರದಲ್ಲಿ ಹಿಂಬಾಲಿಸುತ್ತಿದ್ದೆ. ಅವಳು ನೇರ ವಾಗಿ ದೇವಸ್ಥಾನದೊಳಕ್ಕೆ ಹೋದಳು. ನಾನು ಹೋಗುವ ವೇಳೆಗೆ ದೊಡ್ಡ ಕ್ಯೂ ಬೆಳೆದಿತ್ತು. ಸುಜಾತಾ ಎಲ್ಲಿಯೂ ಕಾಣಿಸಲಿಲ್ಲ. ಕ್ಯೂನಲ್ಲೆಲ್ಲಾ ಹುಡುಕಾಡಿದೆ. "ನಿಮ್ಮಾಕೆ ನೇರವಾಗಿ ಗರ್ಭ ಗುಡಿಗೆ ಹೋದರು"—ಯಾರೋ ಹೇಳಿದರು. ಎಲ್ಲರನ್ನೂ ಪಕ್ಕಕ್ಕೆ ತಳ್ಳುತ್ತಾ ಒಳಕ್ಕೆ ಹೋದೆ. ಭಗವಂತನ ಪಾದಾರವಿಂದದ ಬಳಿಯಲ್ಲಿ ಸುಜಾತಾ ಬಿದ್ದಿದ್ದಳು. ಎಚ್ಚರಿಸಿದರೂ ಏಕೋ ಏಳಲಿಲ್ಲ. ಕೂಗಿದರೂ ಉತ್ತರಿಸಲಿಲ್ಲ. ನನಗೆ ದುಃಖ ಒತ್ತರಿಸಿ ಬಂದಿತು. "ಪಾಪ ಪ್ರಾಣ ಹೋದಂತಿದೆ" ಅಲ್ಲಿದ್ದವರು ಯಾರೋ ಹೇಳಿದರು. "ಎಂತಹ ಅದೃಷ್ಟವಂತೆ. ದೇವ ರೆದುರೇ ಹೋಗಿದ್ದಾಳೆ. ಮೋಕ್ಷ ಸಿಕ್ಕಿದೆ" ಎನ್ನುತ್ತಾ ಬಂದು ಅವಳ ಕಾಲಿಗೆ ನಮಸ್ಕರಿಸು ತ್ತಿದ್ದಾರೆ.

ಸತ್ತು ಹೋದಳೆ? ಇಲ್ಲ ಸುಜಾತಾ ಸತ್ತಿಲ್ಲ. ಇಲ್ಲಾ... ಕೂಗುತ್ತಾ ಬೆಚ್ಚಿ ನಿದ್ರೆಯಿಂದ

ಎಚ್ಚೆತ್ತೆ. ಮುಖ ಕಣ್ಣೀರಿನಿಂದ ನೆನೆದು ಹೋಗಿತ್ತು. ರಾಮೂ ಸುಜಾತಾಳ ನೆನಪನ್ನು ಕೆದಕಿದ್ದ. ಮನಸ್ಸಿನ ಮೂಲೆಯೊಂದರಲ್ಲಿ ಉಳಿದಿದ್ದ ಅವಳ ಯೋಚನೆ ಕನಸಿನಲ್ಲಿ ಸಾಕ್ಷಾತ್ಕರಿಸಿತ್ತು.

ಸಮಯ ಒಂಬತ್ತೂವರೆ ಕೂಡ ಆಗಿರಲಿಲ್ಲ. ಎದ್ದು ವರಾಂಡಕ್ಕೆ ಬಂದೆ. ಪಕ್ಕದ ಕಾಟೇಜಿನಿಂದ ನಗು ಕೇಳಿ ಬರುತ್ತಿತ್ತು. ಅತ್ತ ನೋಡಿದೆ.

ಆ ಹುಡುಗಿಯನ್ನು ಬಂದಾಗಿನಿಂದ ಗಮನಿಸುತ್ತಿದ್ದೇನೆ. ವಯಸ್ಸು ಹದಿನಾರಿರಬಹುದು. ಜರಿ ಲಂಗ, ರವಿಕೆ, ಮೇಲೆ ಜಾರ್ಜೆಟ್ ದಾವಣಿ ಹಾಕಿಕೊಂಡಿದ್ದಳು. ನೋಡುವುದಕ್ಕೆ ದಂತದ ಬೊಂಬೆಯಂತಿದ್ದಳು. ನಡೆಯುತ್ತಿದ್ದರೆ ಗೆಜ್ಜೆಯ ಸಪ್ಪಳ ಕರ್ಣಾನಂದಕರವಾಗಿದ್ದು, ನಗುತ್ತಿದ್ದರೆ ವೀಣೆಯನ್ನು ನುಡಿಸುತ್ತಿರುವಂತೆ ಎನಿಸುತ್ತದೆ. ನನ್ನ ದೀಪಿಕಳನ್ನು ಹೇಗೆ ರೂಪಿಸಿಕೊಂಡಿದ್ದೆನೋ ಥೇಟ್ ಅವಳೂ ಹಾಗೇ ಇದ್ದಳು. ಅದಕ್ಕೇ ಏನೋ ಎರಡು ದಿನದಿಂದ ಅವಳು ಕಂಡಾಗಲೆಲ್ಲಾ ಯಾರೇನು ಅಂದುಕೊಳ್ಳುತ್ತಾರೋ ಎಂದು ಆಲೋಚಿಸದೆ ತದೇಕಚಿತ್ತದಿಂದ ನೋಡುತ್ತಿದ್ದೆ.

ಅವಳ ಪಕ್ಕದಲ್ಲಿರುವ ಹುಡುಗರು ಏನಾಗಬೇಕೋ, ಒಟ್ಟಿನಲ್ಲಿ ಅವರು ಯಾವಾಗಲೂ ಅವಳನ್ನು ನಗಿಸುತ್ತಿರುತ್ತಾರೆ. ಏಕೋ ಆ ದೃಶ್ಯ ನನಗೆ ಬಹಳ ಮೆಚ್ಚುಗೆಯಾಗಿತ್ತು. ಹಾಗೇ ನೋಡುತ್ತಾ ನಿಂತುಬಿಟ್ಟೆ.

ಹತ್ತೂವರೆಗೆ ನನ್ನ ಕಾಟೇಜನ್ನು ಬಿಟ್ಟು ಹದಿನೇಳನೆ ನಂಬರಿನ ಕಾಟೇಜನ್ನು ತಲುಪಿದೆ. ತುಂಬಾ ಜನಜಂಗುಳಿಯಿಂದ ಕೂಡಿತ್ತು. ಪತ್ರಿಕೆಯಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವ ಮುಖಗಳೇ ಕಾಣಿಸುತ್ತಿದ್ದವು. ರಾಮೂ ನನ್ನನ್ನು ನೋಡಿ ಆದರದಿಂದ ಸ್ವಾಗತಿಸಿದ. ತನ್ನ ಚಡ್ಡಿ ಸ್ನೇಹಿತನೆಂದು ಎಲ್ಲರಿಗೂ ಪರಿಚಯ ಮಾಡಿದ. ಆ ಸ್ವಲ್ಪ ಹೊತ್ತಿನಲ್ಲೇ ರಾಮುವಿನ ಸ್ಥಿತಿಗತಿಗಳು ಅರ್ಥವಾಗಿತ್ತು. ಅವನ ಸ್ನೇಹಿತನಾಗಿ ನನ್ನನ್ನು ಬಹು ಮರ್ಯಾದೆಯಿಂದ ಮಾತನಾಡಿಸಿದರು.

ಹನ್ನೊಂದು ಗಂಟೆಗೆ ಕಾರಿನಲ್ಲಿ ಹೊರಟು ದೇವಸ್ಥಾನದ ಹತ್ತಿರ ಹೋದೆವು. ಮಂತ್ರಿಗಳ ಕುಟುಂಬ ಇನ್ನೂ ಬಂದಿರಲಿಲ್ಲ. ಅರ್ಧ ಗಂಟೆ ತಡವಾಗಿ ಬಂದರು. ಮಂತ್ರಿ ಮತ್ತು ಅವರ ಕುಟುಂಬ ಎರಡು ಕಾರುಗಳಲ್ಲಿ, ಬಂಧುಗಳು ಇನ್ನೆರಡು ಕಾರುಗಳಲ್ಲಿ ಬಂದಿಳಿದರು.

ಮಂಗಳವಾದ್ಯಗಳು ಕೇಳಿಸಿದವು. ಪೂಜಾರಿಗಳು ಪೂರ್ಣಕುಂಭದೊಂದಿಗೆ ಎದುರ್ಗೊಂಡು ಆಹ್ವಾನಿಸಿದರು. ಅವರೊಂದಿಗೆ ಒಳಕ್ಕೆ ಹೋದೆವು. ನೇರವಾಗಿ ಗರ್ಭಗುಡಿಯೊಳಕ್ಕೆ ಕರೆದುಕೊಂಡು ಹೋದರು. ಅರ್ಧ ಗಂಟೆ ಕಾಲ ಕ್ಯೂವನ್ನು ತಡೆಹಿಡಿಯಲಾಯಿತು.

ನಾನು ಗರ್ಭಗುಡಿಯೊಳಕ್ಕೆ ಹೋಗಿ ಬಹಳ ವರ್ಷಗಳೇ ಆಗಿದ್ದವು. ಅಂದಿಗೂ, ಇಂದಿಗೂ ಬಹಳ ವ್ಯತ್ಯಾಸವಿದೆ. ದೇವಸ್ಥಾನ ಬಹಳ ಸ್ವಚ್ಛವಾಗಿದೆ. ಒಳಗೆ ತಣ್ಣನೆ ಗಾಳಿ ಬೀಸುತ್ತಿದೆ. ದೇವರ ವಿಗ್ರಹವನ್ನು ರತ್ನಾಭರಣಗಳಿಂದ ಅಲಂಕರಿಸಲಾಗಿದೆ. ಹಿರಿಯ ಪೂಜಾರರು ನಮಗೆಲ್ಲವನ್ನು ವಿವರಿಸುತ್ತಾ ತೋರಿಸಿದರು. ಆರತಿ, ತೀರ್ಥವನ್ನು ಕೊಟ್ಟರು. ಮಂತ್ರಿಯವರು ಕಲ್ಯಾಣ · ಉತ್ಸವದತ್ತ ಹೋಗುತ್ತಿದ್ದಂತೆ, ರಾಮು, ನನ್ನನ್ನು ಮತ್ತೆ ಕೆಲವರನ್ನು ಒಳಕ್ಕೆ ಕರೆದುಕೊಂಡು ಹೋದ. ಹಿರಿಯ ಪೂಜಾರರೆ ಸ್ವತಹ ಬಂದು ಗುಡಿಯನ್ನೆಲ್ಲಾ ಸುತ್ತಿಸಿ ವಿವರಿಸಿದರು.

ಮುತ್ತು, ನವರತ್ನಗಳು ಪೋಣಿಸಿದ ಆಭರಣಗಳು, ರತ್ನ, ವಜ್ರ, ವೈಢೂರ್ಯದ ಕಿರೀಟ, ಎಲ್ಲವನ್ನೂ ತೋರಿಸಿದರು. ಕೋಟಿಗಟ್ಟಲೆ ಬೆಲೆಬಾಳುವ ಆಭರಣಗಳನ್ನು ಯಾವ್ಯಾವಾಗ ತೊಡಿಸಲಾಗುತ್ತದೆಂದು ವಿವರಿಸಿ ಹೇಳಿದರು. ಹಣವನ್ನು ಜರಡಿ ಹಿಡಿದು ಎಣಿಸುವ ಕೊಠಡಿಯನ್ನು ನೋಡಿದೆವು. ಕ್ಲೋಸ್ಡ್ ಸರ್ಕ್ಯೂಟ್ ಟಿ.ವಿ.ಯನ್ನು ಅಳವಡಿಸಲಾಗಿದೆ. ಎಲ್ಲವೂ ಒಂದು ರೀತಿಯ ಅದ್ಭುತವೆನಿಸಿತು.

ಕಲ್ಯಾಣೋತ್ಸವ ಪೂರ್ತಿಯಾಗುತ್ತಿದ್ದಂತೆ ಪ್ರಸಾದವನ್ನು ಸ್ವೀಕರಿಸಿ, ರಾಮೂವಿಗೆ 'ಥ್ಯಾಂಕ್ಸ್' ಹೇಳಿ ಹಿಂದಿರುಗಿದೆ. ಹತ್ತಿರದಲ್ಲಿರುವ ತೋಟದಲ್ಲಿ ತಿರುಗಾಡಿದೆ. ನಾನಾ ರೀತಿಯ ಹೂಗಳು, ಗಿಡಗಳು ಕಣ್ಣಿಗೆ ಆಹ್ಲಾದಕರವನ್ನುಂಟು ಮಾಡುವ ವಾತಾವರಣ. ಆದರೆ ಆಲೋಚನೆ ಆಕ್ರಮಿಸಿಕೊಂಡ ಮನಸ್ಸು ಈ ಅಂದವನ್ನು ಆಸ್ವಾದಿಸಲು ನಿರಾಕರಿಸಿತ್ತು. ನಾನಾ ರೀತಿಯ ಮನುಷ್ಯರನ್ನು ನೋಡುತ್ತಾ, ಅವರ ಸಂಭಾಷಣೆಯನ್ನು ಕೇಳುತ್ತಾ ಬಹಳಷ್ಟು ಹೊತ್ತು ತಿರುಗಾ

ಡಿದೆ.

ಅಂತ್ಯ ಕಾಣದ ಆಲೋಚನೆಗಳು, ಉತ್ತರವಿಲ್ಲದ ಪ್ರಶ್ನೆಗಳು. ಯಾರೊಂದಿಗೂ ಹಂಚಿಕೊಳ್ಳಲಾರದಂತಹ ಅಭಿಪ್ರಾಯಗಳು. ರಾಮು ಮೊದಲು ದೇವಸ್ಥಾನಕ್ಕೆ ಕರೆದರೂ ಬರುತ್ತಿರಲಿಲ್ಲ. ನಂಬಿಕೆ ಇಲ್ಲವೆಂದಲ್ಲ, ಆಸಕ್ತಿಯಿಲ್ಲವೆಂದೆನ್ನುತ್ತಿದ್ದ. ಜೊತೆಗೆ ನನ್ನನ್ನು ಛೇಡಿಸುತ್ತಿದ್ದ. ಆಗ ಪ್ರತಿಯೊಂದು ವಿಷಯಕ್ಕೂ ದೇವರನ್ನು ನೆನೆದೆ ಮುಂದಡಿಯಿಡುತ್ತಿದ್ದೆ. ಅಂತಹವನು ಇಂದು ಈ ರೀತಿ ಬದಲಾಗಲು ಕಾರಣವೇನಿರಬಹುದು? ರಾಮುವಿನಲ್ಲಿ ಅಂತಹ ಭಕ್ತಿ ತತ್ಪರತೆ ಹೇಗೆ ಬಂದಿತು? ಮನುಷ್ಯ ಕಷ್ಟದಲ್ಲಿದ್ದರೆ ದೇವರನ್ನು ಪ್ರಾರ್ಥಿಸುತ್ತಾನೆ. ಅನಿರೀಕ್ಷಿತವಾಗಿ ಐಶ್ವರ್ಯ ಬಂದಾಗಲೂ ಕೂಡ ಭಗವಂತನು ಜ್ಞಾಪಕಕ್ಕೆ ಬರುತ್ತಾನೆಂದರೆ ಅದು ಅನ್ಯಾಯದ ಸಂಪಾದನೆಯಾಗಿರಬೇಕು.

"ಚತುರ್ವಿಧಾ ಭಜಂತೇ ಮಾಂ
ಜನಾಃ ಸುಕೃತಿನೋಽರ್ಜುನ।
ಆರ್ತೋ ಜಿಜ್ಞಾಸುರರ್ಥಾರ್ಥೀ
ಜ್ಞಾನೀ ಚ ಭರತರ್ಷಭ॥"

ನಾಲ್ಕು ರೀತಿಯ ಭಕ್ತರು ನನ್ನನ್ನು ಆರಾಧಿಸುತ್ತಾರೆ—ನೋವಿನಲ್ಲಿರುವವರು, ನನ್ನನ್ನು ತಿಳಿಯಬಯಸುವವರು, ಲೌಕಿಕ ಪ್ರಯೋಜನವನ್ನು ಅಪೇಕ್ಷಿಸುವವರು ಮತ್ತು ಜ್ಞಾನಿ ಎನಿಸಿಕೊಂಡವರು ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ. ಅದರಲ್ಲಿ ಇವನು ಯಾವ ಗುಂಪಿಗೆ ಸೇರಿದವನು?

ಸುತ್ತಾಡಿ, ಸುತ್ತಾಡಿ ಆಯಾಸವಾದಂತಾಗಿ ಕೊಠಡಿಗೆ ತೆರಳಿದೆ. ಸ್ನಾನ ಮಾಡಿ ಅನಂತರ ಹೋಟೇಲ್‌ಗೆ ಹೋಗಿ ಊಟ ಮಾಡಿ ಬಂದೆ. ಈಗ ಯಾವ ರೀತಿಯ ಕನಸೂ ಇಲ್ಲದಂತೆ ನಿದ್ರಿಸಬಹುದೆಂದುಕೊಂಡೆ. ಬಹಳಷ್ಟು ಮಂದಿ ಕನಸನ್ನು ಬಯಸುತ್ತಾರೆ. ಅದರಲ್ಲಿ ಅಂದವಾಗಿರುವುದನ್ನು ಕಂಡು ತೃಪ್ತಿ ಪಡುತ್ತಾರೆ. ನನಗೆ ಕನಸೆಂದರೆ ಭಯ. ಬೇಕೆಂದುಕೊಂಡಿದ್ದು ಕಂಡರೂ ಅನಂತರ ಆ ನೆನಪು ನನ್ನನ್ನು ಚಿತ್ರವಧೆ ಮಾಡುತ್ತದೆ.

ತಲೆದಿಂಬಿನ ಮೇಲೆ ತಲೆಯಿಡುತ್ತಿದ್ದಂತೆ ನಿದ್ರೆ ಹತ್ತಿತು. ಯಾರೋ ಬಾಗಿಲನ್ನು ಟಕ ಟಕ ಎಂದು ಕುಟ್ಟುತ್ತಿರುವ ಶಬ್ದಕ್ಕೆ ಎಚ್ಚರವಾಯಿತು. ನನಗಾಗಿ ಯಾರು ಬಂದಿದ್ದಾರೆ? ನಿದ್ರಾಭಂಗ ಮಾಡಿದ್ದಕ್ಕೆ ಬೇಸರವಾಯಿತು. ಕಾರಣ ಮತ್ತೆ ನಿದ್ರೆ ಹತ್ತದು.

"ವೆಂಕಟೇಶ್ ರ‍್ರೀ ವೆಂಕಟೇಶ್" ಯಾರೋ ಕೂಗುತ್ತಿದ್ದರು. ಎದ್ದು ಬಾಗಿಲನ್ನು ತೆರೆದೆ.

"ರಾಮೂ ನಿಮ್ಮನ್ನು ಕರೆದುಕೊಂಡು ಬರಲು ಹೇಳಿದರು" ಎಂದ ಬಾಗಿಲಲ್ಲಿ ನಿಂತಿದ್ದ ವ್ಯಕ್ತಿ. ಬರುತ್ತೇನೆಂದು ಹೇಳಿ ಕಳುಹಿಸಿದೆ. ಸಮಯ ಹತ್ತು ಗಂಟೆಯಾಗಿತ್ತು. ಮುಖ ತೊಳೆದುಕೊಂಡು ಹೊರಟೆ.

ಬೆಳಗಿದ್ದಷ್ಟು ಜನಸಂದಣಿಯಿರಲಿಲ್ಲ. ನಾಲ್ವರು ಮಾತ್ರ ಇದ್ದರು. ನನ್ನನ್ನು ಒಳಕ್ಕೆ ಬರಲು ಹೇಳಿ ರಾಮು ತಕ್ಷಣವೆ ಬಾಗಿಲು ಹಾಕಿದ. ಈ ರಹಸ್ಯ ಸಭೆ ಏಕೆಂದು ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ತಿಳಿಯಿತು.

ಚೀಲದಿಂದ ಎರಡು ಷೀವಾಸ್ ರೀಗಲನ್ನು ರಾಮು ಹೊರತೆಗೆದ. ಮತ್ತೊಬ್ಬ ಪೊಟ್ಟಣಗಳನ್ನು ಬಿಚ್ಚಿ ಅನೇಕ ರೀತಿಯ ತಿನಿಸುಗಳನ್ನು ತಟ್ಟೆಗಳಿಗೆ ಹಾಕಿಟ್ಟ. ಚಿಕನ್ ಕಬಾಲ್, ಬಿರ‍್ಯಾನಿ ಮುಂತಾದವು.

"ರಾಮೂ, ಇಲ್ಲಿ ಇದೆಲ್ಲಾ ಮಾಡುವುದು ಚೆನ್ನಾಗಿರುತ್ತದೆಯೆ?" ತಡೆಯಲಾಗದೆ ಕೇಳಿದೆ.

"ಏನೂ ಪರವಾಗಿಲ್ಲ. ಯಾರಿಗೂ ಗೊತ್ತಾಗೋದಿಲ್ಲ. ಕಂಟ್ರಾಕ್ಟರೊಬ್ಬ ಕಳುಹಿಸಿದ್ದಾನೆ. ಆಮೇಲೆ ಎಲ್ಲವನ್ನೂ ತೆಗೆದು ಹಾಕಿದರಾಯಿತು"—ಸಲೀಸಾಗಿ ಹೇಳಿದ.

ಡ್ರಿಂಕ್ಸ್, ತಿನಿಸು ಪದಾರ್ಥಗಳು ಎಲ್ಲವೂ ತುಂಬಾ ಚೆನ್ನಾಗಿತ್ತು. ಇಂತಹುದರ ರುಚಿ ನೋಡುತ್ತಿರುವುದು ಇದೇ ಮೊದಲ ಸಲವೆಂದು ಹೇಳಿದ್ದಕ್ಕೆ ರಾಮು ಬಹಳ ಸಂತೋಷಗೊಂಡ. ಮಾತನಾಡುತ್ತಾ ಗಂಟೆ ಹನ್ನೆರಡು ದಾಟಿದ್ದೂ ತಿಳಿಯಲಿಲ್ಲ. ಯಾರೋ ಬಾಗಿಲು ತಟ್ಟಿದರು. ರಾಮು ಸ್ವಲ್ಪವೇ ಬಾಗಿಲನ್ನು ತೆರೆದು ಮಾತನಾಡುತ್ತಿದ್ದಾನೆ. ಇನ್ನೇನು ಏರ್ಪಾಡು ಮಾಡಿದ್ದಾನೋ ಎಂದು ಭಯವಾಯಿತು.

"ಸಾರಿ ಫ್ರೆಂಡ್ಸ್, ಮಂತ್ರಿಗಳು ಚಿಕ್ಕ ಮೀಟಿಂಗ್‌ಗಾಗಿ ಬರುತ್ತಿದ್ದಾರೆ. ಮತ್ತೆ ಸೇರೋಣ" ಎನ್ನುತ್ತಾ ರಾಮು ಎಲ್ಲವನ್ನು ತೆಗೆದು ಕಟ್ಟಿಟ್ಟ. 'ಥ್ಯಾಂಕ್ಸ್' ಹೇಳಿ ಹೊರಬಂದೆ.


ನನ್ನ ಹಿಂದೆಯೇ ಮತ್ತಿಬ್ಬರು ಬಂದು ಪಕ್ಕದ ಕಾಟೇಜಿಗೆ ಹೋದರು.


ಕೊಠಡಿಗೆ ಹಿಂದಿರುಗಿ ಶಾಲನ್ನು ಹೊದ್ದು ಕೊಂಡು ಮತ್ತೆ ಹೊರಬಿದ್ದೆ. ಪಕ್ಕದ ಕಾಟೇಜಿನವರು ಇನ್ನೂ ನಿದ್ರಿಸಿಲ್ಲವೆಂದು ಅವರು ಮಾತನಾಡುತ್ತಿರುವುದನ್ನು ಕೇಳಿಸಿಕೊಂಡು ಊಹಿಸಿದೆ. ಆ ಹುಡುಗಿಯನ್ನು ಸಂಜೆ ನೋಡಲಿಲ್ಲವೆಂದು ಜ್ಞಾಪಕ ಬರುತ್ತಿದ್ದಂತೆ ಸ್ವಲ್ಪ ಭಯವಾಯಿತು. ತಕ್ಷಣವೆ ನಗು ಬಂದಿತು. ಪಕ್ಕದ ಕಾಟೇಜಿನಲ್ಲಿದ್ದ ಮಾತ್ರಕ್ಕೆ ತುಂಬಾ ಆತ್ಮೀಯರಾದಂತೆ, ಒಂದು ಹೊತ್ತು ನೋಡದಿದ್ದರೆ ದೂರವಾದಂತೆ ನೊಂದುಕೊಳ್ಳುವುದು ಏಕೆಂದು?

ಹದಿನೇಳನೆ ಕಾಟೇಜಿನ ಮುಂದೆ ಮಂತ್ರಿಗಳ ಕಾರು ನಿಂತಿದೆ. ನಾನು ನೋಡುತ್ತಿರುವಂತೆಯೆ ಮತ್ತೆರಡು ಕಾರುಗಳು ಬಂದು ನಿಂತವು. ಅದರಿಂದ ಇಳಿದು ಹೋಗುತ್ತಿರುವ ವ್ಯಕ್ತಿಗಳನ್ನು ನೋಡಿದ ಮೇಲೆ ಆ ಮೀಟಿಂಗ್ ಏನೆಂದು, ಯಾರೂ ಹೇಳದೆ ಅರ್ಥವಾಯಿತು. ಕೆಲವು ನಿಮಿಷದ ಹಿಂದೆ ರಾಮೂ ಇಲ್ಲಿ ವ್ಯಭಿಚಾರವನ್ನೂ ಕೂಡ ಮಾಡುತ್ತಿದ್ದಾನೇನೋ ಎಂಬ ಆಲೋಚನೆ ನೋವುಂಟು ಮಾಡಿತು. ಆದರೆ ನಡೆಯುತ್ತಿರುವುದೇನೆಂದು ತಿಳಿದು ನಿಸ್ಸಹಾಯಕತ್ವ, ಕೋಪದಿಂದ ರಕ್ತ ಕುದಿಯಿತು.

ರಾಮುವಿನ ಸ್ನೇಹಿತನಾದ ಆ ಮಂತ್ರಿಯ ಹೆಸರು ರಾಜಾರಾವ್. ಆತನೊಬ್ಬ ಗೂಂಡಾ ನಾಯಕ. ಹಣಕ್ಕಾಗಿ, ಅಧಿಕಾರಕ್ಕಾಗಿ ಏನು ಕೆಲಸ ಮಾಡಲೂ ಹೇಸದವನೆಂದು ಹೆಸರು ಪಡೆದಿದ್ದ.

ಅವನು ಪದವಿಯಲ್ಲಿದ್ದರೆ ತನ್ನ ಅಧಿಕಾರಕ್ಕೆ ಕುತ್ತೆಂದು ಹೆದರಿದ ಮುಖ್ಯಮಂತ್ರಿ ಉಪಾಯವೊಂದನ್ನು ಮಾಡಿದ. ಡಾಕ್ಟರನ್ನು ನೇಮಿಸಿಕೊಳ್ಳುವುದರಲ್ಲಿ ಚೆನ್ನಾಗಿ ಹಣವನ್ನು ನುಂಗಿ ಹಾಕಿದ್ದಾನೆಂದೂ ಜೂಬ್ಲಿ ಹಿಲ್ಸ್‌ನಲ್ಲಿ ಲಕ್ಷಗಟ್ಟಲೆಯ ಬೆಲೆಬಾಳುವ ಸರಕಾರದ ಸ್ಥಳವನ್ನೂ ಆಕ್ರಮಿಸಿಕೊಂಡಿದ್ದಾನೆಂದು ಸಾಕ್ಷ್ಯಾಧಾರವಾಗಿ ಸುದ್ದಿಯನ್ನು ಗಾಳಿಯಲ್ಲಿ ಬಿಟ್ಟು ಸುಮ್ಮನಾಗಿ ಬಿಟ್ಟ. ಆ ವಿಷಯದಲ್ಲಿ ದೊಡ್ಡ ಹಗರಣವೇ ನಡೆಯಿತು. ಆದರೆ ರಾಜಾರಾವ್ ಅಂತಹ ತಿಳಿಗೇಡಿಯೇನೂ ಅಲ್ಲ. ರಾಜಕೀಯದಲ್ಲಿರುವವರೆಲ್ಲಾ ನರಿಗಳಾದರೆ ಅದರಲ್ಲೂ ಕೆಲವರು ಗುಳ್ಳೇ ನರಿಯಂತಹವರಿರುತ್ತಾರೆ. ಇವನು ಈ ಎರಡನೆ ಗುಂಪಿಗೆ ಸೇರಿದವನು. ಇಂತಹ ಸಮಯ ಬರುತ್ತದೆಂದು ಮೊದಲೇ ಊಹಿಸಿ ಹಣವನ್ನು ಚೆಲ್ಲಿ ಇದಕ್ಕೆ ವಿರುದ್ಧವಾದ ಒಂದು ಪಂಗಡವನ್ನೇ ನಿರ್ಮಿಸಿದ್ದ. ಮುಖ್ಯಮಂತ್ರಿಯ ಅನೀತಿ ನಡವಳಿಕೆಗಳಿಗೆ ರೆಕ್ಕೆಪುಕ್ಕಗಳೆದ್ದವು. ಇದರಿಂದ ತನ್ನ ಸ್ಥಾನವೇ ಅಲ್ಲಾಡುವ ಸ್ಥಿತಿಗೆ ಬಂದು, ರಾಜ್ಯದಲ್ಲಿ ಈ ಹಗರಣದ ಬಗ್ಗೆ ದೊಡ್ಡ ಗಲಾಟೆಯೇ ಆಗಿದ್ದರೂ "ರಾಜಾರಾವ್ ಮೇಲೆ ಬಂದ ಆಪಾದನೆಗಳೆಲ್ಲಾ ನಿರಾಧಾರವೆಂದು" ಹೇಳಿಕೆಯಿತ್ತು ತನ್ನ





"ಪೊಲೀಸರೆಂದ್ರೆ... ಏನು... ರಾಕ್ಷಸರೂಂತ ತಿಳ್ಕೊಂಡಿದ್ದೀಯೇನೋ... ಬದ್ಮಾಷ್..."

ಪದವಿ ಹಾಳಾಗದಂತೆ ಮುಖ್ಯಮಂತ್ರಿ ಕಾಪಾಡಿಕೊಂಡ.

ರಾಜಾರಾವ್ ಆ ವಿಷಯವನ್ನು ಅಲ್ಲಿಗೇ ಮರೆಯಲಿಲ್ಲ. ಜಾತಿ, ಮತದ ಕಲಹ ಸೃಷ್ಟಿಸಿ ಮುಖ್ಯಮಂತ್ರಿಯನ್ನು ಪದವಿಯಿಂದ ಇಳಿಸಲು ಭಗವಂತನ ಸಾನ್ನಿಧ್ಯದಲ್ಲಿ ಗೂಂಡಾ ನಾಯಕರೊಂದಿಗೆ ಯೋಜನೆ ಸಿದ್ಧಪಡಿಸುತ್ತಿದ್ದಾನೆ. ಆರೋಗ್ಯಖಾತೆಯ ಮಂತ್ರಿಗಳಿಗೆ ಏಳು ಹೆಣ್ಣು ಮಕ್ಕಳಾದ ಮೇಲೆ ಎಂಟನೆ ಮಗು ಗಂಡಾಗಬೇಕಾದರೆ ದೇವರ ದಯೆಯಿಂದಲೇ ತಾನೆ? ಕೋಟೀಶ್ವರನಾದರೆ ಮಾತ್ರ ಸಾಲದು. ತನ್ನ ಮಕ್ಕಳು, ಅವರ ಮಕ್ಕಳು ಕೋಟೀಶ್ವರರಾಗಿಯೇ ಇರಬೇಕಾದರೆ ಎಷ್ಟು ಸಂಪಾದಿಸಬೇಕು? ಇದನ್ನು ಸಾಧಿಸಲು ಕೈಹಿಡಿದು ನಡೆಸಿದ ದೇವರಿಗೆ ಎಷ್ಟು ಹರಕೆ ಸಲ್ಲಿಸಬೇಕಾಗುತ್ತದೆ. ಅದೆಲ್ಲಾ ಒಬ್ಬ ಸಾಮಾನ್ಯ ಮಂತ್ರಿಯಾಗಿದ್ದರೆ ಸಾಧ್ಯ ಆಗದು. ಅದಕ್ಕೇ ಮುಖ್ಯಮಂತ್ರಿಯ ಪದವಿಗಾಗಿ ಪ್ರಯತ್ನಗಳು.

ನನ್ನ ಆಲೋಚನೆಗೆ ಅಂತ್ಯವಿಲ್ಲ, ಉಪಯೋಗವೂ ಇಲ್ಲ. ಯಾರೋ ಹಿರಿಯರು ಹೇಳಿದಂತೆ ನನ್ನ ತಲೆ ಡೆವಿಲ್ಸ್ ವರ್ಕ್‌ಷಾಪ್. ಅದರಂತೆ ಉಪಯೋಗವಿಲ್ಲವೆಂದು ತಿಳಿದೂ ನಿರಂತರವಾಗಿ ಶ್ರಮಿಸುತ್ತಲೇ ಇರುತ್ತದೆ— ಏನೇನೊ ಆಲೋಚನೆಗಳನ್ನೆಬ್ಬಿಸಿಕೊಳ್ಳುತ್ತ.

* * *

ಬೆಳಗ್ಗೆ ಬೇಗನೆದ್ದು ಪಾಪನಾಶನಿಯನ್ನು ತಲುಪಿದೆ. ಮೈಮರೆಸುವ ಅಂದವಾದ ಪರಿಸರ. ಅಂತಹ ಚಳಿಯಲ್ಲೂ ತಣ್ಣೀರಿನ ಸ್ನಾನ ಹಾಯೆನಿಸಿತು. ಬಹಳ ಮಂದಿ ಚಳಿಗೆ ಹೆದರಿ ತಲೆಗೆ ನೀರನ್ನು ಪ್ರೋಕ್ಷಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಸ್ನಾನ ಮುಗಿಸಿ ಪಕ್ಕದಲ್ಲಿರುವ ತೋಟದೊಳಕ್ಕೆ ಹೋಗಿ ಕುಳಿತುಕೊಂಡೆ. ಅಲ್ಲಲ್ಲಿ ಯಾತ್ರಾರ್ಥಿಗಳು ಗುಂಪುಗುಂಪಾಗಿ ಅಡುಗೆ ತಯಾರಿ ನಡೆಸುತ್ತಾ, ಮಾತನಾಡುತ್ತಾ ಕುಳಿತಿದ್ದರು.

"ದೇಶದಲ್ಲಿ ಎಷ್ಟೊಂದು ದೇವಾಲಯಗಳಿವೆ. ಆದರೂ ಇಷ್ಟೊಂದು ಜನ ಇಲ್ಲಿಗೇ ಬರಬೇಕೆಂದ್ರೆ ದೇವರ ಮಹಿಮೆಯೇ ಕಾರಣ."

"ಸತ್ಯವಾದ ಮಾತು. ಈಚೆಗೆ ಕೇಂದ್ರ ಮಂತ್ರಿಯೊಬ್ಬ ಇಲ್ಲಿಗೇ ಬಂದು ಮದುವೆ ಮಾಡಿಕೊಂಡು ಹೋದ. ಉತ್ತರ ಭಾರತದ ಜನರಿಗೂ ಈ ದೇವರಲ್ಲಿ ಭಕ್ತಿ ಹೆಚ್ಚಾಗಿ ಹೋಗಿದೆ. ನಮ್ಮ ಉಪರಾಷ್ಟ್ರಪತಿಗಳೂ ಆಗಾಗ್ಗೆ ಬರುತ್ತಿರುತ್ತಾರೆ."

"ಈ ವೈಭೋಗ, ಮಹಿಮೆ ಬೇರೆ ಯಾವ ದೇವರಲ್ಲೂ ಕಾಣಿಸುವುದಿಲ್ಲ. ಆ ದಿವ್ಯ ಮಂಗಳ ಮೂರ್ತಿಯನ್ನು ನೋಡಿದ ಕಣ್ಣುಗಳು ಬೇರೇನನ್ನೂ ನೋಡಲು ಬಯಸುವುದಿಲ್ಲ.

"ಹೌದು, ಸ್ವಲ್ಪ ದಿನಗಳ ಕಾಲ ಆ ದಿವ್ಯ ರೂಪ ಕಣ್ಣಲ್ಲಿ ನಿಂತಿರುತ್ತದೆ. ಅದನ್ನು ನೋಡಿದ ನಮ್ಮ ಕಣ್ಣುಗಳು ಅದೆಷ್ಟು ಪುಣ್ಯ ಮಾಡಿವೆಯೋ?" ಭಾವುಕನೊಬ್ಬ ಹೇಳಿದ.

"ಏಯ್, ಅಲ್ಲಿ ಸಿನಿಮಾ ಶೂಟಿಂಗ್ ನಡೆಯುತ್ತಿದೆ. ಭಾನುಪ್ರಿಯ ಬಂದಿದ್ದಾಳೆ" ಯಾರೋ ಕೂಗಿದರು.

ಮರುಕ್ಷಣದಲ್ಲಿ ಅಲ್ಲಿದ್ದವರೆಲ್ಲಾ ಎದ್ದು ಅತ್ತ ಓಡಿದರು. ನಗುತ್ತಾ ಸುತ್ತಲೂ ನೋಡಿದೆ. ಜೋಡಿಯೊಂದು ಮಾತ್ರ ಉಳಿದಿತ್ತು. ಆತನ ಗುರುತು ಹತ್ತಿತು. ಹಿಂದಿನ ದಿನ ತೋಟದಲ್ಲಿ ಸಂಧ್ಯಾವಂದನೆ ಮಾಡಿದ ವ್ಯಕ್ತಿ.

ಕಲ್ಲಿನ ಮೇಲೆ ಹಾಗೆ ಮಲಗಿಕೊಂಡು ಕಣ್ಮುಚ್ಚಿದೆ. ಅವರ ಮಾತುಗಳು ನನ್ನ ಕಿವಿಯ ಮೇಲೆ ಬೀಳುತ್ತಲಿತ್ತು.

"ಏನು ಹುಚ್ಚು ಜನರೋ. ಈಗಿನ ಜನರೆಲ್ಲ

ದೇವರ ದರ್ಶನದಲ್ಲಿ ಪಡೆಯೋ ತೃಪ್ತಿಗಿಂತ ಸಿನಿಮಾ ನಟನಟಿಯರನ್ನು ನೋಡಿಯೇ ತೃಪ್ತರಾಗುತ್ತಿದ್ದಾರೆ" ಆತನ ಪತ್ನಿ ಹೇಳಿದಳು.

"ದೇವರನ್ನು ಯಾವಾಗಲೆಂದ್ರೆ ಆಗ ನೋಡಬಹುದು. ಹಾಗೆ ಇವರುಗಳನ್ನು ನೋಡಲು ಆಗುವುದಿಲ್ಲವಲ್ಲ. ಈಗ ಜನರಲ್ಲಿ ಭಕ್ತಿ ಎನ್ನುವುದು ಎಲ್ಲಿ ಉಳಿದಿದೆ? ಎಲ್ಲಾ ಆಟಾಟೋಪ. ಯಾರನ್ನ ಬೇಕಾದರೂ ಮೋಸ ಮಾಡಬಹುದು. ಆ ದೇವರ ಕಣ್ಣನ್ನು ಮುಚ್ಚಲು ಸಾಧ್ಯವೆ ಹೇಳು?" ಆ ವ್ಯಕ್ತಿ ಪತ್ನಿಗೆ ಹೇಳಿದ.

"ರ್‍ರೀ..." ಆಕೆ ಮೆಲುದನಿಯಲ್ಲಿ ಕೂಗಿದಳು. ನಾನಿರುವುದನ್ನು ಗಮನಿಸಿ, ನಾನೆಲ್ಲಿ ಕೇಳಿಸಿಕೊಳ್ಳುತ್ತೇನೋ ಎಂದು ಹಾಗೆ ಮೆತ್ತಗೆ ಹೇಳುತ್ತಿದ್ದಾಳೆಂದು ನಾನು ಅಲ್ಲಾಡದೆ ಮಲಗಿಕೊಂಡೆ.

"ರ್‍ರೀ... ಅಲ್ಲಿ ಅದೇನೋ ಹೊಳೀತಿದೆ ನೋಡಿ" ಎಂದಳು. ಅವಳು ತೋರಿದತ್ತ ಆತ ಹೋಗಿ ತರಲು ಚಲಿಸಿದ ಸಪ್ಪಳ. ಆ ವಸ್ತುವನ್ನು ತೆಗೆದುಕೊಂಡು ಅವಳಿದ್ದಲ್ಲಿಗೆ ಹಿಂದಿರುಗಿದ.

"ಉಂಗುರ. ಚೆನ್ನಾಗಿದೆಯಲ್ಲವೆ" ಎಂದ ಮೆಲ್ಲಗೆ.

"ಬಂಗಾರವೆ?" ಕೇಳಿದಳು.

"ಹೂಂ. ನವರತ್ನಗಳಿವೆ. ತುಂಬಾ ಬೆಲೆ ಬಾಳುತ್ತೆ."

"ಇಲ್ಲಿ ಕುಳಿತಿದ್ದಾತನದೂಂತ ಕಾಣುತ್ತೆ."

"ಯಾರದ್ದಾದರೆ ನಮಗೇನು? ನಮಗೆ ಸಿಕ್ಕಿದೆಯೆಂದು ಹೇಳಿದರೆ ಹತ್ತು ಜನ ನನ್ನದೆಂದು ಬರುತ್ತಾರೆ. ದೇವರೇ ನಮಗಿದನ್ನು ತೋರಿಸಿದನೆಂದುಕೊಳ್ಳೋಣ. ನಡಿ. ಹೋಗೋಣ" ಎನ್ನುತ್ತಾ ಎದ್ದು ಎಲ್ಲವನ್ನು ಸರಸರನೆ ಎತ್ತಿಕೊಂಡ.

"ಅವರೇನಾದರೂ ಬಂದು ಕೇಳಿದರೆ..." ಅವನ ಕೋಪದ ಮುಖವನ್ನು ನೋಡಿ ಮಾತನಾಡದೆ ಸುಮ್ಮನಾದಳು.


"ಸುಮ್ಮನೆ ಬಾಯ್ಮುಚ್ಕೊಂಡು ನಡಿ"— ಅವನು ಮೆಲ್ಲನೆ ಕೂಗಿದ.

ಅವರು ಹೊರಟು ಹೋದರು. ಹಿಂದಿನ ದಿನ ಆತನ ಮೇಲೆ ಮೂಡಿದ್ದ ಗೌರವ ಭಾವನೆ ಅಳಿಸಿ ಹೋಯಿತು. ಎದ್ದು ಬಸ್ಸು ನಿಲ್ದಾಣದತ್ತ ನಡೆದೆ. ಆ ಜೋಡಿ ತಿರುಪತಿಗೆ ಹೋಗುವ ಬಸ್ಸಿನಲ್ಲಿ ಕುಳಿತಿದ್ದರು. ದೇವರಿಂದ ದೂರವಾಗಿ ಓಡಿ ಹೋಗುತ್ತಿದ್ದಾರೆಯೆ?

ಕಾಟೇಜಿಗೆ ಹಿಂದಿರುಗುವಾಗ ನೀರಸವೆನಿಸಿತು. ರಾತ್ರಿ ಪ್ರಯಾಣ. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಬೇಕು. ಬೀಗ ತೆಗೆಯುತ್ತಿದ್ದವನು ಹಾಗೇ ನಿಂತುಬಿಟ್ಟೆ. ಪಕ್ಕದ ಕಾಟೇಜಿನ ಬಳಿ ಜನರು ಗುಂಪುಗೂಡಿದ್ದರು. ಪೊಲೀಸ್ ಜೀಪು, ಆ್ಯಂಬುಲೆನ್ಸ್ ವ್ಯಾನ್ ನಿಂತಿದ್ದವು. ಗಾಬರಿಯಿಂದ ಅತ್ತ ತೆರಳಿದೆ.

ಅಲ್ಲಿಯ ದೃಶ್ಯವನ್ನು ನೋಡಿ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಯಿತು. ನಾನು ದೀಪಿಕಾ ಎಂದು ಭಾವಿಸುತ್ತಿದ್ದ ಆ ಹದಿನಾರರ ಮುಗ್ಧ ಯುವತಿ ಶವವಾಗಿ ಮಲಗಿದ್ದಳು. ಬಂಗಾರ ಬಣ್ಣದ ಮೈ ರಕ್ತದ ಮಡುವಿನಲ್ಲಿ ಮುಳುಗಿ ಭಯಂಕರವಾಗಿ ಕಾಣಿಸುತ್ತಿತ್ತು.

ಬಣ್ಣ



ಅಂದು
ನಿನ್ನ
ಕಣ್ಣ
ಕನ್ನಡಿಯಲ್ಲಿ
ಕಂಡಿತ್ತು
ನನ್ನ ರೂಪ.
ಈಗೀಗ
ಏತಕೋ
ಮಸುಕು
ಮಸುಕು
ಕಾಣುತ್ತಿಲ್ಲ
ಸರಿಯಾಗಿ
ಆ ರೂಪ,
ಕನ್ನಡಿಯ
ಪಾದರಸ
ಕರಗಿತೇನೋ
ಪಾಪ!

● ಉಷಾ ಗೋ.



ಮಾನಭಂಗ ಮಾಡಿ ತಮ್ಮ ವಿಷಯ ತಿಳಿಯುತ್ತದೆಂಬ ಭಯದಿಂದ ಅವಳ ಜೊತೆಯಲ್ಲಿ ಬಂದಿದ್ದ ಹುಡುಗರು ಕೊಂದು ಹಾಕಿ ಓಡಿ ಹೋಗಿದ್ದರು. ಹೊರಗಿನಿಂದ ಬೀಗ ಹಾಕಿಕೊಂಡು ಹೋಗಿದ್ದರಂತೆ. ಕೆಲಸದಾಳುಗಳಿಗೆ ಅನುಮಾನ ಬಂದು ಬೀಗ ಒಡೆಯಲು ಆಗ ಕೊಲೆಯ ವಿಷಯ ಹೊರ ಬಂದಿತು. ರಿಜಿಸ್ಟರ್‌ನಲ್ಲಿ ಅಸ್ವಾಭಾವಿಕ ಸಾವೆಂದು ಬರೆಯಲಾಯಿತು.

ನಾನು ನೋಡುತ್ತಿರುವಂತೆ ಶವವನ್ನು ಆ್ಯಂಬುಲೆನ್ಸ್‌ನಲ್ಲಿ ಹಾಕಿಕೊಂಡು ಹೊರಟು ಹೋದರು. ಪೊಲೀಸರ ಪ್ರಶ್ನೆಗಳಿಗೆ ನನಗೆ ತೋಚಿದ ಉತ್ತರವನ್ನು ಹೇಳಿ ಕೊಠಡಿಗೆ ಹಿಂದಿರುಗಿದೆ. ತಿಂದಿದ್ದೆಲ್ಲವೂ ವಾಂತಿಯಾಯಿತು. ಬೇಸರದಿಂದ ಹಾಗೇ ಹಾಸಿಗೆಯ ಮೇಲುರುಳಿಕೊಂಡೆ.

ದೇವರಿಗಾಗಿ ಬೆಳೆಸುತ್ತಿರುವ ತೋಟದಲ್ಲಿ ಒಂದು ಹೂವನ್ನು ಕೊಯ್ದರೆ ಅಪರಾಧವಾಗಿ ಭಾವಿಸುತ್ತಾರೆ. ಮುಗ್ಧಳಾದ ಯುವತಿಯೊಬ್ಬಳನ್ನು ದಾರುಣವಾಗಿ ಮಾನಭಂಗ ಮಾಡಿ ಸಾಯಿಸುವುದನ್ನು ತಡೆಯುವ ಶಕ್ತಿ ಆ ದೇವರಿಗೂ ಇಲ್ಲವಾಯಿತೆ?

ಆ ಘಟನೆ ನನ್ನ ಮೇಲೆ ವಿಪರೀತವಾದ ಪರಿಣಾಮವನ್ನು ಮಾಡಿತು. ಕಣ್ಣು ಮುಚ್ಚಿದರೂ ತೆರೆದರೂ ಆ ಹುಡುಗಿಯ ರೂಪವೇ ಕಣ್ಣ ಮುಂದೆ ನಿಲ್ಲುತ್ತಿತ್ತು. ಎದ್ದು ನನ್ನೆಲ್ಲಾ ವಸ್ತುಗಳನ್ನು ಕಟ್ಟಿಟ್ಟೆ. ರಾಮುವನ್ನು ಕಂಡು ಹೇಳಿ

ಹೊರಡಬೇಕೆಂದೆನಿಸಲಿಲ್ಲ. ತಿರುಪತಿಯಿಂದ ಸುತ್ತಮುತ್ತಲ ಪ್ರದೇಶವನ್ನು ನೋಡಬೇಕೆಂದು ಕೊಂಡಿದ್ದನ್ನು ರದ್ದುಪಡಿಸಿ ಹೈದ್ರಾಬಾದಿಗೆ ಹೊರಟೆ.

* * *

ಮನೆಯನ್ನು ತಲುಪುವ ವೇಳೆಗೆ ಜ್ವರದ ತಾಪ ಹೆಚ್ಚಾಗಿತ್ತು. ಕೆಲಸದಾಳು ಲಕ್ಷ್ಮಿ ಬಂದು ಕಾಫಿಯನ್ನು ಮಾಡಿ ಕೊಟ್ಟಳು. ಮಾತ್ರೆಯನ್ನು ನುಂಗಿ ಮಲಗಿಕೊಂಡೆ. ಆಫೀಸಿನವರಿಗೆ ಪ್ರಸಾದವನ್ನು ಕಳುಹಿಸಲು ಮರೆಯಲಿಲ್ಲ. ತಿರುಪತಿಯ ಲಾಡುವನ್ನು ಪ್ರಸಾದವನ್ನಾಗಿ ಅಲ್ಲದೆ ರುಚಿಗಾಗಿಯೂ ಎಲ್ಲರೂ ಇಷ್ಟಪಡುತ್ತಾರೆ. ಕ್ರಿಶ್ಚಿಯನ್, ಮುಸ್ಲಿಮರು ಕೂಡ ತೆಗೆದುಕೊಳ್ಳುತ್ತಾರೆ. ಅದಕ್ಕೆಂದೇ ಹೆಚ್ಚಾಗಿ ಕಳುಹಿಸಿದೆ.

ಪಕ್ಕದ ಮನೆಯ ಹುಡುಗ ಡಾಕ್ಟರನ್ನು ಕರೆದುಕೊಂಡು ಬಂದ. ಒಂದು ವಾರ ವಿಶ್ರಾಂತಿಯನ್ನು ತೆಗೆದುಕೊಳ್ಳಲು ಹೇಳಿದರು. ರಜಾ ಚೀಟಿಯನ್ನು ಬರೆದು ಕಳುಹಿಸಿದೆ. ಕೆಲಸದವಳು ಅಡುಗೆ ಮಾಡುತ್ತಾಳಾದರೂ ಸುತ್ತಮುತ್ತಲಿರುವವರು ಬೇಡವೆಂದರೂ ಏನಾದರೊಂದನ್ನು ಕಳುಹಿಸುತ್ತಲೇ ಇರುತ್ತಾರೆ. ಇರುವುದು ಒಬ್ಬನೆ. ಒಳ್ಳೆಯ ಸಂಬಳ ಬರುತ್ತಿದೆ. ಯಾರೇ ಬಂದು ಏನೇ ಕೇಳಿದರೂ ಇಲ್ಲವೆನ್ನದೆ ಕೊಡುತ್ತೇನೆ. ಆ ಕೃತಜ್ಞತೆಯನ್ನು ಈ ರೀತಿಯಲ್ಲಿ ತೋರಿಸುತ್ತಿದ್ದಾರೆ. ಆತ್ಮೀಯರಾಗಿದ್ದಾರೆ.

ಕಷ್ಟ, ಸುಖವನ್ನು ಹಂಚಿಕೊಳ್ಳುವುದು ಬೇರೆ. ಆಲೋಚನೆ, ಭಾವನೆಯನ್ನು ಹಂಚಿಕೊಳ್ಳುವುದು ಬೇರೆ. ಅದಕ್ಕಾಗಿಯೇ ಅಷ್ಟು ಮಂದಿ ಶ್ರೇಯೋಭಿಲಾಷಿಗಳ ನಡುವೆಯೂ ಒಂಟಿತನ ಕಾಡುತ್ತದೆ.

ನನಗೆ ಆರೋಗ್ಯ ಚೆನ್ನಾಗಿಲ್ಲವೆಂದು ತಿಳಿದು ಆಫೀಸಿನ ಸಹಪಾಠಿ ಸ್ವಾಮಿನಾಥಂ, ಶರ್ಮ ಬಂದರು.

"ತುಂಬಾ ಥ್ಯಾಂಕ್ಸ್. ತುಂಬಾ ಪ್ರಸಾದವನ್ನು ಕಳುಹಿಸಿದ್ದಿರಿ. ಎಲ್ಲರೂ ತೃಪ್ತಿಯಾಗಿ ತಿಂದದ್ದೇ ಅಲ್ಲದೆ ಮನೆಗೂ ತೆಗೆದುಕೊಂಡು ಹೋದೆವು" ಎಂದ ಶರ್ಮ. ಆತ ನಮ್ಮ ಆಫೀಸಿಗೆ ಅದೇ ತಾನೆ ವರ್ಗವಾಗಿ ಬಂದವನು.

"ವೆಂಕಟೇಶ ಯಾವಾಗಲೂ ಹಾಗೆ. ಏನು ಮಾಡಿದರೂ ತೃಪ್ತಿಯಾಗುವಂತೆ ಮಾಡುತ್ತಾರೆ. ಅಂದ ಹಾಗೆ ದರ್ಶನ ಚೆನ್ನಾಗಿ ಆಯಿತೆ? ತುಂಬಾ ರಷ್ಟು ಇಲ್ಲಾಂತ ಕಾಣುತ್ತೆ. ಏಕೆಂದ್ರೆ ಶೂನ್ಯ ಮಾಸ" ಸ್ವಾಮಿನಾಥಂ ಹೇಳಿದರು.

"ಚೆನ್ನಾಗಿಯೇ ಆಯಿತು. ಮಾಮೂಲು ದರ್ಶನವಲ್ಲದೆ ಇನ್ನೂ ಚೆನ್ನಾಗಿ ನೋಡುವ ಅವಕಾಶ ಒದಗಿ ಬಂತು" ಎಂದು ನಡೆದುದನ್ನು ವಿವರಿಸಿದೆ.

"ಎಂತಹ ಅದೃಷ್ಟವಂತರಪ್ಪಾ. ಚಿಕ್ಕಂದಿನಿಂದಲೂ ಹೋಗುತ್ತಲೇ ಇದ್ದೇನೆ. ನನಗೆ ಅಂತಹ ಅದೃಷ್ಟವೇ ಒದಗಿ ಬಂದಿಲ್ಲ. ತುಂಬಾ ಪುಣ್ಯ ಮಾಡಿದ್ದೀರ, ಅದಕ್ಕೆ ಸ್ವಾಮಿಯನ್ನು ಅಷ್ಟು ಹತ್ತಿರದಿಂದ ನೋಡಿದಿರಿ" ಎಂದ ಶರ್ಮ. ಆತನ ಕಣ್ಣಿನಲ್ಲಿ ನನ್ನ ಬಗ್ಗೆ ಗೌರವ ಹೆಚ್ಚಿದಂತೆ ಕಂಡಿತು. ಅದೇ ಸ್ವಾಮಿನಾಥನ ಕಣ್ಣಿನಲ್ಲಿ ಅಸೂಯೆಯ ಭಾವ ಇಣುಕಿತು.

ಸ್ವಲ್ಪ ಹೊತ್ತು ಇದ್ದು ಅವರು ಹೊರಟು ಹೋದರು. ಮತ್ತೆ ಆಲೋಚನೆ ಕಾಡಿತು. ಇಂತಹ ಜನರೊಂದಿಗೆ ನನ್ನ ಆಲೋಚನೆಯನ್ನು ಹೇಗೆ ಹಂಚಿಕೊಳ್ಳಲಿ? ನನಗೆ ತಿಳಿದ ಮಟ್ಟಿಗೆ ನನ್ನ ಸುತ್ತಮುತ್ತ ನನ್ನ ಭಾವನೆಯನ್ನು ಅರ್ಥ ಮಾಡಿಕೊಳ್ಳುವವರು ಯಾರೂ ಇಲ್ಲ.

ಒಂಟಿ ಜೀವನವಲ್ಲ, ಏಕಾಂಗಿತನ. ಅದು ನನ್ನನ್ನು ಕಾಡಿಸುತ್ತಿದೆ. ನನಗೆ ಜೊತೆ ಬೇಕು. ಕಷ್ಟ ಸುಖವನ್ನು ಹಂಚಿಕೊಳ್ಳುವ ಅರ್ಧಾಂಗಿ ಎಂಬುವ ಜೊತೆಯಲ್ಲ. ಐದು ವರ್ಷ ದಾಂಪತ್ಯ ಜೀವನದಲ್ಲಿ ಸುಜಾತಾ ನನಗೆ ಜೀವನ ಪರ್ಯಂತ ಸಿಗಬಹುದಾದಷ್ಟು ಪ್ರೇಮವನ್ನು ಹಂಚಿ ಹೊರಟು ಹೋಗಿದ್ದಳು. ಅನಂತರ ಶಾರೀರಿಕ ಸುಖಕ್ಕಾಗಿ ನನ್ನ ಶರೀರ ಎಂದೂ ಬಯಸಲಿಲ್ಲ.

ಸ್ನೇಹಿತರೊಂದಿಗಿದ್ದರೂ ನನ್ನ ನೋವು ಕಡಿಮೆಯಾಗುತ್ತಿಲ್ಲವೆಂಬುದು ನನಗೆ ತಿಳಿದಿದೆ. ಮನಸಿನ ಭಾವನೆಯನ್ನು ಕೊನೆ ಪಕ್ಷ ಕೇಳಿ ಅರ್ಥಮಾಡಿಕೊಳ್ಳದ ಸ್ನೇಹಿತರಿಲ್ಲದೆ ಚಡಪಡಿಸುತ್ತಿದ್ದೇನೆ. ಎಲ್ಲಿಯೋ, ಯಾರೋ ನನ್ನ ಭಾವನೆಯನ್ನು ಹಂಚಿಕೊಳ್ಳುವವರು ಇದ್ದೇ ಇದ್ದಾರೆ. ಆದರೆ ಅವರನ್ನು ಭೇಟಿಯಾಗುವುದು ಹೇಗೆ?

ಪತ್ರಿಕೆಯನ್ನು ಹಾಕುವ ಹುಡುಗ ಕೆಲವು ಪತ್ರಿಕೆಗಳನ್ನು ಹಾಕಿ ಹೋದ. ಯಾವುದೋ



"ಈ ವಿಮಾನದಲ್ಲಿ ಹೋಗುವವರಿಗೆ ಕುಡಿಯಲು ವಿಸ್ಕಿ ಕೊಡ್ತಾರೆ ಯಾಕೆ ಗೊತ್ತಾ? ವಿಮಾನ ಬಿದ್ರೆ ಗೊತ್ತಾಗದೆ ಇರಲಿ ಅಂತ..."

ಇಂಗ್ಲಿಷ್ ಪತ್ರಿಕೆಯನ್ನು ತಿರುಗಿಸುತ್ತಿರುವಾಗ ಆ ಪ್ರಕಟಣೆ ಕಣ್ಣಿಗೆ ಬಿದ್ದಿತು.

'ಅರುವತ್ತು ವರ್ಷದ ರಿಟೈರ್ಡ್ ಆಫೀಸ ರೊಬ್ಬರಿಗೆ ಜೊತೆ ಬೇಕಾಗಿದೆ. ಜೊತೆಯಾಗಿ ರಲು ನಲುವತ್ತು ವರ್ಷಕ್ಕೂ ಮೇಲ್ಪಟ್ಟ ವಯ ಸ್ಸಾದ ಹೆಂಗಸು ಬೇಕಾಗಿದೆ. ವಿಧವೆಯಾದರೂ ಪರವಾಗಿಲ್ಲ. ಆಧ್ಯಾತ್ಮಿಕ ಚಿಂತನೆಯಲ್ಲಿ ಮಿಕ್ಕ ಜೀವನ ಕಳೆಯಬೇಕೆಂದಿರುವವರಾದರೆ ಒಳ್ಳೆಯದು.'

ಅದನ್ನು ಓದುತ್ತಿರುವಂತೆ ನಾನೂ ಆ ರೀತಿಯ ಪ್ರಕಟಣೆ ಕೊಟ್ಟರೆ ಹೇಗೆ ಎಂದೆನಿಸಿತು. ನನಗೆ ಸ್ತ್ರೀಯರೇ ಆಗಬೇಕೆಂದೇನೂ ಇಲ್ಲ. ಇಂತಹ ಭಾವನೆಗಳು ಸ್ತ್ರೀಯರಲ್ಲಿ ಇರುತ್ತ ದೆಂದುಕೊಳ್ಳುವುದು ತಪ್ಪಾಗುತ್ತದೆ.

ಆ ದಿನವೆಲ್ಲಾ ಆಲೋಚಿಸಿ ಒಂದು ನಿರ್ಧಾ ರಕ್ಕೆ ಬಂದೆ. ಪ್ರಯತ್ನಿಸುವುದರಲ್ಲಿ ತಪ್ಪಿಲ್ಲ. ಸ್ವಲ್ಪ ಹಣ ಖರ್ಚಾಗುವುದನ್ನು ಬಿಟ್ಟರೆ ಬೇರೇನೂ ನಷ್ಟವಾಗಲಾರದು.

ಮಾರನೆ ದಿನ ಬೆಳಗೆದ್ದು ನಿತ್ಯ ಕರ್ಮಗಳನ್ನು ಮುಗಿಸಿ ಎಕ್ಸ್‌ಪ್ರೆಸ್ ಆಫೀಸಿಗೆ ಹೋಗಿ ನನಗೆ ಬೇಕಾದ ರೀತಿಯಲ್ಲಿ ಪ್ರಕಟಣೆ ಕೊಟ್ಟು ಬಂದೆ. ಭಾನುವಾರ ಪ್ರಕಟಿಸುತ್ತೇವೆಂದರು. ಉತ್ತರ ಕ್ಕಾಗಿ ಹದಿನೈದು ದಿನಗಳಾದರೂ ಕಾಯಬೇಕು. ಆ ವಿಷಯವನ್ನು ಮರೆಯುವುದು ಒಳ್ಳೆಯದು.

* * *

ತಿಂಗಳ ಕೊನೆಯ ದಿನಗಳಲ್ಲಿ ನಮ್ಮಾಫೀಸಿ ನಲ್ಲಿ ತುಂಬಾ ಕೆಲಸವಿರುತ್ತದೆ. ವೃದ್ಧಾಪ್ಯ ವೇತನ, ವಿಶ್ರಾಂತಿ ವೇತನಕ್ಕಾಗಿ ಮುದುಕ, ಮುದುಕಿಯರು ಬರುತ್ತಿರುತ್ತಾರೆ. ಸ್ಟೇಟ್, ಸೆಂಟ್ರಲ್ ಕೆಲಸಗಾರರಿಗೆ ಬೇರೆಬೇರೆಯಾಗಿ ಪೆನ್ಷನನ್ನು ಕೊಡಲಾಗುತ್ತದೆ. ಫ್ಯಾಮಿಲಿ ಪೆನ್ಷನ್ ಬೇರೆ ಇರುತ್ತದೆ. ಇಪ್ಪತ್ತೈದರಿಂದ ಮೂರು ಸಾವಿರದವರೆಗೂ ಪೆನ್ಷನನ್ನು ಕೊಡಲಾಗುತ್ತದೆ. ಸಾಮಾನ್ಯವಾಗಿ ತಿಂಗಳ ಕೊನೆಯ ವಾರದಿಂದ ಮೊದಲ ವಾರದವರೆಗೂ ಯಾರೂ ರಜ ಹಾಕುವುದಿಲ್ಲ. ಪೆನ್ಷನ್‌ದಾರರಿಗೆ ಹಣ ಕೊಡುವ ದಿನಗಳೆಂದಲ್ಲ—ಹಣ ಬರುವ ದಿನಗಳೆಂದು.

ಇಪ್ಪತ್ತು ದಿನಗಳಿಂದ ರಜದಲ್ಲಿದ್ದ ನಾನು ಆ ದಿನವೇ ಕೆಲಸಕ್ಕೆ ಹೋದೆ. ಸೂಪರಿಂಟೆಂಡೆಂಟ್ ಆಗಿ ಸಹಿ ಮಾಡುವ ಜವಾಬ್ದಾರಿ ನನ್ನ ಮೇಲಿದೆ. ನಾನು ರಜದಲ್ಲಿದ್ದರೆ ಪೆನ್ಷನ್‌ದಾರರನ್ನು ಪದೇ ಪದೇ ಬರುವಂತೆ ನಮ್ಮವರು ಸುತ್ತಿಸುತ್ತಾರೆ. ಅದಕ್ಕೆ ಸ್ವಲ್ಪ ಸುಸ್ತಿದ್ದರೂ ಕೆಲಸಕ್ಕೆ ಹೋಗಿದ್ದೆ. ರಾಜೇಂದ್ರ ಕೂಡ ಹದಿನೈದು ದಿನಗಳ ರಜ ದಲ್ಲಿದ್ದವನು ಆ ದಿನವೆ ಕೆಲಸಕ್ಕೆ ಬಂದ. ಶಬರಿಮಲೈಗೆ ಹೋಗಿದ್ದನಂತೆ.

ಆಫೀಸಿನಲ್ಲಿ ಕೆಲಸವೆಷ್ಟೇ ಇದ್ದರೂ ಮಾತುಕತೆಗೆಂದೂ ಫುಲ್‌ಸ್ಟಾಪ್ ಬೀಳುವುದಿಲ್ಲ.

"ಏನಯ್ಯಾ. ಯಾತ್ರೆ ಚೆನ್ನಾಗಿ ಆಯಿತೆ?" ರಾಜೇಂದ್ರನನ್ನು ಯಾರೋ ಕೇಳಿದರು.

"ಚೆನ್ನಾಗಿ ಆಯಿತು. ಅಯ್ಯಪ್ಪ ಸ್ವಾಮಿಯ ದೆಯೆಯಿಂದ ಎಲ್ಲೂ ತೊಂದರೆ ಆಗಲಿಲ್ಲ. ಎಷ್ಟೇ ಆದರೂ ಸ್ವಾಮಿಯ ಮಹಿಮೆ ದೊಡ್ಡದು. ಸ್ವಾಮಿಯೇ ಶರಣಂ". ಎರಡು ಕೈಗಳನ್ನು ಜೋಡಿಸಿ ಭಕ್ತಿಯಿಂದ ರಾಜೇಂದ್ರ ಹೇಳಿದ.

"ಎಲ್ಲರೂ ಡಿಸೆಂಬರ್ ಕೊನೆಯಲ್ಲಿ ಇಲ್ಲ ದಿದ್ದರೆ ಸಂಕ್ರಾಂತಿಗೆ ಹೋಗ್ತಾರೆ. ನೀನು ಮುಂಚೆಯೇ ಏಕೆ ಹೋಗಿ ಬಂದೆ?"

"ಆಗ ಜನಸಂದಣಿ ತುಂಬಾ ಇರುತ್ತೆ. ಭಕ್ತಾದಿಗಳು ಲಕ್ಷಗಟ್ಟಲೆ ಬರುತ್ತಾರೆ. ಸೌಕರ್ಯ, ಶುಭ್ರತೆ ಇರುವುದಿಲ್ಲ. ಅದಕ್ಕೆ ಮುಂಚೆಯೇ ಹೋಗಿ ಬಂದೆ. ಆದರೂ ಈಗ ಅಂತಹ

ನಿಯಮ, ಕಟ್ಟುಪಾಡು ಇಲ್ಲ."

ಹೌದು. ಈಗ ಎಂತಹ ನಿಯಮ ನಿಷ್ಠೆ ಕೂಡ ಪಾಲಿಸುವ ಆವಶ್ಯಕತೆಯಿಲ್ಲ. ಆ ದೀಕ್ಷೆ ಯಾದರೂ ಏಕೆ? ನಲುವತ್ತೈದು ದಿನಗಳ ಕಾಲ ಮನುಷ್ಯ ಸಾತ್ವಿಕ ಆಹಾರವನ್ನು ಸೇವಿಸುತ್ತಾ ಸಾತ್ವಿಕ ಗುಣಗಳನ್ನು ಅಳವಡಿಸಿಕೊಂಡು, ಕಷ್ಟಗಳಿಗೆ ಹೊಂದಿಕೊಳ್ಳುವಂತೆ ನಿಯಮದಿಂದ ದೀಕ್ಷೆ ನಿರ್ವಹಿಸಿದರೆ ಅದು ಅಭ್ಯಾಸವಾಗಿ ಮನುಷ್ಯ ರುಜು ಮಾರ್ಗವನ್ನು ಹಿಡಿಯುತ್ತಾನೆಂದು ಇರುವುದು. ಆದರೆ ನಡೆಯುತ್ತಿರುವುದು ಏನು? ಎಲ್ಲಾ ನಿಯಮಗಳನ್ನು ಸಡಿಲಿಸಿ, ಪೂಜೆಯನ್ನು ಆಧುನೀಕರಿಸಿ, ಹತ್ತು ಮಂದಿಯಲ್ಲಿ ದೊಡ್ಡತನ ತೋರಿಸಿಕೊಳ್ಳುವುದಕ್ಕೆ ಅದೊಂದು ಅವಕಾಶವಾಗಿ ಬದಲಾಗುತ್ತಿದೆ. ಇದೂ ಕೂಡ ಒಂದು ರೀತಿಯಲ್ಲಿ ವ್ಯಾಪಾರವಾಗಿ ಹೋಗಿದೆ.

ನಲುವತ್ತು ದಿನಗಳ ದೀಕ್ಷೆಯಿಂದ ಬದಲಾಗುತ್ತಾರೆಂಬುದು ಬರೀ ಭ್ರಮೆ. ಎಷ್ಟು ಜನರಲ್ಲಿ ಕೋಪ, ಅಸೂಯೆ ಹೋಗಿದೆ? ಮದ್ಯ, ಧೂಮಪಾನದಲ್ಲಿ ಅದೆಷ್ಟು ಜನರಿಗೆ ವಿರಕ್ತಿ ಮೂಡಿದೆ? ವ್ರತ, ದೀಕ್ಷೆ ಮನುಷ್ಯನ ಐಹಿಕ ವಾಂಛೆಗಳನ್ನು ತಡೆದು ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗಿದೆ ಎಂದುಕೊಂಡರೆ ಅವುಗಳನ್ನು ಪಾಲಿಸಿದ ಎಷ್ಟು ಜನ ಒಳ್ಳೆಯ ಮಾರ್ಗದಲ್ಲಿ ನಡೆಯುತ್ತಿದ್ದಾರೆಂಬುದು ವಿವಾದಾಸ್ಪದ.

ಈ ರಾಜೇಂದ್ರನ ವಿಷಯ ತಿಳಿಯದವರೇ ಇಲ್ಲ. ಅನಾವಶ್ಯಕವಾಗಿ ಒಂದು ಪೈಸೆಯನ್ನೂ ತಾನು ಕಷ್ಟಪಟ್ಟು ದುಡಿದುದರಲ್ಲಿ ಖರ್ಚು ಮಾಡುವುದಿಲ್ಲ. ಅನಾಯಾಸವಾಗಿ ಬರುವ ಹಣವನ್ನು ಬಿಡುವುದಿಲ್ಲ. ಅದಕ್ಕೆ ಆಫೀಸಿನಲ್ಲಿ ಹೆಚ್ಚಾಗಿ ಹಣ ವಸೂಲಾಗದ ಸಮಯವನ್ನು ನೋಡಿಕೊಂಡು ಒಂದು ವಾರ ದೀಕ್ಷೆಯಿಂದ ಇದ್ದು, ಸರಿಯಾದ ಸಮಯಕ್ಕೆ ಹಿಂದಿರುಗಿದ್ದ. ಈ ಸಂಜೆ ಬಾರ್‌ನಲ್ಲಿರುತ್ತಾನೆ. ಬರುವ ಭಾನುವಾರ ರೇಸ್ ಕೋರ್ಸ್‌ನಲ್ಲಿರುತ್ತಾನೆ.

"ವೆಂಕಟೇಶ್, ನಿಮ್ಮ ಯಾತ್ರೆ ಚೆನ್ನಾಗಿತ್ತೆ. ನೀವು ತಿರುಪತಿಯಿಂದ ಬಂದ ಮೇಲೆ ನಿಮ್ಮನ್ನು ನೋಡುತ್ತಿರುವುದೇ ಈಗ" ಎಂದ ರಾಜೇಂದ್ರ.

"ತುಂಬಾ ಚೆನ್ನಾಗಿ ದರ್ಶನವಾಯಿತು." ನನ್ನೆದುರಿಗೆ ಶರ್ಮ ನಾನು ಹೇಳಿದ್ದನ್ನೆಲ್ಲಾ ವಿವರಿಸಿದ.

"ನೀವು ತುಂಬಾ ಪುಣ್ಯವಂತರಪ್ಪಾ. ಆ ವಿಷಯ ದೇವರಿಗೆ ತಿಳಿದಿದ್ದರಿಂದಲೇ ಅಂತಹ ಅವಕಾಶವನ್ನು ಕಲ್ಪಿಸಿಕೊಟ್ಟ" ರಾಜೇಂದ್ರ ಹೇಳಿದ.

ಉಕ್ಕಿ ಬರುತ್ತಿದ್ದ ನಗುವನ್ನು ತಡೆದುಕೊಂಡೆ. ಅವರಂತೆ ನಾನು ಲಂಚವನ್ನು ತೆಗೆದುಕೊಳ್ಳದಿರುವುದರಿಂದ ಪುಣ್ಯಾತ್ಮನೆಂದುಕೊಂಡಿದ್ದಾರೆ. ನನ್ನೊಂದಿಗೆ ಗರ್ಭಗುಡಿಯೊಳಕ್ಕೆ ಬಂದ ಗುಂಪಿನಲ್ಲಿ ಎರಡು ಕೊಲೆಗಳನ್ನು ಮಾಡಿ ಬೆಯಿಲ್ ಮೇಲೆ ಬಿಡುಗಡೆಯಾಗಿರುವವನು. ಇವರುಗಳಿಗಿಂತ ನೀಚಕರ ಕೆಲಸಗಳನ್ನು ಮಾಡಿ ಕೆಲಸದಿಂದ ತೆಗೆದುಹಾಕಲ್ಪಟ್ಟಿರುವವರು ಇದ್ದರೆಂಬುದು ಇವರಿಗೆ ತಿಳಿಯದು. ಒಂದು ವೇಳೆ ನಾನು ಆ ಮಾತನ್ನು ಹೇಳಿದರೆ ಇವರ ಉತ್ತರವನ್ನು ಊಹಿಸಬಲ್ಲೆ. ಅವರು ಮಾಡಿದ ಪೂರ್ವಜನ್ಮದ ಸುಕೃತವೆನ್ನುತ್ತಾರೆ.

ಪೂರ್ವ ಜನ್ಮದ ಪುಣ್ಯದ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತಾರೆಂದು ನಂಬಿದವರು ಈ ಜನ್ಮದಲ್ಲಿ ಮಾಡಿದ ಪಾಪ ಬರುವ ಜನ್ಮದಲ್ಲಿ ಅನುಭವಿಸಬೇಕಾಗುತ್ತದೆಂದು ಏಕೆ ಆಲೋಚಿಸುವುದಿಲ್ಲ.

ಏತಕ್ಕೆ ನನಗೆ ಇಂತಹ ಆಲೋಚನೆಗಳು ಬರುತ್ತವೆ? ಮೊಸರನ್ನು ಕಡೆದರೆ ಅಣು, ಅಣುವು ಸೇರಿ ಬೆಣ್ಣೆ ಮುದ್ದೆಯಾಗಿ ಮೇಲೆ ತೇಲುತ್ತದೆ. ನನ್ನ ಆಲೋಚನೆಯನ್ನು ಕಡೆದರೆ ಬರುವುದು ತಲೆನೋವು ಮಾತ್ರ. ವಿಜ್ಞಾನ ಎಷ್ಟೊಂದು ಮುಂದುವರಿದಿದೆ. ಎಷ್ಟೊಂದು ಉಪಕರಣಗಳನ್ನು ಕಂಡುಹಿಡಿದಿದ್ದಾರೆ. ಮನುಷ್ಯನ ಆಲೋಚನೆಗೆ "ಆನ್—ಆಫ್" ಮಾಡುವ ಸ್ವಿಚ್ಚನ್ನು ಕಂಡುಹಿಡಿದರೆ ಎಷ್ಟು ಚೆನ್ನಾಗಿರುತ್ತದೆ?

* * *

ನನ್ನ ಪ್ರಕಟಣೆಯನ್ನು ಕೊಟ್ಟು ಹತ್ತು ದಿನದ ನಂತರ ಎಕ್ಸ್‌ಪ್ರೆಸ್‌ನ ಆಫೀಸಿಗೆ ಹೋದೆ. ಒಂದು ಪತ್ರವೂ ಬಂದಿರಲಿಲ್ಲ. ಮತ್ತೊಂದು ವಾರ ಬಿಟ್ಟು ಹೋದಾಗಲೂ ನನ್ನ ಪ್ರಕಟಣೆಗೆ ಯಾವ ರೀತಿಯ ಉತ್ತರವೂ ಇರಲಿಲ್ಲ. ಸ್ನೇಹಿತರನ್ನು ಸಂಪಾದಿಸುವ ಮಾರ್ಗ ಇದಲ್ಲವೆಂದು ಎನಿಸಿತು. ಪ್ರಕಟಣೆಯನ್ನು ಮತ್ತೆರಡು ವಾರ

ಪ್ರಕಟಿಸಲು ಹೇಳಿ ಹಿಂದಿರುಗಿದೆ. ದಾರಿಯಲ್ಲಿ ಮುರಳಿ ಸಿಕ್ಕ.

"ಬಾರೋ, ಕಾಫಿ ಕುಡಿಯೋಣ" ಎಂದೆ.

"ಟೈಂ ಆಗುತ್ತೆ. ಬೇಗ ಹೋಗದಿದ್ದರೆ ಸ್ಥಳ ಸಿಗುವುದಿಲ್ಲ."

"ಎಲ್ಲಿಗೆ ಹೋಗ್ತಾ ಇದ್ದೀಯ?"

"ರಾಮಕೃಷ್ಣ ಮಠಕ್ಕೆ. ಸ್ವಾಮಿ ರಂಗನಾಥಾನಂದರ ಉಪನ್ಯಾಸವಿದೆ. ಪ್ರತಿ ಭಾನುವಾರ ಅಲ್ಲಿಗೆ ಹೋಗ್ತೇನೆ. ನೀನ್ಯಾಕೆ ಬರಬಾರದು. ತುಂಬಾ ಚೆನ್ನಾಗಿರುತ್ತೆ" ಎಂದ.

"ಸರಿ. ನಡಿ" ಎಂದು ಕಾರನ್ನೇರಿದೆ.

ಐದೂವರೆಗೆ ಹಾಲ್ ಅರ್ಧಕ್ಕೂ ಮಿಗಿಲಾಗಿ ತುಂಬಿ ಹೋಗಿತ್ತು. ಆರು ಗಂಟೆಯಾಗುವ ಮೊದಲೇ ಹಾಲ್ ತುಂಬಿದ್ದಲ್ಲದೆ ಸುತ್ತಲಿನ ವರಾಂಡವೆಲ್ಲಾ ಜನದಿಂದ ತುಂಬಿ ಹೋಗಿರುವುದನ್ನು ಗಮನಿಸಿದೆ. ವಿದ್ಯಾವಂತರು, ಧನವಂತರು, ಅಧಿಕಾರಿಗಳು ಯಾವುದೇ ರೀತಿಯ ಭೇದ ಭಾವವಿಲ್ಲದೆ ಒಟ್ಟಾಗಿ ಕುಳಿತಿದ್ದರು. ಅಂತಹ ಶಿಸ್ತನ್ನು ನಾನೆಲ್ಲಿಯೂ ನೋಡಿರಲಿಲ್ಲ.

ಆರು ಗಂಟೆಗೆ ಕೆಲವು ನಿಮಿಷಗಳ ಮುಂಚೆಯೇ ಸ್ವಾಮೀಜಿ ಬಂದರು. ಥಳಥಳನೆ ಮಿಂಚುವ ರೇಷ್ಮೆ ವಸ್ತ್ರದಲ್ಲಿ ಬಂದು ಉನ್ನತ ಆಸನದಲ್ಲಿ ಕುಳಿತುಕೊಳ್ಳುವ ಸ್ವಾಮಿ, ಬಾಬಾಗಳನ್ನು ನೋಡಿದ್ದ ನನಗೆ ಈ ಸ್ವಾಮಿಯನ್ನು ಕಂಡು ಆಶ್ಚರ್ಯವಾಯಿತು. ತೀರ ಸಾಮಾನ್ಯವಾದ ವಸ್ತ್ರದಲ್ಲಿ ನಿರಾಡಂಬರರಾಗಿದ್ದರು. ಒಂದು ಸಣ್ಣ ಪೀಠದ ಮೇಲೆ ಕುಳಿತುಕೊಂಡರು. ಆರು ಗಂಟೆಗೆ ಪ್ರಾರ್ಥನೆ ಪ್ರಾರಂಭವಾಯಿತು.

'ಓಂ ಸಹನಾವವತು । ಸಹನೌ ಭುನಕ್ತು ।
ಸಹ ವೀರ್ಯಂ ಕರವಾವ ಹೈ । ತೇಜಸ್ವಿನಾವಧೀತ ಮಸ್ತು ।
ಮಾ ವಿದ್ವಿಷಾವ ಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ।

ಸ್ವಾಮೀಜಿ ಕಳೆದ ಆರು ವಾರಗಳಿಂದಲೂ ಕಠೋಪನಿಷತ್ತನ್ನು ವಿವರಿಸುತ್ತಿದ್ದಾರಂತೆ.

ವಾಜಶ್ರವಸು ವಿಶ್ವಜಿದ್‌ಯಾಗವನ್ನು ಮಾಡಿ ಯಜ್ಞದ ಫಲಕ್ಕಾಗಿ ತನ್ನ ಸಂಪತ್ತೆಲ್ಲವನ್ನು ದಾನ ಮಾಡಿದ. ಆತನ ಮಗ ನಚಿಕೇತ ಬ್ರಾಹ್ಮಣರಿಗೆ ದಾನ ಮಾಡಲ್ಪಟ್ಟ ಹಸುಗಳು ಮುದಿಯಾಗಿದ್ದು ಅದನ್ನು ಪಡೆದವರಿಗೆ ಅವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು, ತಂದೆ ಏತಕ್ಕೆ ಇಂತಹವನ್ನು ದಾನ ಮಾಡಿದನೆಂದು ನೊಂದುಕೊಳ್ಳುತ್ತಾನೆ. ಆ ನೋವಿನಲ್ಲೇ ತಂದೆಯ ಬಳಿಗೆ ಹೋಗಿ, "ತಂದೆಯೇ ಯಜ್ಞದ ದಕ್ಷಿಣೆಯಾಗಿ ನನ್ನನ್ನು ಯಾರಿಗೆ ಕೊಡುತ್ತಿದ್ದೀರಿ!" ಎಂದು ಕೇಳುತ್ತಾನೆ. ತಂದೆ ಕೋಪದಲ್ಲಿ "ನಿನ್ನನ್ನು ಯಮನಿಗೆ ದಾನವಾಗಿ ಕೊಡುತ್ತೇನೆ" ಎನ್ನುತ್ತಾನೆ. ತಂದೆಯ ಮಾತನ್ನು ಚಾಚೂ ತಪ್ಪದ ನಚಿಕೇತ ಯಮಲೋಕಕ್ಕೆ ಹೋಗುತ್ತಾನೆ. ಯಮ ಅಲ್ಲಿ ಇಲ್ಲದಿರಲು ಮೂರು ರಾತ್ರಿ ಅಲ್ಲೇ ಕಾಯುತ್ತಾನೆ. ಯಮ ಹಿಂದಿರುಗಿ ವಿಷಯವನ್ನು ತಿಳಿದು ನೊಂದುಕೊಂಡು ನಚಿಕೇತನಿಗೆ ಮೂರು ವರಗಳನ್ನು ಅನುಗ್ರಹಿಸುತ್ತಾನೆ. ಮೊದಲನೆಯ ವರವಾಗಿ ತಂದೆಯು ತನ್ನಂತೆ ಶಾಂತಚಿತ್ತನಾಗಿ, ಪ್ರಸನ್ನನಾಗಿ, ಕ್ರೋಧರಹಿತನಾಗಿರಬೇಕು. ಮೃತ್ಯುಲೋಕದಿಂದ ಹಿಂದಿರುಗಿದ ನಂತರ ತನ್ನನ್ನು ಗುರುತಿಸಬೇಕೆಂದು ನಚಿಕೇತ ಕೇಳಿಕೊಳ್ಳುತ್ತಾನೆ. ಎರಡನೆ ವರವಾಗಿ ಅಮರತ್ವವನ್ನು ಹೊಂದುವುದರ ಬಗ್ಗೆ ವಿವರಿಸುವಂತೆ ಕೇಳುತ್ತಾನೆ. ಕೊನೆಯದಾಗಿ ಜೀವಾತ್ಮದ ಬಗ್ಗೆ, ಪುನರ್ಜನ್ಮದ ಬಗ್ಗೆ ವಿವರಿಸು ಎನ್ನುತ್ತಾನೆ. ಯಮ ಆ ಪ್ರಶ್ನೆಗಳಿಗೆ ಉತ್ತರ ಕೇಳಕೂಡದೆಂದೂ ಎಲ್ಲಾ ರೀತಿಯ ಸುಖಗಳನ್ನು ಕೊಡುತ್ತೇನೆಂದೂ ಆಸೆ ತೋರಿಸುತ್ತಾನೆ. ಆದರೆ ನಚಿಕೇತ ಯಾವುದಕ್ಕೂ ಒಪ್ಪಿಕೊಳ್ಳುವುದಿಲ್ಲ. ಯಮನಿಂದ ಪರಲೋಕದ ಬಗ್ಗೆ, ಮೃತ್ಯು, ಪುನರ್ಜನ್ಮದ ಬಗ್ಗೆ ತಿಳಿದುಕೊಂಡೇ ಹೊರಡುತ್ತಾನೆ. ಇದು ಸಂಕ್ಷಿಪ್ತ ಕಥೆ.

ವಿದ್ಯೆ, ಅವಿದ್ಯೆ, ಒಳ್ಳೆಯ ಗುಣ, ದುರ್ಗುಣ, ಎಲ್ಲವೂ ಒಟ್ಟಿಗೆ ಮನುಷ್ಯನ ಬಳಿಗೆ ಬರುತ್ತವೆ. ನಚಿಕೇತ ಜ್ಞಾನಿ. ತನಗೇನು ಬೇಕೆಂಬುದು ತಿಳಿದಿದೆ. ಆದ್ದರಿಂದ ತಾತ್ಕಾಲಿಕ ಸಾಂಸಾರಿಕ ಸುಖಗಳನ್ನು ಬಯಸಲಿಲ್ಲ. ಯಾವ ಪ್ರಲೋಭನೆಗಳಿಗೂ ತಲೆಬಾಗಲಿಲ್ಲ. ಅಂತಹ ಆತ್ಮಜ್ಞಾನ ಎಲ್ಲರಿಗೂ ಬರುವುದಿಲ್ಲ.

ತಂದೆಗಿರುವ ಕ್ರೋಧದ ಗುಣ ನಚಿಕೇತನಿಗೆ ನೋವುಂಟುಮಾಡಿತ್ತು. ತಂದೆಯಲ್ಲಿನ ಆ ಗುಣವನ್ನು ಹೋಗಲಾಡಿಸೆಂದು ಕೇಳಿಕೊಳ್ಳು

ತ್ತಾನೆ. ತಂದೆ, ತಾಯಿ ಯಾವಾಗಲೂ ಕ್ರೋಧಾಸಕ್ತರಾಗಿರುವುದು, ಜಗಳವಾಡುತ್ತಿರುವುದು ಮಕ್ಕಳ ಪುಟ್ಟ ಮನಸ್ಸಿಗೆ ಘಾಸಿ ಮಾಡುತ್ತದೆ. ಅದಕ್ಕೆ ತಂದೆ ತಾಯಿಯ ಮುಖ ಪ್ರಸನ್ನವಾಗಿರುವುದನ್ನು ಮಕ್ಕಳು ಬಯಸುತ್ತವೆ. ಒಬ್ಬ ವ್ಯಕ್ತಿ ತಪ್ಪು ಮಾಡಿದರೆ ಅದು ತಂದೆಯಾಗಲಿ, ಗುರುವಾಗಿರಲಿ ತಿದ್ದುವುದರಲ್ಲಿ ತಪ್ಪಿಲ್ಲವೆಂದು ಉಪನಿಷತ್ತಿನಲ್ಲಿ ಗುರು ಶಿಷ್ಯನಿಗೆ ಕೊಟ್ಟ ಉಪನ್ಯಾಸದಲ್ಲಿ ಹೇಳಲಾಗಿದೆ.

ಹೇತುವಾದ, ತರ್ಕವನ್ನು ಬಿಟ್ಟು ಆಲೋಚಿಸಿ ನೋಡಿದರೆ ವೇದದಲ್ಲಿ, ಉಪನಿಷತ್ತಿನಲ್ಲಿ ಮುಖ್ಯವಾಗಿ ಗೀತೆಯಲ್ಲಿ ಇಂದಿನ ಸಮಾಜಕ್ಕೆ ಆವಶ್ಯಕವಾದ ವಿಷಯವನ್ನು ನಾವು ಕಾಣಬಹುದು. ನಮ್ಮ ಸಂಸ್ಕೃತಿಯನ್ನು ಪ್ರಪಂಚದಾದ್ಯಂತ ಸಂಚರಿಸಿ ಪಸರಿಸಿದ ವಿವೇಕಾನಂದರು ಪ್ರಪಂಚದಲ್ಲಿನ ವರ್ಣ ವ್ಯವಸ್ಥೆಯನ್ನು ಖಂಡಿಸಿದರು. ವಿದ್ಯಾವಂತರೆಲ್ಲರೂ ಅದನ್ನು ಓದಬೇಕು. ಅದರಲ್ಲಿನ ಅಮೂಲ್ಯವಾದ ವಿಷಯಗಳನ್ನು ಗ್ರಹಿಸಬೇಕು.

ವಿಜ್ಞಾನವನ್ನು, ವೇದಾಂತವನ್ನು, ಚರಿತ್ರೆ, ರಾಜಕೀಯವನ್ನು ಸಮನ್ವಯಗೊಳಿಸುತ್ತಾ ಸ್ವಾಮೀಜಿ ಕೊಟ್ಟ ಉಪನ್ಯಾಸ ಅದ್ಭುತವಾಗಿತ್ತು. ಒಂದು ಗಂಟೆಯ ಕಾಲ ಅವರು ಮಾಡಿದ ಉಪನ್ಯಾಸವನ್ನು ತನ್ಮಯರಾಗಿ ಎಲ್ಲರೂ ಕೇಳುತ್ತಿದ್ದರು. ಮುರಳಿ ಹೇಳಿದಂತೆ ಮನಸ್ಸಿಗೆ ಶಾಂತಿ, ತೃಪ್ತಿ ಸಿಕ್ಕಿತ್ತು.

ಮನೆಗೆ ಹಿಂದಿರುಗುವವರೆಗೂ ಮುರಳಿ ಆ ವಿಷಯವನ್ನೇ ಮಾತನಾಡುತ್ತಿದ್ದ. ಪ್ರತಿ ಭಾನುವಾರ ಬರಲು ಪದೇ ಪದೇ ಹೇಳಿ ಹೊರಟು ಹೋದ. ಅವನು ಹೊರಟು ಹೋದ ಮೇಲೆ ಮತ್ತೆ ಆಲೋಚನೆಗೊಳಗಾದೆ.

ಮುರಳಿ ಮನೆಯವರು ಚಿಕ್ಕವನಾಗಿರುವಾಗ ನಮ್ಮ ಮನೆಯ ಬಳಿಯಲ್ಲೇ ಇದ್ದರು. ಅವರು ನಮ್ಮಂತೆ ಬಡವರು. ಮುರಳಿಯ ತಂದೆ ರಾಘವೇಂದ್ರ ರಾವ್ ಊರಿನಿಂದ ಸೀರೆ, ದುಪ್ಪಟ್ಟಿಯನ್ನು ತಂದು ಮನೆ ಮನೆಗೆ ತಿರುಗಿ ಮಾರುತ್ತಿದ್ದರು. ಮೂವರು ಗಂಡು ಮಕ್ಕಳನ್ನು ಓದಿಸಲು ಬಹಳ ಕಷ್ಟಪಡುತ್ತಿದ್ದರು. ನಾವು ಕಾಲೇಜಿಗೆ ಬರುವ ವೇಳೆಗೆ ಸಣ್ಣದಾದ ಅಂಗಡಿಯನ್ನು ತೆರೆದರು. ಕಾಲಕ್ರಮೇಣ ಅಭಿವೃದ್ಧಿ



ಹೆಂಡ್ತಿ ಮನೆಯಲ್ಲಿಲ್ಲ... ಡ್ರೈವಿಂಗ್ ಕಲಿಯಲಿಕ್ಕೆ ಹೋಗಿದ್ದಾಳೆ.

ಹೊಂದಿದರು. ಅಂಗಡಿಗೆ ಒಳ್ಳೆ ಹೆಸರು ಬಂದಿತು. ಅವರು ಹೆಚ್ಚು ಲಾಭವನ್ನು ಆಶಿಸುತ್ತಿರಲಿಲ್ಲ. ಮಿಕ್ಕೆಲ್ಲಾ ಅಂಗಡಿಗಳಿಗಿಂತ ಇವರಲ್ಲಿ ಬೆಲೆ ಕಡಿಮೆಯಾಗಿದ್ದರಿಂದ ಮಧ್ಯಮ ವರ್ಗದವರೂ ಅಲ್ಲಿಗೆ ಬರುತ್ತಿದ್ದರು. ರಾಘವೇಂದ್ರ ರಾವ್‌ರಿಗೆ ನಾವೆಂದರೆ ತುಂಬಾ ಅಭಿಮಾನ. ಮನೆ ಬದಲಾಯಿಸಿದರೂ ನಾನು ಅಂಗಡಿಗೆ ಹೋಗಿ ಭೇಟಿಯಾಗಿ ಬರುತ್ತಿದ್ದೆ.

ಸುಜಾತಾ ಹೋದ ಮೇಲೆ ಕೆಲವು ವರ್ಷಗಳು ಯಾರನ್ನೂ ಭೇಟಿಯಾಗಿರಲಿಲ್ಲ. ಒಮ್ಮೆ ರಾಘವೇಂದ್ರ ರಾವ್‌ರನ್ನು ಪಾರ್ಕಿನಲ್ಲಿ ಭೇಟಿಯಾದೆ. ಬಹಳ ಇಳಿದು ಹೋಗಿದ್ದರು. ಮಕ್ಕಳ ನಡತೆ ಅವರನ್ನು ಘಾಸಿಗೊಳಿಸಿದೆಯೆಂದು ಗ್ರಹಿಸಿದೆ.

ಈಗ ಅವರದ್ದು ದೊಡ್ಡ ಹವಾನಿಯಂತ್ರಿತ ಅಂಗಡಿ. ಅಲ್ಲಿಗೆ ಕಾರಿನಲ್ಲಿ ಬರುವವರನ್ನು ಬಿಟ್ಟರೆ ಸಾಮಾನ್ಯರಾದವರು ಅದರಲ್ಲಿ ನುಸುಳಲೂ ಹೆದರುತ್ತಾರೆ. ಎಲ್ಲವೂ ಅವರ ಕೈಮೀರಿ ಹೋಗಿತ್ತು.

"ಅಷ್ಟೊಂದು ಹಣವನ್ನು ಹೇಗೆ ಸಂಪಾದಿಸಿ

ದರು ವೆಂಕಟೇಶ? ಜನರಲ್ ಸ್ಟೋರನ್ನು ಇಡುತ್ತೇನೆಂದರು, ಸರಿ ಎಂದೆ. ಆದರೆ ಹಸು ಗೂಸುಗಳ ಹಾಲಿನ ಪುಡಿಯ ಡಬ್ಬಗಳನ್ನು ಮುಚ್ಚಿಟ್ಟು ಬ್ಲಾಕ್‌ನಲ್ಲಿ ಮಾರುವುದನ್ನು ಸಹಿಸದಾಯಿತು. ರೇಗಿಕೊಂಡಿದ್ದಕ್ಕೆ ಮೂವ್ವರೂ ಸೇರಿಕೊಂಡು ನನ್ನ ಮೇಲೆ ಕೂಗಾಡಿದರು. ಅಂಗಡಿಗೆ ಬರಬೇಡವೆಂದರು. ನನ್ನ ಕೊಠಡಿಯಲ್ಲಿ ಕುಳಿತು ರಾಮ, ಕೃಷ್ಣ ಹೆಸರನ್ನು ಜಪ ಮಾಡೆಂದರು. ಆದರ್ಶವೆಂದುಕೊಂಡು ತೀರಾ ಸಾಮಾನ್ಯ ಕುಟುಂಬದಿಂದ ಹುಡುಗಿಯರನ್ನು ಆರಿಸಿ ಮದುವೆ ಮಾಡಿದೆ. ಆದರೆ ಅವರ್‍ಯಾರಿಗೂ ತಾವು ಕಳೆದ ಹಿಂದಿನ ದಿನಗಳು ಜ್ಞಾಪಕದಲ್ಲಿಲ್ಲ. ಸೊಸೆಯರಿಗೆ ನಾನೆಂದರೆ ಗೌರವ ಇರಲಿ, ಅಭಿಮಾನವೂ ಉಳಿದಿಲ್ಲ. ಒಂದು ಹೊತ್ತು ಕಳೆಯಲೂ ಕಷ್ಟವಾಗಿದ್ದ ದಿನಗಳನ್ನು ಮರೆತು ಬಿಟ್ಟರು. ನಾನೀಗ ಒಂಟಿಯಾಗಿ ಬಿಟ್ಟೇಪ್ಪಾ" ಎಂದು ನೊಂದುಕೊಂಡರು.

ಮುರಳಿಯನ್ನು ಭೇಟಿಯಾದಾಗ ಅವರ ವಿಷಯವನ್ನು ಕೇಳಿದೆ. "ವಯಸ್ಸಾದ ಮೇಲೆ, ಅದರಲ್ಲೂ ಜವಾಬ್ದಾರಿಯನ್ನೆಲ್ಲಾ ಕಳೆದುಕೊಂಡ ಮೇಲೆ ವ್ಯಾಪಾರದ ಉಸಾಬರಿ ಅವರಿಗ್ಯಾಕೆ ಹೇಳು" ಎಂದು ಸುಲಭವಾಗಿ ಹೇಳಿದ. ನಂಬಿದ ಆದರ್ಶಗಳಿಗೆ ವಿರುದ್ಧವಾಗಿ ನಡೆಯುತ್ತಿರುವಾಗ ಮನುಷ್ಯ ಎಷ್ಟು ಕ್ಷೋಭೆಗೆ ಒಳಗಾಗುತ್ತಾನೆಂದು ಅವರಿಂದ ತಿಳಿಯಿತು. ಒಂದು ದಿನ ಪತ್ರಿಕೆಯನ್ನು ತಿರುಗಿಸುತ್ತಿರುವಾಗ ಅವರ ಸಾವಿನ ವಿಷಯ ಕಂಡಿತು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. 'ಮಗ ಸೊಸೆಯರ ನಡತೆ ತನ್ನನ್ನು ಎಷ್ಟು ನೋವಿಗೊಳಗಾಗಿಸಿದೆಯೆಂದು' ವಿವರವಾಗಿ ಬರೆದಿಟ್ಟು ಸಯನೈಡ್ ತೆಗೆದುಕೊಂಡರಂತೆ. ಇದು ನಡೆದು ವರ್ಷಗಳೇ ಆಗಿ ಹೋದವು.

ಅನಂತರ ಮುರಳಿಯನ್ನು ಭೇಟಿಯಾಗಿದ್ದು ಇದೇ ಮೊದಲು. ತಂದೆಯ ಕಾರ್ಯಗಳನ್ನು ಎಷ್ಟು ಜೋರಾಗಿ ನಡೆಸಿದೆನೆಂದು ಹೇಳಿದನೇ ಹೊರತು ಕೊನೆಯ ದಿನಗಳಲ್ಲಿ ಅವರೆಷ್ಟು ದುಃಖಕ್ಕೆ ಒಳಗಾಗಿದ್ದರೆಂದು ಹೇಳಲಿಲ್ಲ. ಈ ದಿನ ಸ್ವಾಮೀಜಿ ಉಪನ್ಯಾಸವನ್ನು ಅಷ್ಟೊಂದು ಮೆಚ್ಚಿಕೊಂಡವನು ಅದರಲ್ಲಿನ ಸಾರವನ್ನು ಎಷ್ಟರಮಟ್ಟಿಗೆ ಗ್ರಹಿಸಬಲ್ಲ? ತಂದೆಗಾಗಿ ಯಮನ ಬಳಿಗೆ ಹೋದ ನಚಿಕೇತನಿಂದ ಅವನು ಕಲಿಯುವುದೇನನ್ನು? ಸ್ವಾಮೀಜಿಯವರ ಉಪನ್ಯಾಸವನ್ನು ಕೇಳುವುದು ಕೂಡ ಒಂದು ಸ್ಟೇಟಸ್ ಸಿಂಬಲಾಗಿ ಭಾವಿಸುತ್ತಾರೆಯೆ?

ಆಲೋಚಿಸುತ್ತಿರುವಂತೆ ಸತ್ಯಾ ಬಂದ. ಅವನು ನಮ್ಮ ಬೀದಿಯಲ್ಲೇ ಇರುವುದು. ರೈಲ್ವೆ



ಯಲ್ಲಿ ಕೆಲಸ. ಬಹಳ ಒಳ್ಳೆಯವನು. ಮೃದು ಸ್ವಭಾವದವ. ಯಾರನ್ನೂ ಯಾವ ರೀತಿಯಲ್ಲೂ ನೋಯಿಸುವುದಿಲ್ಲ. ಸಾಲ ತೆಗೆದುಕೊಂಡು ಮನೆ ಕಟ್ಟಿಸಿಕೊಳ್ಳುತ್ತಿದ್ದಾನೆ.

ಸಾಲ ಸಮಯಕ್ಕೆ ಬಾರದೆ ಕೆಲಸ ನಿಂತಾಗ ನಾನೇ ಸಹಾಯ ಮಾಡಿದ್ದೆ. ಬಹಳಷ್ಟನ್ನು ಆಗಲೇ ತೀರಿಸಿದ್ದ.

"ಏನು ಸತ್ಯಾ. ಮನೆ ಕೆಲಸ ಪೂರ್ತಿಯಾಯಿತೆ?" ಕೇಳಿದೆ.

"ಮುಗಿದಂತೆಯೆ. ಫ್ಲೋರಿಂಗ್ ಆಗುತ್ತಿದೆ" ಎಂದ. ಅವನ ಮುಖವನ್ನು ನೋಡಿದರೆ ಏನೋ ಹೇಳಲು ಚಡಪಡಿಸುತ್ತಿದ್ದಾನೆಂದೆನಿಸಿತು.

"ಏನು ಸತ್ಯಾ. ಹೇಳು ಹಣ ಬೇಕಾಗಿತ್ತೆ?"

"ಹೌದು. ಈಗಾಗಲೆ ನಿಮಗೆ ಸ್ವಲ್ಪ ಹಣ ಕೊಡಬೇಕು. ಕೇಳಲು ನನಗೆ ನಾಚಿಕೆಯಾಗುತ್ತೆ."

"ಎಷ್ಟು ಬೇಕು?".

"ಐದು ಸಾವಿರ. ಮನೆಯನ್ನು ಬಾಡಿಗೆಗೆ ಕೊಟ್ಟು ಸ್ವಲ್ಪ ಸ್ವಲ್ಪವಾಗಿ ತೀರಿಸುತ್ತೇನೆ."

"ಇದೇನು ಹೀಗೆ ಹೇಳ್ತೀಯ? ಅಷ್ಟು ಇಷ್ಟಪಟ್ಟು ಕಟ್ಟಿಕೊಂಡು ಅದರಲ್ಲಿರುವುದಿಲ್ಲವೆ?"

"ಇಲ್ಲಾ ಸಾರ್. ಬಹಳ ಸಾಲವಾಗಿ ಬಿಟ್ಟಿದೆ. ಸಂಬಳದಲ್ಲಿ ಎಲ್ಲಾ ಹೋಗಿ ಕೈಗೆ ಬರುವುದು ತುಂಬಾ ಕಮ್ಮಿ. ಸ್ವಲ್ಪ ದಿನ ಬಾಡಿಗೆಗೆ ಕೊಡದೆ ವಿಧಿಯಿಲ್ಲ."

ಸತ್ಯಾ ತಂದೆಯ ಮಾತನ್ನು ಮೀರುತ್ತಿರಲಿಲ್ಲ. ಅವರನ್ನು ಯಾವುದಕ್ಕೂ ನೋಯಿಸುತ್ತಿರಲಿಲ್ಲ. ಆ ಬಲಹೀನತೆಯನ್ನು ಉಪಯೋಗಿಸಿಕೊಂಡು ಅವನು ಅಂದುಕೊಂಡಿದ್ದಕ್ಕಿಂತ ಹೆಚ್ಚಿಗೆ ಖರ್ಚು ಮಾಡಿಸುತ್ತಿದ್ದಾರೆ.

"ಹದಿನೈದು ದಿನಗಳಲ್ಲಿ ಒಳ್ಳೆಯ ಮುಹೂರ್ತ ವಿದೆಯಂತೆ. ಗೃಹಪ್ರವೇಶ ಮಾಡಬೇಕು. ನಾನು ಮತ್ತೆ ಬಂದು ಹೇಳುತ್ತೇನೆ. ನೀವು ಖಂಡಿತವಾಗಿ ಬರಬೇಕು" ಎಂದ ಸತ್ಯಾ.

"ಸತ್ಯಾ ಸುಮ್ಮನೆ ಸಿಂಪಲಾಗಿ ಮಾಡಿಕೊ. ಎಲ್ಲರನ್ನೂ ಕರೆದು ಸುಮ್ಮನೆ ಆಡಂಬರ ಮಾಡ್ಕೊಂಡು ಖರ್ಚು ಮಾಡಬೇಡ" ಸಲಹೆಯಿತ್ತೆ.

"ನಾನೂ ಹಾಗೇ ಅಂದುಕೊಂಡಿದ್ದೆ. ಆದರೆ ಅಪ್ಪ ಒಪ್ಪಿಕೊಳ್ಳುತ್ತಿಲ್ಲ. ಅಕ್ಕ ತಂಗಿಯನ್ನು ಕರೆಸಬೇಕು. ಬಟ್ಟೆ ಕೊಡಿಸಬೇಕು. ವ್ರತ ಮಾಡಿ ಊಟ ಹಾಕಬೇಕು. ಇರೊದೊಂದು ಅವಕಾಶ. ಇದನ್ನು ಮಾಡಲೇಬೇಕೆನ್ನುತ್ತಿದ್ದಾರೆ. ಇಲ್ಲವೆನ್ನಲಾಗುತ್ತಿಲ್ಲ. ಅದಕ್ಕಾಗಿಯೇ ನಿಮ್ಮನ್ನು ಹಣ ಕೇಳುತ್ತಿರುವುದು."

ಮಾರನೆ ದಿನ ಬಂದು ಹಣ ತೆಗೆದುಕೊಂಡು ಹೋಗಲು ಹೇಳಿ ಕಳುಹಿಸಿದೆ.

'ನಾನು ಆಡಂಬರದ ಖರ್ಚಿಗಾಗಿ ಹಣ ಕೊಡುವುದಿಲ್ಲ. ನೀನು ಸಾಲಗಾರನಾಗಿ ಹೊರೆ ಹೊರುವುದು ಇಷ್ಟವಿಲ್ಲ' ಎಂದು ಜೋರಾಗಿ ಏಕೆ ಹೇಳಲಾರದೆ ಹೋದೆ?

ಸತ್ಯಾ ತುಂಬಾ ಒಳ್ಳೆಯವನು. ನಾನು ಕೊಡುವುದಿಲ್ಲವೆಂದರೆ ಏನೂ ಅಂದುಕೊಳ್ಳುವುದಿಲ್ಲ. ತಂದೆಯ ಮಾತನ್ನು ನಡೆಸುವುದಕ್ಕಾಗಿ ಬೇರೆಲ್ಲಾದರೂ ಬಡ್ಡಿಗೆ ಹಣ ತರುತ್ತಾನೆಯೇ ಹೊರತು ತಂದೆಯನ್ನು ನೋಯಿಸುವುದಿಲ್ಲ. ನನ್ನ ಆದರ್ಶದಿಂದ ಅಂತಹವನು ಕಷ್ಟಪಡುವುದು ನನಗೆ ಸರಿ ಎನಿಸಲಿಲ್ಲ.

ಏನು ಈ ಬದುಕು? ಮಕ್ಕಳು ಸಾಲದ ಪಾಲಾದರೂ ಪರವಾಗಿಲ್ಲ. ತಮ್ಮ ಬಯಕೆ ತೀರಲೇಬೇಕೆನ್ನುವ ತಂದೆ ತಾಯಿಗಳು, ಕಷ್ಟಪಟ್ಟು ದೊಡ್ಡವರನ್ನಾಗಿಸಿ ಜೀವನದಲ್ಲಿ ಬೇಕಾದ್ದುದನ್ನೆಲ್ಲಾ ಒದಗಿಸಿದ ತಂದೆ ತಾಯಿಯನ್ನು ಅವರ ಕೊನೆಯ ದಿನಗಳಲ್ಲಿ ನೋಡಿಕೊಳ್ಳದ ಮಕ್ಕಳು, ಹೆಂಡತಿ, ಮಕ್ಕಳ ಸುಖವನ್ನು ನೋಡದೆ ಕೇವಲ ತನ್ನದನ್ನು ಮಾತ್ರ ನೋಡಿಕೊಳ್ಳುವ ಗಂಡ—ಅರ್ಥವಿಲ್ಲದ ಆಡಂಬರಕ್ಕೆ ಹೋಗಿ ಗಂಡನನ್ನು ಹಿಂಸಿಸುವ ಹೆಂಡತಿ.

ಮಾನವ ಸಂಬಂಧ ಏತಕ್ಕಿಷ್ಟು ಕ್ಷೀಣಿಸುತ್ತಿವೆ? ಆತ್ಮ, ಅಂತರಾತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿರುವ ಮಹತ್ವ ಗ್ರಂಥಗಳಿಗೆ ನಾವು ವಾರಸುದಾರರು. ಅದನ್ನು ಗೌರವಿಸಿ, ಪವಿತ್ರತೆಯನ್ನು ಆಧರಿಸಿ, ಪೂಜಿಸಿ ತೃಪ್ತಿಪಡುತ್ತಿದ್ದೇವೆಯೆ ಹೊರತು ಅದರಲ್ಲಿನ ಅಂತರಾರ್ಥವನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳದ ಅಜ್ಞಾನ ನಮ್ಮದು.

ಆಲೋಚನೆಯಿಂದಾಗಿ ಆ ರಾತ್ರಿ ನಿದ್ರೆಯಿಂದ ವಂಚಿತನಾದೆ.

* * *



ನಿರಕ್ಷರಿ

ಇವಾ ಎಂಥ
ಚೆಂದ ಕಾಣತಾನ
ಪ್ಯಾಂಟು – ಬೂಟು
ಹಾಕ್ಯಾನ
ಅಟೊಮ್ಯಾಟಿಕ್
ವಾಚು ಕಟ್ಯಾನ
ಟೈಮ್ ಕೇಳಿದರ
ಗೊತ್ತಿಲ್ಲ ಅಂತಾನ!

● ಡಿ. ವಿ. ಬಡಿಗೇರ

ಒಂದು ವಾರದ ನಂತರ ಹೋಗಿ ನೋಡಿದಾಗ ನನ್ನ ಜಾಹೀರಾತಿಗೆ ಎರಡು ಉತ್ತರ ಪತ್ರಗಳು ಬಂದಿದ್ದವು. ಇಂಟರ್ ಓದುತ್ತಿದ್ದ ಹುಡುಗ ಬರೆದಿದ್ದ: "ನಾನೀಗ ಕಷ್ಟಪಟ್ಟು ಕೆಲಸ ಮಾಡುತ್ತಾ ಓದುತ್ತಿದ್ದೇನೆ. ನನ್ನನ್ನು ಇಟ್ಟುಕೊಂಡು ಓದಿಸುವುದಾದರೆ ಬರುತ್ತೇನೆ" ಎಂದು ಯಾರೋ ಹೇಳಿ ಬರೆಸಿರುವುದು ಸ್ಪಷ್ಟವಾಗಿತ್ತು. ಎರಡನೆ ಪತ್ರ ಬೈಗುಳದಿಂದ ತುಂಬಿ ಹೋಗಿತ್ತು. ನನ್ನಂತಹ ಭಾವನೆಯವರೇ ಹೆಚ್ಚಾಗಿ ಹೋಗುತ್ತಿರುವುದರಿಂದಲೇ ದೇಶ ಅಧೋಗತಿಗೆ ಇಳಿಯುತ್ತಿದೆಯೆಂದು ಬರೆಯಲಾಗಿತ್ತು. ನನಗೆ ಬೇಕಾದಂತಹುದು ಯಾವುದೂ ಬಂದಿರಲಿಲ್ಲ.

ಪ್ರಕಟಣೆ ಬಗ್ಗೆ ಮರೆತುಬಿಡುವುದು ಒಳ್ಳೆಯದೆಂದೆನಿಸಿತು.

ಮನೆಗೆ ಹಿಂದಿರುಗುವಾಗ ಬೀದಿಯ ಕೊನೆಯಲ್ಲಿ ಜನ ಗುಂಪುಗೂಡಿದ್ದರು. ಹೋಗಿ ನೋಡಲು ಚಿಕ್ಕದಾದ ಗುಡಿಯನ್ನು ಕಟ್ಟುತ್ತಿದ್ದರು.

ಅಲ್ಲಿ ಖಾಲಿ ಸ್ಥಳವಿತ್ತು. ಕೆಲವು ದಿನಗಳ ಹಿಂದೆ ಡ್ರೈನೇಜ್ ಲೈನ್ ಹಾಕುತ್ತಿರುವಾಗ ಕೂಲಿಯೊಬ್ಬ ಎಲೆಕ್ಟ್ರಿಕ್ ಷಾಕ್ ಹೊಡೆದು ಅಲ್ಲಿ ಸತ್ತುಹೋದ. ಅದೇ ಸ್ಥಳದಲ್ಲಿ ಹಾವೊಂದು ಕಾಣಿಸಿತಂತೆ. ನಾಲ್ಕು ದಿನಗಳಲ್ಲಿ ಅಲ್ಲಿ ದೀಪವೊಂದು ಕಾಣಿಸಿತು. ಈಗ ಅಲ್ಲಿ ಗುಡಿ ಏಳುತ್ತಿದೆ. ಇದನ್ನೆಲ್ಲ ಮಾಡುತ್ತಿರುವವನು ಅಲ್ಲಿಯ ಹಳೆಯ ರೌಡಿ. ಹತ್ತಿರದಲ್ಲೇ ಅವನದೊಂದು ಸಾರಾಯಿ ಅಂಗಡಿ ಇದೆ. ಈಗ ಈ ಪ್ರದೇಶವೂ ಅವನ ಹಿಡಿತದೊಳಕ್ಕೆ ಹೋಗುತ್ತಿದೆ.

ದೇವಸ್ಥಾನ ಭಕ್ತರಿಗಾಗಿ ಅಲ್ಲ. ಪಕ್ಕದಲ್ಲಿ ಸಾರಾಯಿ ಅಂಗಡಿ ಬಂದರೂ ಜನರಿಂದ ಒಂದು ಮಾತು ಬರಬಾರದೆಂದು. ಸದ್ಯದಲ್ಲೇ ಅಲ್ಲಿ ನವರಾತ್ರಿ ಉತ್ಸವಗಳು, ಗಣಪತಿ ಪೂಜೆ, ಮಹಾಕಾಳಿಯ ಜಾತ್ರೆ ಮುಂತಾದವು ಪ್ರಾರಂಭವಾಗುತ್ತದೆ. ರೌಡಿಯ ಖಜಾನೆ ತುಂಬುತ್ತದೆ. ಮುಂದಕ್ಕೆ ಅವನು ರಾಜಕೀಯ ನಾಯಕನಾಗುತ್ತಾನೆ.

ಚಿಕ್ಕ ಚಿಕ್ಕ ಘಟನೆಯಿಂದ ಮನುಷ್ಯನ ಬದುಕು ತಿರುವು ಪಡೆಯುತ್ತದೆಂಬುದು ಅಕ್ಷರಶಃ ನಿಜ.

* * *

ಆಫೀಸ್‌ನಲ್ಲಿ ಕೆಲಸ ಹೆಚ್ಚಾಗಿದ್ದುದರಿಂದ ತದೇಕದಿಂದ ಮಾಡುತ್ತಿದ್ದೆ.

"ವೆಂಕಟೇಶ್ ನಿಮಗೆ ಫೋನ್" ಗುರುಮೂರ್ತಿ ಕೂಗಿದ.

"ನನಗೆ ಫೋನೇ?" ಫೋನ್ ಮಾಡಿ ಆತ್ಮೀಯವಾಗಿ ಕುಶಲೋಪರಿಯನ್ನು ಕೇಳುವವರು ನನಗ್ಯಾರೂ ಇಲ್ಲವಲ್ಲ"–ಅನುಮಾನದಿಂದಲೇ ಹೋಗಿ ರಿಸೀವರನ್ನೆತ್ತಿಕೊಂಡೆ.

"ವೆಂಕಟೇಶ್... ನಾನು ಎಕ್ಸ್‌ಪ್ರೆಸ್ ಆಫೀಸ್‌ನಿಂದ ಮಾತನಾಡುತ್ತಿದ್ದೇನೆ" ಎಂದ ಅತ್ತ ಕಡೆಯ ವ್ಯಕ್ತಿ.

"ಹೌದು, ನಾನೇ ವೆಂಕಟೇಶ್."

"ನೀವು ಕೊಟ್ಟಿದ್ದ ಪ್ರಕಟಣೆಗೆ ಉತ್ತರ ಬಂದು ಹತ್ತು ದಿನಗಳಾಯಿತು. ನೀವು ಇತ್ತ ಬಾರದಿರಲು ಫೋನ್ ಮಾಡಿದೆ."

ಹಿಂದಿನ ಸಲ ಹೋದಾಗ ಅಲ್ಲಿಯ ಗುಮಾಸ್ತ

ನಿಗೆ ನನ್ನ ಫೋನ್ ನಂಬರ್, ವಿಳಾಸ ಕೊಟ್ಟು ಬಂದಿದ್ದನ್ನು ಮರೆತಿದ್ದೆ.

"ನೀವೇ ಬಂದು ತೆಗೆದುಕೊಳ್ಳುತ್ತೀರೋ ಅಥವಾ ರೀಡೈರೆಕ್ಟ್ ಮಾಡಲೋ?"

"ಬೇಡ. ನಾನೇ ಬರುತ್ತೇನೆ. ತುಂಬಾ ಥ್ಯಾಂಕ್ಸ್" ಹೇಳಿ ಇಟ್ಟೆ.

ಕೆಲಸ ಮಾಡುತ್ತಿದ್ದರೂ ಪತ್ರದ್ದೇ ಯೋಚನೆ. ಇಷ್ಟು ತಡವಾಗಿ ಯಾರು ಬರೆದಿರಬಹುದು? ಪತ್ರ ಯಾರದ್ದೇ ಆಗಿರಲಿ ನನಗೆ ಸ್ನೇಹದ ಹಸ್ತ ದೊರೆಯಬಹುದೆ?

ಕೆಲಸ ಮುಗಿಯುತ್ತಿದ್ದಂತೆ ಆಟೋ ಹಿಡಿದು ಎಕ್ಸ್‌ಪ್ರೆಸ್ ಆಫೀಸಿಗೆ ಹೋದೆ. ಗುಮಾಸ್ತನನ್ನು ನೋಡಿ ನಸುನಗಲು ಕವರನ್ನು ಕೊಟ್ಟ. ತೆಗೆದು ಕೊಂಡು 'ಥ್ಯಾಂಕ್ಸ್' ಹೇಳಿ ಹೊರಕ್ಕೆ ಬಂದೆ.

ಕವರ್‌ನ ಮೇಲಿರುವ ವಿಳಾಸವನ್ನು ಮುದ್ದಾದ ಅಕ್ಷರದಲ್ಲಿ ಬರೆದಿರುವುದನ್ನು ನೋಡಿದರೆ ಹೆಂಗಸಿನ ಅಕ್ಷರವೆಂದು ಸುಲಭ ವಾಗಿ ತಿಳಿದುಬಿಡುತ್ತದೆ. ತಡೆಯಲಾಗದೆ ಅಲ್ಲೇ ಹರಿದು ಓದತೊಡಗಿದೆ.

"ಬಹಳ ದಿನಗಳಿಂದ ಊರಿನಲ್ಲಿಲ್ಲದ್ದರಿಂದ ನಿಮ್ಮ ಪ್ರಕಟಣೆಯನ್ನು ತಡವಾಗಿ ನೋಡಿದೆ. ನಿಮಗೆ ಈ ಪತ್ರ ತಲುಪಿ, ಅವಕಾಶವಾದಾಗ ಈ ಕೆಳಗಿನ ವಿಳಾಸಕ್ಕೆ ಬನ್ನಿ. ವಿವರವಾಗಿ ಮಾತ ನಾಡಬಹುದು. ಸಂಜೆಯ ವೇಳೆಯಲ್ಲಿ ಮನೆ ಯಲ್ಲೇ ಇರುತ್ತೇನೆ."

— ಅನುಪಮಾ

ಎಂದಿತ್ತು. ವಿಳಾಸ ಆದರ್ಶ ನಗರದ್ದು. ಹತ್ತಿರದಲ್ಲೇ ಇದ್ದಿತ್ತು. ಉತ್ತರ ಬರೆದು ಹತ್ತು ದಿನಗಳಾಗಿತ್ತು. ಆದ್ದರಿಂದ ನಾನಿನ್ನು ಬರದಿರ ಬಹುದು ಎಂದುಕೊಂಡಿರಬಹುದು. ಮುಂದೆ ಆಲೋಚಿಸದೆ ಆಟೋವನ್ನೇರಿ ವಿಳಾಸ ಹೇಳಿದೆ.

ಮನೆಯನ್ನು ಹುಡುಕುವುದು ಕಷ್ಟವೇನಾಗ ಲಿಲ್ಲ. ಒಳ್ಳೆಯ ಸ್ಥಿತಿವಂತರಿರುವ ಬೀದಿ ಅದು. ಬೀದಿಯ ಕೊನೆಯದೆ ವಿಳಾಸದ ಮನೆ. ವಿಶಾಲ ವಾದ ಆವರಣದಲ್ಲಿ ಅದ್ಭುತವಾಗಿ ಕಟ್ಟಲ್ಪಟ್ಟ ಮನೆ. ದೊಡ್ಡದಾದ ಎರಡು ಗೇಟುಗಳಿವೆ. ಮನೆಯ ಮುಂದೆ ವಿಶಾಲವಾದ ಸ್ಥಳದ ಒಂದು ಪಕ್ಕಕ್ಕೆ ಲಾನ್ ಮಾಡಲಾಗಿದ್ದು ಮತ್ತೊಂದು ಪಕ್ಕದಲ್ಲಿ ನಾನಾ ರೀತಿಯ ಗಿಡಗಳನ್ನು ಬೆಳೆಸ ಲಾಗಿತ್ತು.

ಇಂತಹ ಸ್ಥಳಗಳಿಗೆ ಹೋದುದೇ ಇಲ್ಲ. ಒಳಕ್ಕೆ ಹೋಗಲು ಸ್ವಲ್ಪ ಮುಜುಗರವಾಯಿತು. ಹಿಂದಿರುಗಿ ಹೋಗೋಣವೆಂದೆನಿಸಿತು. ಆದರೆ ಹಿಂದಿರುಗಲಾಗದ ಸ್ಥಿತಿಯಲ್ಲಿದ್ದೆ. ಬಂದಿರುವ ಅವಕಾಶವನ್ನು ಕಳೆದುಕೊಳ್ಳಬೇಡವೆಂದು ಅಂತರಾತ್ಮ ಒತ್ತಿ ಹೇಳುತ್ತಿದೆ. ಹುಚ್ಚುತನದಿಂದ ಸಿಕ್ಕಿರುವ ಅವಕಾಶವನ್ನು ಬಿಡಬೇಡವೆಂದು ಎಚ್ಚರಿಸುತ್ತಿದೆ.

ಧೈರ್ಯ ಮಾಡಿ ಗೇಟನ್ನು ತೆಗೆದುಕೊಂಡು ಒಳಕ್ಕೆ ನಡೆದೆ. ಒಳಗಿನ ವಾತಾವರಣ ಪ್ರಶಾಂತ ವಾಗಿ, ಆಹ್ಲಾದಕರವಾಗಿತ್ತು. ಬಣ್ಣ ಬಣ್ಣದ ಹೂವುಗಳು ಅರಳಿ ನಿಂತಿದ್ದುವು. ಹುಲ್ಲಿನ ಮಧ್ಯೆ ಸ್ಟ್ಯಾಂಡಿನ ಉಯ್ಯಾಲೆ. ಪಕ್ಕದಲ್ಲಿ ಜಾಜಿಯ ಬಳ್ಳಿಯನ್ನು ಹಬ್ಬಿಸಲಾಗಿದ್ದು ಪ್ರಕೃತಿ ಆರಾಧಕ ನಿಗೆ ಅದೊಂದು ದೇವಸ್ಥಾನದಂತಿತ್ತು.

ಮನೆಯ ಮುಂದೆ ಪೋರ್ಟಿಕೊ, ಹಿಂದಕ್ಕೆ ವರಾಂಡ. ಹೋಗಿ ಕಾಲಿಂಗ್ ಬೆಲ್‌ನ್ನು ಒತ್ತಿದೆ.

ಇಪ್ಪತ್ತು ವರ್ಷದ ಯುವತಿ ಬಂದು ಬಾಗಿಲನ್ನು ತೆರೆದಳು.

"ಅನುಪಮಾರವರು...?" ಎಂದು ಅರ್ಧಕ್ಕೆ ನಿಲ್ಲಿಸಿದೆ.

"ಒಳಗಿದ್ದಾರೆ, ಬನ್ನಿ. ಕರೆಯುತ್ತೇನೆ" ಆಹ್ವಾನಿಸಿದಳು. ಒಳಕ್ಕೆ ಹೋಗಿ ಸೋಫಾದಲ್ಲಿ ಕುಳಿತೆ.

ಡ್ರಾಯಿಂಗ್ ರೂಂನ್ನು ಕೂಡ ಅಂದವಾಗಿ ಅಲಂಕರಿಸಲಾಗಿತ್ತು. ಬೆಲೆಬಾಳುವ ಸೋಫಾ ಸೆಟ್ಟು, ಷಾಂಡ್ಲಿಯರ್, ಕಾಲಿನ ಕೆಳಗೆ ಮೆತ್ತನೆ ಹಾಸು. ಒಂದು ಪಕ್ಕಕ್ಕೆ ಪುಸ್ತಕಗಳನ್ನು ಪೇರಿಸಿದ ಬೀರು. ಮತ್ತೊಂದು ಪಕ್ಕದ ಗೋಡೆಯನ್ನು ಆಕ್ರಮಿಸಿಕೊಂಡ ಅಂದವಾದ ಪ್ರಕೃತಿಯ ದೃಶ್ಯದ ವಾಲ್ ಪೇಪರ್. ನೋಡಲು ಸಿನಿಮಾದ ಸೆಟ್ಟಿಂಗ್‌ನಂತಿತ್ತು. ಹಣದಿಂದ ಅಂದ ವನ್ನೊಂದನ್ನೇ ಅಲ್ಲ ಆಹ್ಲಾದವನ್ನೂ ಕೊಂಡು ಕೊಳ್ಳಬಹುದೆಂದು ಆಗ ಅರ್ಥವಾಯಿತು.

"ನಮಸ್ತೇ ನಾನೇ ಅನುಪಮಾ... ನೀವು...?"

ಶಬ್ದ ಬಂದತ್ತ ನೋಡಿದೆ. ಆಕೆಗೆ ಸುಮಾರು ನನ್ನ ವಯಸ್ಸೆ ಇರಬಹುದು. ಸುಂದರ ಸ್ತ್ರೀಯೆನ್ನ ಬಹುದು. ಯಾವುದೇ ರೀತಿಯ ಮೇಕಪ್ಪೂ ಇಲ್ಲದಿದ್ದರೂ ಆಕರ್ಷಿಸುವ ರೂಪ.



"ನಮಸ್ತೆ. ನನ್ನ ಹೆಸರು ವೆಂಕಟೇಶ್. ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟಣೆ ಕೊಟ್ಟಿದ್ದು ನಾನೆ" ಎಂದೆ ಎದ್ದು ನಿಂತು ನಮಸ್ಕರಿಸುತ್ತಾ.

"ಓ. ಕುಳಿತ್ಕೊಳ್ಳಿ". ಉತ್ಸಾಹದಿಂದ ಎದುರಿಗೆ ಸೋಫಾದಲ್ಲಿ ಕುಳಿತಳು. "ನಿಮ್ಮ ಪ್ರಕಟಣೆ ಬಂದಾಗ ದೆಹಲಿಗೆ ಹೋಗಿದ್ದೆ. ಬಂದ ಮೇಲೆ ನೋಡಿದೆ. ಪತ್ರ ಬರೆದು ಹತ್ತು ದಿನಗಳಾಯಿತು. ನಿಮಗೆ ಬೇಕಾದ ಸ್ನೇಹ ಸಿಕ್ಕಿರಬಹುದೆಂದು ಕೊಂಡೆ" ಎಂದಳು. ಆಕೆಯ ಮಾತುಗಳು ಹೃದಯದಿಂದ ಬಂದಂತಿತ್ತು.

"ನಾನು ಈ ದಿನ ತಾನೆ ನೋಡಿದೆ. ನೀವು ಹಾಗೆಂದುಕೊಳ್ಳುವಿರೆಂದೇ ತಕ್ಷಣವೆ ಬಂದೆ."

"ನಿಮ್ಮ ಪ್ರಕಟಣೆಯನ್ನು ನೋಡಿ ಆಶ್ಚರ್ಯ ಗೊಂಡೆ. ನೀವು ಉಪಯೋಗಿಸಿದ Agnostic ಎಂಬ ಪದ ನನ್ನನ್ನು ಆಕರ್ಷಿಸಿತು. ಆಸ್ತಿಕತ್ವ, ನಾಸ್ತಿಕತ್ವ ಎನ್ನುತ್ತಾ ಹಾರಾಡುವ ಜನರನ್ನು ಈವರೆಗೂ ಕಂಡಿದ್ದೇನೆ. ಅದರೆ ಮಾನವತ್ವಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡುವ ಸ್ನೇಹಿತರು ಬೇಕು ಎಂದು ನೀವು ಕೇಳಿದ್ದು ನನ್ನಲ್ಲಿ ಕುತೂಹಲವನ್ನು ಹೆಚ್ಚಿಸಿತು. ನೀವು ಸ್ನೇಹಿತರಿಲ್ಲದೆ ನೋವನ್ನು ಅನುಭವಿಸುತ್ತಿದ್ದೇನೆಂದಿದ್ದೀರ. ಸ್ನೇಹಿತರಿಲ್ಲದ ಮನುಷ್ಯರು ಇದ್ದಾರೆಯೆ ಎಂದೆನಿಸಿತು. ನಿಜ ಹೇಳಬೇಕೆಂದರೆ ಆ ಕ್ಯೂರಿಯಾಸಿಟಿಯಿಂದಲೇ ನಾನು ಆ ಪ್ರಕಟಣೆಗೆ ಉತ್ತರಿಸಿದೆ" ಎಂದಳು.

ಆ ಮನೆ, ಆಕೆಯಿರುವ ರೀತಿಯನ್ನು ನೋಡಿಯೇ ಆಕೆಗೆ ಜೀವನದಲ್ಲಿ ನನ್ನಂತೆ ಜೋಡಿ ಬೇಕಾಗಿಲ್ಲವೆಂದು, ಸ್ನೇಹ ಹಂಚುವ ಹೃದಯವಿದೆಯೆಂದು ಅರ್ಥವಾಯಿತು. ಇಲ್ಲದಿದ್ದರೆ ನನ್ನ ಪ್ರಕಟಣೆಗೆ ಉತ್ತರಿಸುವ ಆವಶ್ಯಕತೆಯೇ ಆಕೆಗೆ ಇರಲಿಲ್ಲ.

ಬಾಗಿಲನ್ನು ತೆರೆದು ನನ್ನನ್ನು ಒಳಕ್ಕೆ ಕರೆದ ಯುವತಿ ಟ್ರೇಯನ್ನು ಹಿಡಿದು ಬಂದಳು.

"ನನ್ನ ಮಗಳು ವಿದ್ಯಾ..." ಅನುಪಮಾ ಪರಿಚಯಿಸಿದಳು. "ಎಂ.ಎ. ಓದುತ್ತಿದ್ದಾಳೆ." ಅವಳು ವಿನಯಪೂರ್ವಕವಾಗಿ ನಮಸ್ಕರಿಸಿ

ಒಳಕ್ಕೆ ಹೊರಟುಹೋದಳು. ಟೀಯನ್ನು ಮುಗಿಸುವವರೆಗೂ ಇಬ್ಬರೂ ಮಾತನಾಡಲಿಲ್ಲ.

"ನಿಮ್ಮ ಬಗ್ಗೆ ಹೇಳ್ತೀರಾ, ನನ್ನ ಬಗ್ಗೆ ಹೇಳೆನ್ನುತ್ತೀರಾ?" ಅನುಪಮಾ ಕೇಳಿದಳು.

"ನನ್ನ ಬಗ್ಗೆ ಹೇಳುವುದಕ್ಕೇನೂ ಇಲ್ಲ. ಯಾರೂ ಇಲ್ಲದವ. ಪತ್ನಿ, ಇದ್ದ ಒಬ್ಬಳೇ ಮಗಳು ಸತ್ತು ಇಪ್ಪತ್ತು ವರ್ಷಗಳಾಗುತ್ತಿವೆ. ಅಂದಿನಿಂದಲೂ ಒಂಟಿಯಾಗೇ ಇದ್ದೇನೆ. ಪ್ರಪಂಚವನ್ನು ಓದುತ್ತಿದ್ದೇನೆ. ಅಂತ್ಯವಿಲ್ಲದ ಆಲೋಚನೆಗಳು, ಪ್ರಶ್ನೆಗಳು ನನ್ನಲ್ಲಿ ಏಳುತ್ತಿರುತ್ತವೆ. ಯಾರಲ್ಲಿ ಹಂಚಿಕೊಳ್ಳುವುದೆಂದು ತಿಳಿಯದೆ ಆ ಪ್ರಕಟಣೆಯನ್ನಿತ್ತೆ" ಎಂದೆ.

"ಬೇರೆ ಯಾವ ಪತ್ರಗಳು ಬರಲೇ ಇಲ್ಲವೆ?" ಕೇಳಿದಳು. ಬಂದವುಗಳ ಬಗ್ಗೆ ಹೇಳಿದೆ.

"ಇಷ್ಟು ದಿನ ಒಂಟಿಯಾಗಿ ಏಕಿದ್ದಿರಿ? ಆಗಲೆ ಮದುವೆಯನ್ನೇಕೆ ಮಾಡಿಕೊಳ್ಳಲಿಲ್ಲ?"

"ಈಗಲೂ ನನಗೊಬ್ಬಳು ಸಹಧರ್ಮಿಣಿ ಬೇಕೆಂದುಕೊಂಡಿಲ್ಲ. ನನಗೆ ಅಂತಹ ಜೊತೆ ಬೇಕಾಗಿಲ್ಲ. ನನ್ನ ಭಾವನೆಯನ್ನು ಅರ್ಥಮಾಡಿಕೊಂಡು, ಹಂಚಿಕೊಳ್ಳುವ ಸ್ನೇಹ ಬೇಕು. ಅದೇ ಸಾಕು ನನಗೆ."

"ಹಾಗಾದರೆ ಇಷ್ಟು ದಿನ ಏಕೆ ಕಾದಿರಿ?"

"ಈ ಮಧ್ಯೆ ತಿರುಪತಿಗೆ ಹೋಗಿದ್ದೆ. ಅಲ್ಲಿ ನಡೆದ ಕೆಲವು ಘಟನೆಗಳು ನನ್ನ ಮನಸ್ಸಿಗೆ ತುಂಬಾ ಘಾಸಿ ಮಾಡಿದವು. ಅದನ್ನು ಹಂಚಿಕೊಳ್ಳಲು ನನ್ನ ಪರಿಧಿಯಲ್ಲಿ ನನಗಿರುವ ಸ್ನೇಹಿತರಲ್ಲಿ ಯಾರೂ ಅರ್ಹರೆನ್ನಿಸಲಿಲ್ಲ."

"ನೀವು ತಿರುಪತಿಗೆ ಹೋಗಿದ್ದಿರಾ, ಏತಕ್ಕೆ?"

"ಹರಕೆ ತೀರಿಸುವುದಕ್ಕಾಗಲಿ, ದೇವರನ್ನು ಪೂಜಿಸುವುದಕ್ಕಾಗಲಿ ಅಲ್ಲ. ಪರಿಸರವೆಂದರೆ ನನಗೆ ಇಷ್ಟ. ಯಾವುದೇ ಹಬ್ಬವಾಗಲಿ, ಪುಣ್ಯತಿಥಿಯಾಗಲಿ ಇಲ್ಲದ ಸಮಯ ನೋಡಿಕೊಂಡು ಹೋಗಿ ಹತ್ತು ದಿನ ಇದ್ದು ಬರುತ್ತಿದ್ದೇನೆ. ಅದೊಂದು ಹಾಲಿಡೆ ಟ್ರಿಪ್ ಎಂದುಕೊಳ್ಳಿ. ಇಪ್ಪತ್ತು ವರ್ಷದ ನಂತರ ಗರ್ಭಗುಡಿಯೊಳಕ್ಕೆ ಅಡಿಯಿಟ್ಟೆ. ಕೇವಲ ನನ್ನೊಂದಿಗೆ ಬಂದವರನ್ನು ಓದಲೆಂದು. ಆದರೆ ಆ ವಿಷಯವನ್ನು ಯಾರೊಂದಿಗೂ ಹೇಳಲಿಲ್ಲ. ಹೇಳುವುದಿಲ್ಲ ಕೂಡ. ಏಕೆಂದರೆ ನಾನು ಹೇಳಿದರೂ ಅರ್ಥಮಾಡಿಕೊಳ್ಳುವವರು ನಮ್ಮಲ್ಲಿ ಯಾರೂ ಇಲ್ಲ. ಮೇಲಾಗಿ ನಾನು ಹತ್ತಿರದಿಂದ ದೇವರನ್ನು ನೋಡುವ ಭಾಗ್ಯ ಸಿಕ್ಕಿತೆಂದು ಆನಂದಿಸಿದವರು, ಅಸೂಯೆಯಿಂದ ನೋಡಿದವರೇ ಹೆಚ್ಚಾಗಿದ್ದರು" ಎಂದೆ.

"ಅಂದರೆ ನಿಮ್ಮಲ್ಲಿ ಇಂತಹ ಭಾವನೆಯಿದೆಯೆಂದು ಇಲ್ಲಿಯವರೆಗೂ ನೀವು ಯಾರೊಂದಿಗೂ ಹೇಳಲೇ ಇಲ್ಲವೆ?" ಆಶ್ಚರ್ಯದಿಂದ ಕೇಳಿದಳು.

"ಹೇಳಿ ಪ್ರಯೋಜನವಿಲ್ಲ. ಯಾರಿಗೂ ಅರ್ಥವಾಗೋದಿಲ್ಲ. ನನ್ನನ್ನು ಹುಚ್ಚನಂತೆ ನೋಡುತ್ತಾರೆ. ಅಂತಹ ಭಕ್ತರ ನಡುವೆ ನಾನು ಬದುಕುತ್ತಿರುವುದು."

ಅನುಪಮಾ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಏನೋ ಆಲೋಚಿಸುತ್ತಿದ್ದಾಳೆಂದೆನಿಸಿತು. ನನ್ನ ಭಾವನೆಯನ್ನು ಮಾತಿನಲ್ಲಿ ಸರಿಯಾಗಿ ವ್ಯಕ್ತಪಡಿಸಲಿಲ್ಲವೇನೋ, ನನ್ನ ಬಗ್ಗೆ ಆಲೋಚಿಸಿ ನಗುತ್ತಾಳೇನೋ?

"ನಿಮ್ಮನ್ನು ಸ್ವಲ್ಪ ಮಟ್ಟಿಗೆ ಅರ್ಥಮಾಡಿಕೊಂಡಿದ್ದೇನೆಂದು ಖಂಡಿತವಾಗಿ ಹೇಳಿದರೆ ಏನೂ ಅಂದುಕೊಳ್ಳುವುದಿಲ್ಲ ತಾನೆ?"

"ಪರವಾಗಿಲ್ಲ ಹೇಳಿ. ನಿಮ್ಮೊಂದಿಗೆ ಇಷ್ಟು ದಿನದ ನಂತರ ಹೀಗೆ ಎಲ್ಲಾ ಹೇಳಿರುವುದು. ಇಷ್ಟು ದಿನವೂ ಬಾಯಿಯಿದ್ದೂ ಮೂಕನಾಗಿದ್ದೆ" ಎಂದೆ. ಕಣ್ಣಿನಲ್ಲಿ ಹುಟ್ಟಿದ ನೀರಿನ ಹನಿ ಕಣ್ಣಿನಲ್ಲೇ ಮಾಯವಾಯಿತು. ನನ್ನ ಮೇಲೆ ನನಗೇ ಅನುಕಂಪ ಮೂಡಿ ಬಹಳ ವರ್ಷಗಳೇ ಆಗಿದ್ದವು.

"ನೀವು ಒಂದು ರೀತಿಯ ಇಂಟ್ರಾವರ್ಟ್. ತುಂಬಾ- ಸಾಮಾನ್ಯ ಸ್ಥಿತಿಯಿಂದ ಮೇಲಕ್ಕೆ ಬಂದವರು. ನಿಮ್ಮಲ್ಲಿ ಒಂದು ರೀತಿಯ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಚಿಕ್ಕಂದಿನಿಂದಲೂ ಸ್ಥಿರವಾಗಿ ನಿಂತಿದೆ. ಒಂದು ರೀತಿಯ ಹುಚ್ಚುತನವಿದೆ. ಇದರಲ್ಲಿ ಜೊತೆಗಾತಿಯ ಜೀವನದಲ್ಲಿನ ವಿಷಾದ ನಿಮ್ಮನ್ನು ಕುಗ್ಗಿಸಿದೆ. ಇದರಿಂದ ಹೊರಬರಲು ಸರಿಯಾದ ಪರಿಸ್ಥಿತಿಯಾಗಲಿ, ಸ್ನೇಹಿತರಾಗಲಿ ನಿಮಗೆ ಸಿಗದಿರುವುದು ನಿಮ್ಮ ದುರಾದೃಷ್ಟ."

ಆಕೆಯ ಮಾತಿನಲ್ಲಿರುವ ಸತ್ಯತೆಯನ್ನು ಗುರುತಿಸಿ ಆಲೋಚನೆಯಲ್ಲಿ ಮುಳುಗಿದೆ. ಪ್ರಾಯಶಃ ಅದೇ ಆಗಿರಬಹುದು. ಆಲೋಚನೆಯಲ್ಲಿ ಲೀನನಾಗಿ ಇದ್ದಷ್ಟು ಒಂದೇ ದಿಕ್ಕಿನಲ್ಲಿ

ಹರಿಯುತ್ತದೆ. ನಾಣ್ಯವನ್ನು ತಿರುಗಿಸದ ಹೊರತು ಎರಡನೆ ಮುಖ ಕಾಣಿಸದು.

"ನೀವು ಹೇಳುವುದು ನಿಜವಿರಬೇಕು. ತುಂಬು ಪ್ರೀತಿಯ ಮಗಳು ಸತ್ತು ಹೋದಳು. ಪ್ರೇಮಿಸಿ ಮದುವೆಯಾದ ಪತ್ನಿ ಅದೇ ಕೊರಗಿನಲ್ಲಿ ಪ್ರಾಣ ಬಿಟ್ಟಳು. ಅವರ ಸಾವು ನನ್ನನ್ನು ಹಿಂಡಿ ಹಾಕಿದೆ. ನನ್ನಲ್ಲಿನ ಪೆಚ್ಚುತನವನ್ನು ಮತ್ತಷ್ಟು ಹೆಚ್ಚಿಸುವ ಪರಿಸ್ಥಿತಿಗಳು."

"ಪ್ರತಿಯೊಬ್ಬನ ಜೀವನವನ್ನೂ ಪರೀಕ್ಷಿಸಿದಾಗ ಒಂದು ರೀತಿಯ ಕಥೆಯಾಗಿರುತ್ತದೆ ವೆಂಕಟೇಶ್. ಎಲ್ಲರೂ ತಮ್ಮ ಕಥೆಯಲ್ಲಿ ವಿಷಾದದ ಪಾಲೇ ಹೆಚ್ಚೆಂದು, ಅದಕ್ಕೇನು ಕೊನೆಯೇ ಇಲ್ಲವೆಂದುಕೊಳ್ಳುವರು. ಯಾವುದು ದೊಡ್ಡ ಗೆರೆ, ಯಾವುದು ಚಿಕ್ಕ ಗೆರೆಯೆಂದು ಹೇಳಲಾಗದ ದೊಡ್ಡ ಸಮಸ್ಯೆಯಿದು."

"ಇಂತಹುದೇ ನನ್ನ ಜೀವನದಲ್ಲೂ ನಡೆದಿದೆಯೆನ್ನುತ್ತೀರಾ?"

"ಇದನ್ನು ಕೇಳಿದ ಮೇಲೆ ನೀವೇ ಹೇಳಿ. ನಾನೊಬ್ಬ ಅನಾಥಳು. ರಾಧಾಕೃಷ್ಣ ಹೋಂ ಹೆಸರನ್ನು ಕೇಳಿರುತ್ತೀರ. ಅದನ್ನು ಮಕ್ಕಳಿಲ್ಲದ ಮಹಾರಾಷ್ಟ್ರದ ದಂಪತಿಗಳು ಸ್ಥಾಪಿಸಿದರು. ನನ್ನನ್ನು ಅವರ ಮನೆಯ ಬಾಗಿಲಲ್ಲಿ ಬಿಟ್ಟು ಹೋಗಿದ್ದರಂತೆ. ಅವರೇ ನನ್ನನ್ನು ಬೆಳೆಸಿದರು. ಹತ್ತನೆ ತರಗತಿಯವರೆಗೆ ಓದಿಸಿದರು. ಟೈಪಿಂಗನ್ನು ಕಲಿತು ಸಣ್ಣ ಕೆಲಸಕ್ಕೆ ಸೇರಿದೆ. ನಮ್ಮವರು ಡಾಕ್ಟರ್. ಲಂಡನ್ನಿನಲ್ಲಿ ಓದಿ ಬಂದವರು. ವಿಶಾಲ ಭಾವನೆಯುಳ್ಳ ವ್ಯಕ್ತಿ. ಆಶ್ರಮದಲ್ಲಿನ ಮಗುವೊಂದಕ್ಕೆ ಹುಷಾರಿಲ್ಲದಾಗ ನೋಡಲು ಬಂದು ನನ್ನನ್ನು ನೋಡಿದರು. ಅವರ ಕಡೆಯವರನ್ನೆಲ್ಲಾ ಎದುರಿಸಿ ನನ್ನನ್ನು ಮದುವೆಯಾದರು. ಮದುವೆಯಾದ ಮೇಲೆ ನಾನು ನಿಜವಾದ ಮನುಷ್ಯಳಾದೆ. ನನ್ನನ್ನು ಓದಿಸಿದರು. ಗಂಡನಾಗಿರದೆ ಸ್ನೇಹಿತನಂತೆ ವಿಷಯಗಳನ್ನು ನನ್ನೊಂದಿಗೆ ಚರ್ಚಿಸುತ್ತಿದ್ದರು. ನನಗೆ ಬೆಳಗ್ಗೆ ಎದ್ದೊಡನೆ ದೇವರ ಪ್ರಾರ್ಥನೆ ಮಾಡುವುದು ಅಭ್ಯಾಸ. ಅವರಿಗೆ ಇದರಲ್ಲೆಲ್ಲಾ ನಂಬಿಕೆಯಿಲ್ಲ. ಏನು ಮಾಡುವುದೆಂದು ಯೋಚನೆಯಾಯಿತು. ಅವರು ತನ್ನ ಆಸೆಗೆ ಅನುಗುಣವಾಗಿ ನಡೆದುಕೊಳ್ಳಬೇಕೆಂಬ ಕಟ್ಟುಪಾಡು ಮಾಡಲಿಲ್ಲ. ಅವರ ಮೇಲಿರುವ ಕೃತಜ್ಞತಾಭಾವದಿಂದಲೋ ಏನೋ, ಏನೂ ಮಾಡದವಳಾಗಿದ್ದೆ. ಅದನ್ನು ಅವರು ಗಮನಿಸಿದರು. ಒಂದು ದಿನ ಬೆಳಗ್ಗೆ ನಾನು ಏಳುತ್ತಿದ್ದಂತೆ ತಾವು ಎದ್ದರು. ಬೇಗ ಹಾಲು ಕಾಯಿಸಿ ಒಂದು ಕಪ್ಪು ಓವಲ್ಟೀನ್ ಮಾಡಿಕೊಂಡು ಬರಲು ಹೇಳಿದರು. ಸಾಮಾನ್ಯವಾಗಿ ನಾನು ಸ್ನಾನ ಮಾಡದೆ ಅಡುಗೆ ಮನೆಗೆ ಹೋಗುತ್ತಿರಲಿಲ್ಲ. ಆದರೆ ಎಂದೂ ಇಲ್ಲದೆ ಅಂದು ಅವರು ಕೇಳಿದ್ದರಿಂದ ಸಂತೋಷದಿಂದ ಹೋಗಿ ಓವಲ್ಟೀನ್ ಮಾಡಿಕೊಂಡು ಬಂದೆ. ಅವರು ನನ್ನ ಕೈಯಲ್ಲಿ ಮಾತ್ರೆಯೊಂದನ್ನಿಟ್ಟು "ಈ ಓವಲ್ಟೀನ್ ನನಗಾಗಿ ಅಲ್ಲ. ನಮ್ಮ ತೋಟದ ಮಾಲಿ ಜ್ವರದಿಂದ ಮಲಗಿಕೊಂಡಿದ್ದಾನೆ. ಇದನ್ನು ಅವನಿಗೆ ಕೊಟ್ಟು ಬಾ" ಎಂದರು. ನಾನು ಹೋಗಿ ಅವನನ್ನು ಎಬ್ಬಿಸಿ ಕೊಟ್ಟೆ. "ಅಮ್ಮಾ, ನೀವಾ?..." ಎನ್ನುತ್ತಾ ಕೃತಜ್ಞತೆಯಿಂದ ಎರಡು ಕೈಯನ್ನೆತ್ತಿ ಜೋಡಿಸಿದ. ಏಕೋ ನನ್ನ ಕಣ್ಣಲ್ಲಿ ನೀರಾಡಿತು. ಹಿಂದಿರುಗಿದ ಮೇಲೆ ಅವರು ಹೇಳಿದರು. "ದೈವ ಭಕ್ತಿಗಿಂತ ಮಾನವ ಸೇವೆಯಲ್ಲಿ ಹೆಚ್ಚು ತೃಪ್ತಿ ನನಗೆ ಸಿಗುತ್ತದೆ. ಈಗ ನಿನಗೇನನ್ನಿಸುತ್ತದೆ?" ಆ ದಿನದಿಂದ ನಾನು ಬದಲಾದೆ. ಓದುತ್ತಿರುವಂತೆ ಅವರಿಂದ ಬಹಳಷ್ಟನ್ನು ಕಲಿತೆ. ಪದವೀಧರೆಯಾದ ಮೇಲೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಎರಡು ವರ್ಷದ ಹಿಂದೆ ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಂಡೆ" ಎಂದು ನಿಲ್ಲಿಸಿದಳು.

"ವಿದ್ಯಾ ಒಬ್ಬಳೇ ಮಗಳೇ?"

"ನನ್ನ ಸ್ವಂತ ಮಗಳಲ್ಲ. ರಾಧಾಕೃಷ್ಣ ಹೋಂನಲ್ಲಿದ್ದ ಅನಾಥೆ. ಚೆನ್ನಾಗಿ ಓದುತ್ತಾಳೆಂದು ತಿಳಿದು, ನಾನೇ ಕರೆದುಕೊಂಡು ಬಂದು, ಇಟ್ಟುಕೊಂಡು ಓದಿಸುತ್ತಿದ್ದೇನೆ. ನನಗೊಬ್ಬನೆ ಮಗ. ಕ್ಯಾಪ್ಟನ್ ಆಗಿದ್ದು ಎರಡು ವರ್ಷದ ಹಿಂದೆ ಪೀಸ್ ಕೀಪಿಂಗ್ ಫೋರ್ಸ್‌ನಲ್ಲಿ ಶ್ರೀಲಂಕಾಕ್ಕೆ ಹೋಗಿದ್ದ. ಅಲ್ಲಿ ಯುದ್ಧದಲ್ಲಿ ಸತ್ತು ಹೋದ."

"ಐಯ್ಯಾಂ ಸಾರಿ" ನಿಜವಾಗಿಯೂ ನೋವಾಯಿತು.

"ಪರವಾಗಿಲ್ಲ ಬಿಡಿ. ಇದೆಲ್ಲಾ ಜೀವನದ ನಿಷ್ಠುರ ಸತ್ಯಗಳು. ನಮ್ಮವರು ಹೇಳುತ್ತಿದ್ದರು.

ಕಳೆದದ್ದು ಹಿಂದಿರುಗುವುದಿಲ್ಲ. ಕಳೆದದ್ದನ್ನು ಯೋಚಿಸುತ್ತಾ ಕೂರುವುದು ಅವಿವೇಕ. ಮನುಷ್ಯ ಕೊನೆಯ ಕ್ಷಣದವರೆಗೂ ಜೀವನವನ್ನು ಆಟದಂತೆ ಕಳೆಯಬೇಕು. ಅವರೊಂದಿಗೆ ಅಷ್ಟು ವರ್ಷದಿಂದ ಸಂಸಾರ ಮಾಡಿದ್ದು ನನ್ನನ್ನು ಸ್ಥಿತಪ್ರಜ್ಞಳಾಗುವಂತೆ ಮಾಡಿತು."

"ಅಂದರೆ ಅವರು... ನೀವು" ಸಂದಿಗ್ಧನಾಗಿ ಮಾತನ್ನು ಪೂರ್ಣಗೊಳಿಸಲಾಗದೆ ಸುಮ್ಮನಾದೆ. ನನ್ನ ದೃಷ್ಟಿ ಅವಳ ಹಣೆಯ ಮೇಲಿನ ಬೊಟ್ಟಿನ ಮೇಲೆ ನಿಂತಿತು.

"ಅವರು ಹೋಗಿ ಐದು ವರ್ಷವಾಯಿತು. ಅಪಘಾತವೊಂದರಲ್ಲಿ ಹೋದರು. ಯುಗಯುಗಗಳಿಂದ ಸ್ತ್ರೀಯರಿಗೆ ಈ ಸಮಾಜದಲ್ಲಿ ಆಗುತ್ತಿರುವ ಅನ್ಯಾಯವನ್ನು ಅವರು ಖಂಡಿಸುತ್ತಿದ್ದರು. ಅವರ ಆಸೆಯಂತೆ ನಾನು ಯಾವ ರೀತಿಯ ಕರ್ಮವನ್ನೂ ಮಾಡಲಿಲ್ಲ. ನನ್ನ ಹಣೆಯ ಮೇಲಿನ ಕುಂಕುಮವನ್ನು ತೆಗೆಯಲಿಲ್ಲ. ಆ ವಿಷಯದಲ್ಲಿ ನಾನು ಯಾರನ್ನೂ ಲೆಕ್ಕಿಸಲಿಲ್ಲ."

ಅಂತಹ ಮಹೋನ್ನತ ವ್ಯಕ್ತಿತ್ವವಿರುವ ಸ್ತ್ರೀಯ ಮುಂದೆ ನಾನೊಬ್ಬ ಅಲ್ಪನೆಂದೆನಿಸಿತು. ಆಕೆಯ ದುಃಖದ ಮುಂದೆ ನನ್ನ ದುಃಖ ಎಷ್ಟರಮಟ್ಟಿನದು?

"ವೆಂಕಟೇಶ್, ನಾನೂ ಒಂಟಿಯೇ. ಆದರೆ ಎಂದೂ ದುಃಖಿಸಲಿಲ್ಲ. ಅನಾಥಾಶ್ರಮದಲ್ಲಿ ಮಕ್ಕಳೆಲ್ಲರೂ ನನ್ನನ್ನು 'ಅಮ್ಮಾ' ಎಂದೇ ಕೂಗುತ್ತಾರೆ. ಏನೋ ನಾಲ್ಕು ರೀತಿಯಲ್ಲಿ ನನ್ನ ಕೈಲಾದ ಸಹಾಯವನ್ನು ಹತ್ತು ಜನಕ್ಕೆ ಮಾಡುತ್ತಿದ್ದೇನೆ. ಅದರಲ್ಲಿರುವ ತೃಪ್ತಿಯನ್ನು ಅನುಭವಿಸದ ಹೊರತು ತಿಳಿಯುವುದಿಲ್ಲ."

"ನಿಜ. ನಾನು ಹಾಗೆ ಆಲೋಚಿಸದಾದೆ. ನೀವಂದಂತೆ ನನ್ನಲ್ಲಿನ ಸಂಕೋಚ, ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್ ನನ್ನನ್ನು ಬಂಧಿಸಲ್ಪಟ್ಟವು. ಅದಕ್ಕೆ ಒಂಟಿಯಾಗಿ ಉಳಿದುಬಿಟ್ಟೆ."

"ನಿಮ್ಮ ಭಾವನೆಯನ್ನು ನಿಮ್ಮಲ್ಲೇ ಅಡಗಿಸಿಕೊಳ್ಳುವುದರಿಂದ ಯಾರಿಗೂ ಪ್ರಯೋಜನವಾಗದು. ಎದುರಿಗಿರುವವರು ಇಷ್ಟಪಡುವುದಿಲ್ಲ, ಮೆಚ್ಚುವುದಿಲ್ಲ ಎಂಬ ಆಲೋಚನೆ ನಿಮ್ಮನ್ನು ಆಕ್ರಮಿಸಕೂಡದು. ಭಾವನೆಗಳನ್ನು ಇತರರು ಮೆಚ್ಚಲಿ, ಮೆಚ್ಚದಿರಲಿ, ನೀವು



ನೀವು ಒಮ್ಮೆ ಅಡಿಗೆ ಮಾಡಿಹಾಕಿ ತಾಯಿ... ರಾಯರ ಅಡಿಗೆ ಉಂಡು—ಉಂಡೂ ಬಾಯಿ ರುಚಿ ಕೆಟ್ಟುಹೋಗಿದೆ.

ನಂಬಿರುವುದನ್ನು ಖಂಡಿತವಾಗಿ ಹೊರಗೆಡವುದು ಒಳ್ಳೆಯದೆಂದು ನನ್ನ ಉದ್ದೇಶ. ಮನುಷ್ಯ ತನಗಾಗಿ ತಾನು ಬದುಕುತ್ತಾ ಹಾಗೆಯೇ ಇನ್ನೊಬ್ಬರಿಗಾಗಿಯೂ ಕೂಡ ಬದುಕಬೇಕು. ಆದರೆ ಒಬ್ಬ ಅಲ್ಟ್ರಾಯಿಸ್ಟಾಗಿ ಉಳಿಯಬಾರದು. ನನ್ನ ಗಂಡನ ಪ್ರಭಾವ ನನ್ನ ಮೇಲೆ ಬಹಳ ಬೀರಿದೆ. ಆದರೆ ಅವರು ತಮ್ಮ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ನನ್ನ ಮೇಲೆ ಹೇರಲಿಲ್ಲ. ಹೇಳಬೇಕಾದುದನ್ನು ಹೇಳುತ್ತಿದ್ದರು. ನನ್ನ ನಿಲುವಿಗೆ ತಕ್ಕಂತಹ ನಿರ್ಧಾರವನ್ನು ತೆಗೆದುಕೊಳ್ಳಲು ಹೇಳುತ್ತಿದ್ದರು. ತಮಗೆ ಇಷ್ಟವಾಗದ ಯಾವ ಕೆಲಸವನ್ನು ಮಾಡಿದರೂ ವಿಮರ್ಶಿಸುತ್ತಿರಲಿಲ್ಲ. ಹಾಗೆಯೇ ನನ್ನನ್ನು ಮೆಚ್ಚಿಸಲು ತಮಗೆ ಇಷ್ಟವಾಗದ ಕೆಲಸವನ್ನೂ ಮಾಡುತ್ತಿರಲಿಲ್ಲ. ನಾವಿಬ್ಬರು ಇಬ್ಬರು ವ್ಯಕ್ತಿಗಳು. 'ನನ್ನ ವ್ಯಕ್ತಿತ್ವ ನನ್ನದು. ನಿನ್ನ ವ್ಯಕ್ತಿತ್ವ ನಿನ್ನದು. ಇಬ್ಬರೂ ಅದನ್ನು ಸಾರ್ಥಕಪಡಿಸಿಕೊಳ್ಳುತ್ತಾ ಬದುಕಬೇಕು' ಎನ್ನುತ್ತಿದ್ದರು. ನಿಮ್ಮಲ್ಲಿ ತಪ್ಪಿದೆಯೆಂದು ನೀವು ಭಾವಿಸಬೇಡಿ. ನಿಮ್ಮ ನಿಲುವನ್ನು ಅವಲಂಬಿಸಿ ನಿರ್ಧಾರವನ್ನು ತೆಗೆದುಕೊಳ್ಳಿ" ಎಂದಳು ಅನುಪಮಾ.

"ವಾದದಿಂದ ಅಭಿಪ್ರಾಯಗಳು ಬದಲಾಗುವುದಿಲ್ಲ. ನನ್ನ ಅಭಿಪ್ರಾಯಗಳನ್ನು ತಿಳಿಸುವುದರಿಂದ ಅನಾವಶ್ಯಕವಾದವುಗಳು, ಕಾಮೆಂಟ್ಸ್‌ಗಳು ಪ್ರಾರಂಭವಾಗುತ್ತದೆ. ಅದಕ್ಕೆ ಇನ್ನೊಬ್ಬರ ಮನಸ್ಸನ್ನು ನೋಯಿಸಲು ಮನಸ್ಸಾ



ನೋಡೇ, ಇವರೇ ನನ್ನ ಹೊಸ ಪಿ.ಎ. ಕಮ್ (ಟಿ.ವಿ.) ಮೇಕಪ್ ಮ್ಯಾನ್

ಗದೆ ಮಾತನಾಡದೆ ಸುಮ್ಮನಿರುವುದೆ ಒಳ್ಳೆಯದೆಂದುಕೊಂಡಿದ್ದೆ."

"ವಾದದಿಂದ ಅಭಿಪ್ರಾಯಗಳು ಬದಲಾಗದು, ನಿಜ. ಆದರೆ ಅದನ್ನು ಹತ್ತು ಜನ ಕೇಳಿದರೆ ಒಬ್ಬರಿಂದಲಾದರೂ ಸಲಹೆ ದೊರಕಬಹುದಲ್ಲವೆ. ನಮ್ಮ ಆಲೋಚನೆಗಳು ನಮ್ಮಲ್ಲೇ ಸಮಾಧಿ ಆಗುವುದಕ್ಕಿಂತ, ಒಬ್ಬರಿಂದೊಬ್ಬರಿಗೆ ಕೇಳಿಸುವುದರಿಂದ ಸ್ವಲ್ಪವಾದರೂ ಉಪಯೋಗವಾಗುವುದೆಂದು ನನ್ನ ನಂಬಿಕೆ. ನಿಮ್ಮ ಅಭಿಪ್ರಾಯ ಹೇಳುವುದರಿಂದ ಅವರಿಗೆ ನಿಮ್ಮ ಮೇಲಿದ್ದ ದುರಭಿಪ್ರಾಯ ಮೂಡುತ್ತದೆಂದು ಮೌನ ವಹಿಸಿದರೆ ಅದು ಆತ್ಮ ವಂಚನೆಯಾಗುತ್ತದೆ. ಈ ದಿನ ನಿಮ್ಮ ಅಭಿಪ್ರಾಯ ಹೊರಕ್ಕೆ ಪ್ರಕಟಿಸಿದ್ದರಿಂದಲೇ ನಮ್ಮ ಸ್ನೇಹವೇರ್ಪಟ್ಟಿತು."

"ಅಂದರೆ ನನ್ನನ್ನು ಸ್ನೇಹಿತನನ್ನಾಗಿ ನೀವು ಅಂಗೀಕರಿಸುವಿರೆಂದಂತಾಯಿತು. ತುಂಬಾ ಥ್ಯಾಂಕ್ಸ್" ಎಂದೆ.

"ಸ್ನೇಹದ ಮೊದಲ ಸೂತ್ರ ಕ್ಷಮಾಪಣೆ, ಕೃತಜ್ಞತೆ ಹೇಳದಿರುವುದು, ಮುಂದಿರುವವರ ಅಭಿಪ್ರಾಯವನ್ನು ನಿಷ್ಪಕ್ಷಪಾತವಾಗಿ ವಿಶ್ಲೇಷಿಸುವುದು ಎರಡನೆ ಸೂತ್ರ. ಮೂರ್ಖತನದಿಂದ ವಿತಂಡ ವಾದ ಮಾಡುವುದು, ನಾನು ಹೇಳುವುದು ಸರಿ, ಅದನ್ನು ಮತ್ತೊಬ್ಬರು ಒಪ್ಪಿಕೊಳ್ಳಲೇಬೇಕು ಎನ್ನುವುದು. ಸ್ನೇಹಕ್ಕೆ ವಿರುದ್ಧವಾದ ಸೂತ್ರ. ಯಾವಾಗಲೂ ಇಬ್ಬರ ಅಭಿಪ್ರಾಯ ಎಂದೂ ಒಂದೇ ಆಗಿರುವುದಿಲ್ಲ. ಅದು ಅಸಾಧ್ಯ. ಕೆಲವು ವಿಷಯಗಳಲ್ಲಿ ಒಮ್ಮತ ವೇರ್ಪಟ್ಟರೆ ಅದು ಸ್ನೇಹವನ್ನು ನಿಲ್ಲಿಸುತ್ತದೆ ಎಂದು ನನ್ನ ಅಭಿಪ್ರಾಯ."

ಮನುಷ್ಯನ ಮೆದುಳಿಗೆ ಕಾಡುವುದು ಆಲೋಚನೆ, ತರ್ಕ. ಅದರಿಂದ ತನ್ನ ಮೆದುಳು ಎಷ್ಟು ಸೋತಿದೆಯೆಂದು ಅರ್ಥವಾಯಿತು.

ಮತ್ತಷ್ಟು ಹೊತ್ತು ಕುಳಿತಿದ್ದು ಅಲ್ಲಿಂದ ಹೊರಟೆ. ಅವಕಾಶವಾದಾಗಲೆಲ್ಲಾ ಅವರ ಮನೆಗೆ ಬರಬೇಕೆಂದು, ಸಂಕೋಚಪಡಕೂಡದೆಂದು ಅನುಪಮಾ ಹೇಳಿದಳು.

ಆ ರಾತ್ರಿ ನನ್ನ ಆಲೋಚನೆಯಲ್ಲಿ ಅನುಪಮಾ ಆಕ್ರಮಿಸಿಕೊಂಡಳು. ಅಂತಹ ಉನ್ನತ ವ್ಯಕ್ತಿತ್ವವಿರುವ ಸ್ತ್ರೀಯನ್ನು ನಾನು ನೋಡುತ್ತಿರುವುದು ಇದೇ ಮೊದಲು. ತಾನೊಬ್ಬಳು ಅನಾಥೆ ಎಂದು ಹೇಳಿದಾಗಲೂ ಗಂಡ, ಮಗ ಹೋದರೆಂದು ಹೇಳಿದಾಗಲೂ ಅವಳ ಮುಖ ಭಾವರಹಿತವಾಗಿತ್ತು. ಹಾಗೆಯೇ ತಾನೊಬ್ಬಳು ಎಂ.ಎ. ಪದವೀಧರೆಯೆಂದು, ಗೋಲ್ಡ್ ಮೆಡಲಿಸ್ಟ್ ಎಂದು ಹೇಳುವಾಗಲೂ ಅವಳ ಮುಖ ಭಾವರಹಿತವಾಗಿತ್ತು. ಆ ಸ್ಥಿತಪ್ರಜ್ಞತೆ ಮೆಚ್ಚುರಿಟಿ ಇಲ್ಲದೆ ಬಾರದು.

ಆ ದಿನ ನಾನೊಂದು ಪಾಠವನ್ನು ಕಲಿತೆ. ಅನುಭವಗಳನ್ನು, ಅಭಿಪ್ರಾಯಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕೆಂದುಕೊಂಡೆ. ಬಾವಿಯಲ್ಲಿನ ಕಪ್ಪೆಯಂತಿರಬಾರದು. ನಾಲ್ವರೊಂದಿಗೆ ನಾವು ಹೋಗಬೇಕೇ ಹೊರತು, ನಾಲ್ವರು ನಮ್ಮೊಂದಿಗೆ ಬರಬೇಕೆಂದು ಆಶಿಸುವುದು ತಪ್ಪು.

* * *

"ನಮಸ್ಕಾರ ಸಾರ್" ಪತ್ರಿಕೆಯನ್ನು ಓದುತ್ತಿದ್ದ ನಾನು ಸತ್ಯಾ ಬಂದದ್ದನ್ನು ಗಮನಿಸಲಿಲ್ಲ.

"ಬಾ ಸತ್ಯಾ, ಕುಳಿತ್ಕೊ. ಏನು ವಿಶೇಷ" ಎಂದೆ.

"ನಿಮ್ಮ ದಯೆಯಿಂದ ಮನೆ ಪೂರ್ತಿಯಾಯಿತು. ಈ ಶನಿವಾರ ಗೃಹಪ್ರವೇಶ ಮಾಡಬೇಕೆಂದುಕೊಂಡಿದ್ದೇನೆ."

"ಚೆನ್ನಾಗಿದೆ. ನಾನು ಮಾಡಿದ್ದು ಅಲ್ಪ ಸ್ವಲ್ಪ

ಆರ್ಥಿಕ ಸಹಾಯ. ಕಷ್ಟಪಟ್ಟಿದ್ದು ನೀನು. ರಾತ್ರಿ ಹಗಲೆನ್ನದೆ ದುಡಿದೆ. ಫಲಿತಾಂಶ ಸಿಕ್ಕಿದೆ."

"ನೀವೇನೂ ಅಂದುಕೊಳ್ಳದಿದ್ದರೆ..." ಸಂದೇಹದಿಂದ ಸತ್ಯಾ ಮಾತನ್ನು ಅಪೂರ್ಣ ಗೊಳಿಸಿದ.

"ಏನು ಹಣ ಸಾಲದಾಗಿದೆಯೇ?"

"ಅಯ್ಯೋ ಅದಲ್ಲಾ. ಗೃಹಪ್ರವೇಶವಲ್ಲವೆ. ನಿಮಗಾಗಿ ಬಟ್ಟೆಯನ್ನು ಕೊಂಡುಕೊಂಡಿದ್ದೇನೆ. ಮುಂಚೆಯೇ ಕೊಟ್ಟರೆ ಹೊಲಿಸಿಕೊಳ್ಳಬಹುದೆಂದು ಅಪ್ಪ ಕೊಟ್ಟು ಬರಲು ಹೇಳಿದರು"– ಎಂದ.

"ನನಗೆ ಬಟ್ಟೆಯನ್ನು ನೀನು ಕೊಂಡುಕೊಳ್ಳುವುದೆ ಸತ್ಯಾ. ಇದು ನನಗೆ ಇಷ್ಟವಾಗುವುದಿಲ್ಲ" ಎಂದೆ. ಕೊಟ್ಟ ಹಣಕ್ಕೆ ನಾನು ಬಡ್ಡಿ ತೆಗೆದುಕೊಳ್ಳುವುದಿಲ್ಲವೆಂದು ಈ ರೀತಿಯಲ್ಲಿ ಏನೋ ಕೊಡಬೇಕೆಂದು ಭಾವಿಸುತ್ತಿದ್ದಾನೆ. ಅದು ನನ್ನನ್ನೆಷ್ಟು ಅವಮಾನಿಸಿದಂತಾಗುತ್ತದೆಂದು ಆಲೋಚಿಸಲಿಲ್ಲ.

"ನೀವು ನೊಂದುಕೊಳ್ಳುತ್ತೀರೆಂದು ಅಪ್ಪನಿಗೆ ಹೇಳಿದೆ. ಆದರೆ ಅವರು ಕೇಳಿಸಿಕೊಳ್ಳಲೇ ಇಲ್ಲ" ಸತ್ಯಾ ಹೇಳಿದ ಗಾಬರಿಯಿಂದ.

"ಹೌದು ಸತ್ಯಾ. ನೀನು ನಿಮ್ಮ ತಂದೆಯವರ ಮನಸ್ಸನ್ನು ನೋಯಿಸುವುದಿಲ್ಲ. ನಾನು ನಿನಗೆ ಸಂಬಂಧವಿಲ್ಲದ್ದರಿಂದ ನನ್ನನ್ನು ಅವಮಾನಿಸಬಹುದಲ್ಲವೆ?"

ನನ್ನಿಂದ ಇಂತಹ ಉತ್ತರವನ್ನು ನಿರೀಕ್ಷಿಸಿರಲಿಲ್ಲ. ಏಟುಬಿದ್ದಂತೆ ನೋಡಿದ. ನನ್ನ ಮನಸ್ಸು ನೊಂದರೂ ಬೇರೊಬ್ಬರ ಮನಸ್ಸು ನೋಯಿಸುವುದಿಲ್ಲವೆಂದು ನನ್ನನ್ನು ತಿಳಿದವರಿಗೆ ಗೊತ್ತಿದೆ.

"ನೀವು ಹಾಗೆ ಭಾವಿಸಬೇಡಿ. ನಿಮ್ಮನ್ನು ಅಣ್ಣನೆಂದು ತಿಳಿದುಕೊಂಡೇ ಶುಭಸಂದರ್ಭದಲ್ಲಿ ಏನಾದರೂ ಕೊಡಬೇಕೆಂದುಕೊಂಡೆ ಅಷ್ಟೆ."

"ನಾನು ನಿನಗೆ ಅಣ್ಣನೇ ಆದರೆ ಈ ರೀತಿಯ ಅನಾವಶ್ಯಕ ಖರ್ಚಿಗೆ ಐದುಸಾವಿರವನ್ನು ಸಾಲವಾಗಿ ಕೊಡುತ್ತಿರಲಿಲ್ಲ ಸತ್ಯಾ. ನಿನ್ನ ಸಂಸಾರದ ಪೂರ್ತ ಸಿಂಪಲಾಗಿ ಫಂಕ್ಷನ್ ಮಾಡಿಕೊಳ್ಳಬೇಕೆಂದು ಖಂಡಿತವಾಗಿ ಹೇಳುತ್ತಿದ್ದೆ. ಈ ಸಾಲವನ್ನು ತೀರಿಸಲು ನೀನೆಷ್ಟು ತಿಂಗಳು ಅವಸ್ಥೆ ಪಡಬೇಕೆಂದು ನನಗೆ ಗೊತ್ತಿದೆ."

"ನೀವು ಹೇಳುವುದು ನಿಜವೇ ಆದರೂ ಅಪ್ಪ, ಹಿರಿಯರು, ಸಂಪ್ರದಾಯಸ್ಥರು. ಈ ವಯಸ್ಸಿನಲ್ಲಿ ಅವರನ್ನು ನೋಯಿಸುವುದು, ವಾದಿಸುವುದು ಸರಿ ಎನ್ನುತ್ತೀರ? ನಾನೀಗ ಇಲ್ಲವೆಂದರೆ ತಂದೆಯ ಆಸೆಯನ್ನು ತೀರಿಸದವನು, ತಂದೆಗೆ ತಕ್ಕ ಮಗನಲ್ಲವೆಂದು ನನ್ನನ್ನೇ ಅನ್ನುವುದಿಲ್ಲವೆ?"

"ತತ್ಸರ್ಯ ಪತಿಶ್ರುತಿ, ಪ್ರತಿಕ್ಷತೆ, ಬಲವತಿ, ನಶ್ರುತಿ ಮಾತ್ರಮ್" ಎಂದಿದ್ದಾನೆ ಭಾಮತಿ. ಯಾವುದನ್ನೇ ಆಗಲಿ ಯಾವುದು ಸರಿಯಾಗಿರುತ್ತದೋ ಅದನ್ನು ಮಾತ್ರ ಒಪ್ಪಿಕೊಂಡರೆ ಸಾಕು, ಎಲ್ಲಾ ಸಂಪ್ರದಾಯವನಲ್ಲ. ಹಿಂದಿನ ಸಂಪ್ರದಾಯವನ್ನು ಇಂದು ಸಂಪೂರ್ಣವಾಗಿ ಆಚರಿಸಲಾಗುತ್ತಿದೆಯೇ? ಇಲ್ಲವಲ್ಲ. ಅದಕ್ಕೆ ನಮ್ಮ ಪರಿಸ್ಥಿತಿಯನ್ನನುಸರಿಸಿ ಸಂಪ್ರದಾಯವನ್ನು ಆಚರಿಸುವುದರಲ್ಲಿ ತಪ್ಪೇನು?

"ಅಂದುಕೊಂಡಷ್ಟು ಸುಲಭವಲ್ಲ ಸಾರ್. ಮುಖ್ಯವಾಗಿ ನನ್ನಂತಹವರಿಗೆ ಅವರನ್ನು ಎದುರಿಸಿ ಬದುಕುವುದು ದಿನದಿಂದ ದಿನಕ್ಕೆ ನರಕವಾಗಿರುತ್ತದೆ. ಕ್ಷಮಿಸಿ ನನ್ನನ್ನು."

"ಸರಿ, ನಿನ್ನನ್ನು ನಾನು ಹೀಗೆ ಮಾಡೆಂದು ಹೇಳುವುದಿಲ್ಲ ಸತ್ಯಾ. ಆಲೋಚಿಸು" ಎಂದೆ.

"ಈ ಬಟ್ಟೆಯನ್ನು ಬಲವಂತವಾಗಿ ಕೊಟ್ಟು ನಿಮ್ಮನ್ನು ಅವಮಾನಿಸುವುದಿಲ್ಲ. ಆದರೆ ಶನಿವಾರ ಬೆಳಗ್ಗೆ ಗೃಹಪ್ರವೇಶ ನಂತರ ಸತ್ಯನಾರಾಯಣ ವ್ರತ. ನೀವು ಆ ದಿನವೆಲ್ಲಾ ಅಲ್ಲೇ ಇರಬೇಕು. ಮರೆತುಬಿಡಬೇಡಿ."

"ಕ್ಷಮಿಸು. ನಾನು ಬರುವುದಿಲ್ಲ. ಏನೂ ಮಾಡಬೇಡವೆಂದು ನಿನ್ನನ್ನು ಬಲವಂತ ಮಾಡುವುದಿಲ್ಲ. ಹಾಗೇ ನನ್ನನ್ನು ಬರಲು ಬಲವಂತ ಮಾಡಬೇಡ. ನಿಜ ಹೇಳಬೇಕೆಂದರೆ ನನಗೆ ಆ ರೀತಿಯ ಪೂಜೆ, ವ್ರತದಲ್ಲಿ ನಂಬಿಕೆಯಿಲ್ಲ" ಎಂದೆ.

ಮೊದಲಬಾರಿಗೆ ನಾನು ಮನಸ್ಸುಬಿಚ್ಚಿ ಹೇಳಿದ್ದೆ. ಒಂದು ರೀತಿಯ ತೃಪ್ತಿ ಎನಿಸಿತು. ಅನುಪಮಾಳ ಪ್ರಭಾವವೋ?

* * *

"ಏನು ಸಾರ್. ಈ ದಿನ ಕೂಡ ಇಷ್ಟು ಕಷ್ಟಪಟ್ಟು ಕೆಲಸಮಾಡುತ್ತಿದ್ದೀರ?" ಶರ್ಮ ಕೇಳಿದ.

"ಏಕೆ ಸಂಬಳ ಬಂದ ದಿನ ಕೆಲಸ ಮಾಡ ಕೂಡದೆ?" ಕೇಳಿದೆ.

"ಹಾಗಲ್ಲ. ನಾನು ಬಂದಾಗಿನಿಂದ ನೋಡು ತ್ತಿದ್ದೇನೆ. ತಿಂಗಳ ಮೊದಲದಿನದಿಂದ ಕೊನೆಯ ದಿನದವರೆಗೂ ಒಂದೇ ರೀತಿಯಲ್ಲಿ ಕೆಲಸ ಮಾಡುತ್ತೀರ. ಈ ದಿನ ಯಾರೂ ಕೆಲಸ ಮಾಡುವುದಿಲ್ಲ ಅಲ್ಲವೆ. ನಾಲ್ಕು ಜನರೊಂದಿಗೆ ತಮಾಷೆಯಾಗಿ ಮಾತನಾಡಬಹುದಲ್ಲವೆ?" ಎಂದ. ಆತ ಪೆಚ್ಚಾಗಿದ್ದನ್ನು ಗಮನಿಸಿದೆ. ಪೆನ್ನನ್ನು ಮುಚ್ಚಿ ಪಕ್ಕಕ್ಕಿಟ್ಟೆ.

"ಕುಳಿತ್ಕೋ ಶರ್ಮಾ." ನಾನು ಹೇಳು ತ್ತಿದ್ದಂತೆ ಕುರ್ಚಿ ಎಳೆದುಕೊಂಡು ಕುಳಿತ.

"ಹೇಳು. ನಿನ್ನ ಕುಟುಂಬದ ಬಗ್ಗೆ ಹೇಳು ಕೇಳುತ್ತೇನೆ."

"ಅವನನ್ನೇನು ಕೇಳ್ತೀರ ಸಾರ್ ಡಿ.ಐ.ಜಿ." ವಿಶ್ವೇಶ್ವರ್ ಬಂದು ಕುರ್ಚಿಯನ್ನೆಳೆದು ಕೊಂಡು ಕೂರುತ್ತಾ ಹೇಳಿದ.

"ಡಿ.ಐ.ಜಿ. ಎಂದರೆ?"

"ಡಬಲ್ ಇನ್‌ಕಂ ಗ್ರೂಪ್. ಅವನ ಪತ್ನಿ ಟೀಚರ್. ಇಬ್ಬರೇ ಮಕ್ಕಳು. ಸುಖಸಂಸಾರ" ಎಂದ.

"ನಿಮ್ಮ ಪತ್ನಿ ಕೆಲಸಕ್ಕೆ ಹೋಗುವುದಿಲ್ಲವೆ?" ವಿಶ್ವೇಶ್ವರನನ್ನು ಕೇಳಿದೆ. ಕೆಲವು ವರ್ಷಗಳಿಂದ ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರೂ ಅವರ ಕುಟುಂಬದ ಬಗ್ಗೆ ನನಗೆ ತಿಳಿಯದು. ಬೇಕಾಗೂ ಇರಲಿಲ್ಲ. ಇಷ್ಟು ದಿನವೂ ನನ್ನ ಸ್ವಭಾವವೇ ಹಾಗೆಂದು ಸುಮ್ಮನಿದ್ದರು. ಶರ್ಮ ಹೊಸದಾಗಿ ಬಂದವನಾದ್ದರಿಂದ ತಿಳಿಯದೆ ನನ್ನನ್ನು ಸಂಭಾಷಣೆಗೆ ಇಳಿಸಿದ.

"ಕೆಲಸಕ್ಕೆ ಹೋಗುವುದಕ್ಕೆ ಅವಳಿಗಿಷ್ಟವಿಲ್ಲ."

"ಮಕ್ಕಳೆಷ್ಟು?"

"ನಾಲ್ಕು."

"ನಾಲ್ಕೆ?" ಆಶ್ಚರ್ಯದಿಂದ ಕೇಳಿದೆ. ಈ ದಿನಗಳಲ್ಲಿ ನಾಲ್ಕು ಮಕ್ಕಳ ಹೊಣೆ ಎಂದರೆ ಸುಮ್ಮನೆಯಲ್ಲ.

"ಇವರ ಮನೆಯಾಕೆಯ ತಾಳ್ಮೆಯನ್ನು ಮೆಚ್ಚಬೇಕಾದ್ದೆ ಸಾರ್. ಇಬ್ಬರು ಮಕ್ಕಳನ್ನು ಸುಧಾರಿಸುವುದೇ ನಮಗೆ ಕಷ್ಟವೆನಿಸುತ್ತದೆ. ಒಬ್ಬರ ಸಂಪಾದನೆಯಲ್ಲೇ ಸರಿದೂಗಿಸಿಕೊಂಡರೆ ಚೆನ್ನಾಗಿರುತ್ತದೆಂದು ಕೊಳ್ಳುತ್ತಿರುತ್ತೇವೆ." ಶರ್ಮ ಹೇಳಿದ.

"ಏನು ಮಾಡುವುದು ಸಾರ್. ಮೊದಲನೆಯ ಮೂರು ಮಕ್ಕಳೂ ಹೆಣ್ಣೇ."

"ಅದೃಷ್ಟ ಚೆನ್ನಾಗಿತ್ತು ಮಗ ಹುಟ್ಟಿದ. ಇಲ್ಲದಿದ್ದರೆ ಇನ್ನೂ ಎಷ್ಟು ಮಕ್ಕಳನ್ನು ಹೆರ ಬೇಕಾಗುತ್ತಿತ್ತೋ" ನಗುತ್ತಾ ಹೇಳಿದ ಶರ್ಮ. ವಿಶ್ವೇಶ್ವರನಿಗೆ ಕೋಪ ಬರಬಹುದೆಂದುಕೊಂಡಿದ್ದೆ. ನಕ್ಕು ಸುಮ್ಮನಾದ.

"ತಿರುಪತಿಯಲ್ಲಿ ನಮ್ಮ ಆರೋಗ್ಯಮಂತ್ರಿ ಯನ್ನು ನೋಡಿದೆ. ಏಳು ಹೆಣ್ಣು ಮಕ್ಕಳಾದ ಮೇಲೆ ಗಂಡು ಮಗುವಾಯಿತೆಂದು ಕಲ್ಯಾಣೋತ್ಸವ ಮಾಡಿಸಿದರು"–ಎಂದೆ.

"ಪುತ್ರನಿಲ್ಲದೆ ನರಕದಿಂದ ತಪ್ಪಿಸಿಕೊಳ್ಳು ವಂತಿಲ್ಲ. ಏನು ಮಾಡುವುದು" ಎಂದ ಗುರುನಾಥ. ಅವನಿಗೆ ಈ ತರಹ ನಂಬಿಕೆಗಳು ಬಹಳಷ್ಟಿವೆ.

"ಅಂದರೆ ನನಗೆ ನರಕ ತಪ್ಪಿದ್ದಲ್ಲ" ಎಂದೆ. ಎಲ್ಲರೂ ಏಟು ತಿಂದಂತೆ ನೋಡಿದರು.

"ಛೇ, ನೀವು ಹಾಗಂದುಕೊಳ್ಳಬೇಡಿ. ನೀವೆಂತಹ ಪುಣ್ಯಾತ್ಮರು, ನಿಮಗೆಂತಹ ನರಕ. ಎಷ್ಟು ಮಕ್ಕಳನ್ನು ಪಡೆದರೂ ನಾವು ಮಾಡಿರುವ ಪಾಪಕ್ಕೆ ನರಕ ಖಂಡಿತ" ಎಂದ ಶರ್ಮ.

"ಹಾಗಿರುವಾಗ ಮಕ್ಕಳೇ ಬೇಕೆಂಬ ನಿಯಮ ವಿಲ್ಲ ಅಲ್ಲವೆ. ಎಲ್ಲವನ್ನು ತಿಳಿದು ಕೂಡ ಪಾಪವನ್ನು ಏಕೆ ಮಾಡುತ್ತಿದ್ದೀರ?" ಕೇಳಿದೆ.

"ಏನು ಮಾಡುವುದು ಹೇಳಿ. ನನಗೆ ನಾಲ್ಕು ಮಕ್ಕಳಷ್ಟೇ ಅಲ್ಲ. ಅಮ್ಮ ಕಾಹಿಲೆಯವಳು. ನನ್ನ ಹತ್ತಿರವೇ ಇದ್ದಾಳೆ. ಕೇವಲ ನನ್ನ ಸಂಬಳದಿಂದ ಏಳು ಜನರ ಹೊಟ್ಟೆ ತುಂಬಿಸುವುದು ಸುಲಭ ವಲ್ಲ."

"ನಿನ್ನ ಸಂಪಾದನೆ ಎಷ್ಟೆಂದು ತಿಳಿದರೂ ನಾಲ್ಕು ಮಕ್ಕಳನ್ನು ಏಕೆ ಪಡೆದೆ?"

"ನನಗೂ, ನನ್ನ ಪತ್ನಿಗೂ ಆಪರೇಷನೆಂದರೆ ಭಯ. ಯಾರು ಮಾಡಿಸಿಕೊಳ್ಳಬೇಕೆಂದು ನಿರ್ಧರಿಸುವಷ್ಟರಲ್ಲಿ ನಾಲ್ವರು ಹುಟ್ಟಿದರು" ಸುಲಭವಾಗಿ ಹೇಳಿದ.

"ಅಂದರೆ ನಿಮ್ಮ ಭಯಕ್ಕೆ ಶಿಕ್ಷೆ ಪಡೆಯುವ ವರು ನಮ್ಮ ಬಳಿಗೆ ಬರುವ ಮುದುಕ ಪೆನ್ಶನ್ ದಾರರು" ಎಂದೆ. ಎಲ್ಲರೂ ಮೌನವಹಿಸಿದರು. ವಿಶ್ವೇಶ್ವರನಿಗೂ ಏನು ಹೇಳಬೇಕೆಂದು ತೋಚದೆ

ಸುಮ್ಮನಾದ. ನನ್ನ ಪ್ರಶ್ನೆ ಯಾರಿಗೂ ರುಚಿಸಲಿಲ್ಲ ವೆಂದು ನನಗೆ ಗೊತ್ತಿತ್ತು. ನಾನು ನನ್ನ ಪಾಡಿಗೆ ಫೈಲನ್ನು ನೋಡತೊಡಗಿದೆ.

"ಹಲೋ ವೆಂಕಟೇಶ್. ಹೇಗಿದ್ದೀಯ?" ಎನ್ನುತ್ತಾ ನೀಲಕಂಠ ಬಂದ. ಅವನು ನನ್ನೊಂದಿಗೆ ಬಹಳ ವರ್ಷ ಕೆಲಸ ಮಾಡುತ್ತಿದ್ದು, ಈ ಮಧ್ಯೆ ಇನ್ನೊಂದು ಬ್ರ್ಯಾಂಚ್‌ಗೆ ವರ್ಗವಾಗಿ ಹೋಗಿದ್ದ.

"ಫೈನ್. ಥ್ಯಾಂಕ್ಸ್" ಎಂದೆ.

"ತಿರುಪತಿಗೆ ಹೋಗಿದ್ದಂತೆ. ದರ್ಶನ ಚೆನ್ನಾಗಿ ಆಯಿತೆ?" ನೀಲಕಂಠ ಪ್ರಶ್ನಿಸಿದ. ನನಗೆ ಉತ್ತರಿಸಲು ಅವಕಾಶ ಕೊಡದೆ ಶರ್ಮ ಮೂಗು ಹಾಕಿದ.

"ತುಂಬಾ ಚೆನ್ನಾಗಿ ಆಯಿತಂತಪ್ಪಾ. ಮಂತ್ರಿಗಳವರ ಜೊತೆಯಲ್ಲೇ ಹೋಗಿ ದರ್ಶನ ಮಾಡಿಕೊಂಡು ಬಂದಿದ್ದಾರೆ. ಆದರೆ ಸ್ವಾಮಿಯವರ ಆಭರಣದ ಬಗ್ಗೆ ಸರಿಯಾಗಿ ಹೇಳಲೇ ಇಲ್ಲ. ಸ್ವಲ್ಪ ವಿವರವಾಗಿ ಹೇಳಿ ಸಾರ್" ನನ್ನನ್ನು ಕೇಳಿದ.

"ಹೇಳುವುದಕ್ಕೇನಿದೆ? ಕೋಟಿಗಟ್ಟಲೆ ಬೆಲೆ ಬಾಳುವ ವಜ್ರವೈಢೂರ್ಯಗಳಿಂದ ಮಾಡಿದ ಆಭರಣಗಳು. ದೆಹಲಿಯ ಮ್ಯೂಜಿಯಂನಲ್ಲಿ ರಷ್ಯನ್ ಝಾರ್ ಚಕ್ರವರ್ತಿಗಳ ಆಭರಣದ ಪ್ರದರ್ಶನವನ್ನು ನೋಡಿದ್ದೆ. ಹೆಚ್ಚೂಕಡಿಮೆ ಹಾಗೇ ಇವೆ. ಆದರೆ ಆಕಾರಗಳ ವ್ಯತ್ಯಾಸ."

"ಛೇ, ಅದಕ್ಕೂ ಇದಕ್ಕೂ ಹೋಲಿಸುವುದೆ! ಇದು ದೈವಭೂಷಣಗಳು, ಪವಿತ್ರವಾದದ್ದು. ಸಾಕ್ಷಾತ್ ಕಲಿಯುಗ ವಿಷ್ಣು ಧರಿಸುವುದು" ಎಂದ ನೀಲಕಂಠನ ಧ್ವನಿಯಲ್ಲಿ ಕೋಪ ಇಣುಕಿತು.

"ಅದು ನೋಡುವವರ ದೃಷ್ಟಿಯಲ್ಲಿ ಇರುತ್ತದೆ. ನಾನು ಅದನ್ನು ದೈವದ ಆಭರಣದಂತೆ ನೋಡದೆ ಮಾಮೂಲು ನಗಗಳಾಗಿ ನೋಡಿದೆ."

"ಏನೋ ಇದೂ...! ನಾಸ್ತಿಕನಾಗಿ ಬದಲಾಗುತ್ತಿದ್ದೀಯ!" ನೀಲಕಂಠ ಕೇಳಿದ.

"ನಾಸ್ತಿಕನೆಂದರೆ ಯಾರು? ಅರ್ಥವೇನು?"

"ದೇವರನ್ನು ನಂಬದವನು. ಅದು ಕೂಡ ತಿಳಿಯದೇ? ಅಥವಾ ನಮ್ಮನ್ನು ಪರೀಕ್ಷಿಸುತ್ತಿದ್ದೀಯೋ?"

"ನಾಸ್ತಿಕೊ ವೇದನಿಂದಕಃ—ಎಂದಿದ್ದಾನೆ ಮನು. ವೇದಗಳನ್ನು ನಿಂದಿಸಿದವನು ನಾಸ್ತಿಕನಾಗುತ್ತಾನೆ. ನಾನು ವೇದಗಳನ್ನು ನಿಂದಿಸಲಿಲ್ಲವಲ್ಲ."



ದೇವರೇ, ನಮ್ಮ ಜನರಿಗೇನಾಗಿದೆ? ಇವತ್ತೂ ನಾನು ಹೊಡ್ಕೊಂಡು ಬಂದಿರೋದು 'ನಕಲಿಚಿನ್ನ'!!!

"ನಮಗೆ ವೇದ, ಉಪನಿಷತ್ತುಗಳು ಏನೆಂದು ತಿಳಿದಿಲ್ಲ. ನಮಗೆ ತಿಳಿದಿರುವುದೊಂದೆ, ದೇವರನ್ನು ನಂಬುವುದು. ಅವನನ್ನು ಪೂಜಿಸುವುದು" ಗುರುನಾಥ ಕೋಪದಿಂದ ಹೇಳಿದ.

"ಕೋಪಿಸ್ಕೋಬೇಡ ಗುರುನಾಥ. ಪ್ರಶ್ನೆಯೊಂದಕ್ಕೆ ಉತ್ತರಿಸು. ನಿನ್ನ ದೃಷ್ಟಿಯಲ್ಲಿ ದೇವರೆಂದರೆ ಯಾರು?". ಶಾಂತನಾಗಿಯೇ ಕೇಳಿದೆ.

"ಅದೇನು ಪ್ರಶ್ನೆ? ದೇವರೆಂದ್ರೆ ದೇವರೆ. ವೆಂಟೇಶ್ವರನಾಗಲಿ, ಕಾಶಿ ವಿಶ್ವೇಶ್ವರನಾಗಲಿ, ಯಾರಾದರೂ ಸರಿ. ರಾಮನೆನ್ನು, ಕೃಷ್ಣನೆನ್ನು ದೇವರು ದೇವರೆ " ಎಂದ ತೊಂಬತ್ತು ವರ್ಷದ ಮುದುಕನಿಗೆ ಅಕ್ಷರ ಮಾಲೆಯನ್ನು ಕಲಿಸುವ ಧೋರಣೆಯಲ್ಲಿ.

"ನಾನು ಕೇಳಿದ್ದು ದೇವರ ಹೆಸರಲ್ಲ ನೀಲಕಂಠ. ನಿನ್ನ ದೃಷ್ಟಿಯಲ್ಲಿ ದೇವರೆಂದರೆ ಏನೆಂದು ಹೇಳು".

"ಭಗವಂತ ಸರ್ವಾಂತರ್ಯಾಮಿ. ಅದೇ ನನಗೆ ತಿಳಿದಿರುವುದು."

"ಅಂದರೆ ಈ ಕುರ್ಚಿಯಲ್ಲಿ, ಮೇಜಿನಲ್ಲಿ, ಕೊಠಡಿಯ ಗೋಡೆಯಲ್ಲಿ ಕೂಡ ಭಗವಂತ ಇದ್ದಾನೆಂದಂತಾಯಿತು."



"ಹಿರಣ್ಯಕಶಿಪುವಿನ ಅನಂತರ ನಿನಗೆ ಆ ಅನುಮಾನ ಬಂದಂತಿದೆ. ಹೇಳುತ್ತೇನೆ; ಇದು ಪ್ರಹ್ಲಾದನ ಉತ್ತರ" ಎಂದು 'ಭಕ್ತಪ್ರಹ್ಲಾದ' ಚಿತ್ರದ ಹಾಡನ್ನು ಅಪಸ್ವರದಿಂದ ಹೇಳಿದ ನೀಲಕಂಠ ವ್ಯಂಗ್ಯವಾಗಿ. ಎಲ್ಲರೂ ನಕ್ಕರು. ನಾನು ಶರ್ಮನ ಕಡೆಗೆ ತಿರುಗಿದೆ.

"ಆದರೆ ಶರ್ಮಾ, ಐನೂರು ರೂಪಾಯಿಯ ಪೆನ್ಷನ್ನಿಗಾಗಿ ಅರವತ್ತು ವರ್ಷದ ಮುದುಕನಿಗೆ ಮೂರು ದಿನಗಳು ತಿರುಗಾಡಿಸಿ, ಕೊನೆಗೆ ಹದಿನೈದು ರೂಪಾಯಿ ಲಂಚ ತೆಗೆದುಕೊಂಡು ಬಿಲ್ ಪಾಸ್ ಮಾಡಿದ್ದು ಆ ಕುರ್ಚಿಯಲ್ಲಿ, ಸಾರಿ, ಭಗವಂತನ ಮಡಿಲಲ್ಲಿ ಕುಳಿತು ತಾನೆ? ಮಗಳ ಮದುವೆ ಹತ್ತಿರವಾಯಿತು. ಪೆನ್ಷನ್ ಬೇಗ ಪಾಸ್ ಮಾಡಿಕೊಡಲು ಮುದುಕನೊಬ್ಬ ಎಷ್ಟು ಬೇಡಿಕೊಂಡ ಎಂಬುದು ಜ್ಞಾಪಕವಿದೆಯೆ ಗುರುನಾಥ? ಆತನ ಕಣ್ಣಲ್ಲಿ ನೀರಾಡಿದರೂ, ನಿನಗೆ ಮನಸ್ಸು ಕರಗದಿದ್ದರೂ ಇಲ್ಲಿಯ ಗೋಡೆ, ಮೇಜು, ಕುರ್ಚಿಗಳಿಗೆ ಕರಗಿರಬಹುದು. ಹತ್ತು ದಿನಗಳ ಕಾಲ ತಿರುಗಾಡಿಸಿ ಕೊನೆಗೆ ಹತ್ತು ಪರ್ಸೆಂಟ್ ಹಣ ಕೊಡಬೇಕೆಂದು ಮಾತನಾಡಿ ಮುಂಗಡವಾಗಿ ನೂರು ರೂಪಾಯಿಯನ್ನು ತೆಗೆದುಕೊಂಡಿದ್ದು ಇಲ್ಲಿರುವ ದೇವರ ಎದುರಿನಲ್ಲಿ ತಾನೆ. ಬಿಲ್ಲನ್ನು ಪಾಸ್ ಮಾಡುವ ಮುನ್ನ ಪ್ರತಿ ಪೈಸೆಯನ್ನು ಲೆಕ್ಕಹಾಕಿ ತೆಗೆದುಕೊಂಡ ನಂತರವೇ ಆಗ ಆ ದೈವ ಪ್ರತ್ಯಕ್ಷ ಸಾಕ್ಷಿಯಾಗಿದ್ದಾನೆಂದು ಜ್ಞಾಪಕ ಬರಲಿಲ್ಲವೆ?" ಎಂದೆ. ಯಾರೂ ಉತ್ತರಿಸದಿದ್ದರೂ ಎಲ್ಲರ ಕಣ್ಣಿನಲ್ಲೂ ಕೋಪ, ಬೇಸರ ಸುಳಿದಾಡುತ್ತಿತ್ತು.

"ಹೋದ ತಿಂಗಳು ಏನು ನಡೆಯಿತೆಂದು ಜ್ಞಾಪಕವಿದೆಯೆ ವಿಶ್ವೇಶ್ವರ?" ಕೇಳಿದೆ.

"ಏನಾಯಿತು?" ಅವನಿಗೆ ತಿಳಿದಿದೆಯೆಂದು ನನಗೆ ಗೊತ್ತಿದೆ.

"ಹೋದ ತಿಂಗಳು ಇದೇ ಸಂಬಳದ ದಿನ ಅಕೌಂಟೆಂಟ್ ಮೇಲೆ ಎಲ್ಲರಿಗೂ ಗೊತ್ತಾಗುವಂತೆ ಕೂಗಾಡಿದ್ದು ಜ್ಞಾಪಕವಿದೆಯೆ?"


"ಹೌದು. ಸಂಬಳದಲ್ಲಿ ನನಗೆ ಏಳು ರೂಪಾಯಿಯನ್ನು ಕಮ್ಮಿ ಕೊಟ್ಟಿದ್ದ. ನನಗೆ ನ್ಯಾಯವಾಗಿ ಬರಬೇಕಾದುದನ್ನು ಏಕೆ ಬಿಡಬೇಕು. ಕೇಳಿ ಲೆಕ್ಕ ಸರಿಪಡಿಸಿಕೊಂಡು ತೆಗೆದುಕೊಂಡಿದ್ದು ತಪ್ಪಾ?"ಕೋಪದಿಂದ ಕೇಳಿದ.

"ತಪ್ಪಲ್ಲ. ನ್ಯಾಯವಾಗಿ ನಿನಗೆ ಬರಬೇಕಾದ ಸಂಬಳ ಅದು. ಹಾಗೆಯೇ ಪೆನ್ಷನ್‌ದಾರರು ತಮಗೆ ನ್ಯಾಯವಾಗಿ ಬರಬೇಕಾಗಿದ್ದನ್ನು ತೆಗೆದುಕೊಳ್ಳಲು ತಾನೆ ನಮ್ಮ ಬಳಿಗೆ ಬರುವುದು. ಅವರ ಕೆಲಸ ಮಾಡುವುದಕ್ಕಲ್ಲವೆ ನಮ್ಮನ್ನು ಕೆಲಸಕ್ಕಿಟ್ಟುಕೊಂಡಿರುವುದು. ಪುಕ್ಕಟೆಯಾಗಿ, ನಮ್ಮ ಜೇಬಿನಿಂದ ಕೊಡುವಂತೆ ನಡೆದುಕೊಳ್ಳುವುದು, ಲಂಚ ತೆಗೆದುಕೊಳ್ಳುವುದು ತಪ್ಪಲ್ಲವೆ?"

"ಅದಕ್ಕೂ, ಇದಕ್ಕೂ ಏನು ಸಂಬಂಧ? ಲಂಚವನ್ನು ನಾವು ಮಾತ್ರ ತೆಗೆದುಕೊಳ್ಳುತ್ತಿಲ್ಲ. ಎಲ್ಲಾ ಕಡೆಯೂ ನಡೆಯುತ್ತಿರುವುದೆ" ಶರ್ಮ ಸಮರ್ಥಿಸಿಕೊಂಡ.

"ಪ್ರಧಾನಮಂತ್ರಿಯಿಂದ ಹಿಡಿದು ಆಳಿನ ವರೆಗೂ ಎಲ್ಲಾ ಇಲಾಖೆಯಲ್ಲೂ ಇದೇ ನಡೆಯುತ್ತಿರುವುದು. ಅವರು ಸ್ವಿಸ್ ಬ್ಯಾಂಕಿನಲ್ಲಿ ಮುಚ್ಚಿಡುತ್ತಾರೆ. ನಾವೇನೋ ಚಿಲ್ಲರೆ ಖರ್ಚಿ ಗೋಸ್ಕರ ಇದನ್ನು ಮಾಡುತ್ತೇವೆ. ಇದಕ್ಕೂ ದೇವರಿಗೂ ಏನು ಸಂಬಂಧ? ಅಷ್ಟು ದೂರ ಆಲೋಚಿಸುವ ಆವಶ್ಯಕತೆ ಏನೆಂದು ನನಗರ್ಥ ವಾಗುತ್ತಿಲ್ಲ" ಎಂದ ವಿಶ್ವೇಶ್ವರ.

"ಆಲೋಚಿಸಬೇಕಾದ ಆವಶ್ಯಕತೆಯಿದೆ ಯೆಂದೆ ಕೇಳುತ್ತಿರುವುದು ವಿಶ್ವೇಶ್ವರ. ದೇವರೆಂದರೆ ದುಷ್ಟಶಿಕ್ಷಕ, ಶಿಷ್ಟರಕ್ಷಕ ಎಂದು ನೀವೇ ಹೇಳುತ್ತೀರ, ಒಪ್ಪಿಕೊಳ್ಳುತ್ತೀರ. ಸರ್ವವ್ಯಾಪಿ, ಸರ್ವಾಂತರ್ಯಾಮಿ ಎಂದು ನಂಬುತ್ತೀರ. ಮುದುಕರು, ಬಡವರು ಎಂದು ನೋಡದೆ ಅವರುಗಳನ್ನು ಬಿಸಿಲಿನಲ್ಲಿ ಕಾಯಿಸಿ, ಮೇಲಕ್ಕೂ, ಕೆಳಕ್ಕೂ ಹತ್ತು ಸಲ ಓಡಾಡಿಸಿ, ನ್ಯಾಯವಾಗಿ ಅವರಿಗೆ ಸಿಗಬೇಕಾದುದನ್ನು ಕೊಡದೆ ಸತಾಯಿಸಿ, ಕಮಿಷನನ್ನು ಪಡೆಯುತ್ತಿರುವಾಗ ಸರ್ವವ್ಯಾಪಿಯಾದ ಆ ದೇವರು ನಾನು ಮಾಡುತ್ತಿರುವುದನ್ನು ನೋಡುತ್ತಿದ್ದಾನೆಂಬ ಆಲೋಚನೆ ಏಕೆ ಬರುವುದಿಲ್ಲ? ನಮ್ಮಲ್ಲಿ ದುಷ್ಟರು ಯಾರು? ಶಿಷ್ಟರು ಯಾರು? ದೇವರು ಯಾರನ್ನು ಶಿಕ್ಷಿಸುತ್ತಾರೆ? ನೀವು ನಮ್ಮ ಪ್ರಧಾನ ಮಂತ್ರಿಗಳ ಬಗ್ಗೆ, ಅಮೆರಿಕಾ ಪ್ರೆಸಿಡೆಂಟ್‌ರ ಬಗ್ಗೆ ಏಕೆ ಮಾತನಾಡಬೇಕು? ಮೊದಲು ನೀವು ನಿಮ್ಮ ಬಗ್ಗೆ ಆಲೋಚಿಸಿ. ನಿಮ್ಮ ದೃಷ್ಟಿಯಲ್ಲಿ ದೇವರೆಂದ್ರೆ ಯಾರು? ಲಂಚ ತೆಗೆದುಕೊಂಡು ಜೋಡಿ ತೆಂಗಿನಕಾಯಿ ಒಡೆದರೆ ಸಂತೋಷಿಸುವವನೆ? ದೇವಸ್ಥಾನಕ್ಕೆ ಹೋಗಿ



"ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ, ಹಿಂಸೆ ಗಲಭೆಗಳು ಕಡಿಮೆಯಾಗಿವೆ—ಅಂದ್ರಲ್ಲ... ಯಾವ ದೇಶದಲ್ಲಿ ಸಾರ್?"

ಅರ್ಚನೆ ಮಾಡಿಸಿದರೆ ಒಲಿಯುವವನೆ? ಏತಕ್ಕೆ ದೇವರನ್ನು ಅಂತಹ ಹೀನಸ್ಥಿತಿಗೆ ಇಳಿಸುತ್ತೀರ?" ಏದುಸಿರು ಬಂದಿದ್ದರಿಂದ ಮಾತನ್ನು ನಿಲ್ಲಿಸಿದೆ. ಬಿ.ಪಿ. ಹೆಚ್ಚಿದ್ದು ತಿಳಿಯಿತು.

"ನಮಗೆ ನಮ್ಮದೇ ಆದ ಕರ್ತವ್ಯಗಳಿವೆ. ನಿನ್ನಂತೆ ಪತ್ನಿ, ಮಕ್ಕಳು ಇಲ್ಲದ ಒಂಟಿ ಪಕ್ಷಿಯಲ್ಲ..." ನಾವು ಇಂತಹವನ್ನು ಮಾಡಿದರೆ ತಪ್ಪಿಲ್ಲ ಎನ್ನುವ ಧೋರಣೆಯಲ್ಲಿ ಹೇಳಿದ. ಎದುರಾಳಿಯ ಬಲಹೀನತೆಯ ಮೇಲೆ ಏಟು ಕೊಡುವುದು ಸೋಲುವವನ ಲಕ್ಷಣ. ಆದರೆ ನಾನಿಂದು ಅದಕ್ಕೆ ಜಗ್ಗುವ ಸ್ಥಿತಿಯಲ್ಲಿರಲಿಲ್ಲ. ವ್ಯಂಗ್ಯವಾಗಿ ಹೇಳಿದೆ.

"ನಮ್ಮ ಬಳಿಗೆ ಬರುವ ಪೆನ್ಷನ್‌ದಾರರಿಗೆ ಕರ್ತವ್ಯಗಳಿಲ್ಲವೆ? ನಮ್ಮಂತೆ ಪೂರ್ಣ ಸಂಬಳ ಇಲ್ಲದೆ, ನಾಲ್ಕೈದು ನೂರರಲ್ಲಿ ತಿಂಗಳೆಲ್ಲಾ ಕಳೆಯಬೇಕಾದ ದುಃಸ್ಥಿತಿಯಲ್ಲಿರುವ ವ್ಯಕ್ತಿಯಿಂದ ಐದು, ಹತ್ತನ್ನು ಹೊಡೆಯುತ್ತೀರಲ್ಲಾ. ಆ ಐದು ಹತ್ತರ ಆವಶ್ಯಕತೆ ಅವರಿಗೆಷ್ಟು ಇದೆಯೆಂದು ಯಾವಾಗಲಾದರೂ ಆಲೋಚಿಸಿದ್ದೀರಾ? ಅವರೆಷ್ಟು ಮಂದಿ ದೇವರಲ್ಲಿ ಮೊರೆ ಹೊಕ್ಕಿರುತ್ತಾರೋ, 'ಎಷ್ಟು ರೀತಿಯಲ್ಲಿ ಶಾಪ ಹಾಕುತ್ತಾ ಹೋಗುತ್ತಾರೋ ಎಂದು ಗಮನಿಸಿದ್ದೀರ? ನೀವು ನಂಬಿದ ದೇವರು ನಿಮ್ಮನ್ನು ಕಾಪಾಡುತ್ತಾನೆಂದು ನಂಬಿದರೆ ಸಾಕೆನ್ನುತ್ತೀರ? ನನ್ನ ಪ್ರಶ್ನೆಗಳಿಗೆ ನಾವು ಉತ್ತರಿಸಬೇಕಾದ ಆವಶ್ಯಕತೆಯಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ಅಂತರಾತ್ಮ ಎನ್ನುವುದಿರುತ್ತದೆ. ಈ ಸಲ ಪೂಜೆಗೆ ಕುಳಿತಾಗ ನಿಮ್ಮ ಅಂತರಾತ್ಮದ ಮೇಲೆ ಅಂದವಾಗಿ ಮುಚ್ಚಿರುವ ಮುಸುಗನ್ನು ತೆಗೆದು, ದೇವರ ಮುಂದೆ ನಿಮ್ಮ ಅಂತರಾತ್ಮವನ್ನು ನಗ್ನವಾಗಿ ತೆರೆದಿಡಿ. ನೀವು ಮಾಡುತ್ತಿರುವ ಈ ಕೆಲಸ ತಪ್ಪೊ, ಸರಿಯೋ ವಿಶ್ಲೇಷಿಸಿ. ಶಾಂತಾಕಾರಂ ಭುಜಗಶಯನಂ ಎಂದು ದೇವರನ್ನು ವರ್ಣಿಸಬೇಡಿ. ಭವ ಭಯ ಹರಂ, ಸರ್ವಲೋಕೈಕನಾಥಂ ಎಂದು ಹೊಗಳಬೇಡಿ. ದೇವರಿಗೆ ದೀಪದ ಆವಶ್ಯಕತೆ ಇಲ್ಲ. ಕತ್ತಲಿನಲ್ಲಿ ಮುಳುಗಿರುವ ನಿಮ್ಮ ಅಂತರಾತ್ಮದಲ್ಲಿ ದೀಪವನ್ನು ಬೆಳಗಿಸಿ. ದೇವರ ಮುಂದೆ ಆತ್ಮ ವಿಮರ್ಶೆ ಮಾಡಿಕೊಳ್ಳಿ. ಆಗ ನೀವು ಕಳಂಕ ರಹಿತರೆಂದೆನಿಸಿದರೆ ಆಗಲೇ ನೀವು ನಿಜವಾದ ಭಕ್ತರೆನಿಸುವುದು."

ಮುಂದಕ್ಕೆ ಮಾತನಾಡದೆ ಫೈಲನ್ನೂ ಮುಚ್ಚಿ ಹೊರಕ್ಕೆ ಹೊರಟೆ. ಅರ್ಧಗಂಟೆಯ ನಂತರ ಅನುಪಮಳ ಮನೆಯಲ್ಲಿದ್ದೆ.

(ಉಳಿದರ್ಧ ಮುಂದಿನ ಸಂಚಿಕೆಯಲ್ಲಿ)

ಪ್ರಿಯ 'ತುಷಾರ' ಓದುಗರೆ, ನಮಸ್ಕಾರ. 'ಬೆಂಕಿಕೋಳಿ' ಕಾದಂಬರಿ ವ್ಯಾಪಾರೀ ನೋಟದ ಕಾದಂಬರಿಯಲ್ಲ. ಗೊತ್ತಾಯಿತೆ? ನಿಮಗೇನನ್ನಿಸಿತು? ಇಷ್ಟವಾಯಿತೇ? ದಯವಿಟ್ಟು ನಿಮ್ಮ ಅಭಿಪ್ರಾಯ ಬರೆದು ತಿಳಿಸುತ್ತೀರಾ? ನನ್ನ ಮುಂದಿನ ಸಾಹಿತ್ಯ ರಚನೆಗೆ ನಿಮ್ಮ ಅಭಿಪ್ರಾಯಗಳು ದಾರಿದೀಪವಾಗುತ್ತವೆಂದು ಭಾವಿಸಿದ್ದೇನೆ.

ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಬರೆಯುತ್ತೀರಾ? ಕನ್ನಡದಲ್ಲಿ ಬರೆದರೂ ಪರವಾಗಿಲ್ಲ.

ನನ್ನ ವಿಳಾಸ: Yendamuri Veerendranath,
36, Jayanagar, Road No. 3, Banjara Hills,
HYDERABAD.


ಮನ-ಮುದ್ರೆ

• ಚಿರಂಜೀವಿ

'ನಿರಂಜನ ಇನ್ನಿಲ್ಲ'—ದೂರದರ್ಶನದ ಸಂಜೆ ಸುದ್ದಿಪ್ರಸಾರದಲ್ಲಿ ಈ ಮಾತುಗಳು ಕಿವಿಗೆ ಬಿದ್ದಾಗ ಮನಸ್ಸಿಗೆ ಚಡಪಡಿಕೆಯೆನಿಸಿದರೂ, ಕಣ್ಣಿಗೆ ಅವ್ಯಕ್ತವಾಗಿ ಕಂಡದ್ದು, ಆ ಆತ್ಮೀಯ ನಗುಮುಖ. ಮೂರು-ಮೂರೂವರೆ ದಶಕಗಳು ಕಂಡಿದ್ದ, ಮಾತನಾಡಿಸಿದ್ದ ಅತಿ ಸ್ನೇಹದ, ನಂಬುಗೆಯ, ಸಹಜ ಗೆರೆಗಳ ಮುಖ. ಈ ಸ್ನೇಹ-ಆತ್ಮೀಯತೆ-ಮೃದುಮಾತು-ಅತಿ ಸಹಜ ನಡವಳಿಕೆ ಕೊನೆಯವರೆವಿಗೂ ಬದಲಾದ್ದನ್ನು ನಾನು ಕಾಣಲಿಲ್ಲ.

ಐವತ್ತರ ದಶಕದಲ್ಲಿ ಶಾಲಾ ವಿದ್ಯಾರ್ಥಿಯಾಗಿ, ಕೈಬರೆಹದ ಪತ್ರಿಕೆ ಸಂಪಾದಕನಾಗಿ ಅವರನ್ನು ಮೊಟ್ಟಮೊದಲ ಬಾರಿ ನಾನು ಕಂಡದ್ದು, ಬೆಂಗಳೂರು ಸುಲ್ತಾನ್‌ಪೇಟೆಯ ಪ್ರಾರಂಭದಲ್ಲಿದ್ದ ಮಹಡಿಯೊಂದರಲ್ಲಿ ಕಮ್ಯುನಿಸ್ಟ್ ಪಾರ್ಟಿ ಕಚೇರಿಯಲ್ಲಿ. ಆಗವರು 'ಚಿತ್ರಗುಪ್ತ' ವಾರಪತ್ರಿಕೆಗೆ ಬರೆಯುತ್ತಿದ್ದರು. ನನ್ನ ಕೈಬರೆಹದ ಪತ್ರಿಕೆಯನ್ನು ಸಂತೋಷದಿಂದ ನೋಡಿದರು. ಬೇಕಾದಷ್ಟು ವಿಚಾರಿಸಿದರು. ಒಂದಿಷ್ಟು ಸಲಹೆಗಳನ್ನು ಕೊಟ್ಟರು. 'ಚಿತ್ರಗುಪ್ತ'ದಲ್ಲಿ ಕೈಬರೆಹದ ಪತ್ರಿಕೆ ಬಗ್ಗೆ ಕಿರುಪರಿಚಯವೊಂದನ್ನು ಬರೆದರು. ಆಗ ಅವರು ನ್ಯೂಸ್‌ಪ್ರಿಂಟ್ ಚೂರು ಕಾಗದವೊಂದರಲ್ಲಿ ನನಗೆ ಬರೆದ ನಾಲ್ಕು ಸಾಲುಗಳನ್ನು ಅಮೂಲ್ಯವೆಂದು ತೆಗೆದಿಟ್ಟುಕೊಂಡೆ. ಈಗಲೂ ಉಳಿಸಿಕೊಂಡಿದ್ದೇನೆ.

ಅವರ ಕಥೆ-ಕಾದಂಬರಿ-ಕಾಲಂ ಲೇಖನಗಳಲ್ಲಿ ನನಗೆ ಏನೋ ಆಕರ್ಷಣೆ, ಭಿನ್ನವಾಗಿ, ನೇರವಾಗಿ ಬರೆಯುತ್ತಾರೆ. ಸೊಗಸಾಗಿ ಪದಗಳನ್ನು ಜೋಡಿಸುತ್ತಾರೆ. ಚುರುಕಾಗಿ ಹೇಳಬೇಕಾದ್ದನ್ನು ಹೇಳುತ್ತಾರೆ—ಎಂದು ಅವರ ಬರೆವಣಿಗೆ ನನಗೆ ಅತ್ಯಂತ ಮಾದರಿ ರೀತಿಯಾಗಿಯೂ ಕಂಡಿತು. ಐವತ್ತು-ಅರವತ್ತರ ದಶಕಗಳಲ್ಲಿ ಕಥೆ-ಕಾದಂಬರಿಗಳನ್ನು ಒಂದೂ ಬಿಡದಂತೆ ಓದುವ ಸಹೃದಯ ಓದುಗರ ಬಳಗ ದೊಡ್ಡದಿತ್ತು. ಅನಕೃ, ಬಸವರಾಜ ಕಟ್ಟೀಮನಿ, ತ್ರಿವೇಣಿ, ತರಾಸು, ಶಿವರಾಮ ಕಾರಂತ, ನಿರಂಜನ, ವಾಣಿ, ಇವರ ಎಲ್ಲ ಪುಸ್ತಕಗಳನ್ನೂ ಓದಿ ಮುಗಿಸಿ, ಹೊಸ ಪುಸ್ತಕಗಳಿಗಾಗಿ ಕಾಯುತ್ತಿದ್ದ ಸಾಮಾನ್ಯ ಓದುಗರು ಸಾವಿರಾರು ಸಂಖ್ಯೆಯಲ್ಲಿದ್ದರು—ಸರ್ಕ್ಯುಲೇಟಿಂಗ್ ಲೈಬ್ರೆರಿಗಳು ವಿಜೃಂಭಿಸುತ್ತಿದ್ದ ಕಾಲ. ನಿರಂಜನರ ಎಲ್ಲ ಪುಸ್ತಕಗಳನ್ನು ನಾನು ಓದಿ ಮುಗಿಸಿದ್ದೆ. ಅವರ ಕಾಲಂ ಲೇಖನಗಳನ್ನು ಕಥೆ-ಕಾದಂಬರಿಗಿಂತಲೂ ಹೆಚ್ಚು ಸ್ವಾರಸ್ಯವಾಗಿ ಓದಿ ಪ್ರಭಾವಿತನಾಗಿದ್ದೆ.



ಫೋಟೋ: ಲಕ್ಷ್ಮೀನಾರಾಯಣ

ಕಥೆಯಾಗಲಿ, ಕಾದಂಬರಿಯಾಗಲಿ, ಕಾಲಂ ಲೇಖನವಾಗಲಿ ನಿರಂಜನರ ಆತ್ಮೀಯ-ನವಿರುಶೈಲಿ, ವಿಷಯವನ್ನು ಮಾತನಾಡುವಂತೆ ಹೇಳುತ್ತಿದ್ದ ರೀತಿ–ಅವರೊಬ್ಬರಿಗೇ ಸಿದ್ಧಿಸಿದ್ದದ್ದು. ಅವರು ಪತ್ರಕರ್ತರಾಗಿ ಒಳ್ಳೆಯ ಲೇಖಕರಾದರೊ, ಒಳ್ಳೆಯ ಲೇಖಕರಾಗಿ ಯಶಸ್ವಿ ಪತ್ರಕರ್ತರೆನಿಸಿ ಕೊಂಡರೊ ಹೇಳಲಾಗುವುದಿಲ್ಲ. ಆದರೆ, ಪತ್ರಿಕಾ ಬರೆವಣಿಗೆಯ ಚೌಕಟ್ಟು, ಶಿಸ್ತು ಅವರ ಕಥೆ-ಕಾದಂಬರಿ ಬರೆವಣಿಗೆಗೆ ಖಚಿತವಾದ ರೂಪ ಖಂಡಿತ ಕೊಟ್ಟಿದೆಯೆನಿಸುತ್ತದೆ. ಅವರ ಪ್ರಾರಂಭದ ಕಾದಂಬರಿಗಳಲ್ಲಿ ಅನಕೃ, ತರಾಸು, ಬಸವರಾಜ ಕಟ್ಟೀಮನಿ ಅವರ ಜನಪ್ರಿಯ ಶೈಲಿಯ ಧಾಟಿ ಕಂಡಂತನ್ನಿಸಿದರೂ, ಬಹುಬೇಗ ನಿರಂಜನ ಸಹಜವಾಗಿ ತಮ್ಮತನ ವನ್ನು ಜಾರಿಗೆ ತಂದುಬಿಟ್ಟರು. ಗೆಜ್ಜೆಯ ನಿನಾದದ ಹಾಗೆ, ಹಾಡಿನ ಮಾಧುರ್ಯದ ಹಾಗೆ, ಮೋಡಿ ಮಾಡುವ ಬರೆವಣಿಗೆ ಅವರದ್ದಾಯಿತು. ಪದಬಳಕೆ, ಸಾಲುಗಳ ರಚನೆಯಲ್ಲಿ ಸೊಗಸನ್ನು ಕಾಣಿಸುವ, ಕನ್ನಡ ಬರೆವಣಿಗೆಗೆ ಒಂದು ವಿಶೇಷ ನಡೆ ಅವರ ಕಾಲಂ ಲೇಖನಗಳಲ್ಲಿ ಎದ್ದು ಕಂಡಿತು. ನಿರಂಜನರು ಬರೆಯುವುದು ಮಾತ್ರವಲ್ಲ, ಮಾತನಾಡುವುದೂ ಹಾಗೆಯೇ ಅನ್ನಿಸಿತು. ಅವರು ಬರೆಯುವ ಶೈಲಿ, ಮಾತನಾಡುವ ರೀತಿಗಳಲ್ಲಿ ವ್ಯತ್ಯಾಸವೇ ಇಲ್ಲದಂತೆ ನಿರಂಜನ ನಡೆ-ನುಡಿ ವಿಶಿಷ್ಟವೆನಿಸುವಂತೆ ಆಯಿತು. ಆದರೆ, ನಿರಂಜನ ಇವೆಲ್ಲವನ್ನೂ ಅತ್ಯಂತ ಸ್ವಾಭಾವಿಕವಾಗಿ ಮೈಗೂಡಿಸಿಕೊಂಡಿದ್ದಾರೆ. ಯಾವುದನ್ನೂ ಬಲವಂತವಾಗಿ ಕಾಣಿಸುವ, ಪ್ರದರ್ಶಿಸುವ ವ್ಯಕ್ತಿತ್ವ ಅವರದಾಗಿರಲಿಲ್ಲ.

ಒಮ್ಮೆ ಕಂಡವರನ್ನು, ಮಾತನಾಡಿಸಿದವರನ್ನು, ಪರಿಚಯವಾದವರನ್ನು ಅವರು ಎಂದಿಗೂ ಮರೆಯುತ್ತಿರಲಿಲ್ಲ. ಹೆಸರು ಮರೆಯುತ್ತಿರಲಿಲ್ಲ. ಪರಿಚಿತರ ಬರೆಹ ಪತ್ರಿಕೆಯಲ್ಲಿ ಕಂಡಾಗ ಓದಿ ಅದರ ಬಗ್ಗೆ ಮುಂದಿನ ಭೇಟಿಯಲ್ಲಿ ತಪ್ಪದೇ ಪ್ರಸ್ತಾಪ ಮಾಡುವ ಸೌಹಾರ್ದ-ಪ್ರೀತಿ ಅವರದು. ಬರೆಹಗಾರರನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದರು. ಬೇಕಾದಷ್ಟು ಮಾತನಾಡುತ್ತಿದ್ದರು. ಕ್ಷೇಮ ವಿಚಾರಿಸುತ್ತಿದ್ದರು. ಬಹುಶಃ, ಸ್ವಲ್ಪವೂ ಸಾರ್ವ ಜನಿಕ ಸದ್ದುಗದ್ದಲವಿಲ್ಲದೆ ಬೇಕಾದಷ್ಟು ಮಂದಿ ಆತ್ಮೀಯರನ್ನು ಗಳಿಸಿಕೊಂಡವರು ಅವರೊಬ್ಬರೇ ಇರಬೇಕು. ಏಕೆಂದರೆ, ಅವರೆಂದೂ ಯಾವ ದೊಡ್ಡ ದೊಡ್ಡ ಸ್ಥಾನಗಳನ್ನು ಅಲಂಕರಿ ಸಿರಲಿಲ್ಲ, ಯಾವ ಪ್ರಭಾವವನ್ನು ಎಲ್ಲೂ ಬೀರಲಿಲ್ಲ, ಅಂತೆಯೇ, ಅವರ ವ್ಯಕ್ತಿತ್ವ-ಬರೆವಣಿಗೆ ಮೆಚ್ಚಿ ಅವರ ಅಭಿಮಾನಿಗಳಾ ದವರೇ ಎಲ್ಲರೂ.

ಕೃತಿಯೊಂದನ್ನು ಬರೆಯಬೇಕೆಂದುಕೊಂಡಾಗ ಅವರು ಮಾಡಿಕೊಳ್ಳುತ್ತಿದ್ದ ಸಿದ್ಧತೆ ಲೇಖಕರಿಗೆಲ್ಲ ಮಾದರಿಯಾಗುವಂಥದು. ಅವರಿಗೆ ಅನಾರೋಗ್ಯ ಆವರಿಸಿದಾಗ, ಮೃತ್ಯುವನ್ನು ಎದುರಿಸಲು ಅವರು ಕೈಗೆ ತೆಗೆದುಕೊಂಡ ಯೋಜನೆ; 'ಮೃತ್ಯುಂಜಯ' ಕಾದಂಬರಿ ರಚನೆ. ಪ್ರಾಚೀನ ಈಜಿಪ್ತ್ ಒನ್ನೆಲೆಯ ವಸ್ತು. ಇದಕ್ಕಾಗಿ ನಿರಂಜನ ಸುಮಾರು ಆರುನೂರು-ಏಳುನೂರು ಪುಟಗಳ 'ಟಿಪ್ಪಣಿ' ಸಿದ್ಧಪಡಿಸಿಕೊಂಡರು. ಆ ಕಾಲದ ಜನರ ಹೆಸರುಗಳು, ಉಡುಪುಗಳು, ಆಯುಧಗಳು, ಮಾತಿನ ರೀತಿ, ನಡವಳಿಕೆ, ಊಟ-ಉಪಚಾರ, ಸೈನಿಕರು-ಯುದ್ಧಕೌಶಲ್ಯ, ಹೀಗೆ ಬೇರೆ ಬೇರೆ ಟಿಪ್ಪಣಿಗಳನ್ನು ಮಾಡಿ ಕೊಂಡಿದ್ದರು. ವಿವರಗಳು ಖಚಿತವಾದ ಮೇಲೆ ಕಾದಂಬರಿ ಬರೆಯಲು ಪ್ರಾರಂಭಿಸಿದರು. ಎರಡು ಮೂರು ವರ್ಷಗಳು ಸತತವಾಗಿ ದುಡಿದರು. ಈ ಎಲ್ಲ ಘಟ್ಟಗಳನ್ನು ನಾನು ನೋಡಿದ್ದೆ. ಅವರೊಂದಿಗೆ ಬೇಕಾದಷ್ಟು ಮಾತ ನಾಡುವುದು ಸಾಧ್ಯವಾಗಿತ್ತು: 'ನಾನು ಬರೆಯುವುದು ನಿಲ್ಲಿಸಿದೆ ಎಂದರೆ ಮೃತ್ಯುವಿಗೆ ಆಹ್ವಾನ ಕೊಟ್ಟಂತೆ. ಒಂದು ಯೋಜನೆ ಮುಗಿಸುತ್ತಿದ್ದಂತೆ ಇನ್ನೊಂದು ಯೋಜನೆ ಪ್ರಾರಂಭಿಸಿ ಬಿಡುತ್ತೇನೆ. ಮೃತ್ಯು ನನ್ನ ಕೆಲಸ ಮುಗಿಯಲು ಕಾಯುವಂತೆ ಮಾಡು ತ್ತೇನೆ'–ಎನ್ನುತ್ತಿದ್ದರು. ತೀವ್ರ ಅನಾರೋಗ್ಯ ಆವರಿಸಿಕೊಂಡರೂ ಬರೆಹಗಾರನಾಗಿ ಮುಂದು ವರಿಯಲೇ ಬೇಕು ಎಂದು ಅವರು ಹಠ ಹಿಡಿದಂತಿತ್ತು. ಮೃತ್ಯು ಸದವಕಾಶಕ್ಕಾಗಿ ಇಪ್ಪತ್ತು ವರ್ಷ ಕಾಯಬೇಕಾಯಿತು. ಆದರೆ, ಈ ಸದವಕಾಶಕ್ಕಾಗಿ ಅದು ಮೊದಲು ನಿರಂಜನರನ್ನು ಬರೆಯಲಾಗದಂತೆ ಮಾಡಿ ಕುಳಕುಂದ ಶಿವರಾಯ ರನ್ನು ಹೊತ್ತುಕೊಂಡು ಓಡಿತು.

ಸುಬೋಧಾ ರಾಮರಾಯರು ತೀರಿಕೊಂಡಾಗ, ನಿರಂಜನ ತಮ್ಮ ಕಾಲಂ ಲೇಖನದಲ್ಲಿ ಬರೆದರು: 'ಆ ಸುಬೋಧ ತಿಲಕ ಇನ್ನಿಲ್ಲ, ಉಳಿದಿರುವುದು

ಬರೆ ಹಣೆ ಮಾತ್ರ'

ಈಗ ಅವರಿಲ್ಲ, ನಮಸ್ಕಾರ ಹೇಳಿಬಿಟ್ಟರು— ಕೊನೇ ನಮಸ್ಕಾರ.

* * *

ಮೂವತ್ತು-ಮೂವತ್ತೈದು ವರ್ಷಗಳ ಹಿಂದೆ ಆಗಿನ ಪತ್ರಿಕೆಯೊಂದರಲ್ಲಿ ಸುದ್ದಿಯೊಂದು ಪ್ರಕಟವಾಯಿತು: 'ಲೇಖಕ ನಾಡಿಗೇರ್ ಕೃಷ್ಣರಾವ್ ನಿಧನ'. ಇಪ್ಪತ್ತನಾಲ್ಕು ಘಂಟೆಗಳ ಕಾಲವಂತೂ ಇದು 'ಬಿಸಿಬಿಸಿ' ಸುದ್ದಿಯಾಗಿ ಉಳಿಯಿತು.


ಆ ಸುದ್ದಿ ಪ್ರಕಟಣೆಗೆ ಕೊಟ್ಟವರು: ನಾಡಿಗೇರ್ ಕೃಷ್ಣರಾವ್.

ಅನಕೃ, ಬೀChi ಗುಂಪಿನ ಇನ್ನೊಬ್ಬರಾಗಿ ನಾಡಿಗೇರ್ ಕೃಷ್ಣರಾವ್ ಮಾಡಿದ 'ಗಂಭೀರ ತಮಾಷೆ' ಇದು. 'ನಾನು ಸತ್ತು ಹೋಗಿದ್ದೇನೆ ಎಂದು ಪತ್ರಿಕೆಯಲ್ಲಿ ಪ್ರಕಟವಾದರೆ ಹೇಗಿರುತ್ತದೆ ಎಂದು ತಿಳಿಯಲು ಮಾಡಿದ್ದು ಇದು'—ಎಂದು ಅನಾರೋಗ್ಯದಿಂದ ಹಾಸುಗೆ ಹಿಡಿದ ಮಲಗಿದ್ದ ಅವರು ಮಾತನಾಡುತ್ತ ಹೇಳಿದ್ದು ಇದು. ಆಗಲೂ ಅವರ ತುಟಿಯಂಚಿನಲ್ಲಿ ಕಿಲಾಡಿ ನಗೆ..

ಆದರೆ—ಈಗ ಆ ಸುದ್ದಿ ನಿಜವಾಗಿದೆ: 'ನಾಡಿಗೇರ್ ಕೃಷ್ಣರಾವ್ ನಿಧನರಾಗಿದ್ದಾರೆ'— ಎಲ್ಲೊ ಸಂದಿಯಲ್ಲಿ ಈ ವಿಶೇಷ ಸುದ್ದಿ ಬಂದು ಹೋಯಿತು. ಖಚಿತವಾಗಿಯೂ ಆಗಿರುವ ಘಟನೆ. ಅವರಿದ್ದಿದ್ದರೆ ಬೇರೆಯವರು ಮಾಡಿದ ಈ 'ಚರಮಗೀತೆ' ನೋಡಿ ಸಂತೋಷಪಡುತ್ತಿದ್ದರೇನೊ?

ಬೆಂಗಳೂರು ಬಾಂದಿನವರ ಬೀದಿ (ಸರ್ವೇಯರ್ಸ್ ಸ್ಟ್ರೀಟ್) ಅವರ ಕಾರ್ಯಾಚರಣೆಯ ಸ್ಥಳ. ಚಟುವಟಿಕೆಯಿಂದಿದ್ದದ್ದು, ಬರೆದದ್ದು, ಅನಾರೋಗ್ಯದಿಂದ ಹಾಸುಗೆ ಹಿಡಿದದ್ದು ಎಲ್ಲಾ ಇಲ್ಲಿಯೆ—ಆದರೆ, ಅವರು ಕೊನೆಯುಸಿರೆಳೆಯುವುದನ್ನು ಕಾಣುವ-ದಾಖಲಿಸುವ ಅದೃಷ್ಟ ಈ ಬಾಂದಿನವರ ಬೀದಿಯದಾಗಿರಲಿಲ್ಲ.

'ಪಕ್ಕಾ ಅನಕೃ' ಶೈಲಿಯ ನಾಡಿಗೇರರು, ಆ ಕಾದಂಬರಿ ಸಾರ್ವಭೌಮರ ಹಾಗೆ, ಹಾಸ್ಯ ಚಕ್ರವರ್ತಿ ಎನಿಸಿಕೊಂಡರು. ನಗೆಮಾತುಗಳಲ್ಲೆ ಛಾಟಿಯ ಚುರುಕು ಮುಟ್ಟಿಸಬಲ್ಲ ಮಾತುಗಾರ, ಬರೆಹಗಾರ. ಅನಕೃ ಹಾಗೆಯೇ, ಕೂತಲ್ಲಿ-ನಿಂತಲ್ಲಿ-ಎಲ್ಲೆಂದರಲ್ಲಿ—ಯಾವಾಗ ಬೇಕಾದರೂ ಬರೆಯಬಲ್ಲ ಸಲೀಸುತನ.



ಅರವತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ಕನ್ನಡ ಚಳವಳಿ ಪ್ರಾರಂಭವಾದಾಗ, ಅನಕೃ ಬೆಂಗಳೂರಿನ ಬೀದಿಬೀದಿಗಳಲ್ಲಿ ಸಿಂಹಘರ್ಜನೆ ಮಾಡಿದರು. ಮ. ರಾಮಮೂರ್ತಿ ಕನ್ನಡಕ್ಕೆದುರಾದವರನ್ನು ಬೆದರಿಸಿದರು. ಕಡ್ಡಿ ಪೈಲ್ವಾನ್ ನಾಡಿಗೇರರು ತಮಾಷೆಯಾಗಿ 'ರಪರಪ'ನೆ ಬಿಗಿಯುತ್ತಿದ್ದರು. ಈ ತ್ರಿಮೂರ್ತಿಗಳ ಕೂಗಿನಲ್ಲಿ ಇಡೀ ಕರ್ನಾಟಕ ಕನ್ನಡ-ಕನ್ನಡ ಎಂದು ಕುಣಿದಾಡಿತು.

ಅನಕೃ ಕೊನೆಯುಸಿರೆಳೆದು, ರಾಮಮೂರ್ತಿ ಮಣ್ಣಿನೊಂದಿಗೆ ಭೂಗತರಾದಾಗ ನಾಡಿಗೇರರು

ಒಂಟಿಯಾದರು. ಕನ್ನಡ ಚಳವಳಿ ಬೇರೆ ರೂಪವೇ ತಾಳಿತು. ಪತ್ರಿಕೋದ್ಯಮ ಅವರನ್ನು ಸೆಳೆದುಕೊಂಡಿತು. ಪತ್ರಕರ್ತನಾಗಿ-ಹಾಸ್ಯ ಲೇಖಕನಾಗಿ ಕೆಲಸ ಮಾಡಿದರು. ಬೇಗ ಅನಾರೋಗ್ಯ ಅವರನ್ನು ಅಪ್ಪಿಕೊಂಡಿತು. 'ಇಷ್ಟು ಬೇಗ ನನಗೆ ಅನಾರೋಗ್ಯದ ಅಗತ್ಯವಿರಲಿಲ್ಲ. ಈ ರೋಗ ಎಲ್ಲರನ್ನೂ ಬಿಟ್ಟು, ನನ್ನನ್ಯಾಕೆ ಆರಿಸಿಕೊಂಡಿತೋ ನನಗೆ ಅರ್ಥವಾಗಿಲ್ಲ'—ಎಂದು ಹಾಸುಗೆಯಿಂದಲೇ ಹೇಳಿದ್ದರು. ತರಹೇವಾರಿ ಚಿಕಿತ್ಸೆಗಳನ್ನು ಮಾಡಿಕೊಂಡರು. ಆರೋಗ್ಯ ಬಹುಬೇಗ ಸುಧಾರಿಸುತ್ತದೆ ಎಂದವರಿಗೆ ತುಂಬಾ ನಂಬಿಕೆಯಿತ್ತು. 'ಇದೇ ಚಿಕಿತ್ಸೆಯನ್ನು ಪಡೆದ ಇಂಥವರಿಗೆ ವಾಸಿಯಾಗಿದೆ'—ಎಂದಿದ್ದರು. ಇನ್ನೊಮ್ಮೆ ಹೋಗಿದ್ದಾಗ ಗೆಲುವಾದಂತೆ ಕಂಡಿದ್ದರು; ಒಂದೆರಡು ನಗೆ ಲೇಖನಗಳನ್ನು ಬರೆದರು. ಒಂದೆರಡು ಭಾಷಣ ಗಳನ್ನು ಮಾಡಿದರು.

ಎರಡು ಮೂರು ವರ್ಷಗಳಿಗೆ ಹಿಂದೆ ಸಭೆ ಯೊಂದರಲ್ಲಿ ಅವರ ಭಾಷಣ ಮುಗಿದು ಮಂಗಳ ಹಾಡಿದ ಮೇಲೆ ಅವರನ್ನು ಭೇಟಿ ಮಾಡಿ ಕೇಳಿದೆ: 'ಹ್ಯಾಗಿದೀರಿ?' ಅವರು ಥಟ್ಟನೆ ಹೇಳಿದರು: 'ಬದುಕಿಲ್ಲ, ಸತ್ತಿದೀನಿ'.


ಈಗದು ನಿಜ. 'ಬದುಕಿಲ್ಲ, ಸತ್ತಿದೀನಿ'

* * *

ಕಥೆಗಾರ ಈಶ್ವರಚಂದ್ರ ಇದೀಗ ನಾಲ್ಕು ಜನ ಮೆಚ್ಚುವ ಒಂದು ಸಾಧನೆ ಮಾಡಿದ್ದಾರೆ—ಈ ಸಲದ ಕನ್ನಡ ಎಂ.ಎ. (ಮುಕ್ತ ವಿಶ್ವವಿದ್ಯಾಲಯ) ಪರೀಕ್ಷೆಯಲ್ಲಿ ಅತ್ಯಂತ ಅಂಕಗಳನ್ನು ಗಳಿಸಿ ಮೊದಲ ರ್‍ಯಾಂಕ್ ವಿಜೇತರಾಗಿದ್ದಾರೆ. ಅವರ ಆತ್ಮೀಯರಿಗೆಲ್ಲ ಅತ್ಯಂತ ಸಂತೋಷ ತಂದಿದ್ದಾರೆ.

ಅವರು ಕನ್ನಡ ಎಂ.ಎ.ಗೆ ಸೇರಿದ್ದೇನೆ ಎಂದಾಗಲೇ ಇಂಥದೇನಾದರೂ ಮಾಡುತ್ತಾರೆ ಎಂದು ನನಗೆ ಖಂಡಿತ ಅನ್ನಿಸಿತ್ತು. ಕ್ರಿಯಾತ್ಮಕ ವಾಗಿ ಏನು ಮಾಡಿದರೂ ಪರಿಣತ ರೀತಿಯಲ್ಲಿ ಮಾಡುವ ವ್ಯಕ್ತಿ ಅವರು.

ಮೊನ್ನೆ ನಡೆದ 'ಕಾನ್ವೊಕೇಷನ್'ನಲ್ಲಿ ಈಶ್ವರಚಂದ್ರ ಅವರಿಗೆ ಮೊದಲ ರ್‍ಯಾಂಕ್ ಸರ್ಟಿಫಿಕೇಟ್ ಜೊತೆಗೆ ಆರು ಚಿನ್ನದ ಪದಕಗಳು, ಮೂರು ನಗದು ಬಹುಮಾನಗಳು ದೊರಕಿತು.



ಫೋಟೋ: ಉದಯ ಜಾದೂಗಾರ್

'ಪಠ್ಯಪುಸ್ತಕಗಳು, ವಿಭಾಗದಿಂದ ಬರುವ ನೋಟ್ಸ್‌ಗಳು, ರೆಫೆರೆನ್ಸ್ ಗ್ರಂಥಗಳು, ಐದು ವರ್ಷದ ಪ್ರಶ್ನೆಗಳ ಅಭ್ಯಾಸ' ಇವನ್ನೆಲ್ಲ ಚೆನ್ನಾಗಿ ಗಮನಿಸಿ ಅಭ್ಯಾಸ ಮಾಡಿದ್ದು, ಜೊತೆಗೆ ಲೇಖಕರಾಗಿ ಅವರ ಬರೆವಣಿಗೆ ಅನುಭವ, ಬರವಣಿಗೆಯ ವೇಗ, ಅಭಿವ್ಯಕ್ತಿ ಇಲ್ಲಿ ತುಂಬಾ ಉಪಯೋಗಕ್ಕೆ ಬಂದಿದೆ.

ಈಶ್ವರಚಂದ್ರ ಅವರು ಬೆಂಗಳೂರಿನಲ್ಲಿರುವ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ

ಡೆಪ್ಯುಟಿ ಡಿಸೈನ್ ಮ್ಯಾನೇಜರ್ ಆಗಿದ್ದಾರೆ. ವಿಮಾನ ವಿನ್ಯಾಸದ ಮುಖ್ಯ ಕೆಲಸದಲ್ಲಿ ಒಬ್ಬರಾಗಿದ್ದಾರೆ. 'ತಾಂತ್ರಿಕ ವಿಭಾಗದಲ್ಲಿ ದುಡಿಯುತ್ತಿರುವುದರಿಂದ ಓದುವ-ಉತ್ತರಿಸುವ, ಪರೀಕ್ಷೆಗೆ ಸಿದ್ಧವಾಗುವ ವಿಷಯದಲ್ಲಿ ಸೈಂಟಿಫಿಕ್ ಅಪ್ರೋಚ್ ರೀತಿ ಮುಂದುವರಿದಿದ್ದು ತುಂಬಾ ಉಪಯುಕ್ತವಾಯಿತು'—ಎಂದರು.

'ಈಗ ಎಂ.ಎ. ಓದಿದ್ದು, ರ್‍ಯಾಂಕ್ ಬಂದಿದ್ದು ಮುಂದೆ ಲೇಖಕನಾಗಿ ನನ್ನ ಬರೆವಣಿಗೆ ದೃಷ್ಟಿ ಮೊನಚುಗೊಳ್ಳುತ್ತೆ. ಹೊಸ ದೃಷ್ಟಿನೂ ಸಾಧ್ಯವಾಗತ್ತೆ'—ಎಂದರು.

ಅತಿ ಹೆಚ್ಚು ಅಂಕ ಬಂದಿದೆ, ಆರು ಚಿನ್ನದ ಪದಕಗಳು ಬಂದಿದೆ ಎಂದು ಅವರಿಗೆ ಬಂದ ಕಾಗದದಲ್ಲಿ, ಕೂಡಲೇ ಒಂದು ಸಾವಿರದ ಒಂದುನೂರ ಅರವತ್ತೆರಡು ರೂಪಾಯಿಗಳನ್ನು ವಿಶ್ವವಿದ್ಯಾಲಯಕ್ಕೆ ಜಮೆ ಮಾಡಲು ಒಂದು ಆಜ್ಞೆ. ಚಿನ್ನದ ಪದಕಗಳ ಹೆಚ್ಚಿನ ಬೆಲೆಯ ವ್ಯತ್ಯಾಸದ ಹಣ, ಫಸ್ಟ್ ರ್‍ಯಾಂಕ್, ಪದಕಗಳು ಬಂದ ಖುಷಿಯಲ್ಲೂ ಒಂದು ಕಿರು ಆಘಾತ.

ಈಶ್ವರಚಂದ್ರ ಇತ್ತೀಚೆಗೆ ಸ್ವಂತಮನೆ ಕಟ್ಟಿದರು. ಇದ್ದಬದ್ದದ್ದನೆಲ್ಲ ಅದಕ್ಕೆ ಸುರಿದಿದ್ದಾಗಿತ್ತು. ಅಂತೂ ಹೇಗೊ ಒಂದು ಸಾವಿರ ಚಿಲ್ಲರೆ ಸೇರಿಸಿ ಮೈಸೂರು ಬ್ಯಾಂಕ್‌ಗೆ ಕಟ್ಟಲು ಹೋದರು. ಅಲ್ಲಿ ಮಿತ್ರ ಲೇಖಕ ಎಂ.ಎಸ್. ನರಸಿಂಹಮೂರ್ತಿ ಆ ಹಣವನ್ನು ಬಾಚಿ ತಮ್ಮ ಬ್ಯಾಂಕ್ ತಿಜೋರಿಗೆ ದಬ್ಬಿಕೊಂಡು, ಕರುಣೆಯಿಂದ ಈಶ್ವರಚಂದ್ರ ಅವರನ್ನು ನೋಡಿ ಹೇಳಿದರು: 'ಸಧ್ಯ, ನಿಮಗೆ ಇನ್ನೂ ಮೂರು-ನಾಲ್ಕು ಚಿನ್ನದ ಪದಕಗಳು ಬಂದುಬಿಡಲಿಲ್ಲವಲ್ಲ. ಬಂದಿದ್ದರೆ ಇನ್ನೂ ಒಂದು ಸಾವಿರ ಕಟ್ಟಬೇಕಾಗಿತ್ತು.'

ಈಶ್ವರಚಂದ್ರ ಅವರಿಗೆ ಈ ಫಸ್ಟ್‌ರ್‍ಯಾಂಕ್ ಮುಂದೆ ಇನ್ನೂ ಓದಿನಲ್ಲಿ ತೊಡಗಲು ಬೆಂಬಲವಾಗಬಹುದು. 'ಪಿಎಚ್‌ಡಿ ಮಾಡಲು ಆಲೋಚಿಸಬಹುದು'—ಎಂದರವರು.

ಅಭಿನಂದನೆಗಳು—ಗುಡ್‌ಲಕ್: 'ತುಷಾರ'ದವರೆಲ್ಲರದೂ.

* * *

ಮೊನ್ನೆ ಕವಿವರ್ಯ ಪ್ರೊಫೆಸರ್ ನಿಸಾರ್ ಅಹಮದ್ ಸಿಕ್ಕಿದಾಗ ಒಂದು ಮಾತು ಹೇಳಿದರು. ಖಂಡಿತ ಚಿಂತನೆಗೆ ಅರ್ಹವಾದ ಮಾತು:


ಡಾ। ಪುತಿನ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಬಂದಿತು. ಆದರೆ, ಅವರಿಗಿಂತಲೂ ಕಿರಿಯರಾದವರಿಗೆ, ಕಡಿಮೆ ಸಾಧನೆಗಳಿದ್ದವರಿಗೆ 'ಪದ್ಮಭೂಷಣ' ಪ್ರಶಸ್ತಿ.

ಹೌದಲ್ಲ—ಎಂಥ ವಿಪರ್ಯಾಸ. ಹೀಗೇಕಾಯಿತು? ಇವೆಲ್ಲ ಹೆಸರುಗಳನ್ನು ಸೂಚಿಸಿದವರಿಗೆ, ಡಾ। ಪುತಿನ ಉನ್ನತ ಪ್ರಶಸ್ತಿಗೆ ಅರ್ಹರಾದವರು ಅನ್ನಿಸಲಿಲ್ಲವೇ?

* * *

'ಮೈಸೂರು ಮಲ್ಲಿಗೆ'ಯ ಕವಿ ಡಾ। ಕೆ. ಎಸ್. ನರಸಿಂಹಸ್ವಾಮಿ ಅವರಿಗೆ ಹೊಸದೊಂದು 'ಅನಿರೀಕ್ಷಿತ' ರಾಷ್ಟ್ರೀಯ ಪುರಸ್ಕಾರ—ಖಂಡಿತ ಅವರು ಎದುರು ನೋಡದಿದ್ದ ವಲಯದಿಂದ: ವರ್ಷದ ಅತ್ಯುತ್ತಮ ಚಲನಚಿತ್ರ ಗೀತೆ ರಚನೆ. ಬಹುಶಃ, ಅವರಿಗೂ ಆಶ್ಚರ್ಯ-ಸಂತೋಷದ ಜೊತೆಗೆ ಒಂದಿಷ್ಟು ನಗು ಬಂದಿರಬಹುದು.

ಅದೃಷ್ಟ ಕೈಹಿಡಿದಾಗ ಯಾರೂ ಯಾವುದನ್ನೂ ತಡೆಯಲಾಗುವುದಿಲ್ಲ. ಇದನ್ನು ಅದೃಷ್ಟ ಎಂದು ಬೇಕಾದರೂ ಕರೆಯಬಹುದು, 'ಕಾಲ' ಎಂದು ಬೇಕಾದರೂ ಕರೆಯಬಹುದು. ಈ ಹಿರಿಯ ಕವಿಯ ಬದುಕಿನಲ್ಲಿ ಈ ಒಂದು-ಒಂದೂವರೆ ವರ್ಷಗಳಲ್ಲಿ ಅನೇಕ ತಿರುವುಗಳು ಥಟ್ಟನೆ



(ಫೋಟೋ: ಕೆ.ಎನ್. ನಾಗೇಶ್ ಕುಮಾರ್)

ಬಂದುಬಿಟ್ಟಿವೆ.

ಅವರು ಐವತ್ತು ವರ್ಷಗಳಿಗೂ ಹಿಂದೆ ಬರೆದಿದ್ದ 'ಮೈಸೂರು ಮಲ್ಲಿಗೆ' ಪ್ರೇಮ ದಾಂಪತ್ಯ ಕಾವ್ಯ ಸೊಗಸನ್ನು ಇತ್ತೀಚೆಗೆ ಚಲನ ಚಿತ್ರವೊಂದರ ವಸ್ತುವಾಗಿಸಿಕೊಂಡದ್ದು ವಿಶೇಷ. ಅದರಿಂದ ಇವರಿಗೆ ಇನ್ನಷ್ಟು ಪ್ರಚಾರ ಸಿಕ್ಕಿದ್ದು ಅಲ್ಲದೆ ಕೈತುಂಬಾ ಹಣವೂ ಬಂದಿತು. ಐವತ್ತು-ಅರವತ್ತು ವರ್ಷಗಳು ಬರೆಯುತ್ತಿದ್ದರೂ ಅವರ ಸಾಹಿತ್ಯದ ಹಿರಿತನವನ್ನು ಕನ್ನಡ ಸಾಹಿತ್ಯ ಪರಿಷತ್ತು ಕಂಡುಕೊಂಡು ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಸಿದ್ದು. ಇವರೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಿದ್ದ 'ಡಾಕ್ಟರೇಟ್'ತನ ಕೊನೆಗೂ ಅವರನ್ನು ಹುಡುಕಿಕೊಂಡು ಬಂದು ವಿಶ್ವವಿದ್ಯಾಲಯದ ಡಾಕ್ಟರೇಟ್ ಗೌರವ ದೊರಕಿ, ಅವರು ಡಾ। ಕೆ. ಎಸ್. ನರಸಿಂಹಸ್ವಾಮಿ ಆದದ್ದು.

'ಮೈಸೂರು ಮಲ್ಲಿಗೆ' ಚಲನಚಿತ್ರ ಭಾರತೀಯ ಚಿತ್ರರಂಗದಲ್ಲೆ ಅಪರೂಪ ಪ್ರಯತ್ನವೆನಿಸಿತು. ಪ್ರಶಸ್ತಿ—ಗೌರವಕ್ಕೆ ಪಾತ್ರ ವಾಗುವಂತಾಯಿತು. ಇದ್ದೀಗ ಅದಕ್ಕೆ ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರವೆಂದು ರಾಷ್ಟ್ರೀಯ ಪುರಸ್ಕಾರ ದೊರಕಿದೆ. ಜೊತೆಗೆ, ಈ ಚಿತ್ರ ಕ್ಕಾಗಿಯೇ ಒಂದು ರಾಷ್ಟ್ರೀಯತೆಯ ಗೀತೆ ಯೊಂದನ್ನು ಬರೆದು , ತಮ್ಮ 'ಮೈಸೂರು ಮಲ್ಲಿಗೆ' ಗೀತೆಗಳನ್ನೂ ವಸ್ತುವಾಗಿಸಿಕೊಳ್ಳಲು ಕೊಟ್ಟ ಡಾ।ಕೆ.ಎಸ್.ನ ಅವರಿಗೂ "ಅತ್ಯುತ್ತಮ ಗೀತೆ ರಚನೆಕಾರ" ಪ್ರಶಸ್ತಿ.

ಡಾ। ಕೆ. ಎಸ್. ನರಸಿಂಹಸ್ವಾಮಿ ಅವರು ಆಗಾಗಿನ ಅನಾರೋಗ್ಯದಿಂದ ಅಲ್ಪಸ್ವಲ್ಪ ಆಯಾಸಕ್ಕೀಡಾಗುತ್ತಿದ್ದರೂ ಆ ಕವಿ ಹೃದಯ ದಲ್ಲಿ ಉತ್ಸಾಹ—ಚುರುಕುತನ ಇಂದಿಗೂ ಬತ್ತಿಲ್ಲ. ಸೊಗಸಾದ ಮಾತುಗಾರರು, ಹಾಸ್ಯ ಮನೋಭಾವದವರು.

ಈ ಹಿರಿಯ ಕವಿಗೆ ದೊರಕಿದ ಈ ಗೌರವಗಳಿಗೆ ನಿಮಿತ್ತರಾದ ಚಲನಚಿತ್ರ ಲೋಕದ ಇಬ್ಬರು ಸಾಧನಶೀಲ ಮಿತ್ರರನ್ನು ಅಭಿನಂದಿಸಲೇಬೇಕು: ಹಿರಿಯ ಗಾಯಕ—ಸಂಗೀತಕಾರ ಸಿ. ಅಶ್ವತ್ಥ್ ಮತ್ತು ನಿರ್ದೇಶಕ ನಾಗಾಭರಣ—ಇವೆಲ್ಲ ಇವರಿಬ್ಬರು ಕಂಡ ಭಾವುಕ ಕನಸು ●

ಸಂಸಾರ — ಸಾಗರ

ಬವಣೆ ಸಂಸಾರಕೆ
ಸಾಗರವೆ ಹೋಲಿಕೆ.
ತೆರೆ ತೆರೆಗಳ ಮೇಲಾಟ—
ಕಲಹದರ್ಬುದ ಕಾಣಿಕೆ!
ವಿಸ್ತಾರದ ಅವಿಭಾಗೀ ಜಲ,
ತೃಷೆಗೊಗ್ಗದೆ ಏನು ಫಲ?
ಅಳವಿಗೊಗ್ಗದ ಉಪ್ಪು—
ಮಲೆವ ದಾಯಾದೀ ಛಲ!

ಉಷಾಗಾನ

ದಿಗಂತ ಕನ್ನೆಗೀಗ
ಹದಿಹರೆಯ...
ಚೆನ್ನೀರ ಚೆಲ್ಲಾಡಿ,
ಮಿಂದೆದ್ದು ನಳನಳಿಸಿ
ನಕ್ಕಾಗ ಮೂಡಲ ಬಾನ—
ನಿಸರ್ಗವೊರೆವುದೀ ಉಷಾಗಾನ!



ಮೊರೆತ

ನಾನು—ನನ್ನವನಾಗಿ
ಮರಳಲ್ಲಿ ಮಲಗಿರಲು,
ಉರಿದು ಕಡು ಕೆಂಪಾಗಿ,
ಸಂಜೆ ಕಡಲಿಂತು ಕರುಬುತಿತ್ತು—

ಭೋರ್ಗರೆವ ಬಯಕೆಗಳ
ಏರಿಳಿವ ತೆರೆಗಳನು
ಹೊತ್ತಿರುವ ನೀನಿರಲು
ನನ್ನಲೆಯೂ ಎಸಳು!

ನನ್ನಿನಿಯನ ರವಿಗಾಗಿ
ನಾನಿಂದೂ ಕಾದಿರುವೆ,
ಧನ್ಯೆ ನೀ ಉಸಿರೊಳಗೂ
ನಲ್ಲನನೇ ಹೊಂದಿರುವೆ!

● ಪನೆಯಾಲ ರವಿರಾಜ

Edited, Printed and Published by T. Satish U. Pai, at Udayavani Press, for the Proprieto
The Manipal Printers and Publishers Ltd., Manipal-576 119

TUSHARA, Kannada Monthly
REGD. NO. K R N R : 6
MAY 1992
REGD. NO. R. N. 24795/73

